ಸಂವಾದ

ಮಾರ್ಚ್ ೨೦೦೫ ರೂ. ೨೦





ನೆನಪು:

ಡಾ॥ ಎಚ್. ನರಸಿಂಹಯ್ಯ

ಸರಸ್ವತೀಬಾಯಿ ರಾಜವಾಡೆ

ಚಿತ್ರಾಂಗದಾ

ರಾಜ್ಯದೆಡೆಗೆ

ಸಂಸ್ಕೃತಿ ಮುಖಾಮುಖಿ

ಸಂವಾದ

ಮಾಸ ಪತ್ರಿಕೆ

ಸಂಪುಟ ೩ ಸಂಚಿಕೆ ೫

ಮಾರ್ಚ್ ೨೦೦೫

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮ

ಜೆ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ,

ವಿಶ್ವನೀಡಂ ಅಂಚೆ

ಬೆಂಗಳೂರು - ೫೬೦ ೦೯೧

✆ ೨೩೨೮೭೯೪೩ / ೯೪೪೮೦ ೪೮೩೦೬

ಇ-ಮೇಲ್ ವಿಳಾಸ : **samvaada@yahoo.co.in**

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANANAGAR, MAGADI ROAD

VISHWANEEDAM POST

BANGALORE - 560 091

✆ 080-23287943, 94480 48306

e- mail : samvaada@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ...



❑ ಪತ್ರಗಳು ೩

❑ ಅರ್ಕಾವತಿ ನದಿಗೊಂದು ಕಾಯಕಲ್ಪ ೪

○ ಸ್ವರಾಜ್ ಎಸ್. ಶ್ರವಣ್

❑ ಅಂತರಂಗ ೫

❑ ಚಿತ್ರಾಂಗದಾ ರಾಜ್ಯದೆಡೆಗೆ ೬

○ ಡಾ॥ ವಸು

❑ ಭಾಷೆ, ಚಿತ್ರರಂಗ ಮತ್ತು ರಾಜಕೀಯ ೮

○ ನಾ. ದಿವಾಕರ

❑ ಧರ್ಮ ಮತ್ತು ಪ್ರಜಾಪ್ರಭುತ್ವ ೧೪

○ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು

❑ ಹೀಗೊಂದು ಆದಿವಾಸಿ ಬದುಕು... ೧೬

○ ಸುಕನ್ಯಾ ಸಿರಿಮನೆ

❑ ಎಚ್ಚೆನ್ : ನೈತಿಕ ಪ್ರೇರಣೆಯ ಸೆಲೆ ೧೮

○ ಪ್ರೊ॥ ಬಿ. ಗಂಗಾಧರ ಮೂರ್ತಿ

❑ ದಲಿತ್ ಡೈರಿ :

ಮತ್ತೆ ಬಾ ಸುನಾಮಿ... ೨೦

○ ಚಂದ್ರಭಾನ್ ಪ್ರಸಾದ್



೨೪ ಚರ್ಚೆ

ಪರ್ಯಾಯ ರಾಜಕಾರಣ

1. ಪಿ. ಕೋದಂಡರಾಮಯ್ಯ

2. ಆರ್.ವಿ. ಭಂಡಾರಿ

3. ಹರೀಶ್‌ಕುಮಾರ್ ಗಂಗನಬೀಡು

❑ ಏಕರೂಪಿ ಮತ್ತು ಬಹುರೂಪಿ

ಸಂಸ್ಕೃತಿಗಳ ಮುಖಾಮುಖಿ ೨೮

○ ರಾಮಲಿಂಗಪ್ಪ ಟಿ. ಬೇಗೂರು

❑ ಲೋಕಾನುರಾಗಿ ವಿರಾಗಿ

ಲೇಖಕಿ ಸರಸ್ವತೀಬಾಯಿ ರಾಜವಾಡೆ ೩೨

○ ವೈದೇಹಿ

❑ ಹೊಸ ಪುಸ್ತಕ ೩೫

❑ ಜನಪದ ಆಚರಣೆಗಳಲ್ಲಿ ಗಿರಿ ೩೬

○ ಪ್ರೊ॥ ರಹಮತ್ ತರೀಕೆರೆ

❑ ವಿವೇಕಾನಂದರ ವಿಚಾರಗಳು ೪೨

○ ಜ.ಹೊ. ನಾರಾಯಣಸ್ವಾಮಿ

ಕವನಗಳು : ❑ ಕುಣಿತ - ೧೪

❑ ತಮ್ಮಟೆ ಬಾರಿಸಲು ಹೇಳಬೇಡಿ - ೨೭ ❑ ಆ ಗಿಡ ಆ ಮರ - ೪೩



ಮುಖಪುಟ ಕಲೆ: ಶಿವಕುಮಾರ್ ವಿನ್ಯಾಸ: ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

‘ಅತ್ತೆ – ಸೊಸೆ’ಯರ ‘ಹುಸಿ ಹಕ್ಕು’

ಮಾನ್ಯ ಸಂಪಾದಕರಿಗೆ ವಂದನೆಗಳು,

ಕಳೆದ ಜನವರಿ-೨೦೦೫ರ ಸಂಚಿಕೆಯಲ್ಲಿ ಪ್ರಕಟವಾದ ‘ಅತ್ತೆ ಮನೆ’ ಸುತ್ತ ಮುತ್ತ ಲೇಖನ ವಾಸ್ತವತೆಯನ್ನು ಸರಿಯಾಗಿ ಬಿಡಿಸಿ ಹೇಳಿದೆ. ‘ಹುಸಿ ಹಕ್ಕಿಗಾಗಿ’ ಅತ್ತೆ – ಸೊಸೆ, ತಾಯಿ, ಅಕ್ಕ, ತಂಗಿ ಇನ್ನಿತರ ಹೆಸರುಗಳಲ್ಲಿ ಹೆಣ್ಣು ಹೋರಾಡುತ್ತಿದ್ದಾಳೆ.

ಹೆಣ್ಣು ಎಂದಾಕ್ಷಣ ಆಕೆಯನ್ನು ಆರೈಕೆಯ ನೆವವೊಡ್ಡಿ ತಂದೆ, ಅಣ್ಣ, ಗಂಡ ಹೀಗೆ ಬದುಕಿನುದ್ದಕ್ಕೂ ಎದುರಾಗುವ ಇನ್ನಿತರ ಪುರುಷ ಸಮುದಾಯ ಅವರನ್ನು ತಮ್ಮ ಸೇವಕರನ್ನಾಗಿ ಮಾರ್ಪಡಿಸಿಕೊಳ್ಳುತ್ತಿರುತ್ತಾರೆ. ಅವರನ್ನು ತಮಗೆ ಹೇಗೆ ಬೇಕೋ ಹಾಗೆ ಉಪಯೋಗಿಸಿಕೊಳ್ಳುತ್ತಾರೆ.

ಇದು ತಲೆ ತಲಾಂತರದಿಂದ ಒಂದು ಮಿದುಳಿನಿಂದ ಇನ್ನೊಂದು ಮಿದುಳಿಗೆ ಹರಿದುಬರುತ್ತಿರುವ ಸಂಗತಿ. ಒಮ್ಮೆಗೇ ಇದನ್ನು ಬದಲಾಯಿಸುವುದು ಸಾಧ್ಯವಿಲ್ಲ. ಸಾಮಾಜಿಕವಾಗಿ, ಆರ್ಥಿಕವಾಗಿ ಯಾರ ಮೇಲೂ ಅವಲಂಬಿತವಾಗದೆ ಬದುಕಿದಲ್ಲಿ ಕ್ರಮೇಣ ತನ್ನ ಜೀವನ ಶೈಲಿಯನ್ನು ತನಗೆ ಹೇಗೆ ಬೇಕೋ ಹಾಗೆ ರೂಪಿಸಿಕೊಳ್ಳುವುದು ಸಾಧ್ಯ.

ಶೈಲಜ ಹಿರೇಮಠರ ಲೇಖನವನ್ನು ಓದಿದ ಕೆಲವು ಹೆಂಗಸರಾದರೂ ವಿಮೋಚನೆ ಹೊಂದಲಿ ಎಂಬುದೇ ನನ್ನ ಆಶಯ. ಇಂತಹ ಲೇಖನಗಳು ಇನ್ನಷ್ಟು ಮೂಡಿಬರಲಿ.

ವಂದನೆಗಳು,

ಆಶಾ, ನೆಲಮಂಗಲ

ಸಮರಸ ಬದುಕಿಗೆ ಸಂದೇಶ

ಮಾನ್ಯ ಶ್ರೀ ಇಂದೂಧರ ಹೊನ್ನಾಪುರ ಅವರೇ,

ಜನವರಿ-೨೦೦೫ರ ‘ಸಂವಾದ’ ಸಂಚಿಕೆಯಲ್ಲಿ ಡಾ॥ ರಹಮತ್ ತರೀಕೆರೆಯವರ ‘ಬಾಬಾ ದತ್ತರ ಗಿರಿಕಾರಣ’ ಮತ್ತು ಪ್ರೊ॥ ಪದ್ಮಾಲಯ ನಾಗರಾಜರವರ ‘ಧರ್ಮ ನಿರಪೇಕ್ಷತೆ ಕಾರ್ಯಸಾಧುವೇ’ ಎಂಬೆರಡೂ ಒಂದು ಮಾಸಪತ್ರಿಕೆಗೆ ಬರೆದ ಎರಡು ವೃತ್ತಿಪರ ಬರವಣಿಗೆಗಳಲ್ಲ. ಒಂದು ವರ್ಣದೋಷ ದೃಷ್ಟಿಯ ಭಾರತೀಯರಿಗೆ paradise Lost ಎಂಬಂತಾಗಿದ್ದರೆ, ಇನ್ನೊಂದು – ಇನ್ನಿತರ ಅಲ್ಪಸಂಖ್ಯಾತ ಭಾರತೀಯರಿಗೆ paradise Regained ಎಂಬಂತಿದೆ. ಇಬ್ಬರ ಚಿಂತನೆಗಳೂ ಬದುಕನ್ನು ಸಮರಸವಾಗಿ ಬದುಕಬೇಕೆಂಬ ಸಂದೇಶವನ್ನು ಸಾರುತ್ತ – ಅಂಥ ಬದುಕಿಗೊಂದು ಸಂವಿಧಾನವನ್ನೂ ಬಹಳ ಚಿಕ್ಕ ಪರಿಧಿಯಲ್ಲಿಯೇ ಆಗಲಿ ಬಹಳ ಚೊಕ್ಕವಾಗಿ ಒದಗಿಸಿವೆ.

ಪದ್ಮಾಲಯ ನಾಗರಾಜರವರ ಧಾರ್ಮಿಕ ಒಳನೋಟಗಳಂತೂ ಒಬ್ಬ ದಾರ್ಶನಿಕನಿಗೆ ಮಾತ್ರ ಲಭ್ಯವೆಂಬಂತಿವೆ.

ಅವರಲ್ಲಿ ನನ್ನ ಒಂದು ಕೋರಿಕೆಯೆಂದರೆ – ಬಾಬಾ ಅಂಬೇಡ್ಕರರ ಬುದ್ಧ ಅಂಡ್ ಹಿಸ್ ಧಮ್ಮ ಎಂಬ ಗ್ರಂಥಕ್ಕೆ – ಅದರ ಮುಖ್ಯ ನಿರೂಪಣೆಗೆ ಅಪಚಾರವಾಗದಂತೆ – ಅಲ್ಲಿ ನಿರೂಪಿಸಿರುವ ಧರ್ಮವನ್ನು ಸಾರವತ್ತಾಗಿ ಸಂಗ್ರಹಿಸಿ – ಒಂದು ಅಧಿಕೃತ ಪಠ್ಯವನ್ನು ಕೊಡಬೇಕೆಂಬುದೇ ಆಗಿದೆ.

ಯಾಕೆಂದರೆ ಬೌದ್ಧಧರ್ಮ ಪ್ರಚಲಿತವಿರುವ ದೇಶಗಳಲ್ಲಿ ಅದು ಬೇರೆ ಬೇರೆ ಛಾಯೆಯಲ್ಲಿದೆ.

ನಮಗೆ ಬೇಕಾದ್ದು – ಮಹಾಜ್ಞಾನಿಗಳಾದ ಅಂಬೇಡ್ಕರರ ಗ್ರಹಿಕೆ ಮೂಲತಃ ಎಂಥದೆಂಬುದು.

ಅದು ನಮಗೆ ಒಂದು ಕೈಪಿಡಿಯಾಗಿ ದೊರೆತರೆ ಅದನ್ನು ನಾವು ಬೌದ್ಧರಾಗಬೇಕೆಂಬ ದಲಿತರಲ್ಲಿ ಪ್ರಚಾರ ಮಾಡಲು ಬರುತ್ತದೆ.

ಡಾ॥ ಎಲ್. ಬಸವರಾಜು,
ಮೈಸೂರು

ಶುಭಾಶಯ ಪತ್ರ

ಸಂಪಾದಕರಿಗೆ ನಮಸ್ಕಾರ,

ವಾರ್ಷಿಕ ವಿಶೇಷಾಂಕ ಸೊಗಸಾಗಿ ಮೂಡಿ ಬಂದಿದೆ. ‘ಸಂವಾದ’ ಎರಡು ವರ್ಷಗಳನ್ನು ದಾಟಿ ಮೂರನೇ ವರ್ಷಕ್ಕೆ ಕಾಲಿಡುತ್ತಿರುವುದು ನಮಗೆಲ್ಲಾ ಅತೀವ ಸಂತಸದ ವಿಷಯ. ತನ್ನ ಮುಂದಿನ ಮಹತ್ತರ ಕಾರ್ಯದ ಸಂಕೇತವನ್ನು ವಿಶೇಷಾಂಕ ಸೂಚಿಸುತ್ತಿದೆ.

ರೈತ, ದಲಿತ, ಮಹಿಳೆ, ಪರಿಸರ, ಆಧ್ಯಾತ್ಮ ಸಾಹಿತ್ಯ ಹಾಗೂ ಇನ್ನಿತರ ಅನೇಕ ಜ್ವಲಂತ ಸಮಸ್ಯೆಗಳಿಗೆ ಸಮರ್ಥ ಉತ್ತರ ಈ ವಾರ್ಷಿಕ ವಿಶೇಷಾಂಕ.

ನಾಡಿನ ತಳ ಸಮುದಾಯಗಳ ನಾಡಿ ಮಿಡಿತವನ್ನು ಹಿಡಿದು ತಳ ಸಮುದಾಯಗಳ ವೇದಿಕೆಯಾಗಿ ‘ಸಂವಾದ’ ರೂಪುಗೊಳ್ಳಲಿ.

ಇತಿ,

ವಂದನೆಗಳೊಡನೆ,

ಬಸವಲಿಂಗಯ್ಯ,
ರಾಮನಗರ

ಮುಗ್ಧರ ಮೂಢತೆಯೇ ಬಿಜೆಪಿಯ ಬಂಡವಾಳ

ಮಾನ್ಯರೆ,

ಬಹುಸಂಖ್ಯಾತ ಮುಗ್ಧರನ್ನು ಅವರ ಮೂಢನಂಬಿಕೆಯನ್ನು, ಬಂಡವಾಳವಾಗಿಸಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುತ್ತಿರುವ ಕೋಮುವಾದಿ ಬಿಜೆಪಿ, ಬಾಬಾಬುಡನಗಿರಿಯನ್ನು ಅಯೋಧ್ಯೆ ಮಾಡಲು ಹೊರಟಿರುವುದನ್ನು ಅವರು ನಂಬಿರುವ ದೈವವೂ ಸಹ ಅವರನ್ನು ಕ್ಷಮಿಸದು.

ಎಲ್ಲ ಧರ್ಮಗಳನ್ನೂ ವಿರೋಧಿಸಿ ಮುಕ್ತವಾದ ವಾತಾವರಣದಲ್ಲಿ ಬಾಬಾಬುಡನ್ ನೆಲೆನಿಂತ ಪ್ರಶಾಂತ ಬಾಬಾಬುಡನಗಿರಿಗೆ ಬಿಜೆಪಿ ಪಕ್ಷದವರು ಕೋಮು ಜ್ವಾಲೆಯ ಕಿಡಿ ಹಚ್ಚಿದ್ದಾರೆ. ಸಾವಿರಾರು ಸಮಸ್ಯೆಗಳನ್ನೆಲ್ಲಾ ಬದಿಗೊತ್ತಿ ಭಾವನೆಗಳನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ.

ಕುಮಾರ, ಕುಂದಾಪುರ

ಪತ್ರಾಗಾರ

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ. ೧೦೦/-	ರೂ. ೨೫೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ. ೨೫೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. /ಡಿ.ಡಿ. ಮಾತ್ರ ಕಳುಹಿಸಬೇಕು.

ಗುರು ಎಚ್ಚೆನ್‌ಗೆ ಪ್ರೀತಿಯ ನಮನ

ಮಾನ್ಯರೆ,

ಇತ್ತೀಚೆಗಷ್ಟೆ ನಮ್ಮನ್ನೆಲ್ಲ ಬಿಟ್ಟು ದೇಹವನ್ನು ವಿಸರ್ಜಿಸಿ ಚಿಂತನೆಗಳ ಚೈತನ್ಯವನ್ನು ಸದಾ ಜೀವಂತವಾಗಿಟ್ಟು ಹೋದ ಗಾಂಧಿ ಟೋಪಿ, ಖಾದಿ ಷರಟು, ಬಿಳಿ ಪಂಚೆ, ಕನ್ನಡಕದಾರಿ ಎಚ್ಚೆನ್‌ರ ಸಂಸ್ಕಾರ ಶ್ರೀಮಂತಿಕೆ ಸಾರ್ವಕಾಲಿಕ ಮಾದರಿ.

ದೊಡ್ಡ ದೊಡ್ಡ ಹುದ್ದೆಗಳನ್ನ ಅಲಂಕರಿಸಿದರೂ ಒಂದು ಚಾಪೆ, ದಿಂಬು, ಪುಸ್ತಕಗಳ ಕೊಠಡಿಯೇ ಅವರ ಅರಮನೆಯಾಗಿತ್ತು. ವಿದ್ಯಾರ್ಥಿಗಳಿಗೆ ಕೇವಲ ಶಾಲಾ ಪಠ್ಯ ಪುಸ್ತಕದಿಂದ ಜ್ಞಾನಾರ್ಜನೆಯಾಗುವುದಿಲ್ಲ, ಬದಲಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಮತ್ತು ವಿದ್ಯಾರ್ಥಿಗಳ ಆಸಕ್ತಿ ಕ್ಷೇತ್ರವನ್ನು ಗುರುತಿಸಿ ಅದಕ್ಕೆ ಸಹಕಾರ, ಪ್ರೋತ್ಸಾಹ ಕೊಟ್ಟು ಸರಿಯಾದ ವೇದಿಕೆ ಕಲ್ಪಿಸಿಕೊಡುವುದರಿಂದ ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಕಲೆಗಳ ಜ್ಞಾನವು ಲಭಿಸುತ್ತದೆ ಎಂದು ನಂಬಿ ಅದನ್ನು ನಡೆಸಿಕೊಂಡು ಬಂದರು.

ಸಿದ್ಧ ಮಾದರಿಯ ಸಂಪ್ರದಾಯ, ಮೂಢನಂಬಿಕೆಗಳನ್ನು ವಿರೋಧಿಸುವುದರ ಮೂಲಕ ಸಮಾಜಮುಖಿಯಾಗುತ್ತಲೆ ಸಾಯಿಬಾಬಾನಿಗೆ ಸವಾಲುಗಳನ್ನು ಹಾಕಿ ತಮ್ಮ ಕಲ್ಪನೆಯ ಕನಸಾದ ‘ಪವಾಡ ತನಿಖಾ ಸಮಿತಿ’ಯನ್ನು ಚಾಲ್ತಿಗೆ ತರುವುದರ ಮೂಲಕ ವಿದ್ಯಾರ್ಥಿಗಳಲ್ಲಿ ವೈಚಾರಿಕ ಮನೋಭಾವವನ್ನು ಬೆಳೆಸುತ್ತಿದ್ದರು.

ಇಂತಹ ಚೈತನ್ಯ ಮೂರ್ತಿ ಇಂದು ನಮ್ಮೊಂದಿಗೆ ಇಲ್ಲ. ಅವರ ಚಿಂತನೆ ಇದೆ. ಅದನ್ನು ಪ್ರಾಮಾಣಿಕವಾಗಿ ಆಚರಿಸುವುದು ಮತ್ತು ಆದರ್ಶಬದ್ಧವಾಗಿ ನಡೆಯುವುದೇ ನಮ್ಮ ಯುವಜನತೆ ಅವರಿಗೆ ಸಲ್ಲಿಸುವ ಗೌರವವಾಗಿದೆ.

ಭಾಸ್ಕರ,
ಬೆಂಗಳೂರು

ಅರ್ಕಾವತಿ ನದಿಗೊಂದು ಕಾಯಕಲ್ಪ

ಆಧುನಿಕ ಜೀವನಶೈಲಿಯ ಬೆನ್ನತ್ತಿರುವ ಮನುಷ್ಯ ತನ್ನೆದುರಿಗಿರುವ ಎಲ್ಲದರ ಮೇಲೂ ಏಕಸ್ವಾಮ್ಯ ಸಾಧಿಸುವ ಅತೀ ಆಸೆಯ ಕಾರಣದಿಂದಾಗಿ, ನದಿ ಕಣಿವೆಗೆ ಸೇರಿದ ಕೆರೆ-ಕುಂಟೆ, ಬಾವಿ-ಕಾಲುವೆಗಳು ನೀರಿಲ್ಲದೆ ಬತ್ತಿ ಬಣಗುಡುವಂತಾಗಿರುವುದು ವಿಷಾದನೀಯ ಸಂಗತಿ. ಹೀಗೆ ಮಾನವ ವರ್ತನೆಯ ಒತ್ತಡಕ್ಕೆ ಸಿಕ್ಕು ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತಿರುವ ದಕ್ಷಿಣ ಭಾರತದ ಕೆಲವೇ ಪ್ರಮುಖ ನದಿಗಳಲ್ಲಿ ಅರ್ಕಾವತಿಯೂ ಒಂದು. ಅದರ ರಕ್ಷಣೆ ಮತ್ತು ಪುನಶ್ಚೇತನ ಕಾರ್ಯವನ್ನು ಇದೀಗ ಸ್ವರಾಜ್ ಸಂಸ್ಥೆ ಕೈಗೆತ್ತಿಕೊಂಡಿದೆ. ಇದರ ರಕ್ಷಣಾ ಕಾರ್ಯ ಕೇವಲ ಸರ್ಕಾರದ್ದೇ ? ಸ್ವರಾಜನ್‌ನದ್ದೇ ? ಸ್ಥಳೀಯರದೇ ? ಅಥವಾ ನಮ್ಮೆಲ್ಲರದೇ ?

○ ಸ್ವರಾಜ್-ಎಸ್. ಶ್ರವಣ್

ಬೆಟ್ಟ-ಗುಡ್ಡಗಳು ಮತ್ತು ಪರ್ವತ ಪ್ರದೇಶಗಳು ನದಿ ತಾಣದ ಮೂಲಸೆಲೆಗಳು. ದೇಶದ ನೂರಾರು ನದಿಗಳು ಜನ ಬದುಕಿನ ಜೀವನಾಡಿಗಳಷ್ಟೇ ಅಲ್ಲ. ಸ್ವಚ್ಛಂದವಾಗಿ ಹರಿಯುತ್ತಾ ಜೀವ ಜಗತ್ತಿನ ಮೂಲಭೂತ ಅಗತ್ಯತೆಗಳನ್ನು ನೀಗಿಸುವ ಪ್ರಕೃತಿಯ ಜಲಸಂಪತ್ತಿನ ಮಹತ್ವದ ಕೇಂದ್ರಗಳು.

ಆದರೆ ಆಧುನಿಕ ಜೀವನಶೈಲಿಯ ಬೆನ್ನತ್ತಿರುವ ಮನುಷ್ಯ ತನ್ನೆದುರಿಗಿರುವ ಎಲ್ಲದರ ಮೇಲೂ ಏಕಸ್ವಾಮ್ಯ ಸಾಧಿಸುವ ಅತೀ ಆಸೆಯ ಕಾರಣದಿಂದಾಗಿ, ನದಿ ಕಣಿವೆಗೆ ಸೇರಿದ ಕೆರೆ-ಕುಂಟೆ, ಬಾವಿ-ಕಾಲುವೆಗಳು ನೀರಿಲ್ಲದೆ ಬತ್ತಿ ಬಣಗುಡುವಂತಾಗಿರುವುದು ವಿಷಾದನೀಯ ಸಂಗತಿ.

ಹೀಗೆ ಮಾನವ ವರ್ತನೆಯ ಒತ್ತಡಕ್ಕೆ ಸಿಕ್ಕು ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತಿರುವ ದಕ್ಷಿಣ ಭಾರತದ ಕೆಲವೇ ಪ್ರಮುಖ ನದಿಗಳಲ್ಲಿ ಅರ್ಕಾವತಿಯೂ ಒಂದು. ಕರ್ನಾಟಕದ ಇತಿಹಾಸ ಪ್ರಸಿದ್ಧ ನಂದಿ ಬೆಟ್ಟದಲ್ಲಿ ಹುಟ್ಟಿ ದಕ್ಷಿಣದಿಂದ ಉತ್ತರಾಭಿಮುಖವಾಗಿ ಹರಿಯುವ ಅರ್ಕಾವತಿ ಬೆಂಗಳೂರು ಉತ್ತರ ತಾಲ್ಲೂಕಿನ ಹೆಸರಘಟ್ಟ, ತೊರೆ ಛತ್ರ, ಮಾಗಡಿ ತಾಲ್ಲೂಕಿನ ತಿಪ್ಪಗೊಂಡನಹಳ್ಳಿ, ಮಂಚನಬೆಲೆ, ರಾಮನಗರ ತಾಲ್ಲೂಕಿನ ಬೈರಮಂಗಲ ಮತ್ತು ಕನಕಪುರದ ಅರುಭಿನಹಳ್ಳಿ ಜಲಾಶಯಗಳಂಚಿನ ಸಾವಿರಾರು ಕೆರೆಗಳ ಮೂಲಕ ೧೯೦ ಕಿ.ಮೀ ದೂರ ಹರಿಯುತ್ತಾ ಕಾವೇರಿಗೆ ಸೇರುತ್ತದೆ. ನದಿಗೆ ೩,೦೦೦ ಅಡಿಗಳಷ್ಟು ಎತ್ತರವಿರುವ ನಂದಿ ಮತ್ತು ೮೯೨ ಮೀಟರುಗಳಷ್ಟು ಎತ್ತರವಿರುವ ದೊಡ್ಡಬಳ್ಳಾಪುರದ ನಾಗನಕೆರೆ, ಚಿಕ್ಕ ತುಮಕೂರು, ದೇವನಹಳ್ಳಿಯ ಅರದೇಶಹಳ್ಳಿ, ಕೊಳತ್ತೂರು, ಹುಲುಕಡ್ಡಿ ಬೆಟ್ಟದ ಪೂರ್ವದ ವಾಣಿಗರಹಳ್ಳಿ ಅಣಚಿ ಮತ್ತು ಇಡೀ ಬೆಟ್ಟದ ದಕ್ಷಿಣಕ್ಕೆ ಇರುವ ಗೊಲ್ಲಹಳ್ಳಿ, ಕೋಲಕೆರೆ ಮಾರ್ಗವಾಗಿ, ಹೆಸರಘಟ್ಟದಾಚೆಗಿನ ಹೆಬ್ಬಾಳ, ಯಲಹಂಕ ಮುಂತಾದ ಭಾಗಗಳ ಸುಮಾರು ೧೦೦ ಕೆರೆಗಳಿಗೆ ೪ ಹಂತಗಳಲ್ಲಿ ಹರಿಯುವ ಅರ್ಕಾವತಿ ನದಿಯು ನೆಲಮಂಗಲ ತಾಲ್ಲೂಕಿನ ಸೋಂಪುರ, ಕಸಬಾ ಹೋಬಳಿ ಮತ್ತು ಮಾಗಡಿ ತಾಲ್ಲೂಕಿನ ೨ ಜಲಾಶಯಗಳಲ್ಲದೆ ತಿಪ್ಪಸಂದ್ರ ಮತ್ತು ಕುದೂರು ಕೆರೆಗಳ ಮುಖಾಂತರ ಕುಣಿಗಲ್ ಕೆರೆಯನ್ನು ಸೇರುವ ವಿಶಾಲ ಪಾತ್ರವನ್ನು ಹೊಂದಿದೆ.

ಒಂದು ಪತ್ರ

ಅರ್ಕಾವತಿ ಅಚ್ಚುಕಟ್ಟು ಪ್ರದೇಶಕ್ಕೆ ೫ ಜಲಾಶಯಗಳು ಸೇರಿದ್ದರೂ, ಶೇ. ೮೦ ಭಾಗ ಬೆಂಗಳೂರಿಗೆ ಕುಡಿಯುವ ನೀರನ್ನುಣಿಸುತ್ತಿದ್ದರೆ ಉಳಿದ ಶೇ ೨೦ ಭಾಗದ ನೀರು ಮಾತ್ರ ಸಾವಿರಾರು ಹೆಕ್ಟೇರ್ ಪ್ರದೇಶದ ಕೃಷಿ ಚಟುವಟಿಕೆಗಳಿಗೆ ಆಸರೆಯಾಗಿದೆ. ಹೀಗೆ ಕರ್ನಾಟಕದ ಜಲಸಂಪತ್ತಿನ ಮೂಲಭಾಗವಾಗಿರುವ ಅರ್ಕಾವತಿ ನದಿ ಮನುಷ್ಯನ ಅಸಮರ್ಪಕ ನಿರ್ವಹಣೆ, ಅಕ್ರಮ ಗಣಿಗಾರಿಕೆ, ಅಸಮತೋಲನಕ್ಕೊಳಗಾದ ಪರಿಸರದಿಂದಾಗಿ ಇದರ ಜಲಾನಯನ ಪ್ರದೇಶದ ಜನ ಜಾನುವಾರುಗಳಿಗೆ ನೀರಿನ ಹಾಹಾಕಾರವೆದ್ದಿರುವುದನ್ನು ಕಾಣುತ್ತೇವೆ.

ಕಾಡು ಕಡಿದು ನಾಡನ್ನಾಗಿಸಿದ ಮಾನವ ವರ್ತನೆ ನೇರವಾಗಿ ಜಲಸಂಪನ್ಮೂಲಗಳ ಮೇಲೆ ನಡೆಯುವ ಪ್ರಹಾರದಂತಾಗಿ ಅರ್ಕಾವತಿ ಪ್ರದೇಶದಲ್ಲಿ ೫ ಪ್ರಮುಖ ಜಲಾಶಯಗಳು ಮತ್ತು ೧೫೦ ದೊಡ್ಡ ಹಾಗೂ ೧೦೮೪ ಸಣ್ಣ ಕೆರೆಗಳಿದ್ದಾಗ್ಯೂ ನದಿ ನೀರನ್ನು ಸಮರ್ಪಕವಾಗಿ ಸಂಗ್ರಹಿಸಲಾಗದೆ-ಬಳಸಿಕೊಳ್ಳಲಾಗದೆ ಆ ಮೂಲಕ ಅಂತರ್ಜಲ ಮಟ್ಟವನ್ನು ಕಾಯ್ದುಕೊಳ್ಳಲಾಗದ ದುಸ್ಥಿತಿ ತಲುಪಿರುವುದರ ಬಗ್ಗೆ ಅಧ್ಯಯನ ನಡೆಸಿ, ನದಿಯ ಪುನಶ್ಚೇತನಕ್ಕಾಗಿ ಸಮುದಾಯದಲ್ಲಿ ಜಾಗೃತಿ ಮೂಡಿಸಿ, ಜನಾಂದೋಲನ ಉಂಟುಮಾಡುವ ಮಹತ್ವದ ಕಾರ್ಯವನ್ನು ಸ್ವರಾಜ್ (ಆಕ್ಸ್‌ಫಾಂ ಇಂಡಿಯಾ) ಸಂಸ್ಥೆ ಕೈಗೆತ್ತಿಕೊಂಡಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನ ನಾಲ್ಕು ಪಂಚಾಯ್ತಿ (ಮೆಳೇಕೋಟೆ, ಹೆಗಡೆಹಳ್ಳಿ ಕೂನಘಟ್ಟ ರಾಜಘಟ್ಟ)ಗಳ ೨೫ ಹಳ್ಳಿಗಳನ್ನು ಆಯ್ದುಕೊಂಡಿರುವ ಸಂಸ್ಥೆ ಈ ಹಳ್ಳಿಗಳ ವ್ಯಾಪ್ತಿಗೆ ಸೇರಿದೆ. ೨೧ ಕೆರೆಗಳ ಪರಿಸ್ಥಿತಿ, ನೀರಿನ ಸಾಮರ್ಥ್ಯ ಬೆಳೆ ಪದ್ಧತಿ, ಅಂತರ್ಜಲ ಮಟ್ಟ ಹಾಗೂ ನೀರಿನ ಗುಣಮಟ್ಟಗಳನ್ನು ಪರಿಶೀಲಿಸಿ ಅರ್ಕಾವತಿ ಜಲಸಂಪನ್ಮೂಲಗಳ ಪುನಶ್ಚೇತನ ಕಾರ್ಯಕ್ರಮದಲ್ಲಿ ನಿರತವಾಗಿದೆ. ಸ್ವರಾಜ್ ಸಂಗ್ರಹಿಸಿದ ಮಾಹಿತಿಗಳನ್ನು ಜಲ ಮತ್ತು ಭೂ ತಜ್ಞರು, ಸ್ಥಳೀಯ ಸಂಸ್ಥೆಯ ನಾಯಕರು ಸಂಘ-ಸಂಸ್ಥೆಗಳು ಮತ್ತು ಗ್ರಾಮದ ಜನರ ಜತೆ ಚರ್ಚಿಸಿ ನದಿ ಪುನಶ್ಚೇತನ ಕಾರ್ಯಕ್ರಮ ರೂಪಿಸಲು ಅನೇಕ ಕಾರ್ಯಾಗಾರ-ಸಂವಾದ-ಚರ್ಚೆಗಳನ್ನು ನಡೆಸುತ್ತಾ ಬರುತ್ತಿದೆ. ಈ ಚರ್ಚೆಯಿಂದ ಮೂಡಿ ಬಂದ ಅಭಿಪ್ರಾಯ ಮತ್ತು ಸಲಹೆಗಳನ್ನು ಆಧರಿಸಿ ಅರ್ಕಾವತಿಯ ಸ್ಥಿತಿ-ಗತಿಯನ್ನು ಹೇಳುವುದಾದರೆ, ನದೀ ಕಣಿವೆಗೆ ಹೊಂದಿಕೊಂಡಂತಿರುವ ಪ್ರದೇಶಗಳಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ - ಮರಳು ಸಾಗಾಣಿಕೆಯಿಂದ ನೀರಿನ ಒರೆತವಾಗಲೀ, ಸರಾಗ ಚಲನೆಯಾಗಲೀ, ಕೆರೆಯಲ್ಲಿ ನಿಂತು ಸದ್ಬಳಕೆಗೆ ಯೋಗ್ಯವಾಗಿಯಾಗಲೀ, ನಿಂತ ನೀರು ಇಂಗಿ ಅಂತರ್ಜಲ ಹೆಚ್ಚುವಂತಾಗಲೀ ಸಾಧ್ಯವಾಗದಿರುವುದಲ್ಲದೇ ನದೀ ಪ್ರದೇಶಕ್ಕೆ ಸೇರಿದ ಕೆರೆ-ಕುಂಟೆ-ಬಾವಿ ಮತ್ತು ಕಾಲುವೆಗಳನ್ನು ಒತ್ತುವರಿ ಮಾಡಿಕೊಳ್ಳುವ ಪಟ್ಟಭದ್ರರ ಹಿತಾಸಕ್ತಿಗೆ ಗ್ರಾಮಗಳ ಸಣ್ಣ-ಸಣ್ಣ ಭೂ ಹಿಡುವಳಿದಾರರೂ ಸಹ ಬಲಿಯಾಗಿದ್ದಾರೆ.

ಅಂತರ್ಜಲಮಟ್ಟಕ್ಕೆ ಆತಂಕವುಂಟು ಮಾಡುವ ನೀಲಗಿರಿ ತೋಪು ಬೆಳೆಸುವ (ನದಿ ಪ್ರಾಂತ್ಯದಲ್ಲಿ) ಏಕ ಬೆಳೆ ಪದ್ಧತಿಯು ಹೆಚ್ಚಾಗುತ್ತಿದ್ದು ಈ ನಿಟ್ಟಿನಲ್ಲಿ ಹೊಂಗೆ ಮೊದಲಾದ ಸಸಿಗಳನ್ನು ನದೀ ಹಳ್ಳಗಳಲ್ಲಿ ನೆಡುವಂತೆ ಕೃತಕ ಬೋರ್‌ವೆಲ್‌ಗಳನ್ನು ಕೊರೆಸುವ ರೈತರ ಪರಿಪಾಠಕ್ಕೆ ತೆರೆ ಎಳೆದು, ಬೆಳೆಗಳಿಗೆ ಬಳಸಲಾಗುವ ರಾಸಾಯನಿಕಗಳಿಂದ ಪರಿಸರದ ಮೇಲಾಗುವ ದುಷ್ಪರಿಣಾಮದ ಬಗ್ಗೆ ಕೂಡ ಜನ ಜಾಗೃತಿ ಮೂಡಿಸಬೇಕಾಗಿದೆ.

ಕೈಗಾರಿಕೆಗಳು ಬಿಡುವ ಕಲುಷಿತ ನೀರು ಮತ್ತು ಬಿಸಾಡುವ ಅನುಪಯುಕ್ತ ಪದಾರ್ಥಗಳು ಅಲ್ಲದೆ ದೈನಂದಿನ ಬದುಕಿನಲ್ಲಿ ಬಳಸಿ ಬೇಡವಾದ ವಸ್ತು ಕಸ-ಕಡ್ಡಿಗಳನ್ನು ನೀರು ಹರಿವ ಜಾಗಗಳಲ್ಲಿ ಬಿಸಾಡುವ ಜನರ ವರ್ತನೆ ವಿರುದ್ಧವೂ ಜನ ಸಂಘಟನೆ ಮಾಡುವ ಕಾರ್ಯದ ಜತೆಗೆ ರೈತ ಸಮುದಾಯಕ್ಕೆ ಸಾವಯವ ಗೊಬ್ಬರದ ಬಳಕೆಯ ಮಹತ್ವ, ಬೆಳೆ ಪದ್ಧತಿ, ಹೊಲ ಗದ್ದೆಗಳಲ್ಲಿ ನೀರಿನ ಸಂಗ್ರಹ, ಗುಣಮಟ್ಟವನ್ನು ಕಾಯ್ದುಕೊಳ್ಳುವ ಸಮರ್ಪಕ ನಿರ್ವಹಣೆಯ ಜತೆಗೆ ಒಂದು ಕಾಲಕ್ಕೆ ತಮ್ಮದೇ ಬದುಕಿನ ಭಾಗವಾಗಿ ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಗಳ ಸಾಧನವಾಗಿದ್ದ ಅರ್ಕಾವತಿಗೆ ಕಾಯಕಲ್ಪ ಅನಿವಾರ್ಯವಲ್ಲವೆ?

ತನಗೂ ಮೈಮನದುಂಬಿ, ಸ್ವಚ್ಛವಾಗಿ ಹರಿಯುವ ಸ್ವತಂತ್ರ ಬದುಕಿದೆ, ಹಕ್ಕೂ ಸಹ ಇದೆ ಎಂದು ಹರಿಯುತ್ತಾ ನಮ್ಮೆಲ್ಲರ ಅಗತ್ಯಗಳನ್ನು ಪೂರೈಸುವ ಅರ್ಕಾವತಿಯ ರಕ್ಷಣೆ ಮತ್ತು ಪುನಶ್ಚೇತನ ಕಾರ್ಯ ಕೇವಲ ಸರ್ಕಾರದ್ದೇ ? ಸ್ವರಾಜನ್‌ನದ್ದೇ ? ಸ್ಥಳೀಯರದೇ ? ಅಥವಾ ನಮ್ಮೆಲ್ಲರದೇ? □

ಸಂಪಾದಕೀಯ

ಅಂತರಂಗ

ಹಿಂಸೆಯ ಬೆನ್ನು ಹತ್ತಿದ ಬಂಧುಗಳೇ...

ಕರ್ನಾಟಕ ಹಿಂದೆಂದೂ ಕಂಡರಿಯದ ಭೀಕರ ಹಿಂಸೆಗೆ ಮೈಯೊಡ್ಡಿ ನಿಂತಿದೆ. ಜನಪರ ಹೋರಾಟದ ಹೆಸರಿನಲ್ಲಿ ಪಶ್ಚಿಮ ಘಟ್ಟಗಳಲ್ಲಿ ಆರಂಭವಾದ ಹೋರಾಟ ಇಂಥ ರೂಪ ಪಡೆಯುತ್ತದೆಂದು ಯಾರೂ ಎಣಿಸಿರಲಿಲ್ಲ. ನಕ್ಸಲೀಯ ಚಳವಳಿಯೊಂದಿಗೆ ಹಿಂಸೆ ಹಾಸು ಹೊಕ್ಕಾಗಿದ್ದರೂ, ಕರ್ನಾಟಕದ ಮಟ್ಟಿಗಾದರೂ ಅದು ಹೊರತಾಗಿರ ಬಹುದೆಂಬ ಆಶೆ ಬಹಳ ಮಂದಿಗೆ ಇತ್ತು. ನಾಡಿನ ಬಹುತೇಕ ಹೋರಾಟಗಾರರು, ಸಾಹಿತಿಗಳು, ಬುದ್ಧಿಜೀವಿಗಳು ಸಾಮಾಜಿಕ ಕಾರ್ಯಕರ್ತರು ಪಶ್ಚಿಮ ಘಟ್ಟಗಳಲ್ಲಿ ಆರಂಭವಾದ ಚಳವಳಿಗೆ ಪೂರಕ ವಾಗಿದ್ದರು. ದಲಿತ-ರೈತ ಚಳವಳಿಗಳೂ ಬೆಂಬಲ ವ್ಯಕ್ತಪಡಿಸಿದ್ದವು.

ಆದರೆ ದಿಢೀರನೆ ಇಡೀ ಚಿತ್ರಣವೇ ಬದಲಾಗಿದೆ. ಸಾಕೇತ್ ರಾಜನ್ ಮತ್ತು ಶಿವಲಿಂಗರ ಹತ್ಯೆ ನಂತರ ಉದ್ಭವಿಸಿದ ಪರಿಸ್ಥಿತಿಯನ್ನೂ ನಿಭಾಯಿಸುವಲ್ಲಿ ನಕ್ಸಲರು ಮತ್ತು ನಕ್ಸಲರ ಬೆಂಬಲಿಗರು ಇಬ್ಬರೂ ವಿಫಲರಾಗಿದ್ದಾರೆ. ನಕ್ಸಲೀಯರ ಹತ್ಯೆಯಿಂದಾಗಿ ಒದಗಿ ಬಂದಿದ್ದ ಸಾರ್ವಜನಿಕ ಅಭಿಪ್ರಾಯ ಪಾವಗಡದ ಹತ್ಯಾಕಾಂಡದಿಂದಾಗಿ ಸಂಪೂರ್ಣ ತಿರುಗಾಮುರುಗ ಆಗಿದೆ. ಸಾರ್ವಜನಿಕರ ಸಹಾನುಭೂತಿಗೆ ಬದಲಾಗಿ ವ್ಯಾಪಕ ಖಂಡನೆಗೆ ನಕ್ಸಲೀಯರು ಗುರಿಯಾಗಿದ್ದಾರೆ. ಇದಕ್ಕಿಂತ ಹೆಚ್ಚಾಗಿ ನಕ್ಸಲ್ ಚಳವಳಿಗೆ ಬೆಂಬಲ ನೀಡುತ್ತಿದ್ದಾರೆಂಬ ಕಾರಣಕ್ಕೆ ಬುದ್ಧಿಜೀವಿಗಳನ್ನು ಭಯೋತ್ಪಾದಕರೆಂದು ಚಿತ್ರಿಸುವ ಸಂಘ ಪರಿವಾರದ ಹುನ್ನಾರಕ್ಕೆ ವೇದಿಕೆ ಒದಗಿಸಿಕೊಟ್ಟಂತಾಗಿದೆ.

ಮೇಲ್ನೋಟಕ್ಕೆ ಕರ್ನಾಟಕ ಶಾಂತಿ ಮತ್ತು ನೆಮ್ಮದಿಗೆ ಹೆಸರಾದುದು. ಆದರೆ ಅಂತರಂಗದಲ್ಲಿ ದೇಶದ ಇತರೆ ಭಾಗಗಳಲ್ಲಿರುವಂತೆ ಇಲ್ಲೂ ಶೋಷಣೆ ಮಡುಗಟ್ಟಿದೆ. ಹನ್ನೆರಡನೇ ಶತಮಾನದ ಬಸವ ಚಳವಳಿ ಸಾಮಾಜಿಕ ನ್ಯಾಯದ ಬೀಜವನ್ನು ಈ ನೆಲದಲ್ಲಿ ಸಮರ್ಥವಾಗಿ ಬಿತ್ತಿದ್ದರಿಂದ ದೇಶದ ಉಳಿದೆಲ್ಲ ರಾಜ್ಯಗಳಿಗೆ ಹೋಲಿಸಿದರೆ ಇಲ್ಲಿನ ಜನ ಜಾಗೃತಿ ಅಧಿಕ. ಹಾಗಾಗಿಯೇ ಇಲ್ಲಿ ದಲಿತ-ರೈತ ಚಳವಳಿಗಳು ಸಮರ್ಥವಾಗಿ ಬೆಳೆಯಲು ಸಾಧ್ಯವಾಯಿತು.

೭೦-೮೦ರ ದಶಕದಲ್ಲಿ ಆರಂಭವಾದ ಈ ಎರಡೂ ಚಳವಳಿಗಳು ತಮ್ಮ ತೀವ್ರತೆಯನ್ನು ಕಳೆದುಕೊಂಡದ್ದರಿಂದ ಉಂಟಾಗಿದ್ದ ಶೂನ್ಯವನ್ನು ತುಂಬಲೋ ಎಂಬಂತೆ ಕಳೆದ ಹಲವು ವರ್ಷಗಳಿಂದ ನಕ್ಸಲೀಯ ಚಳವಳಿ ಬೇರೆ ಬೇರೆ ರೂಪದಲ್ಲಿ ನಾಡಿಗೆ ಕಾಲಿಟ್ಟಿತು. ತುಂಗಾ ಮೂಲ ಉಳಿಸಿ ಚಳವಳಿಯೊಂದಿಗೆ ಪಾದಾರ್ಪಣೆ ಮಾಡಿದ ನಕ್ಸಲೀಯರು, 'ಪಶ್ಚಿಮ ಘಟ್ಟ ಉಳಿಸಿ' ಚಳವಳಿಯನ್ನು ಪ್ರಬಲಗೊಳಿಸಿದರು. ನಂತರ ಅದಕ್ಕೆ ಪೂರಕವಾಗಿ ಹಲವು ಸಂಘಟನೆಗಳನ್ನು ಹುಟ್ಟುಹಾಕಿದರು. ಎಲ್ಲವೂ ಪ್ರಜಾಸತಾತ್ಮಕ ಮಾರ್ಗದಲ್ಲೇ ಊರಿನೊಳಗೆ ಚಟುವಟಿಕೆ ಆರಂಭಿಸಿದವು. ಜತೆಗೆ ನಕ್ಸಲೀಯ ಹೋರಾಟಕ್ಕೆ ಜನಾಭಿಪ್ರಾಯ ರೂಪಿಸತೊಡಗಿದವು.

ಬಹಿರಂಗವಾಗಿ ಕಾಣಿಸಿಕೊಂಡ ಇಂಥ ಚಳವಳಿಗೆ ನಾಡಿನ ಪ್ರಜ್ಞಾವಂತರು ಬುದ್ಧಿಜೀವಿಗಳು ಬೆಂಬಲ ನೀಡಿದ್ದು ಸಹಜವೇ ಆಗಿತ್ತು. ಆದರೆ ಕಾಡಿನೊಳಗೆ ನಡೆಯುತ್ತಿದ್ದ ಬಂದೂಕಿನ ತಾಲೀಮು ಹೊರ ಜಗತ್ತಿಗೆ ತಿಳಿಯಬೇಕಾದರೆ ಹಾಜಿಮಾ-ಪಾರ್ವತಿಯರ ಹೆಣ ಬೀಳಬೇಕಾಯಿತು. ಸರ್ಕಾರ ಇದು ನಕ್ಸಲೀಯರೊಂದಿಗೆ ನಡೆದ ಎನ್‌ಕೌಂಟರ್ ಎಂದರೂ ಜನ ಒಪ್ಪಲಿಲ್ಲ. ನಕ್ಸಲೀಯರ ಪರ ಅನುಕಂಪ ಬೆಳೆಯುತ್ತಲೇ ಹೋಯಿತು. ಸಾಕೇತ್ ರಾಜನ್ ಮತ್ತು ಶಿವಲಿಂಗರ ಹತ್ಯೆ ನಕ್ಸಲೀಯರಿಗೆ ಭೀಮ ಬಲವನ್ನೇ ಒದಗಿಸಿಕೊಟ್ಟಿತ್ತು. ನಂತರ ಅವರ ಶವಗಳನ್ನು ನಾಗರಿಕ ವೇದಿಕೆಗೆ ನೀಡದೆ ಪೊಲೀಸರೇ 'ಸಂಸ್ಕಾರ' ಮಾಡಿದ್ದು ಮತ್ತಷ್ಟು ಸಾರ್ವಜನಿಕ ಸಹಾನುಭೂತಿಗೆ ಕಾರಣವಾಗಿತ್ತು.

ಆದರೆ ಪಾವಗಡದಲ್ಲಿ ನಿಷ್ಪಾಪಿ ಪೊಲೀಸರ ಮೇಲೆ ನಕ್ಸಲೀಯರು ಹಾರಿಸಿದ ಗುಂಡುಗಳು ಇಡೀ ಸಮಾಜ ಅವರನ್ನು ತಿರಸ್ಕಾರದಿಂದ ನೋಡುವಂತೆ ಮಾಡಿವೆ. ಗುಂಡಿಗೆ ಗುಂಡೇ ಉತ್ತರವೆ ? ಎಂಬ ಪ್ರಶ್ನೆಯೀಗ ನಮ್ಮ ಮುಂದೆ ನಿಂತಿದೆ. ಸಾಕೇತ್ ರಾಜನ್ ಚಿತಾ ಭಸ್ಮವನ್ನು ಹಿಡಿದು ಮುಖ್ಯಮಂತ್ರಿ ಮನೆ ಮುಂದೆ ಗದ್ದರ್ ನಡೆದುಕೊಂಡ ರೀತಿಯಂತೂ ಶಾಂತಿಪ್ರಿಯ ನಾಗರಿಕರಿಗೆ ಕಿರಿಕಿರಿಯನ್ನುಂಟು ಮಾಡಿತು. ಬಂದೂಕಿನ ಉತ್ತರ ಕೊಡುವ ಅವರ ಮಾತು ಎಲ್ಲ ಶಾಂತಿಪ್ರಿಯರ ಎದೆ ನಡುಗಿಸಿತು. ಗದ್ದರ್‌ರ ಈ ಮಾತುಗಳೇ ಪಾವಗಡದ ಹತ್ಯಾಕಾಂಡಕ್ಕೆ ಪ್ರಚೋದನೆ ನೀಡಿದವೋ ಇಲ್ಲವೋ, ಆದರೆ ಆ ಭಾವನೆ ಸಾರ್ವಜನಿಕರಲ್ಲಿ ಮೂಡಿರುವುದಂತೂ ನಿಜ.

ಭಾರತ ವಿಶ್ವದ ಅತ್ಯಂತ ದೊಡ್ಡ ಪ್ರಜಾಸತ್ತಾತ್ಮಕ ಆಡಳಿತ ಹೊಂದಿರುವ ದೇಶ. ಬಡ ಬೋರೇಗೌಡನ ಮಗನೊಬ್ಬ ಈ ದೇಶದ ಪ್ರಧಾನಿಯಾಗಬಲ್ಲ. ಬೆಳಗಿನ ಚಳಿಯಲ್ಲಿ ಮನೆ ಮನೆಗೆ ಪತ್ರಿಕೆ ಹಂಚುವ ಅಲ್ಪಸಂಖ್ಯಾತ ಕೋಮಿನ ಹುಡುಗನೊಬ್ಬ ರಾಷ್ಟ್ರಪತಿಯಾಗಬಲ್ಲ. ಅಸ್ಪೃಶ್ಯ ಹೆಣ್ಣು ಮಗಳೊಬ್ಬಳು ಮುಖ್ಯಮಂತ್ರಿಯಾಗಬಲ್ಲಳು. ಇದು ಬಂದೂಕು ತಂದುಕೊಡಬಹುದಾದ ಸಮಾನತೆಗಿಂತ ದೊಡ್ಡದಲ್ಲವೆ ? ಸೈದ್ಧಾಂತಿಕ ಬದ್ಧತೆಯ ಕೂದಲು ಸೀಳುವ ಪಾಂಡಿತ್ಯಕ್ಕಿಂತ, ನೆತ್ತರಿನ ಓಕಳಿಯಲ್ಲಿ ಅಧಿಕಾರ ಹಿಡಿಯುವುದಕ್ಕಿಂತ ಉತ್ತಮವಲ್ಲವೆ ?

ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಲೋಹಿಯಾ ಯಾರೊಬ್ಬರೂ ಯಾಕೆ ಬಂದೂಕು ಹಿಡಿಯದೆ ಹೋರಾಡಿದರು ? ಎಲ್ಲರಿಗಿಂತ ಅಧಿಕ ಶೋಷಣೆಗೆ ಗುರಿಯಾದ ದಲಿತರ ಪ್ರತಿನಿಧಿಯಾದ ಅಂಬೇಡ್ಕರ್ ಎಂದಾದರೂ ಬಂದೂಕು ಸಂಸ್ಕೃತಿಯ ಬಗ್ಗೆ ಮಾತಾಡಿದರೆ? ಅಮಾನವೀಯ ದೌರ್ಜನ್ಯದ ಎದುರು ನಿರಂತರ ಶಾಂತಿಗಾಗಿ ಹೋರಾಡಿದ ಅಂಬೇಡ್ಕರ್ ಹಿಂಸೆಯ ಗಾಳಿಯೂ ಸುಳಿಯದ ಬೌದ್ಧಧರ್ಮವನ್ನೇಕೆ ಅಪ್ಪಿಕೊಂಡರು ? ಕರ್ನಾಟಕದ ದಲಿತರು ರೈತರ ಮೇಲೆ ಸರ್ಕಾರ ಎಷ್ಟು ಬಾರಿ ಗುಂಡುಹಾರಿಸಿಲ್ಲ. ಎಂದಾದರೂ ಅವರು ಬಂದೂಕು ಕೈಗೆತ್ತಿಕೊಳ್ಳುವ ಬಗ್ಗೆ ಚಿಂತಿಸಿದ್ದಾರೆಯೇ ? ಯಾರನ್ನೋ ಕೊಲ್ಲುವುದರಿಂದ ಒಂದು ವ್ಯವಸ್ಥೆಯನ್ನು ಬದಲಾಯಿಸಬಹುದೆಂಬುದು ಎಲ್ಲಾದರೂ ಸಾಧ್ಯವೇ ? ಇದು ಹುಂಬತನವಲ್ಲವೆ ? ನನ್ನ ನಕ್ಸಲೀಯ ಬಂಧುಗಳು ಈ ಬಗ್ಗೆ ಯೋಚಿಸಬೇಕು.

ಹಿಂಸೆ ಹಿಂಸೆಯನ್ನು ಮಾತ್ರ ಹುಟ್ಟು ಹಾಕಬಲ್ಲದು. ಮಲೆನಾಡಿನ ಆದಿವಾಸಿಗಳ ಸಮಸ್ಯೆಯಾಗಲಿ ಕೃಷಿ ಕೂಲಿಕಾರರ ಸಮಸ್ಯೆಯಾಗಲಿ ಕೇವಲ ಬಂದೂಕಿನ ತುದಿಯಿಂದ ಬಗೆಹರಿಯುವಂಥದಲ್ಲ. ಅದಕ್ಕೆ ನಿರಂತರವಾದ ಅಹಿಂಸಾತ್ಮಕ ಜನ ಜಾಗೃತಿ ಮತ್ತು ಹೋರಾಟ ಮುಖ್ಯ. ದೇವರಾಜ ಅರಸು ಅವರಂಥ ಕ್ರಾಂತಿಕಾರಿ ಮುಖ್ಯಮಂತ್ರಿಯೊಬ್ಬ ಸಾವಿರ ಹಿಂಸಾತ್ಮಕ ಹೋರಾಟದಿಂದ ಸಾಧಿಸಲಾರದ್ದನ್ನು ತನ್ನ ರಾಜಕೀಯ ಇಚ್ಛಾಶಕ್ತಿಯಿಂದ ಸಾಧಿಸಿ ತೋರಿಸಬಲ್ಲರಾದರೆ, ಬಂದೂಕಗಳ ಅವಶ್ಯಕತೆ ಏನಿದೆ ?

ಅತ್ಯಂತ ಪ್ರಾಮಾಣಿಕರೂ, ದೇಶಭಕ್ತರೂ, ಕ್ರಿಯಾ ಶೀಲರೂ, ತ್ಯಾಗಿಗಳು ಆದಂತ ನಕ್ಸಲೀಯ ಬಂಧುಗಳು ಕಾಡಿನೊಳಗಿನ ಗುಪ್ತ ಬದುಕನ್ನು ತೊರೆದು ಹೊರಬರಬೇಕು. ಜನರ ನಡುವೆ ಹೋರಾಟದ ಬದುಕನ್ನು ಕಟ್ಟಬೇಕು. ಆ ಮೂಲಕ ತಮ್ಮ ಕನಸಿನ ಸಮತಾ ರಾಜ್ಯವನ್ನು ಸ್ಥಾಪಿಸಬೇಕು. ಅದು ಮಾತ್ರ ನೋವಿಲ್ಲದ, ಸುಲಿಗೆ ಇಲ್ಲದ ನೆಮ್ಮದಿಯ ಸಾಮ್ರಾಜ್ಯವಾಗುತ್ತದೆ.

○ ಇಂದೂಧರ ಹೊನ್ನಾಪುರ

ಶಿಕ್ಷಣ

ರಾಜ್ಯದ ಮಹಿಳಾ ಕಾಲೇಜುಗಳನ್ನು ಆಡಳಿತಾತ್ಮಕವಾಗಿ ಮಹಿಳಾ ವಿಶ್ವವಿದ್ಯಾಲಯಕ್ಕೆ ಸೇರಿಸುವುದರಿಂದ ಆಗಬಹುದಾದ ಲಾಭವಾದರೂ ಏನು ? ಸ್ನಾತಕ ಮಟ್ಟದಲ್ಲಿ, ಉನ್ನತ ಶಿಕ್ಷಣದ ಹಂತದಲ್ಲಿ ಎಲ್ಲಿ ಎಲ್ಲರೂ ಕಲೆತು, ಚರ್ಚಿಸಿ, ಜ್ಞಾನಾರ್ಜನೆ ಮಾಡಬೇಕೋ ? ಆ ಸಂದರ್ಭದಲ್ಲಿ ಲಿಂಗದ ಹೆಸರಿನಲ್ಲಿ ಪ್ರತ್ಯೇಕವಾಗಬೇಕೋ ? ಮಹಿಳೆಯರನ್ನು ಪ್ರತ್ಯೇಕಿಸುವುದು ಮಹಿಳಾ ಸಮಾನತೆಯೇ ? ಸ್ತ್ರೀ ಸಬಲೀಕರಣದ ಘೋಷಣೆ ಮೊಳಗುತ್ತಿರುವುದರ ಅರ್ಥ ಪುರುಷರಿಂದ ದೂರವಾಗಿ ಚಿತ್ರಾಂಗದಾ ರಾಜ್ಯವನ್ನು ಸ್ಥಾಪಿಸುವುದಂತೂ ಅಲ್ಲ.

○ ಡಾ|| ವಸು

ಚಿತ್ರಾಂಗದಾ ರಾಜ್ಯದೆಡೆಗೆ

ವರ್ಷದ ಹಿಂದೆ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾಲಯ ಆರಂಭವಾದಾಗ ಯಾರೊಬ್ಬರೂ ಚಕಾರವೆತ್ತಲಿಲ್ಲ. ಮಹಿಳಾ ಅಭಿವೃದ್ಧಿಗೆ ಮಹಿಳಾ ವಿಶ್ವವಿದ್ಯಾಲಯದ ಅಗತ್ಯವನ್ನು ಕೆಲವರು ಮನಗಂಡರೆ ಮತ್ತೆ ಕೆಲವರು ಮಹಿಳಾ ವಿ.ವಿ.ಯ ವಿರುದ್ಧವಾಗಿ ಮಾತನಾಡುವುದು ಮಹಿಳೆಯ ವಿರುದ್ಧ ಮಾತನಾಡಿದಂತೆ ಎಂಬ ಅಳುಕಿನಿಂದ ಮೌನವಹಿಸಿದವರೂ ಇದ್ದಾರೆ. ಏನೇ ಇರಲಿ ಭರದಿಂದ, ಹುಮ್ಮಸ್ಸಿನಿಂದ ವಿಶ್ವವಿದ್ಯಾಲಯ ವಂತೂ ಆರಂಭವಾಯಿತು.

ಮಹಿಳೆಯರಿಗೆ ಪ್ರಾಧಾನ್ಯತೆಯನ್ನು ನೀಡುವುದು ಅದರ ಮೊದಲ ಗುರಿ. ಮಹಿಳಾ ಅಧ್ಯಯನ ಒಂದು ವಿಭಾಗ. ಉಳಿದಂತೆ ಎಲ್ಲಾ ಸಾಂಪ್ರದಾಯಿಕ ವಿಷಯಗಳ ಅಧ್ಯಯನ ಆರಂಭವಾಗಿದೆ. ಏಳೆಂಟು ಜಿಲ್ಲೆಗಳ ಮಹಿಳಾ ಕಾಲೇಜುಗಳನ್ನು ವಿಶ್ವವಿದ್ಯಾಲಯಕ್ಕೆ ಒಳಪಡಿಸಿಕೊಳ್ಳುವುದಾಗಿ ತಿಳಿಸಿತು. ಆದರೆ ಇತ್ತೀಚೆಗೆ ರಾಜ್ಯದ ಎಲ್ಲಾ ಮಹಿಳಾ ಕಾಲೇಜುಗಳನ್ನು ಮಹಿಳಾ ವಿಶ್ವವಿದ್ಯಾಲಯಕ್ಕೆ ಸೇರಿಸಿಕೊಳ್ಳಬೇಕೆಂಬ ಸುದ್ದಿ ಈ ನಿಟ್ಟಿನ ತೀವ್ರ ಚಿಂತನೆಯ ಅಗತ್ಯವನ್ನು ಸೂಚಿಸುತ್ತಿದೆ.

ರಾಜ್ಯದ ಮಹಿಳಾ ಕಾಲೇಜುಗಳನ್ನು ಆಡಳಿತಾತ್ಮಕವಾಗಿ ಮಹಿಳಾ ವಿಶ್ವವಿದ್ಯಾಲಯಕ್ಕೆ ಸೇರಿಸುವುದರಿಂದ ಆಗಬಹುದಾದ ಲಾಭವಾದರೂ ಏನು ? ಸ್ನಾತಕ ಮಟ್ಟದಲ್ಲಿ, ಉನ್ನತ ಶಿಕ್ಷಣದ ಹಂತದಲ್ಲಿ ಎಲ್ಲಿ ಎಲ್ಲರೂ ಕಲೆತು, ಚರ್ಚಿಸಿ, ಜ್ಞಾನಾರ್ಜನೆ ಮಾಡಬೇಕೋ ? ಆ ಸಂದರ್ಭದಲ್ಲಿ ಲಿಂಗದ ಹೆಸರಿನಲ್ಲಿ ಪ್ರತ್ಯೇಕವಾಗಬೇಕೋ ? ಮಹಿಳೆಯರನ್ನು ಪ್ರತ್ಯೇಕಿಸುವುದು ಮಹಿಳಾ ಸಮಾನತೆಯೇ ? ಸ್ತ್ರೀ ಸಬಲೀಕರಣದ ಘೋಷಣೆ ಮೊಳಗುತ್ತಿರುವುದರ ಅರ್ಥ ಪುರುಷರಿಂದ ದೂರವಾಗಿ ಚಿತ್ರಾಂಗದಾ ರಾಜ್ಯವನ್ನು ಸ್ಥಾಪಿಸುವುದಂತೂ ಅಲ್ಲ.

ಮಹಿಳೆಯರಿಗೆ ಪ್ರತ್ಯೇಕ ಶಾಲಾ ಕಾಲೇಜುಗಳು ಭಾರತದಲ್ಲಿ ಮಹಿಳಾ ಸುಧಾರಣಾ ಕಾರ್ಯಕ್ರಮದೊಂದಿಗೆ ಆರಂಭವಾಯಿತು. ಭಾರತದ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶಾಲೆಯನ್ನು ತೆರೆದು ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳನ್ನು ಶಾಲೆಗೆ ಕರೆತರುವ ಪ್ರಯತ್ನ ನಡೆದಿತ್ತು. ಇದರಲ್ಲಿ ಭಾರತದ ಎಲ್ಲ ಸಮಾಜ ಸುಧಾರಕರು ಕಾಳಜಿಯನ್ನು ವಹಿಸಿದ್ದರು. ರಾಜಾರಾಂ ಮೋಹನ ರಾಯ್, ಈಶ್ವರ್‌ಚಂದ್ರ ವಿದ್ಯಾಸಾಗರ್, ರವೀಂದ್ರನಾಥ ಠಾಗೂರ್, ಜ್ಯೋತಿ ಬಾ ಫುಲೆ, ಸ್ವಾಮಿ ವಿವೇಕಾನಂದ, ಸರ್ ಸೈಯದ್ ಅಹಮದ್ ಖಾನ್, ಮಿಷನರಿಗಳು, ರಾಜ ಮಹಾರಾಜರು - ಮಹಿಳಾ ಶಿಕ್ಷಣಕ್ಕಾಗಿ ದುಡಿದವರನ್ನೆಲ್ಲಾ ನೆನೆಯಲೇಬೇಕು.

ಮೊದಲ ಪೀಳಿಗೆಯ ಶಿಕ್ಷಿತ ಮಹಿಳೆಯರು ಹೊರಬಂದರು. ಇಪ್ಪತ್ತನೆಯ ಶತಮಾನದಲ್ಲಿ ಅವರು ಪರದೆಯ ಹಿಂದಾದರೂ ಶಿಕ್ಷಣ ಕಲಿಯಲಿ ಎಂಬ ಉದ್ದೇಶವಿತ್ತು. ಪರದೆ ಹಿಂದೆ - ಹೌದು ಲಕ್ನೊ, ಹೈದರಾಬಾದ್‌ವಿಶ್ವವಿದ್ಯಾಲಯಗಳಲ್ಲಿ ಪುರುಷ ಮಹಿಳೆಯರ ನಡುವೆ ಪರದೆಯನ್ನು ಇಳಿಬಿಡಲಾಗುತ್ತಿತ್ತು. ಪರದೆ ಹಾಕಿದ ಜಟಕಾಬಂಡಿಗಳಲ್ಲಿ ಶ್ರೀಮಂತ ಹೆಣ್ಣು ಮಕ್ಕಳನ್ನು ಕಾಲೇಜಿಗೆ ಕರೆತರಲಾಗುತ್ತಿತ್ತು. ಈ ಪರದೆಗಳನ್ನು ಸರಿಸಿ ಮುನ್ನುಗ್ಗುತ್ತಿರುವ ಹೊತ್ತಿನಲ್ಲಿ ವಿಶ್ವವಿದ್ಯಾಲಯದ ಹೆಸರಿನಲ್ಲಿ ಪರದೆ ಹಾಕಬೇಕೇ ?

ಇಂದಿನ ಶೈಕ್ಷಣಿಕ ಮನೋವಿಜ್ಞಾನದ ಸಂಶೋಧನಾ ವರದಿಗಳನ್ನು ಗಮನಿಸಿದರೆ ಹೆಣ್ಣು ಮತ್ತು ಗಂಡು ಮಕ್ಕಳ ಪ್ರತ್ಯೇಕತೆಯನ್ನು ತೀವ್ರವಾಗಿ ವಿರೋಧಿಸುತ್ತದೆ. ಹೆಣ್ಣು ಮಕ್ಕಳು ಅಥವಾ ಗಂಡು ಮಕ್ಕಳಿಗಾಗಿಯೇ ಮೀಸಲಾದ ಶಾಲೆಗಳಲ್ಲಿ ಓದುವುದು ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರ ದೃಷ್ಟಿಯಿಂದಲೂ ಯೋಗ್ಯವಾದುದಲ್ಲ. ಇದು ಅಸಹಜವಾದ ಮಾನಸಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಬಾಲಕಿಯರ ಶಾಲೆ, ಮಹಿಳಾ ಕಾಲೇಜುಗಳಲ್ಲಿ ಓದಿ ಸಮಾಜದ ಮುಕ್ತ ಸ್ಪರ್ಧೆಗೆ ಇಳಿದಾಗ ಯಥಾಪ್ರಕಾರ ಹಿಂಜರಿತ ಆರಂಭವಾಗುತ್ತದೆ. ಗಂಡು ಮಕ್ಕಳಿಂದ, ಗಂಡಸರಿಂದ ದೂರವಿರುವುದನ್ನು ಕಲಿಸಿ ವೈವಾಹಿಕ ಜೀವನವನ್ನು ಸಹಜವಾಗಿ ಸ್ವೀಕರಿಸಲಾಗದ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾಳೆ. ಹುಡುಗರ ಒಡನಾಟ ಅಪರಾಧವೆಂದೂ, ಅವರಿಂದ ದೂರವಿರುವುದನ್ನು ಆದರ್ಶವೆಂದೂ ಕಲಿತ ಹೆಣ್ಣು ಮಕ್ಕಳು ಇದ್ದಕ್ಕಿದ್ದಂತೆ ಅಪರಿಚಿತ ಗಂಡಸನ್ನು ಒಪ್ಪಿಕೊಂಡು ತನ್ನ ವೈವಾಹಿಕ ಬದುಕನ್ನು ಪೂರ್ಣ ಮನಸ್ಸಿನಿಂದ ಸ್ವೀಕರಿಸಲಾರಳು. ಗಂಡು ಮಕ್ಕಳಾದರೂ ಸಹ ಹೆಣ್ಣುಮಕ್ಕಳ ಬಗ್ಗೆ ಕೆಟ್ಟ ಕುತೂಹಲ ಇಲ್ಲವೆ ತಿರಸ್ಕಾರ ಮನೋಭಾವನೆಯನ್ನು ಬೆಳೆಸಿಕೊಳ್ಳುತ್ತಾರೆ. ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಹೆಣ್ಣು ಗಂಡು ಒಟ್ಟಾಗಿ ಆರೋಗ್ಯಕರ ಪೈಪೋಟಿಯುಳ್ಳ ವಾತಾವರಣದಲ್ಲಿ ದುಡಿಯುವಂತಾಗಬೇಕು. ಈ ವಿಚಾರಗಳು ಮಹಿಳಾ ವಿಶ್ವವಿದ್ಯಾಲಯದ ಅಧ್ಯಯನದ ವಸ್ತು ಮಾತ್ರವಾಗಿರದೆ ವಾಸ್ತವವೂ ಆಗಬೇಕಾಗುತ್ತದೆ.

ಪುಣೆಯಲ್ಲಿ ೧೯೧೧ರಲ್ಲಿ ಮಹಿಳಾ ವಿಶ್ವವಿದ್ಯಾಲಯ ಆರಂಭವಾದಾಗ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಶಿಕ್ಷಣ ಪಡೆಯಬೇಕೆಂಬುದು ಮೂಲ ಉದ್ದೇಶವಾಗಿತ್ತು.

ಇಂದು ವಿಶ್ವವಿದ್ಯಾಲಯದ ಗುರಿ ಅಷ್ಟೇ ಆಗಿಲ್ಲ. ಬಹುಶಃ ಮಹಿಳಾ ವಿಶ್ವವಿದ್ಯಾಲಯದ ಉದ್ದೇಶ ಮಹಿಳಾ ಸಮಸ್ಯೆಗಳಿಗೆ ಉತ್ತರವನ್ನು ಹುಡುಕುವ, ಆಂದೋಲನವನ್ನು ಹುಟ್ಟುಹಾಕುವ ಹೊಸ ಪರಂಪರೆಯನ್ನು ಕಟ್ಟುವ ನೆಲೆಯಾಗಬೇಕೆಂದು ಅರ್ಥ ಕಟ್ಟಿಕೊಳ್ಳಬೇಕಾಗಿದೆ. ಕಲೆ, ವಿಜ್ಞಾನ, ವಾಣಿಜ್ಯ ಯಾವ ವಿಷಯವಾಗಲಿ ಹೆಣ್ಣು ಮಕ್ಕಳು ಮಾತ್ರವೇ ಓದುವ ಒಂದು ಕೇಂದ್ರವಾದರೆ ಮಹಿಳಾ ಅಧ್ಯಯನದ ಉದ್ದೇಶ ಮಹಿಳಾ ವಿಶ್ವವಿದ್ಯಾಲಯದಲ್ಲೇ ಬಿದ್ದು ಹೋದಂತಾಗುತ್ತದೆ. ನಾಡಿನಾದ್ಯಂತ ಇರುವ ಮಹಿಳಾ ಕಾಲೇಜುಗಳನ್ನು ಆಡಳಿತಾತ್ಮಕವಾಗಿ ಒಂದು ಕಡೆ ಸೇರಿಸಿದರೆ ಇನ್ನು ಒಂದು ಶತಮಾನಕ್ಕೂ ಸಮಾಜದಲ್ಲಿ ಹೆಣ್ಣು ಮಕ್ಕಳ ಮುಕ್ತ ಚಿಂತನೆಗೆ, ಮುಕ್ತ ವಾತಾವರಣಕ್ಕೆ ತೆರೆ ಹಾಕಿದಂತಾಗುತ್ತದೆ.

ಮಡುಗಟ್ಟಿದ ಮಹಿಳಾ ಅಧ್ಯಯನ : ಭಾರತದಲ್ಲಿ ಮಹಿಳಾ ಅಧ್ಯಯನ ಒಂದು ಸ್ಪಷ್ಟ ಚಿತ್ರಣವನ್ನು ಪಡೆದುಕೊಂಡಿಲ್ಲ. ಸುಮಾರು

೧೯೭೦ರ ದಶಕದಲ್ಲಿ ಭಾರತದಲ್ಲಿ ಸಂಶೋಧನಾ ವಿಷಯವಾಗಿ ಮಹಿಳೆಯನ್ನು ಅಧ್ಯಯನಕ್ಕೆ ಒಳಪಡಿಸಲಾಯಿತು. ಅದರಲ್ಲೂ ಸಮಾಜಶಾಸ್ತ್ರಜ್ಞರು ಕೌಟುಂಬಿಕ ವ್ಯವಸ್ಥೆಯಲ್ಲಿ ಮಹಿಳೆ, ವಿಭಿನ್ನ ಸಾಂಸ್ಕೃತಿಕ, ಸಾಂಸ್ಥಿಕ ಹಿನ್ನೆಲೆಯಲ್ಲಿ ಮಹಿಳೆಯ ಸ್ಥಾನಮಾನಗಳನ್ನು ಕುರಿತು ಅಧ್ಯಯನ ಮಾಡತೊಡಗಿದರು. ವಿಶ್ವಸಂಸ್ಥೆ ೧೯೭೫ನ್ನು ವಿಶ್ವ ಮಹಿಳಾ ವರ್ಷವೆಂದು ಘೋಷಿಸಿತು. ಹಾಗೆಯೇ ೧೯೭೫ರಿಂದ ೧೯೮೫ರ ದಶಕವನ್ನು ಮಹಿಳಾ ದಶಕವೆಂದು ಆಚರಿಸಿತು. ಇದೇ ಸುಮಾರಿಗೆ ಅಮೇರಿಕದಲ್ಲಿ ಆರಂಭವಾದ ಸ್ತ್ರೀವಾದಿ ಚಳವಳಿಯ (Feminist Movement) ಕೊಡುಗೆಯನ್ನು ಮರೆಯುವಂತಿಲ್ಲ. ಸ್ತ್ರೀವಾದಿ ಚಳವಳಿಯಿಂದ ಮೂಡಿಬಂದ ಬರವಣಿಗೆಗಳು ಹಾಗೂ ಸಾಹಿತ್ಯ ವಿಮರ್ಶೆ ಸಮಾಜವನ್ನು ಚಿಂತನೆಗೆ ಈಡು ಮಾಡಿತು. ಇಂಡಿಯನ್ ಕೌನ್ಸಿಲ್ ಆಫ್ ಸೋಷಿಯಲ್ ಸೈನ್ಸ್ ರಿಸರ್ಚ್ (ICSSR) ಕಡೆಗಣಿತ ಮಹಿಳೆಯರನ್ನು ಕುರಿತು ಸಂಶೋಧನೆಗೆ ಹಣ ನೀಡಲು ಮುಂದಾಯಿತು. ೧೯೮೭ರಲ್ಲಿ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನಿರ್ದೇಶನದ ಮೇರೆಗೆ ಒಟ್ಟು ೩೩ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಮಟ್ಟದಲ್ಲಿ ಮಹಿಳಾ ಅಧ್ಯಯನ ಕೇಂದ್ರಗಳನ್ನು ತೆರೆಯಲಾಯಿತು. ಇಲ್ಲಿ ಗಮನಿಸಬೇಕಾದ ಅಂಶ ಈ ವಿಷಯ ಸರ್ಕಾರದ ಉನ್ನತ ಶಿಕ್ಷಣ ಮಟ್ಟದ ಯೋಜನೆಯಾಗಿ ಮೂಡಿಬರುತ್ತಿದೆ. ವಿದ್ಯಾರ್ಥಿಗಳ, ಶಿಕ್ಷಕರ ಅಥವಾ ಮಹಿಳಾ ಆಂದೋಲನದ ಒತ್ತಾಸೆಯಾಗಿ ಮೂಡಿಬರುತ್ತಿಲ್ಲ. ಒಂದು ರೀತಿಯಲ್ಲಿ ರಾಜಕೀಯ ಪ್ರಣಾಳಿಕೆಯಾಗಿ ಮೂಡಿಬರುತ್ತಿದೆ. ಇದೇ ಎಚ್ಚರ ವಿಶ್ವವಿದ್ಯಾಲಯಕ್ಕೆ ತನ್ನ ಸ್ವರೂಪವನ್ನು ನಿರ್ಧರಿಸಿಕೊಳ್ಳುವಾಗಲೂ ಇರಬೇಕಾಗುತ್ತದೆ.

ಭಾರತದಾದ್ಯಂತ ಮಹಿಳಾ ಅಧ್ಯಯನ ಏಕ ಸ್ವರೂಪವನ್ನು ಪಡೆದುಕೊಂಡಿಲ್ಲ. ಕೆಲವು ಕಡೆ ಇದು ಒಂದು ಬೋಧನಾ ವಿಭಾಗವಾಗಿದ್ದರೆ, ಕೆಲವು ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ವಿಭಾಗಗಳಾಗಿ ಕಾರ್ಯನಿರ್ವಹಿಸುತ್ತಿದೆ. ಕೆಲವು ಕಡೆ ಅಸ್ತಿತ್ವದಲ್ಲಿರುವ ವಿಭಾಗಗಳಲ್ಲಿ ಮಹಿಳಾ ಅಧ್ಯಯನವನ್ನು ಒಂದು ಆಯ್ಕೆಯ ವಿಷಯವಾಗಿ ಪರಿಗಣಿಸಲಾಗುತ್ತಿದೆ. ಎಂದರೆ ಇಂಗ್ಲಿಷ್, ಕನ್ನಡ, ಇತಿಹಾಸ ಮುಂತಾದ ವಿಭಾಗಗಳಲ್ಲಿ ಒಂದು ಪತ್ರಿಕೆಯಾಗಿ ಪರಿಗಣಿಸಲಾಗಿದೆ. ಮುಂಬೈ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ವಿಭಾಗದಲ್ಲಿ ಮಹಿಳೆ ಮತ್ತು ಅಭಿವೃದ್ಧಿ ಒಂದು ವಿಷಯವಾಗಿ ಬೋಧನೆಯಾಗುತ್ತಿದ್ದರೆ, ಲಕ್ನೋ ವಿ.ವಿ.ಯಲ್ಲಿ ಮಹಿಳಾ ಅಧ್ಯಯನ ವಿಭಾಗದಲ್ಲಿ ಮಹಿಳೆ ಮತ್ತು ಕಾನೂನು, ರಾಜಕೀಯದಲ್ಲಿ ಮಹಿಳೆ, ಅಭಿವೃದ್ಧಿ ಮತ್ತು ಮಹಿಳೆ ಹೀಗೆ ವಿಷಯಗಳನ್ನು ಬೋಧಿಸಲಾಗುತ್ತಿದೆ.

ಭಾರತದಾದ್ಯಂತ ಮಹಿಳಾ ಅಧ್ಯಯನ ಏಕ ಸ್ವರೂಪವನ್ನು ಪಡೆದುಕೊಂಡಿಲ್ಲ. ಕೆಲವು ಕಡೆ ಬೋಧನಾ ವಿಭಾಗವಾಗಿ, ಕೆಲವು ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ವಿಭಾಗಗಳಾಗಿ ಕಾರ್ಯನಿರ್ವಹಿಸುತ್ತಿದೆ. ಕೆಲವು ಕಡೆ ಅಸ್ತಿತ್ವದಲ್ಲಿರುವ ವಿಭಾಗಗಳಲ್ಲಿ ಮಹಿಳಾ ಅಧ್ಯಯನವನ್ನು ಒಂದು ಆಯ್ಕೆಯ ವಿಷಯವಾಗಿ ಪರಿಗಣಿಸಲಾಗುತ್ತಿದೆ. ಮುಂಬೈ ವಿಶ್ವವಿದ್ಯಾಲಯದಲ್ಲಿ ಮಹಿಳೆ ಮತ್ತು ಅಭಿವೃದ್ಧಿ ಒಂದು ವಿಷಯವಾಗಿ ಬೋಧನೆಯಾಗುತ್ತಿದ್ದರೆ, ಲಕ್ನೋ ವಿ.ವಿ.ಯಲ್ಲಿ ಮಹಿಳೆ ಮತ್ತು ಕಾನೂನು, ರಾಜಕೀಯದಲ್ಲಿ ಮಹಿಳೆ, ಅಭಿವೃದ್ಧಿ ಮತ್ತು ಮಹಿಳೆ ಹೀಗೆ ವಿಷಯಗಳನ್ನು ಬೋಧಿಸಲಾಗುತ್ತಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಪದವಿ ಮಟ್ಟದಲ್ಲಿ ಡಿಪ್ಲೊಮೊ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳಾಗಿಯೂ ಆರಂಭವಾಗಿದೆ. ಇಲ್ಲೆಲ್ಲಾ ಅಧ್ಯಯನದ ಗಂಭೀರತೆ ಅದರ ಸ್ಥಾಪನೆಯ ಉದ್ದೇಶದ ಆಧಾರದ ಮೇಲೆ ನಿಂತಿದೆ. ಹಲವಾರು ಖಾಸಗಿ ಶಿಕ್ಷಣ ಸಂಸ್ಥೆಗಳು ವಿಶ್ವವಿದ್ಯಾಲಯದ ಧನಸಹಾಯ ಆಯೋಗದ (ಯು.ಜಿ.ಸಿ) ಅನುದಾನಕ್ಕಾಗಿ ತೆರೆದಿರುವುದರಿಂದ ವಿಷಯ ಪರಿಣಿತರಿಲ್ಲದೆ ಆ ಸಂಸ್ಥೆಯಲ್ಲಿರುವ ಮಹಿಳಾ ಅಧ್ಯಾಪಕಿಯರಿಗೆ ಬೋಧನಾ ಕಾರ್ಯವನ್ನು ವಹಿಸಲಾಗಿದೆ. ಮಹಿಳಾ ಅಧ್ಯಯನದ ವಿಚಾರವಾಗಿ ಫ್ಯಾಷನ್ ಡಿಸೈನಿಂಗ್, ಕಂಪ್ಯೂಟರ್ ವಿಜ್ಞಾನ, ಬ್ಯೂಟೀಷಿಯನ್ ಕೋರ್ಸ್ ಇತ್ಯಾದಿಗಳೆಲ್ಲವೂ ಸೇರಿ ಮಹಿಳಾ ಅಧ್ಯಯನದ ಮೂಲ ಉದ್ದೇಶದ ದಿಕ್ಕು ಬದಲಾಯಿಸಿರುವುದು ಶೋಚನೀಯ.

ವಿಶ್ವವಿದ್ಯಾಲಯ ಹಾಗೂ ಇತರ ಅಧಿಕೃತ ವಿದ್ಯಾಸಂಸ್ಥೆಗಳಲ್ಲದೆ, ಸರ್ಕಾರೇತರ ಸಂಸ್ಥೆಗಳು (NGO) ಇಂದು ಮಹಿಳಾ ಅಧ್ಯಯನ ಕೇಂದ್ರಗಳನ್ನು ತೆರೆಯುತ್ತಿವೆ. ಅದರಲ್ಲೂ ಮಹಿಳಾ ಚಳವಳಿಯಲ್ಲಿ ತೊಡಗಿರುವ ಸಂಸ್ಥೆಗಳು ಇದರಲ್ಲಿ ಆಸಕ್ತಿಯನ್ನು ತೋರಿಸುತ್ತಿವೆ. ಇವು ದೇಶೀ ಹಾಗೂ ವಿದೇಶೀ ಮೂಲದ ಧನಸಹಾಯವನ್ನು ಪಡೆಯುತ್ತಿವೆ. ಇಲ್ಲವೆ ಧನಸಹಾಯದ ನಿರೀಕ್ಷೆಯಲ್ಲಿವೆ. ಕಾರ್ಪೋರೇಟ್ ಪ್ರಪಂಚವು ಧನಸಹಾಯ ಮಾಡಲು ಮುಂದಾಗುತ್ತಿರುವುದು ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ತನ್ನ ಪಾಲುದಾರಿಕೆಯನ್ನು ಪಡೆಯುವ ಪ್ರಯತ್ನದ ಭಾಗವಾಗಿದೆ. ತಾಂತ್ರಿಕ ಶಿಕ್ಷಣದಲ್ಲಿ ಕಾರ್ಪೋರೇಟ್ ಪ್ರಪಂಚ ಹಿಡಿತ ಸಾಧಿಸುವುದಕ್ಕೂ, ಸಾಮಾಜಿಕ ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಳ ಹೋಗುವುದಕ್ಕೂ, ಅಂತರವಿದೆ. ಒಟ್ಟಾರೆ ಶಿಕ್ಷಣವನ್ನು ವಿದೇಶೀಯರಿಗೆ ತೆರೆದಿರುವುದೇ ಅಪಾಯಕಾರಿಯಾದ ಈ ಹೊತ್ತಿನಲ್ಲಿ ಮಹಿಳಾ ಅಧ್ಯಯನದಂತಹ ಸೂಕ್ಷ್ಮ ವಿಷಯಗಳ ಸಂದರ್ಭದಲ್ಲಿ ಎಚ್ಚರಿಕೆಯಿಂದ ಅವಲೋಕಿಸಬೇಕಾಗಿದೆ.

ಕಳೆದ ಕೇಂದ್ರ ಸರ್ಕಾರದ, ಮಹಿಳಾ ಅಧ್ಯಯನ ವಿಭಾಗವು ಮಹಿಳೆ ಮತ್ತು ಕುಟುಂಬ ಎಂದಾಗಬೇಕೆಂಬ ಆಲೋಚನೆ ಸ್ತ್ರೀವಾದಿ ಧೋರಣೆಯುಳ್ಳ ವಿದ್ವಾಂಸರನ್ನು ದಂಗು ಬಡಿಸಿತು. ಭಾರತೀಯ ಸಾಂಪ್ರದಾಯಿಕ ಕುಟುಂಬದ ಮೌಲ್ಯವನ್ನು ಎತ್ತಿ ಹಿಡಿಯುತ್ತಾ ಆಧುನಿಕ ಧೋರಣೆಗಳನ್ನು ಬಗ್ಗುಬಡಿಯುವುದು ಇದರ ಹುನ್ನಾರವೇ? ಅಥವಾ ಕುಟುಂಬದ ಹಲವು ಸಮಸ್ಯೆಗಳನ್ನು ಚರ್ಚಿಸುತ್ತಾ ಮಹಿಳಾ ಕೇಂದ್ರಿತ ವಿಚಾರಗಳಿಂದ ಬಿಗಿಯನ್ನು ಸಡಿಲಗೊಳಿಸುವ ತಂತ್ರವೇ? ಒಟ್ಟಾರೆಯಾಗಿ ಮೂಲಭೂತವಾದಿ ಧೋರಣೆಯ ಹೆಣ್ಣಿನ ಅಧ್ಯಯನವನ್ನಾಗಿಸುವ ಪ್ರಯತ್ನ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಮಹಿಳಾ ಅಧ್ಯಯನ ಮಹಿಳೆಯರಿಗೆ ಮೀಸಲಾಗದೆ, ಸಮಾಜದ ಪುನರ್ ನಿರ್ಮಾಣಕ್ಕೆ ಎದ್ದ ಅಲೆಯಾಗಬೇಕು. ಮಹಿಳಾ ವಿಶ್ವವಿದ್ಯಾಲಯ ಚಿತ್ರಾಂಗದಾ ರಾಜ್ಯದ ಕಲ್ಪನೆಯನ್ನು ತೊರೆದು ಮಹಿಳಾ ಆಂದೋಲನದತ್ತ ದಾಪುಗಾಲು ಹಾಕಲಿ.

ಈವರೆಗಿನ ಮಹಿಳಾ ಅಧ್ಯಯನ ಅಥವಾ ಸ್ತ್ರೀವಾದಿ ಅಧ್ಯಯನಗಳ ಮೇಲೆ ಸಮಾಜವಾದಿ ಸೈದ್ಧಾಂತಿಕ ಆಲೋಚನೆಯ ಪ್ರಭಾವ ದಟ್ಟವಾಗಿದೆ. ಆದ್ದರಿಂದ ಕೆಲವು ಪಾರಿಭಾಷಿಕ ಪದಗಳು ನಿರಂತರವಾಗಿ ಬಳಕೆಯಾಗುತ್ತವೆ. ಅವುಗಳೆಂದರೆ ಪುರುಷ ಪ್ರಧಾನ ಸಮಾಜ, ದೌರ್ಜನ್ಯ, ಶೋಷಣೆ, ಲೈಂಗಿಕತೆ, ಲೈಂಗಿಕ ಸ್ವಾತಂತ್ರ್ಯ ಇತ್ಯಾದಿ. ಮಹಿಳಾ ಅಧ್ಯಯನದ ಸಂದರ್ಭದಲ್ಲಿ ಪಠ್ಯ ಕ್ರಮವನ್ನು ರೂಪಿಸುವಾಗ ಅಧ್ಯಯನದ ಗುರಿಯನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಸ್ತ್ರೀವಾದಿ ವಿಮರ್ಶೆ, ಮಹಿಳಾ ಅಧ್ಯಯನ, ಹಾಗೂ ಲಿಂಗ ಸಮಾನತೆ ಇವುಗಳ ನಡುವಿನ ದೃಷ್ಟಿಕೋನದ ಅಂತರತೆಯನ್ನು ಸ್ಪಷ್ಟಪಡಿಸಿಕೊಳ್ಳಬೇಕಾದುದು ಈ ವಿಧಾನಗಳ ಅಗತ್ಯವಾಗಿದೆ. ಇಷ್ಟಲ್ಲದೆ ಮಹಿಳಾ ಅಧ್ಯಯನದ ವಿಷಯ ವ್ಯಾಪ್ತಿ, ಕೊರತೆ, ಗುರಿ ಈ ವಿಚಾರವಾಗಿಯೂ ನೋಡಬೇಕಾಗಿದೆ. ಇತರ ವಿಷಯಗಳಂತೆ ಮಹಿಳಾ ಅಧ್ಯಯನ ಕೇವಲ ಜ್ಞಾನಮೂಲದ ವಿಚಾರವಲ್ಲ. ನೂರಕ್ಕೆ ನೂರು ಸಾಮಾಜಿಕ ಬದ್ಧತೆ ಹಾಗೂ ಕಾಳಜಿಹೊಂದಿರುವ ವಿಷಯವಾಗಿರುವುದರಿಂದ ಅದು ಕೇವಲ ಸಂಶೋಧನಾ ವಿಷಯವಾಗಿ ಉಳಿಯುವುದರಲ್ಲಿ ಅರ್ಥವಿಲ್ಲವೆನಿಸುತ್ತದೆ. ಸಮಾಜದಲ್ಲಿ ಅರಿವು ಮೂಡಿಸುವುದು ಮಹಿಳಾ ಅಧ್ಯಯನದ ಮೂಲ ಗುರಿಯಾಗಿರುವುದರಿಂದ ಅದು ಬೋಧನಾ ವಿಷಯವಾಗಿ ಮೂಡಿಬರುವ ಅಗತ್ಯವಿದೆ. ಮಹಿಳಾ ಅಧ್ಯಯನ ವಿಭಾಗದಲ್ಲಿ ಉಳಿದ ಎಲ್ಲಾ ವಿಭಾಗದ ವಿದ್ಯಾರ್ಥಿಗಳು ಒಂದು ಅಧ್ಯಯನ ಮಾಡುವ ಆಯ್ಕೆ ವಿಷಯವಾಗಿರುವ ಜವಹರಲಾಲ ವಿಶ್ವವಿದ್ಯಾಲಯದ ಕ್ರಮ ಹೆಚ್ಚು ಸೂಕ್ತವಾಗಿರುವಂತೆ ಕಂಡುಬರುತ್ತದೆ.

ಸ್ತ್ರೀವಾದ ಒಂದು ಚಿಂತನಾ ಕ್ರಮವೂ ಆಗಿರುವುದರಿಂದ ಇತಿಹಾಸ, ರಾಜಕೀಯ, ಸಾಹಿತ್ಯ ಎಲ್ಲದರೊಳಗೂ ಈ ಸೂಕ್ಷ್ಮ ಪರಿಜ್ಞಾನ ಸೇರಬೇಕಾದ ಅಗತ್ಯವಿದೆ. ನಿಧಾನವಾಗಿ ಶಾಲಾಮಟ್ಟದ ಅಧ್ಯಯನದಲ್ಲಿ ಹರಿಯಬೇಕಾಗುತ್ತದೆ.

ಮಹಿಳಾ ಅಧ್ಯಯನ ಮಹಿಳೆಯರಿಗೆ ಮೀಸಲಾಗದೆ, ಸಮಾಜದ ಪುನರ್ ನಿರ್ಮಾಣಕ್ಕೆ ಎದ್ದ ಅಲೆಯಾಗಬೇಕು. ಮಹಿಳಾ ವಿಶ್ವವಿದ್ಯಾಲಯ ಚಿತ್ರಾಂಗದಾ ರಾಜ್ಯದ ಕಲ್ಪನೆಯನ್ನು ತೊರೆದು ಮಹಿಳಾ ಆಂದೋಲನದತ್ತ ದಾಪುಗಾಲು ಹಾಕಲಿ.



□

ವಿವಾದ

ಕನ್ನಡ ಚಿತ್ರೋದ್ಯಮದ ಸಮಸ್ಯೆ ಸಮಸ್ತ ಕನ್ನಡಿಗರ ಸಮಸ್ಯೆಯಲ್ಲ. ಈ ಹೋರಾಟಕ್ಕೆ ಕೆಲವು ಪುರೋಗಾಮೀ ಗುಂಪುಗಳೂ ಬೆಂಬಲ ಸೂಚಿಸಿರುವುದು ಅಚ್ಚರಿ ಮೂಡಿಸುವ ಸಂಗತಿಯಾಗಿದೆ. ಎಲ್ಲೋ ಒಂದು ಕಡೆ ಕನ್ನಡ ಪರ ಸಂಘಟನೆಗಳು, ಚಿತ್ರೋದ್ಯಮದ ನಾಯಕರು, ಸಂಘಪರಿವಾರದ ಪುರೋಹಿತಶಾಹಿ ಮನೋಭಾವಕ್ಕೆ ಜೋತುಬಿದ್ದಿರುವುದು ಕಂಡುಬರುತ್ತದೆ. ಇಂತಹ ಪ್ರತಿಗಾಮೀ ಶಕ್ತಿಗಳಿಗೆ ಬೆಂಬಲ ನೀಡುವುದರಿಂದ ಕನ್ನಡಿಗರ ಭವಿಷ್ಯ ಕರಾಳವಾಗುವುದೇ ಹೊರತು ಅಭಿವೃದ್ಧಿ ಹೊಂದುವುದಿಲ್ಲ.

○ ನಾ. ದಿವಾಕರ

ಭಾಷೆ, ಚಿತ್ರರಂಗ ಮತ್ತು ರಾಜಕೀಯ

ಭಾರತ ಸ್ವಾತಂತ್ರ್ಯ ಪಡೆದ ನಂತರ ನಡೆದ ಎರಡು ಪ್ರಕ್ರಿಯೆಗಳು ಇಂದಿಗೂ ಚರ್ಚಾಸ್ಪದವಾಗಿದ್ದು ಪರ-ವಿರೋಧ ಅಭಿಪ್ರಾಯಗಳನ್ನು ಹುಟ್ಟುಹಾಕುತ್ತಿವೆ. ಒಂದು ಭಾರತ ಪಾಕಿಸ್ತಾನ ವಿಭಜನೆಯಾದರೆ ಮತ್ತೊಂದು ಭಾಷಾವಾರು ರಾಜ್ಯಗಳ ವಿಂಗಡಣೆ. ಅಥವಾ ಆಂತರಿಕ ವಿಭಜನೆ ಎಂದೂ ಹೇಳಬಹುದು. ರಾಜ್ಯಗಳನ್ನು ಭಾಷೆಯ ಆಧಾರದ ಮೇಲೆ ವಿಂಗಡಿಸುವ ಹಂತದಲ್ಲಿ ನಡೆದಿರುವ ಪ್ರಮಾದಗಳು ಇಂದು ಗಂಭೀರ ಸಮಸ್ಯೆಗಳಾಗಿ ಉದ್ಭವಿಸುತ್ತಿರುವುದು ಸ್ಪಷ್ಟವಾಗುತ್ತಿದೆ. ನೆಹರೂ ಮತ್ತು ಸರ್ದಾರ್ ಪಟೇಲ್‌ರವರ ದೂರದೃಷ್ಟಿ ಮತ್ತು ದಾರ್ಶನಿಕತೆ ಮೆಚ್ಚುವಂತಹದು. ಆದರೂ ಈ ನಿಟ್ಟಿನಲ್ಲಿ ಅಲ್ಲಲ್ಲಿ ಎಡವಿದಂತೆ ಕಂಡುಬರುತ್ತದೆ. ರಾಜಕೀಯ ಪ್ರಾಬಲ್ಯದ ಒತ್ತಡಗಳಿಗೆ ಮಣಿದು ರಾಜ್ಯಗಳ ವಿಂಗಡಣೆ ನಡೆದಿರುವುದು, ಅನೇಕ ರಾಜ್ಯಗಳಲ್ಲಿ, ವಿಶೇಷವಾಗಿ ಪಶ್ಚಿಮ, ದಕ್ಷಿಣ ಭಾರತದಲ್ಲಿ ಕಂಡುಬರುತ್ತದೆ. ಭಾಷಾವಾರು ರಾಜ್ಯ ಸ್ಥಾಪನೆಯ ನಂತರ ಅನೇಕ ಸಣ್ಣ ಸಣ್ಣ ರಾಜ್ಯಗಳು ಹೋರಾಟಗಳ ಮೂಲಕ ಸ್ಥಾಪಿತವಾಗಿರುವುದು, ಇಂದಿಗೂ ಪ್ರತ್ಯೇಕ ರಾಜ್ಯದ ಕೂಗುಗಳು ಕೇಳಿಬರುತ್ತಿರುವುದು ಇದಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಭಾರತ ಎಂದಿಗೂ ನಿಜವಾದ ಅರ್ಥದಲ್ಲಿ ಒಂದು ರಾಷ್ಟ್ರವಾಗಿರಲಿಲ್ಲ ಎಂದು ಅನೇಕ ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ. ರಾಷ್ಟ್ರಪ್ರಭುತ್ವದ ಪರಿಕಲ್ಪನೆಯ ದೃಷ್ಟಿಯಲ್ಲಿ ನೋಡಿದಾಗ ಈ ಅಭಿಪ್ರಾಯ ಕೊಂಚ ಮಟ್ಟಿಗಾದರೂ ಸತ್ಯ ಎನಿಸುತ್ತದೆ. ಹಿಂದೂ ಧರ್ಮ ಇಡಿ ದೇಶದಲ್ಲಿ ಪ್ರಚಲಿತವಾಗಿದ್ದು, ತನ್ನದೇ ಆದ ಅನುಯಾಯಿಗಳನ್ನು ಹೊಂದಿದ್ದರೂ, ಸಂಸ್ಕೃತಿ, ಕಲೆ, ಸಂಪ್ರದಾಯ, ಭಾಷೆ, ಇವುಗಳ ದೃಷ್ಟಿಯಿಂದ ನೋಡಿದಲ್ಲಿ ಭಾರತವನ್ನು ಒಂದು ಒಕ್ಕೂಟವೆಂದೇ ಹೇಳಬಹುದು. ನಾಗರಿಕ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಹಸ್ತಕ್ಷೇಪ ಮಾಡುವ ವಿದ್ಯೆಯನ್ನು ಬ್ರಿಟೀಷರಿಂದ ಬಳುವಳಿಯಾಗಿ ಪಡೆದಿರುವ ಭಾರತೀಯ ಪ್ರಭುತ್ವವೂ ದೇಶವ್ಯಾಪಿಯಾಗಿ ಸಾಮಾಜಿಕ - ಆರ್ಥಿಕ ಅಸಮತೋಲನವನ್ನು ಕಾಪಾಡಿಕೊಂಡೇ ಬಂದಿದೆ. ಒಂದೆಡೆ ಈ ಅಸಮತೋಲನ ಅಭಿವೃದ್ಧಿಯಿಂದ ಸಾಮಾನ್ಯ ಜನತೆಯಲ್ಲಿ ಪ್ರಾದೇಶಿಕ ಪ್ರಭುತ್ವಗಳ ವಿರುದ್ಧ ಅಸಮಾಧಾನವನ್ನು ಸೃಷ್ಟಿಸುತ್ತಲೇ ಇನ್ನೊಂದೆಡೆ ಭಾಷಾಭಿಮಾನ, ಪ್ರಾಂತೀಯತಾ ಮನೋಭಾವ, ರಾಜ್ಯ-ರಾಷ್ಟ್ರ ಪ್ರೇಮಗಳನ್ನು ಬೆಳೆಸುತ್ತಲೇ ಬಂದಿದೆ. ಹಾಗಾಗಿಯೇ ಇಂದು ಪ್ರತ್ಯೇಕತಾ ಭಾವನೆಗಳು ಹೆಚ್ಚಾಗುತ್ತಿದ್ದು ರಾಷ್ಟ್ರೀಯ ದೃಷ್ಟಿಕೋನಕ್ಕಿಂತಲೂ ಪ್ರಾಂತೀಯ ಭಾವನೆಗಳು ಹೆಚ್ಚಾಗುತ್ತಿವೆ. ಈ ಭಾವನೆಗಳಿಗೆ ಸಾಮಾಜಿಕ, ಆರ್ಥಿಕ ಅಸಮತೋಲನ ಒಂದು ಕಾರಣವಾದರೆ, ಭಾಷೆ-ಸಂಸ್ಕೃತಿಗಳು ಈ ಪ್ರಕ್ರಿಯೆಗೆ ಪುಷ್ಟಿ ನೀಡುತ್ತಿವೆ.

ಸಾಮಾನ್ಯ ಜನತೆ ತಮ್ಮ ಭಾಷೆಯನ್ನು ಎಷ್ಟೇ ಪ್ರೀತಿಸಿದರೂ, ನೆರೆ ರಾಜ್ಯದವರೊಂದಿಗೆ ಅನ್ಯ ಭಾಷಿಕರೊಂದಿಗೆ ಹೊಂದಿಕೊಂಡೇ ಬಾಳುವುದನ್ನು ಕಾಣಬಹುದಾದರೂ, ಕೆಲವೊಮ್ಮೆ ಆರ್ಥಿಕ-ಸಾಮಾಜಿಕ ಪರಿಸರದ ಪರಿಣಾಮವಾಗಿ ಭಾಷೆಯೇ ಪ್ರಧಾನ ಅಂಶವಾಗಿಬಿಡುತ್ತದೆ. ಭಾರತದಂತಹ ಸಮಾಜಗಳಲ್ಲಿ ಭಾವನೆಗಳಿಗೆ ಅತಿ ಪ್ರಾಮುಖ್ಯತೆ ನೀಡುವುದರಿಂದ ಜನತೆ ಭಾವನೆಗಳಿಗೆ ಶೀಘ್ರವಾಗಿ ಸ್ಪಂದಿಸುತ್ತಾರೆ. ಅಷ್ಟೇ ಸುಲಭವಾಗಿ ಜನತೆಯ ಭಾವನೆಗಳನ್ನು ಕೆರಳಿಸಿ ಸಾಮಾಜಿಕ ಸಂಘರ್ಷಗಳಿಗೆ ಎಡೆಮಾಡಿಕೊಡುವುದೂ ಭಾರತೀಯ ಸಮಾಜದಲ್ಲಿ ಸರ್ವೇ ಸಾಮಾನ್ಯ ಸಂಗತಿ.

ಇಂತಹ ಸಂದಿಗ್ಧತೆಯನ್ನು ಇಂದು ಕರ್ನಾಟಕದ ಜನತೆ ಎದುರಿಸುತ್ತಿದೆ. ಕನ್ನಡಿಗ ಎಂದರೆ ಯಾರು ಎಂಬ ಪ್ರಶ್ನೆಯಿಂದಲೇ ಕನ್ನಡಿಗರ ಸಮಸ್ಯೆಯೂ ಆರಂಭವಾಗುತ್ತದೆ. ಏಕೆಂದರೆ ಬ್ರಿಟೀಷರ ಕಾಲದಿಂದಲೂ ಕರ್ನಾಟಕದಲ್ಲಿ ಅನ್ಯಭಾಷಿಕರ ಸಂಖ್ಯೆ ಹೆಚ್ಚಾಗಿಯೇ ಇದೆ. ತೆಲುಗು ತಮಿಳು ಭಾಷಿಕರು ಅತಿ ಹೆಚ್ಚು ಸಂಖ್ಯೆಯಲ್ಲಿರುವುದು ಕರ್ನಾಟಕದಲ್ಲೇ ಎಂದು ಸ್ಪಷ್ಟವಾಗಿ ಹೇಳಬಹುದು. ಈ ವಿದ್ಯಮಾನಕ್ಕೆ ಅನೇಕ ಐತಿಹಾಸಿಕ ಕಾರಣಗಳು ಇದೆ. ಬ್ರಿಟೀಷರ ಕಾಲದಲ್ಲಿ ಮದ್ರಾಸ್

ಪ್ರೆಸಿಡೆನ್ಸಿ ಪ್ರಾಂತ್ಯಕ್ಕೆ ಸೇರಿದ್ದ ದಕ್ಷಿಣ ಕರ್ನಾಟಕದಲ್ಲಿ ಬಹುತೇಕ ಅಧಿಕಾರಶಾಹಿ ವರ್ಗವು ತಮಿಳರ ಪಾಲಾಗಿತ್ತು. ಅಂದಿನ ಕಾಲದಲ್ಲಿ ಮದ್ರಾಸಿನಲ್ಲಿದ್ದ ಉನ್ನತ ಶಿಕ್ಷಣದ ಸವಲತ್ತುಗಳೂ ಇದಕ್ಕೆ ಕಾರಣವಿರಬಹುದು. ಇನ್ನೊಂದೆಡೆ ವ್ಯಾಪಾರೀ ಕ್ಷೇತ್ರದಲ್ಲಿಯೂ ಸಹ ಬಹುಪಾಲು ತಮಿಳು ತೆಲುಗು ಭಾಷಿಕರೇ ಬಂದು ನೆಲೆಯೂರಿದ್ದರೂ ಭಾರೀ ಉದ್ದಿಮೆಗಳು ಜವಳಿ ಉದ್ದಿಮೆ, ಮುಂತಾದವು ಬಹುಪಾಲು ಉತ್ತರ ಭಾರತದ ವ್ಯಾಪಾರಿಗಳ ಕೈ ಸೇರಿತ್ತು. ಹೊರ ರಾಜ್ಯಗಳಿಂದ ವ್ಯಾಪಾರಕ್ಕಾಗಿ ನೌಕರಿ ಅರಸಿ ಬಂದವರಿಗೆ ಬೆಂಗಳೂರು ಕ್ರಮೇಣ ತವರೂರಾಯಿತು. ಹೀಗಾಗಿ ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕದಲ್ಲಿ, ಅದರಲ್ಲೂ ದಕ್ಷಿಣದಲ್ಲಿ ಹೊರರಾಜ್ಯದವರ ಸಂಖ್ಯೆ ಹೆಚ್ಚಾಗಿಯೇ ಕಂಡುಬರುತ್ತದೆ.

ಸ್ವಾತಂತ್ರ್ಯಾ ನಂತರ ದಿನಗಳಲ್ಲಿ ಭಾರೀ ಸಾರ್ವಜನಿಕ ಉದ್ದಿಮೆಗಳು ಸ್ಥಾಪನೆಯಾದಾಗಲೂ, ಕಾರ್ಖಾನೆಗಳಲ್ಲಿ ಕಠಿಣವಾದ ಕೆಲಸ ನಿರ್ವಹಿಸಲು ಹೊರರಾಜ್ಯದವರೇ ಹೆಚ್ಚಾಗಿ ಸೇರ್ಪಡೆಯಾದರು. ಕರ್ನಾಟಕದ ಜನ ಕಠಿಣ ಕೆಲಸಗಳನ್ನು ಮಾಡಲು ಸಿದ್ಧರಿಲ್ಲ ಎಂಬ ಪ್ರತೀತಿ ೧೯ನೆಯ ಶತಮಾನದಿಂದಲೇ ಇತ್ತು, ಇಂದಿಗೂ ಇದೆ. ಇದು ನಿಜವೂ ಹೌದು. ಹಾಗಾಗಿಯೇ ಕೋಲಾರ ಚಿನ್ನದ ಗಣಿ ಸ್ಥಾಪನೆಯಾದಾಗ ೧೮೮೦ರಲ್ಲಿ ಟೇಲರ್ ಅಂಡ್ ಕಂಪನಿಯವರು ೪೦ ಸಾವಿರ ಕಾರ್ಮಿಕರನ್ನು ಸೇಲಂ-ಕೃಷ್ಣಗಿರಿಯಿಂದ ಕರೆ ತಂದಿದ್ದರು. ಆದ್ದರಿಂದಲೇ ಇಂದು ಕೆಜಿಎಫ್‌ನಲ್ಲಿ ಶೇ ೭೦ರಷ್ಟು ಪರಭಾಷಿಕರೇ ಇದ್ದಾರೆ. ಅಲ್ಲಿ ಆಂಧ್ರ, ತಮಿಳು ಕಾಲೋನಿಗಳಿದ್ದರೂ ಕನ್ನಡ ಕಾಲೋನಿ ಇಂದಿಗೂ ಇಲ್ಲದಿರುವುದು ವಿಡಂಬನೆಯಾದರೂ ಸತ್ಯ. ಇದೇ ನಿಟ್ಟಿನಲ್ಲಿ ಕನ್ನಂಬಾಡಿ ಅಣೆಕಟ್ಟು ನಿರ್ಮಿಸಿದ ಹಂತದಲ್ಲಿ ಕೆಲಸಗಾರರು ಮಾತ್ರವಲ್ಲದೆ, ರೈತ ಕಾರ್ಮಿಕರು ಸಹ ಹೆಚ್ಚಾಗಿ ತಮಿಳುನಾಡಿನಿಂದಲೇ ವಲಸೆ ಬಂದಿದ್ದರು. ಇಂದಿಗೂ ಸಹ ಹೆಸರು ಜವರೇಗೌಡ ಎಂದಿದ್ದರೂ, ತಮಿಳಿನಲ್ಲಿ ಜವರನ್ ಎಂದು ಸಹಿ ಮಾಡುವವರಿದ್ದಾರೆ.

ಇನ್ನೊಂದು ಮಜಲಿನಲ್ಲಿ ನೋಡಿದಾಗ ಕರ್ನಾಟಕ, ಕಡಲತೀರವನ್ನು ಹೊರತುಪಡಿಸಿ, ಸುತ್ತಲೂ ಗಡಿವಿವಾದ ವನ್ನು ಎದುರಿಸುತ್ತಲೇ ಇದೆ. ರಾಜ್ಯದ ಸ್ಥಾಪನೆಯಾದ ದಿನದಿಂದಲೇ ಕಾಸರಗೋಡು ಬೆಳಗಾಂ ಮುಂತಾದೆಡೆಗಳಲ್ಲಿ ಗಡಿ ವಿವಾದ ಕಾಡಲಾರಂಭಿಸಿತು. ರಾಜ್ಯಗಳ ವಿಂಗಡಣೆಯ ಸಮಯದಲ್ಲಿ ರಾಜಕೀಯ ಶಕ್ತಿಗಳು ಕೊಂಚ ವಿವೇಚನೆಯಿಂದ, ದೂರದೃಷ್ಟಿಯಿಂದ ಆಲೋಚನೆ ಮಾಡಿದ್ದಲ್ಲಿ ಈ ಗಡಿ ವಿವಾದಗಳು ಉದ್ಭವಿಸುತ್ತಿರಲಿಲ್ಲ ಎನಿಸುತ್ತದೆ. ಉದಾಹರಣೆಗೆ ಶೇ. ೪೦ ರಷ್ಟು ತಮಿಳು ಭಾಷಿಕರಿರುವ ಚಿನ್ನದಗಣಿ ಪ್ರದೇಶ, ಬಹುಪಾಲು ಮರಾಠಿ ಭಾಷಿಕರಿರುವ ಬೆಳಗಾವಿಯ ಕೆಲವು ಪ್ರದೇಶಗಳು, ತೆಲುಗರೇ ಹೆಚ್ಚಾಗಿರುವ ಬಳ್ಳಾರಿ ಪ್ರದೇಶ ಕನ್ನಡಿಗರೇ ಹೆಚ್ಚಾಗಿರುವ ಕಾಸರಗೋಡು ಇವುಗಳನ್ನು ಸೂಕ್ತ ರೀತಿಯಲ್ಲಿ ವಿಂಗಡಿಸಿದ್ದಲ್ಲಿ ಗಡಿ ವಿವಾದವಾಗಲೀ ಭಾಷಾ ವೈಮನಸ್ಯವಾಗಲೀ ಇರುತ್ತಿರಲಿಲ್ಲ.

ಇಲ್ಲಿ ವಸ್ತುನಿಷ್ಠರಾಗಿ ನೋಡುವುದಾದರೆ, ೧೯ನೆಯ ಮತ್ತು ೨೦ನೆಯ ಶತಮಾನದ ಪ್ರಥಮಾರ್ಧದಲ್ಲಿ ಇಲ್ಲಿ ಬಂದು ನೆಲೆಸಿರುವ ಬಹುತೇಕ ಜನರು ನಮ್ಮ ಭಾಷೆ ಸಂಸ್ಕೃತಿಯೊಡನೆ ಹೊಂದಿಕೊಂಡು ಕನ್ನಡಿಗರೇ ಆಗಿದ್ದಾರೆ. ಅನಕ್ಷರತೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ಮಾತ್ರ ಕನ್ನಡ ಇನ್ನೂ ಆಡುಭಾಷೆಯಾಗಿ ಬೆಳೆದಿಲ್ಲ. ಚಿನ್ನದಗಣಿಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಭಾಷೆ ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗುವುದಿಲ್ಲ. ಹಾಗಾಗಿ ಅಲ್ಲಿ ಇಂದಿಗೂ ಸಹ ಕನ್ನಡ ಬೆಳೆದಿಲ್ಲವೆಂದು ಹೇಳಬಹುದು. ಆದರೂ ಸಹಿಷ್ಣುತೆಗೆ, ಶಾಂತ ಸ್ವಭಾವಗಳಿಗೆ ಹೆಸರಾದ ಕರ್ನಾಟಕದ ಜನತೆ ತಾಳ್ಮೆಯಿಂದಲೇ ಬಾಳುತ್ತಿರುವುದನ್ನೂ ಕಾಣಬಹುದು. ಬಿಹಾರ, ಆಂಧ್ರ, ಉತ್ತರ ಪ್ರದೇಶಗಳಲ್ಲಿರುವ ಭೂಮಾಲೀಕತ್ವದ ಶೋಷಣೆಯಾಗಲೀ, ತಮಿಳುನಾಡು ಬಂಗಾಲದಂತೆ ಭಾಷಾ ಪ್ರಾಮುಖ್ಯತೆಯಾಗಲೀ, ಉತ್ತರ ರಾಜ್ಯಗಳಂತೆ ಹಿಂಸಾತ್ಮಕ ರಾಜಕಾರಣವಾಗಲೀ ಕರ್ನಾಟಕದಲ್ಲಿ ಕಂಡುಬರುವುದಿಲ್ಲ. ಕನ್ನಡಿಗರು ಇತಿಹಾಸದ ಕಾಲದಿಂದಲೂ ಶಾಂತಿ ಪ್ರಿಯರೆಂದು ಹೆಸರು ಗಳಿಸಿದ್ದಾರೆ. ಪಲ್ಲವರೊಡನೆ ಯುದ್ಧ ಮಾಡದೆ ಸ್ನೇಹದಿಂದ ಅವರನ್ನೂ ಗೆದ್ದ ಕದಂಬರ ಇತಿಹಾಸ ಒಂದು ನಿದರ್ಶನವಷ್ಟೆ. ಈ ಅಂಶವನ್ನು ಸಾರ್ವತ್ರೀಕರಣಗೊಳಿಸಲಾಗುವುದಿಲ್ಲವಾದರೂ, ಬಹುಪಾಲಿಗೆ ಇದು ಒಪ್ಪಲೇಬೇಕಾದ ಸತ್ಯಾಂಶ.

ಇಂದು ಕರ್ನಾಟಕದ ಜನತೆ ಎದುರಿಸುತ್ತಿರುವ ಸಂದಿಗ್ಧತೆ ಸಮಸ್ಯೆಗಳನ್ನು ಈ ಐತಿಹಾಸಿಕ ದೃಷ್ಟಿಕೋನದಿಂದಲೇ ನೋಡಬೇಕಾಗುತ್ತದೆ. ರಾಜ್ಯದ ಭಾಷೆಯ ಉಳಿವಿಗಾಗಿ ಹೋರಾಟ ಮಾಡಬೇಕಾದ ಪರಿಸ್ಥಿತಿ ಬಹುಶಃ ಬೇರೆ ಯಾವುದೇ ರಾಜ್ಯದಲ್ಲೂ ಕಂಡುಬಂದಿರಲಿಕ್ಕಿಲ್ಲ. ಗೋಕಾಕ್ ಚಳವಳಿಯಂತಹ ಹೋರಾಟವೂ ಎಲ್ಲಿಯೂ ನಡೆದಿರಲಿಕ್ಕಿಲ್ಲ. ಗೋಕಾಕ್ ಚಳವಳಿಯ ಅವಶ್ಯಕತೆ ಸಾರ್ಥಕತೆಯ ಬಗ್ಗೆ ಏನೇ ಭಿನ್ನಾಭಿಪ್ರಾಯಗಳಿದ್ದರೂ ಆ ಚಳವಳಿಗೆ ರಾಜ್ಯಾದ್ಯಂತ ಅಭೂತಪೂರ್ವ ಬೆಂಬಲ ದೊರೆತದ್ದಂತೂ ಸತ್ಯ. ಆದರೆ ಅಂದಿಗಿಂತಲೂ ಇಂದಿನ ವಾಸ್ತವ ಪರಿಸ್ಥಿತಿ ಹೆಚ್ಚು ಭಿನ್ನವಾಗಿ, ಕ್ಲಿಷ್ಟವಾಗಿದೆ.

ಈ ಹಿಂದೆ ಹೇಳಿದಂತೆ ಕರ್ನಾಟಕದ ಜನತೆ, ರಾಜ್ಯದ ಸ್ಥಾಪನೆಯಾದಂದಿನಿಂದಲೂ ಗಡಿ ಭಾಷಾ ಸಮಸ್ಯೆ ಎದುರಿಸುತ್ತಲೇ ಇದ್ದಾರೆ. ಆದರೆ ಇಂದಿನ ಜಾಗತೀಕರಣದ ಆಕ್ರಮಣದ ಪರಿಣಾಮವಾಗಿ ಸಮಸ್ಯೆ ಉಲ್ಬಣಿಸಿವೆ. ಒಂದೆಡೆ ಆರ್ಥಿಕ ಅಭದ್ರತೆಯಾದರೆ ಇನ್ನೊಂದೆಡೆ ಸಾಂಸ್ಕೃತಿಕ ಆಕ್ರಮಣವನ್ನು ಜನತೆ ಎದುರಿಸಬೇಕಾಗಿದೆ. ಈ ಪ್ರವೃತ್ತಿ ರಾಷ್ಟ್ರಮಟ್ಟದಲ್ಲೂ ಕಂಡುಬಂದರೂ, ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಈ ಸಮಸ್ಯೆ ವಿಭಿನ್ನವಾಗಿ ಕಂಡುಬರುತ್ತದೆ. ಏಕೆಂದರೆ ಕರ್ನಾಟಕದ ದುಡಿಯುವ ವರ್ಗಗಳಲ್ಲಿ ಪರರಾಜ್ಯಗಳಿಂದ ವಲಸೆ ಬಂದಿರುವವರೇ ಹೆಚ್ಚಾಗಿದ್ದಾರೆ. ಆಂಧ್ರ ತಮಿಳುನಾಡಿಗಿಂತಲೂ ಹೆಚ್ಚು ಜನ ಕರ್ನಾಟಕಕ್ಕೆ ವಲಸೆ ಬರುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಸಾರ್ವಜನಿಕ ಕ್ಷೇತ್ರಗಳಲ್ಲಿ ಕನ್ನಡಿಗರ ಸಂಖ್ಯೆ ಗಣನೀಯವಾಗಿದ್ದರೂ, ಖಾಸಗಿ ಕ್ಷೇತ್ರದಲ್ಲಿ, ಕೃಷಿ ಕೈಗಾರಿಕೆಗಳಲ್ಲಿ ಪರ ರಾಜ್ಯಗಳ ಜನ ಹೆಚ್ಚು ಕಂಡುಬರುತ್ತಾರೆ. ಈ ಪ್ರಕ್ರಿಯೆಯಿಂದ ಕರ್ನಾಟಕದ ಜನತೆ ಉದ್ಯೋಗದ ಅಭಾವ ಎದುರಿಸಬೇಕಾಗಿದೆ. ಒಂದೆಡೆ ಭಾರೀ ಬಂಡವಾಳ ಉತ್ತರ ಭಾರತದ ಅನ್ಯರಾಜ್ಯಗಳ ಉದ್ಯಮಿಗಳ ಪಾಲಾಗಿದ್ದರೆ ಇನ್ನೊಂದೆಡೆ ಸುಭದ್ರ ನೌಕರಿಯ ಅವಕಾಶವಿಲ್ಲದೆ ಕರ್ನಾಟಕದ ಯುವಜನತೆ ಸುಲಭವಾಗಿ ಸಮಾಜಘಾತುಕ ಶಕ್ತಿಗಳ ಕೈವಶವಾಗುತ್ತಿದ್ದಾರೆ. ಸಂಘಪರಿವಾರ, ಭಜರಂಗದಳ, ಮುಸ್ಲಿಂ ಮೂಲಭೂತವಾದಿಗಳು, ರಾಜಕೀಯ ಶಕ್ತಿಗಳು ಕರ್ನಾಟಕದ ಜನತೆಯನ್ನು ಹಿಂಸಾತ್ಮಕ ಪ್ರವೃತ್ತಿಯೆಡೆಗೆ ಕೊಂಡೊಯ್ಯುತ್ತದೆ. ೨೦ ವರ್ಷಗಳ ಹಿಂದಿನ ಪರಿಸ್ಥಿತಿಯನ್ನು ಪ್ರಸ್ತುತಕ್ಕೆ ತುಲನೆ ಮಾಡಿದಾಗ ಈ ಅಂಶ ಸ್ಪಷ್ಟವಾಗಿ ಅರಿವಾಗುತ್ತದೆ.

ಕರ್ನಾಟಕದ ಜನತೆ, ರಾಜ್ಯದ ಸ್ಥಾಪನೆಯಾದಂದಿನಿಂದಲೂ ಗಡಿ ಭಾಷಾ ಸಮಸ್ಯೆ ಎದುರಿಸುತ್ತಲೇ ಇದ್ದಾರೆ. ಆದರೆ ಇಂದಿನ ಜಾಗತೀಕರಣದ ಆಕ್ರಮಣದ ಪರಿಣಾಮವಾಗಿ ಸಮಸ್ಯೆ ಉಲ್ಬಣಿಸಿವೆ. ಒಂದೆಡೆ ಆರ್ಥಿಕ ಅಭದ್ರತೆಯಾದರೆ ಇನ್ನೊಂದೆಡೆ ಸಾಂಸ್ಕೃತಿಕ ಆಕ್ರಮಣವನ್ನು ಜನತೆ ಎದುರಿಸಬೇಕಾಗಿದೆ. ಈ ಪ್ರವೃತ್ತಿ ರಾಷ್ಟ್ರಮಟ್ಟದಲ್ಲಿ ಕಂಡುಬಂದರೂ, ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಈ ಸಮಸ್ಯೆ ವಿಭಿನ್ನವಾಗಿ ಕಂಡುಬರುತ್ತದೆ. ಏಕೆಂದರೆ ಕರ್ನಾಟಕದ ದುಡಿಯುವ ವರ್ಗಗಳಲ್ಲಿ ಪರರಾಜ್ಯಗಳಿಂದ ವಲಸೆ ಬಂದಿರುವವರೇ ಹೆಚ್ಚಾಗಿದ್ದಾರೆ. ಆಂಧ್ರ ತಮಿಳುನಾಡಿಗಿಂತಲೂ ಹೆಚ್ಚು ಜನ ಕರ್ನಾಟಕಕ್ಕೆ ವಲಸೆ ಬರುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ.

೮೦ರ ದಶಕದ ಕಾವೇರಿ ಗಲಭೆಗಳು ಇತ್ತೀಚಿನ ಕಾವೇರಿ ಘರ್ಷಣೆಗಳು ಅಯೋಧ್ಯಾ ಕಾಂಡದ ನಂತರ ಹರಡಿರುವ ಕೋಮು ವಿಷಬೀಜ. ಇವೆಲ್ಲವನ್ನೂ ಅವಲೋಕಿಸಿದಾಗ, ಶಾಂತಿಪ್ರಿಯ ಕರ್ನಾಟಕ ಜನತೆ ಕ್ರಮೇಣ ಹಿಂಸೆಗೆ ಶರಣಾಗುತ್ತಿರುವುದು ಸ್ಪಷ್ಟವಾಗುತ್ತದೆ. ಬಿಹಾರದಲ್ಲಿ ನಡೆದಂತೆ ಅಪಹರಣ ಪ್ರಕರಣಗಳು, ಮುಂಬೈನಂತೆ ಭೂಗತ ದೊರೆಗಳು, ಉತ್ತರ ಪ್ರದೇಶದಂತೆ ಜಾತಿ ಕಲಹಗಳು ದಿನೇ ದಿನೇ ಹೆಚ್ಚಾಗುತ್ತಿವೆ. ನಿರುದ್ಯೋಗ ಬಡತನ ಹೆಚ್ಚಾಗುತ್ತಿರುವಂತೆಲ್ಲ ವಿಚ್ಛಿದ್ರಕಾರಕ-ಸಮಾಜ ಘಾತುಕ ಶಕ್ತಿಗಳು ಮೇಲುಗೈ ಸಾಧಿಸುತ್ತಿದ್ದು ಮತಾಂಧತೆ, ಮೂಲಭೂತವಾದ ಇಂದು ರಾಜ್ಯದೆಲ್ಲೆಡೆ ಪಸರಿಸಿದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಕರ್ನಾಟಕದಲ್ಲಿ ಪ್ರಮುಖ ಗಲಭೆಗಳಾದಾಗಲೆಲ್ಲಾ ಭಾಷಾ ಅಲ್ಪಸಂಖ್ಯಾತರೇ ಹೆಚ್ಚು ಆಕ್ರಮಣ ಎದುರಿಸಿದ್ದಾರೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಮಸ್ಯೆಗಳೆಲ್ಲವೂ ಭಾಷೆಯ ಮೂಲಕವೇ ಪರಿಹಾರ ಕಂಡುಕೊಳ್ಳುವ ಈ ಪ್ರವೃತ್ತಿ ಇಂದು ಪರಾಕಾಷ್ಠೆ ತಲುಪಿದ್ದು ಕನ್ನಡಿಗರ ರಕ್ಷಣೆ, ಕರ್ನಾಟಕದ ವಿಮೋಚನೆ, ಕನ್ನಡ ಭಾಷಾ ರಕ್ಷಣೆ ಮುಂತಾದ ಘೋಷಣೆಗಳು ಪ್ರಾಮುಖ್ಯತೆ ವಹಿಸುತ್ತಿವೆ. ಈ ಎಲ್ಲಾ ಪ್ರಕ್ರಿಯೆಗಳು ಕರ್ನಾಟಕದ ಜನತೆಯ ಕನ್ನಡಿಗರ ಆಕ್ರಮಿತ ಮನೋಭಾವವನ್ನು ವ್ಯಕ್ತಪಡಿಸುತ್ತದೆ.

ಪ್ರಸ್ತುತ ಕರ್ನಾಟಕದಲ್ಲಿ ಭುಗಿಲೆದ್ದಿರುವ ಚಿತ್ರೋದ್ಯಮದ ಸಮಸ್ಯೆಯನ್ನು ಈ ದೃಷ್ಟಿಕೋನದಿಂದಲೇ ವಿಶ್ಲೇಷಿಸುವುದು ಸೂಕ್ತವೆನಿಸುತ್ತದೆ. ಡಾ|| ರಾಜ್ ನೇತೃತ್ವದಲ್ಲಿ ಆರಂಭಗೊಂಡಿರುವ ಈ ಚಳವಳಿಯನ್ನು ಮಾಧ್ಯಮಗಳಲ್ಲಿ ಚಿತ್ರೋದ್ಯಮದಲ್ಲಿ ಗೋಕಾಕ್ ಚಳವಳಿಗೆ ಹೋಲಿಸಲಾಗುತ್ತಿದೆ. ಆದರೆ ವಾಸ್ತವದಲ್ಲಿ ಎರಡೂ ವಿಭಿನ್ನ ಹೋರಾಟಗಳಾಗಿವೆ. ಗೋಕಾಕ್ ಚಳವಳಿ ಅಂದಿನ

ಪರಿಸ್ಥಿತಿಯಲ್ಲಿ ಕನ್ನಡ ಭಾಷಾ ಬೆಳವಣಿಗೆಗೆ ಒಂದು ತಿರುವು ನೀಡಿದ ಪ್ರಕರಣವಾಗಿತ್ತು. ಶಾಲಾ ಕಾಲೇಜುಗಳಲ್ಲಿ ಸರ್ಕಾರೀ ವ್ಯವಹಾರಗಳಲ್ಲಿ ಕನ್ನಡ ಭಾಷೆಯ ಅನುಷ್ಠಾನಕ್ಕಾಗಿ ನಡೆದ ಗೋಕಾಕ್ ಚಳವಳಿ, ಡಾ|| ರಾಜ್ ನೇತೃತ್ವ ವಹಿಸಿದ ನಂತರ ರೋಮಾಂಚನಕಾರಿಯಾಗಿ ಕಂಡು ಬಂದಿತಾದರೂ, ಆ ಹೋರಾಟದಲ್ಲಿ ಸಮಸ್ತ ಸಾಹಿತಿ ಕಲಾವಿದ ಬಳಗ ಜನತೆಗೆ ಸ್ಪಂದಿಸಿತ್ತು.

ಗಣತಂತ್ರ-ಪ್ರಜಾಪ್ರಭುತ್ವದ ದೃಷ್ಟಿಯಿಂದ ಈ ಚಳವಳಿ ಕೆಲವು ಸಂದರ್ಭಗಳಲ್ಲಿ ಪ್ರತಿಗಾಮಿ ರೂಪ ಪಡೆಯಿತಾದರೂ ಕನ್ನಡ ಭಾಷೆಯ ಅನುಷ್ಠಾನವಾಗುವುದರಲ್ಲಿ ಈ ಹೋರಾಟದ ಗೆಲುವನ್ನು ಗುರುತಿಸಬಹುದು. ಅಂದಿನಿಂದ ಇಂದಿನವರೆಗೂ ಕನ್ನಡ ಭಾಷೆಯ ರಕ್ಷಣೆಯ ಬಗ್ಗೆ ಹೋರಾಟಗಳು ನಡೆಯುತ್ತಲೇ ಇದೆ. ಕರ್ನಾಟಕದಲ್ಲಿ ಕನ್ನಡ ಭಾಷೆ ನಶಿಸುತ್ತಿದೆ, ಪರಿಸ್ಥಿತಿ ಹೀಗೇ ಮುಂದುವರಿದಲ್ಲಿ ಕನ್ನಡ ಭಾಷೆ ಅವಸಾನ ಹೊಂದುತ್ತದೆ, ಕರ್ನಾಟಕ ಪರಭಾಷಿಕರ ಕೈ ಸೇರುತ್ತದೆ ಎಂಬ ಕೂಗು ಇತ್ತೀಚೆಗೆ ಹೆಚ್ಚಾಗುತ್ತಿದೆ. ಒಂದು ರೀತಿಯಲ್ಲಿ ಸಂಘ ಪರಿವಾರ, ಭಾರತ ಮುಸ್ಲಿಂ ರಾಷ್ಟ್ರವಾಗಿಬಿಡುತ್ತದೆ ಎಂದು ಬೊಬ್ಬೆ ಹೊಡೆಯುವುದನ್ನಿಲ್ಲಿ ಸ್ಮರಿಸಬೇಕಾಗುತ್ತದೆ. ಕನ್ನಡ ಭಾಷೆ ಸಾರ್ವಜನಿಕ ಮಟ್ಟದಲ್ಲಿ ಅನ್ಯ ಭಾಷೆಗಳಿಂದ ಆಕ್ರಮಣಕ್ಕೊಳಗಾಗಿರುವುದು ಕೊಂಚ ಮಟ್ಟಿಗೆ ಸತ್ಯವಾದರೂ, ಅದು ಸರ್ವಕಾಲಿಕ ಸತ್ಯವೆಂದು ಹೇಳಲಾಗುವುದಿಲ್ಲ.

ಜಾಗತೀಕರಣ ವಿಶ್ವದಲ್ಲಿ ಎಲ್ಲಾ ಸಂಸ್ಕೃತಿ, ಸಮುದಾಯ, ಜನಾಂಗಗಳೂ ಈ ರೀತಿಯ ಆಕ್ರಮಣ ಎದುರಿಸುತ್ತಿದ್ದು ಕರ್ನಾಟಕವೂ ಅದಕ್ಕೆ ಹೊರತಾಗಿಲ್ಲ. ಹಾಗಾಗಿ ಕನ್ನಡ ಭಾಷೆ, ಕನ್ನಡಿಗರು, ಕರ್ನಾಟಕದ ಜನತೆ ಹೇಗೆ ವಿಭಿನ್ನ ಮಜಲುಗಳಲ್ಲಿ ಪ್ರಸ್ತುತ ಬಿಕ್ಕಟ್ಟನ್ನು ವಿಶ್ಲೇಷಿಸಬೇಕಾಗುತ್ತದೆ. ಚಿತ್ರೋದ್ಯಮದ ಬಿಕ್ಕಟ್ಟನ್ನೂ ಇಡೀ ಕನ್ನಡಿಗರ ಸಮಸ್ಯೆಯಂತೆ ಪರಿಗಣಿಸುತ್ತಿರುವವರು ಈ ಅಂಶವನ್ನು ಗಮನಿಸಬೇಕಾಗಿದೆ.

ಭಾಷೆ - ಭಾಷಾಭಿಮಾನ - ಚಲನ ಚಿತ್ರೋದ್ಯಮ

ಯಾವುದೇ ಒಂದು ಭಾಷೆ ಬೆಳೆಯುವುದು ಅದರ ಸಾಂಸ್ಕೃತಿಕ, ಸಾಹಿತ್ಯಕ-ಚಾರಿತ್ರಿಕ ಹಿನ್ನೆಲೆಯನ್ನು ಅವಲಂಬಿಸಿರುತ್ತದೆ. ಭಾರತೀಯ ಭಾಷೆಗಳಲ್ಲಿ ಪ್ರಾಚೀನ ಭಾಷೆಯೆಂದು ಹೆಸರು ಗಳಿಸಿರುವ ಕನ್ನಡ ಭಾಷೆ ಕಳೆದ ೫೦೦೦ ವರ್ಷಗಳಲ್ಲಿ ಮಹತ್ತರವಾದ ಬೆಳವಣಿಗೆಗಳನ್ನು ಕಂಡಿದೆ. ಪಂಪ-ರನ್ನ-ಜನ್ನ-ನೃಪತುಂಗರಾದಿಯಾಗಿ ೨೧ನೆಯ ಶತಮಾನದವರೆಗೆ ಕನ್ನಡ ಒಂದು ಸಮೃದ್ಧ ಭಾಷೆಯಾಗಿ ಉನ್ನತ ಹಂತಗಳನ್ನು ತಲುಪುತ್ತಲೇ ಬೆಳೆದುಬಂದಿದೆ. ಶರಣ ಸಾಹಿತ್ಯವಾಗಲೀ, ಜೈನ ಸಾಹಿತ್ಯವಾಗಲೀ ಈ ಪ್ರಕಾರಗಳು ಆಯಾ ಕಾಲಘಟ್ಟದ ಪರಿಮಿತಿಯೊಳಗೆ ಹೊರಹೊಮ್ಮಿದಂಥವು. ಒಂದೊಂದು ಸಾಹಿತ್ಯ ಪ್ರಕಾರಗಳೂ ವಿಭಿನ್ನವಾದ ದೃಷ್ಟಿಕೋನಗಳನ್ನು ದಾರ್ಶನಿಕತೆಗಳನ್ನು ಪ್ರತಿಪಾದಿಸಿದರೂ, ಕನ್ನಡ ಭಾಷೆಯ ಇತಿಹಾಸ, ಕನ್ನಡ ಭಾಷಾ ಸಂಸ್ಕೃತಿ, ಕನ್ನಡಿಗರ ಸಾಮಾಜಿಕ ಸಂಸ್ಕೃತಿ, ಸಾಹಿತ್ಯ ಪರಂಪರೆ ಇವೆಲ್ಲದರ ಕೊಂಡಿ ಒಂದಕ್ಕೊಂದು ಬೆಸೆದುಕೊಂಡಿರುವುದರಿಂದಲೇ ಕನ್ನಡ ಭಾಷೆ ತನ್ನ ಶ್ರೀಮಂತಿಕೆಯನ್ನು, ಸೌಂದರ್ಯವನ್ನು, ಘನತೆಯನ್ನು, ಕಾಪಾಡಿಕೊಂಡು ಬಂದಿದೆ.

ಕುವೆಂಪು, ಬೇಂದ್ರೆ, ವೀಸೀ, ಶ್ರೀರಂಗ, ಬಿಎಂಶ್ರೀ, ಗೊರೂರು, ಮಾಸ್ತಿ, ಅಡಿಗ, ಲಂಕೇಶ್, ಭೈರಪ್ಪ ಎ.ಎನ್.ಮೂರ್ತಿರಾವ್, ಅನಕೃ, ಸಿದ್ದಲಿಂಗಯ್ಯ,

> **ಪ್ರಸ್ತುತ ಕರ್ನಾಟಕದಲ್ಲಿ ಡಾ|| ರಾಜ್ ನೇತೃತ್ವದಲ್ಲಿ ಆರಂಭಗೊಂಡಿರುವ ಈ ಚಳವಳಿಯನ್ನು ಮಾಧ್ಯಮಗಳಲ್ಲಿ ಗೋಕಾಕ್ ಚಳವಳಿಗೆ ಹೋಲಿಸಲಾಗುತ್ತಿದೆ. ಆದರೆ ವಾಸ್ತವದಲ್ಲಿ ಎರಡು ವಿಭಿನ್ನ ಹೋರಾಟಗಳಾಗಿವೆ. ಗೋಕಾಕ್ ಚಳವಳಿ ಅಂದಿನ ಪರಿಸ್ಥಿತಿಯಲ್ಲಿ ಕನ್ನಡ ಭಾಷಾ ಬೆಳವಣಿಗೆಗೆ ಒಂದು ತಿರುವು ನೀಡಿದ ಪ್ರಕರಣವಾಗಿತ್ತು. ಶಾಲಾ ಕಾಲೇಜುಗಳಲ್ಲಿ ಸರ್ಕಾರೀ ವ್ಯವಹಾರಗಳಲ್ಲಿ ಕನ್ನಡ ಭಾಷೆಯ ಅನುಷ್ಠಾನಕ್ಕಾಗಿ ನಡೆದ ಗೋಕಾಕ್ ಚಳವಳಿ, ಡಾ|| ರಾಜ್ ನೇತೃತ್ವ ವಹಿಸಿದ ನಂತರ ರೋಮಾಂಚನಕಾರಿಯಾಗಿ ಕಂಡು ಬಂದಿತಾದರೂ, ಆ ಹೋರಾಟದಲ್ಲಿ ಸಮಸ್ತ ಸಾಹಿತಿ ಕಲಾವಿದ ಬಳಗ ಜನತೆಗೆ ಸ್ಪಂದಿಸಿತ್ತು.**

ವಿನಾಯಕ, ಹೀಗೆ ವಿಭಿನ್ನ ಸಿದ್ಧಾಂತಗಳನ್ನು ಪ್ರತಿಪಾದಿಸಿದ ಎಲ್ಲಾ ಸಾಹಿತ್ಯ ಪ್ರಕಾರಗಳೂ ಇಂದಿನ ಸಮಾಜಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಮಾರ್ಗದರ್ಶಕವಾಗಿ ಪರಿಣಮಿಸುತ್ತವೆ. ಮಧ್ಯಮ ಮೇಲ್ವರ್ಗದ ಜನತೆ ಆಂಗ್ಲ ಶಿಕ್ಷಣದಿಂದ ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಎಷ್ಟೇ ಪ್ರಭಾವಿತರಾದರೂ ಸಾಹಿತ್ಯದ ಬೇರುಗಳು ಭಾಷೆಯನ್ನು ಗಟ್ಟಿಗೊಳಿಸುತ್ತಲೇ ಇರುವುದು ಸಾಹಿತ್ಯದ ಪರಂಪರೆಯ ಪರಿಣಾಮವೆಂದೇ ಹೇಳಬಹುದು. ಭಾರತದಲ್ಲಿಯೇ ಅತಿಹೆಚ್ಚು ಜ್ಞಾನಪೀಠ ಪ್ರಶಸ್ತಿ ಗಳಿಸಿರುವ ಕೀರ್ತಿ ಕನ್ನಡ ಭಾಷೆಗೆ ಸಲ್ಲುವುದಾದರೆ ಅದು ಕನ್ನಡಿಗರಿಗೂ ಸಲ್ಲುತ್ತದೆ. ಇಂತಹ ಸಮೃದ್ಧ ಸಾಹಿತ್ಯವನ್ನು ರಕ್ಷಿಸಿಕೊಂಡು ಬಂದಿರುವುದು ಹೆಮ್ಮೆಯ ಸಂಗತಿ. ಸೈದ್ಧಾಂತಿಕ ದೃಷ್ಟಿಕೋನಗಳನ್ನು ಬದಿಗಿಟ್ಟು ವಿಶಾಲ ದಾರ್ಶನಿಕತೆಯಿಂದ ನೋಡಿದಾಗ ಈ ಅಂಶ ಸ್ಪಷ್ಟವಾಗುತ್ತದೆ.

ಕನ್ನಡ ಭಾಷೆಯ ಅಳಿವು ಉಳಿವಿನ ಪ್ರಶ್ನೆ ಇಲ್ಲಿ ಹೆಚ್ಚು ಪ್ರಸ್ತುತವೆನಿಸುತ್ತದೆ. ಬಹುತೇಕವಾಗಿ ಭಾಷೆಯ ಪ್ರಶ್ನೆ ಉದ್ಭವಿಸಿದಾಗ ಆಂಗ್ಲಭಾಷೆ ಆಕ್ರಮಣಕ್ಕೊಳಗಾಗುತ್ತದೆ. ಆಂಗ್ಲ ಮಾಧ್ಯಮದ ಶಾಲೆಗಳಿಂದಲೇ ಕನ್ನಡ ಭಾಷೆಯ ಬೆಳವಣಿಗೆ ಕುಂಠಿತವಾಗುತ್ತಿದೆ ಎಂಬ ಕೂಗು ಕೇಳಿಬರುತ್ತಿದೆ. ಈ ಅಭಿಪ್ರಾಯವನ್ನು ತಳ್ಳಿ ಹಾಕಲಾಗುವುದಿಲ್ಲವಾದರೂ ಕೇವಲ ಒಂದು ಪರಭಾಷೆಯು ಕನ್ನಡದಂತಹ ಶ್ರೀಮಂತ ಭಾಷೆಯನ್ನು ನಿರ್ನಾಮ ಮಾಡುವುದು ಅಸಾಧ್ಯದ ಮಾತೆನಿಸುತ್ತದೆ. ತಮಿಳರ ಸಂಖ್ಯೆ ಹೆಚ್ಚಾಗುವುದರಿಂದ, ಆಂಗ್ಲ ಮಾಧ್ಯಮ ಶಾಲೆಗಳು ಹೆಚ್ಚಾಗಿರುವುದರಿಂದ ಕನ್ನಡ ಭಾಷೆಯೇ ಅವಸಾನದ ಹಂತದಲ್ಲಿದೆ ಎಂದು ಹೇಳುವುದು ಮರಗಳನ್ನರಸಿ ಅರಣ್ಯವನ್ನು ಕಳೆದುಕೊಂಡಂತಾಗುತ್ತದೆ. ನಿಜ, ಆಂಗ್ಲ ಮಾಧ್ಯಮದ ಶಾಲೆಗಳಿಂದ ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡದ ಬಳಕೆ ಕಡಿಮೆಯಾಗುತ್ತಿದೆ. ಮಧ್ಯಮ ವರ್ಗ-ಮೇಲ್ವರ್ಗದವರಲ್ಲಿ ಮಮ್ಮಿ ಡ್ಯಾಡಿ ಸಂಸ್ಕೃತಿ ಬೆಳೆಯುತ್ತಿದೆ. ಮಂಗಳವಾರ ಎಂದರೆ ಅರ್ಥವಾಗದೆ ಇಂಗ್ಲೀಷಿನಲ್ಲಿ ಹೇಳಿ ಎನ್ನುವ ಕಾಲೇಜು ಕನ್ನಡಿಗ ವಿದ್ಯಾರ್ಥಿಗಳೂ ಕರ್ನಾಟಕದಲ್ಲಿದ್ದಾರೆ. (ಇದು ಸ್ವಂತ ಅನುಭವ) ಇದಕ್ಕೆ ಮೂಲ ಕಾರಣ ಕರ್ನಾಟಕದ ಸರ್ಕಾರಗಳು ಮತ್ತು ಇಲ್ಲಿನ ಜನ ಪ್ರತಿನಿಧಿಗಳು. ಗೋಕಾಕ್ ಚಳವಳಿ ನಡೆದು ೪. ದಶಕಗಳು ಕಳೆದಿವೆ. ಸರೋಜಿನಿ ಮಹಿಷಿ ವರದಿ ಪ್ರಕಟವಾಗಿ ೨ ದಶಕ ಕಳೆದಿವೆ. ಆದರೂ ಯಾವುದೇ ಸರ್ಕಾರವೂ ಕನ್ನಡವನ್ನು ಆಡಳಿತಭಾಷೆಯಾಗಿ ಅಳವಡಿಸುವಲ್ಲಿ, ಪ್ರಾಥಮಿಕ ಶಿಕ್ಷಣದಲ್ಲಿ ಅನುಷ್ಠಾನಗೊಳಿಸುವಲ್ಲಿ ಆಸಕ್ತಿ ತೋರಿಲ್ಲ. ಕರ್ನಾಟಕದ ರಾಜಕಾರಣಿಗಳೂ ಸಹ ಈ ವೈಫಲ್ಯದ ಜವಾಬ್ದಾರಿ ಹೊರಬೇಕಾಗುತ್ತದೆ.

ರಾಜ್ಯೋತ್ಸವದಂದು ದೇಶದ ನರನಾಡಿಗಳಲ್ಲಿ ಹರಿದಾಡುವ ಕನ್ನಡಾಭಿಮಾನ, ಮರುಕ್ಷಣದಲ್ಲಿ ರಾಜಕೀಯ ಸ್ವರೂಪ ಪಡೆದಿರುತ್ತದೆ. ಈ ನಿಟ್ಟಿನಲ್ಲಿ ಕನ್ನಡಪರ ಹೋರಾಡುವ ಸಂಘಟನೆಗಳೂ ಸಹ ವಿಫಲವಾಗಿದೆ. ನಾಮಫಲಕ, ಸರ್ಕಲ್‌ಗಳು, ರಸ್ತೆಗಳು, ಧ್ವಜಸ್ಥಂಭಗಳು ಮತ್ತು ಅದ್ದೂರಿ ರಾಜ್ಯೋತ್ಸವಗಳಲ್ಲೇ ಈ ಸಂಘಟನೆಗಳ ಕನ್ನಡಾಭಿಮಾನ ಮುಳುಗಿಹೋಗಿರುತ್ತವೆ. ತಾಯಿ ಭುವನೇಶ್ವರಿಯ ಆರಾಧನೆಯಿಂದಲೇ ಕನ್ನಡ ಭಾಷೆ ಸಂಸ್ಕೃತಿ ಉಳಿಯುವುದಿಲ್ಲವೆಂಬ ಅರಿವು ಈ ಸಂಘಟನೆಗಳಿಗೆ ಮೂಡಬೇಕಾಗಿದೆ. ಕರ್ನಾಟಕದಲ್ಲಿ ನೆಲೆಸಿದವರೆಲ್ಲರೂ ಕನ್ನಡಿಗರೆಂದಾದಲ್ಲಿ, ಸಮಸ್ತ ಕನ್ನಡಿಗರೂ ಆರಾಧನಾ ಸಂಸ್ಕೃತಿಯನ್ನು ಒಪ್ಪುವುದಿಲ್ಲವೆಂಬ ಸತ್ಯವನ್ನು ಈ ಸಂಘಟನೆಗಳು ಗ್ರಹಿಸುವುದು ಅತ್ಯವಶ್ಯವಾಗಿದೆ. ಕನ್ನಡ, ಕನ್ನಡ ಭಾಷೆಯ, ಉಳಿವು ಅಳಿವು ಡಾಲರ್‌ಗಳ ಹಿಂದೆ ಓಡುವ ವರ್ಗವನ್ನು ಅವಲಂಬಿಸಿಲ್ಲ. ಪಾಶ್ಚಿಮಾತ್ಯ ಸಂಸ್ಕೃತಿಗೆ ಜೋತುಬಿದ್ದವರನ್ನೂ ಅವಲಂಬಿಸಿಲ್ಲ. ಹಾಗಾಗಿದ್ದಲ್ಲಿ ಈ ವೇಳೆಗೆ ಕನ್ನಡ ಭಾಷೆ ಅವಸಾನ ಹೊಂದಿರಬೇಕಾಗಿತ್ತು.

ಕನ್ನಡ ಭಾಷೆಯ ಅಭಿವೃದ್ಧಿ, ಉಳಿವು ಸಾಮಾನ್ಯ ಜನರನ್ನು ಅವಲಂಬಿಸಿರುತ್ತದೆ. ಸಮಾಜದ ಶೇ ೮೦ ರಷ್ಟಿರುವ ರೈತ-ಕಾರ್ಮಿಕ-ಕಲಾವಿದ-ಸಾಹಿತಿ-ಬರಹಗಾರ-ಕವಿ-ನಾಟಕಕಾರರನ್ನು ಅವಲಂಬಿಸಿರುತ್ತದೆ. ಸಾಮಾನ್ಯ ಜನತೆಯ, ದುಡಿಯುವ ವರ್ಗಗಳ ಮನೆಯಂಗಳದಲ್ಲಿ ಕನ್ನಡ ಭಾಷೆ ವೃದ್ಧಿಸುತ್ತದೆ. ಈ ದೃಷ್ಟಿಯಿಂದ ನೋಡಿದರೆ ಕನ್ನಡ ಭಾಷೆಗೆ ಯಾವುದೇ ಅಪಾಯವಿಲ್ಲವೆಂದೇ ಹೇಳಬಹುದು. ಆಂಗ್ಲ ಭಾಷೆಯನ್ನೇ ಗುರಿಯಾಗಿಟ್ಟುಕೊಂಡು ವಾದಿಸಿದಲ್ಲಿ ಎಲ್ಲಾ ಚರ್ಚೆ ವಾದ ವಿವಾದಗಳೂ ನಗರಗಳಿಗೇ ಸೀಮಿತವಾಗಲಿರುವ ಸಾಧ್ಯತೆಗಳಿವೆ. ಈಗಾಗಿರುವುದೂ ಅದೇ ಎಂದು ಹೇಳಬಹುದು. ರಾಜಧಾನಿ ಬೆಂಗಳೂರಿನಲ್ಲಿ ಕನ್ನಡಿಗರ ಸಂಖ್ಯೆ ಕುಸಿದಿದೆ ಎಂದ ಮಾತ್ರಕ್ಕೆ ದೊಡ್ಡ ಹುಯಿಲೆಬ್ಬಿಸಲಾಗುತ್ತಿದೆ. ಬೆಂಗಳೂರಿನಂತಹ ಮೆಟ್ರೊಪಾಲಿಟನ್ ನಗರಗಳಲ್ಲಿ ಈ ಭಾಷೆಯ ತುಣುಕುಗಳನ್ನು ಹುಡುಕುವುದು ಸಾಗರದಲ್ಲಿ ಹರಳು ಶೋಧಿಸಿದಂತಾಗುತ್ತದೆ. ಮುಂಬೈ, ಕೊಲ್ಕತ್ತಾ, ಚೆನ್ನೈ, ಹೈದರಾಬಾದ್‌ಗಳಲ್ಲೂ ಆಯಾ ರಾಜ್ಯಗಳ ಭಾಷೆ ಇದೇ ಪರಿಸ್ಥಿತಿ ಎದುರಿಸುತ್ತಿಲ್ಲವೇ?

ಕನ್ನಡ ಭಾಷೆಗೆ ಬೆಂಗಳೂರು ಮಾತ್ರ ಕೇಂದ್ರಸ್ಥಾನವಲ್ಲ ಅಲ್ಲವೇ ? ಹಾಗೆ ನೋಡಿದರೆ ಕನ್ನಡ ಸಾಹಿತ್ಯದ ದಿಗ್ಗಜರು ಬೆಂಗಳೂರಿನಿಂದ ಹೊರಗಿದ್ದವರೇ ಆಗಿದ್ದಾರೆ. ಧಾರವಾಡ, ಕೋಲಾರ, ಮಂಡ್ಯ, ಮೈಸೂರು, ಶಿವಮೊಗ್ಗ, ಮಲೆನಾಡು ಪ್ರದೇಶಗಳಿಂದಲೇ ಕನ್ನಡ ಸಾಹಿತ್ಯ ಸಮೃದ್ಧತೆಯನ್ನು ಪಡೆದುಕೊಂಡಿದೆ. ಆದರೂ ಕನ್ನಡ ಸಾಹಿತ್ಯ ಪರಿಷತ್ತು ಅದರ ಹಿಂದಿನ ರಾಜಕಾರಣ ಎಲ್ಲವೂ ಬೆಂಗಳೂರಿನಿಂದಲೇ ನಡೆಯುತ್ತದೆ. ಅತ್ಯಧಿಕ ಸಾಹಿತ್ಯ ಕಲಾ ಚಟುವಟಿಕೆಗಳೂ

ಬೆಂಗಳೂರಿನಲ್ಲೇ ನಡೆಯುತ್ತವೆ. ವಚನ-ಶರಣ ಸಾಹಿತ್ಯ ಬೆಳೆಸಿದ ಉತ್ತರ ಕರ್ನಾಟಕವಾಗಲೀ ಜೈನ ಸಾಹಿತ್ಯ ಬೆಳೆಸಿದ ಮಲೆನಾಡಾಗಲೀ, ಬಂಡಾಯ ಸಾಹಿತ್ಯ ಬೆಳೆಸಿದ ಬಯಲುಸೀಮೆಯಾಗಲೀ ಕಡೆಗಣಿಸಲ್ಪಟ್ಟಿರುತ್ತದೆ.

ಈ ನಿಟ್ಟಿನಲ್ಲಿ ಕನ್ನಡ ಪರ ಹೋರಾಡುವ ಸಂಘಟನೆಗಳು ತಮ್ಮ ದೃಷ್ಟಿಯನ್ನು ಬೆಂಗಳೂರಿಂದಾಚೆಗೆ ಹಾಯಿಸುವುದು ಇಂದು ಅತ್ಯವಶ್ಯವಾಗಿದೆ. ಏಕೆಂದರೆ ಆಂಗ್ಲ ಮಾಧ್ಯಮದ ಶಾಲೆಗಳು ಗ್ರಾಮೀಣ ಪ್ರದೇಶಗಳಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿದ್ದರೂ, ಜಾಗತೀಕರಣದ ಪ್ರಭಾವದಿಂದ, ಮಾಧ್ಯಮಗಳಿಂದ ಪಾಶ್ಚಿಮಾತ್ಯ ಸಂಸ್ಕೃತಿ ದಾಳಿ ಮಾಡಿದ್ದರೂ ಇಲ್ಲಿ ಕನ್ನಡ, ಭಾಷೆಯಾಗಿ, ಸಂಸ್ಕೃತಿಯಾಗಿ ಜೀವಂತವಾಗಿದೆ. ಜನಪದದಲ್ಲಿ ಕಾವ್ಯ, ಕಲೆ, ನಾಟಕ, ಸಾಹಿತ್ಯದ ರೂಪಗಳಲ್ಲಿ ಕನ್ನಡ ತನ್ನ ಸ್ವಂತಿಕೆ ಉಳಿಸಿಕೊಂಡಿರುವುದನ್ನು ಗ್ರಾಮೀಣ ಪ್ರದೇಶಗಳಲ್ಲಿ ನಾವು ಕಾಣಬಹುದು. ಗ್ರಾಮೀಣ-ಪಟ್ಟಣ ಪ್ರದೇಶಗಳಲ್ಲಿ ದೈನಂದಿನ ಚಟುವಟಿಕೆಗಳಲ್ಲಿ ಆಂಗ್ಲ ಭಾಷೆಯ ಬಳಕೆಯೇ ಕಂಡುಬರುವುದಿಲ್ಲ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಇಂದಿನ ಬಹುತೇಕ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಶಿಕ್ಷಕರು ಪಾಠ ಮಾಡುವುದು ಕನ್ನಡದಲ್ಲೇ. ವಿದ್ಯಾರ್ಥಿಗಳು ಪರಸ್ಪರ ಮಾತನಾಡುವುದೂ ಕನ್ನಡದಲ್ಲೆ, ಶ್ರೀಮಂತ ವರ್ಗದ ಮಕ್ಕಳು ಓದುವ ಶಾಲೆಗಳಲ್ಲಿ ಮತ್ತು ಬಿಷಪ್ ಕಾಟನ್‌ನಂತಹ ಶಾಲೆಗಳಲ್ಲಿ ಹೆಚ್ಚು ಇಂಗ್ಲಿಷ್ ಬಳಕೆಯಾಗಬಹುದು. ಇಲ್ಲಿ ಹೇಳ ಬಯಸುವುದೇನೆಂದರೆ ಕೇವಲ ಆಂಗ್ಲ ಮಾಧ್ಯಮ ಶಾಲೆಗಳ ಬೆಳವಣಿಗೆಯಿಂದ ಕನ್ನಡ ಭಾಷೆಗೆ ಯಾವುದೇ ಧಕ್ಕೆ ಉಂಟಾಗುವುದಿಲ್ಲ. ಬಹುಪಾಲು ಕನ್ನಡ ಸಾಹಿತಿ-ಕವಿ-ಬರಹಗಾರರು ಇಂಗ್ಲಿಷ್ ಪ್ರಾಧ್ಯಾಪಕರೇ ಆಗಿರುವುದನ್ನು ಗಮನಿಸಬಹುದು.

ಇಂದಿನ ಜಾಗತೀಕರಣಗೊಂಡ ಸಮಾಜದಲ್ಲಿ ಶಿಕ್ಷಣ-ವಿದ್ಯಾಭ್ಯಾಸ ಕೇವಲ ಧನಾರ್ಜನೆಯ ಮೂಲವಾಗಿವೆಯೇ ಹೊರತು ಜ್ಞಾನಾರ್ಜನೆಯ ಉದ್ದೇಶ ಹೊಂದಿಲ್ಲ. ವಿಶೇಷವಾಗಿ ಮಧ್ಯಮ-ಕೆಳಮಧ್ಯಮ ವರ್ಗಗಳಲ್ಲಿ ನೌಕರಿ ಗಳಿಸುವುದೇ ವಿದ್ಯಾಭ್ಯಾಸದ ಪರಮೋದ್ದೇಶವಾಗಿರುವುದು ಸಹಜವಾಗಿರುತ್ತದೆ. ಹಾಗಾಗಿ ಮಧ್ಯಮ ವರ್ಗದ ಪೋಷಕರೂ ಸಹ ತಮ್ಮ ಮಕ್ಕಳು ಆಂಗ್ಲ ಮಾಧ್ಯಮಗಳಲ್ಲಿ ಓದಲು ಪ್ರೇರೇಪಿಸುತ್ತಾರೆ. ಆಂಗ್ಲ ಭಾಷೆಯಲ್ಲಿ ಪರಿಣತಿ ಇಲ್ಲದಿದ್ದಲ್ಲಿ ನೌಕರಿಯೇ ಲಭ್ಯವಾಗುವುದಿಲ್ಲ ಎಂಬ ಅಂಶ ಜನರಲ್ಲಿ ಮನೆ ಮಾಡಿದೆ. ಈ ಪ್ರವೃತ್ತಿ ಸಹಜವೂ ಆಗಿದೆ. ಕನ್ನಡ ಮಾಧ್ಯಮದಲ್ಲಿ ಓದಿದ ಗ್ರಾಮೀಣ-ನಗರ ಪ್ರದೇಶದ ಮಕ್ಕಳು ಪರದಾಡುವುದನ್ನು ನೋಡಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ನಮ್ಮ ಸಮಾಜದಲ್ಲಿಯೂ ಕೂಡ ಇಂಗ್ಲಿಷ್ ಮಾತನಾಡುವುದು ಒಂದು ಘನತೆಯ ಪ್ರತಿಷ್ಠೆಯ ಸಂಕೇತವಾಗಿದೆ.

ಅಚ್ಚ ಕನ್ನಡ ಮಾತನಾಡುವ, ಆಂಗ್ಲ ಭಾಷೆಯನ್ನು ಸರಿಯಾಗಿ ಪ್ರಯೋಗಿಸದ ಅಧಿಕಾರಿಗಳನ್ನು ಲೇವಡಿ ಮಾಡಲಾಗುತ್ತದೆ. ಇನ್ನು ಯಾವುದೇ ಅಧಿಕಾರಿ ಗ್ರಾಮ್ಯ ಭಾಷೆಯಲ್ಲಿ ಮಾತನಾಡಿದಲ್ಲಿ ಅಂಥವರನ್ನು ಗೌಣವಾಗಿ ಕಾಣಲಾಗುತ್ತದೆ. ಶಿಷ್ಟಸಂಪ್ರದಾಯವನ್ನೇ ಸಾರ್ವತ್ರೀಕರಿಸುವ ಬ್ರಾಹ್ಮಣ್ಯದ ಕುರುಹನ್ನು ಇಲ್ಲಿ ಕಾಣಬಹುದಾಗಿದೆ. ಈ ಪ್ರವೃತ್ತಿ ಇತ್ತೀಚಿನ ಚಲನ ಚಿತ್ರಗಳಲ್ಲಿ ಕಾಣಬಹುದಾಗಿದೆ.

೯೦ರ ದಶಕದ ಹಿಂದಿನ ಚಿತ್ರಗಳಲ್ಲಿ ಗ್ರಾಮೀಣ ಪಾತ್ರವರ್ಗಗಳು ಗ್ರಾಮ್ಯ ಭಾಷೆಯನ್ನೇ ಬಳಸುತ್ತಿದ್ದುದನ್ನು ಸ್ಮರಿಸಬಹುದು. ಆದರೆ ಇಂದು ಗ್ರಾಮೀಣ ಹಿನ್ನೆಲೆಯ ಚಲನಚಿತ್ರಗಳಲ್ಲೂ ಸಹ ಬಹುಪಾಲು ಶಿಷ್ಟ ಭಾಷೆಯನ್ನೇ ಬಳಸಲಾಗುತ್ತಿದೆ. ಇನ್ನು ಉತ್ತರ ಕರ್ನಾಟಕದ ಸುಂದರ ಭಾಷೆ ಸಿನಿಮಾಗಳಲ್ಲಿ ಇತ್ತೆಂದರೆ ಆ ಪಾತ್ರ ಹಾಸ್ಯಕ್ಕೆ ಸೀಮಿತವಾಗಿರುತ್ತದೆ. ಕನ್ನಡಪರ ಹಗಲಿರುಳು ಶಂಖ ಊದುವ ಚಿತ್ರರಂಗದವರ ಹುಳುಕು ಇಲ್ಲಿ ಕಂಡು ಬರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸುತ್ತ ಚಿತ್ರೋದ್ಯಮದ ಬಿಕ್ಕಟ್ಟನ್ನು ಅವಲೋಕನ ಮಾಡಿದಾಗ ವಸ್ತು ನಿಷ್ಠವಾಗಿ ಕೆಲವು ಸಂಗತಿಗಳನ್ನು ಹೇಳಲೇಬೇಕಾಗುತ್ತಿದೆ. ಕನ್ನಡ ಚಲನ ಚಿತ್ರಗಳು ಯಶಸ್ವಿಯಾಗಿ ಓಡುತ್ತಿಲ್ಲ ಎಂಬ ಕಾರಣದ ಮೇಲೆ ಚಲನಚಿತ್ರ ವಾಣಿಜ್ಯ ಮಂಡಲಿಯೇ ಇಬ್ಭಾಗವಾಗಿದೆ. ಈ ಪ್ರಕ್ರಿಯೆಗಳ ಹಿಂದಿರುವುದು ವೈಯಕ್ತಿಕ ಪ್ರತಿಷ್ಠೆ - ರಾಜಕೀಯವೇ ಹೊರತು, ಕನ್ನಡ ಚಿತ್ರರಂಗಕ್ಕೆ ಯಾವುದೇ ಗಂಭೀರ ಸಮಸ್ಯೆಗಳಿಲ್ಲ. ಕನ್ನಡಕ್ಕಾಗಿಯೇ ತನುಮನಗಳನ್ನರ್ಪಿಸಿ ಪ್ರಾಣ ತೆರಲೂ ಸಿದ್ಧವಾಗಿರುವವರು, ಕನ್ನಡ ಭಾಷೆಗಾಗಿ ಅಲ್ಲದಿದ್ದರೂ, ಚಿತ್ರರಂಗಕ್ಕೆ ಯಾವ ಕಾಣಿಕೆ ನೀಡಿದ್ದಾರೆಂದು ಪ್ರಶ್ನಿಸಬೇಕಾಗುತ್ತದೆ. ಕೇವಲ ಕನ್ನಡ ಚಿತ್ರಗಳಲ್ಲಿ ನಟಿಸುವುದರಿಂದಲೇ ಸಮಸ್ತ ಕನ್ನಡಿಗರ ಕಣ್ಮಣಿಗಳಾಗಲು ಯಾರಿಗೂ ಸಾಧ್ಯವಾಗುವುದಿಲ್ಲ. ಇಂದು ಕನ್ನಡ ಚಿತ್ರರಂಗ-ಪ್ರೇಕ್ಷಕರು ಎದುರಿಸುತ್ತಿರುವ ಸಮಸ್ಯೆ ಎಂದರೆ ಪರಭಾಷಾ ಚಿತ್ರಗಳ ಹಾವಳಿ ಎಂದು ಚಿತ್ರೋದ್ಯಮದವರ ಅಭಿಪ್ರಾಯ. ಆದರೆ ಇದಕ್ಕಿಂತಲೂ ಗಂಭೀರವಾಗಿ ಕಂಡುಬರುವ ಸಮಸ್ಯೆ ಎಂದರೆ ತಾಂತ್ರಿಕತೆಯ ಕೊರತೆ, ನಟ ನಟಿಯರ ಕೊರತೆ, ಉತ್ತಮ ನಿರ್ದೇಶಕರ ಕೊರತೆ, ಉತ್ತಮ ಸಂಭಾಷಣೆ ಗೀತೆ ಸಂಗೀತದ ಕೊರತೆಗಳು.

೯೦ರ ದಶಕದ ಹಿಂದಿನ ಚಿತ್ರಗಳಲ್ಲಿ ಗ್ರಾಮೀಣ ಪಾತ್ರವರ್ಗಗಳು ಗ್ರಾಮ್ಯ ಭಾಷೆಯನ್ನೇ ಬಳಸುತ್ತಿದ್ದುದನ್ನು ಸ್ಮರಿಸಬಹುದು. ಆದರೆ ಇಂದು ಗ್ರಾಮೀಣ ಹಿನ್ನೆಲೆಯ ಚಲನಚಿತ್ರಗಳಲ್ಲೂ ಸಹ ಬಹುಪಾಲು ಶಿಷ್ಟ ಭಾಷೆಯನ್ನೇ ಬಳಸಲಾಗುತ್ತಿದೆ. ಇನ್ನು ಉತ್ತರ ಕರ್ನಾಟಕದ ಸುಂದರ ಭಾಷೆ ಸಿನಿಮಾಗಳಲ್ಲಿ ಇತ್ತೆಂದರೆ ಆ ಪಾತ್ರ ಹಾಸ್ಯಕ್ಕೆ ಸೀಮಿತವಾಗಿರುತ್ತದೆ. ಕನ್ನಡಪರ ಹಗಲಿರುಳು ಶಂಖ ಊದುವ ಚಿತ್ರರಂಗದವರ ಹುಳುಕು ಇಲ್ಲಿ ಕಂಡು ಬರುತ್ತದೆ.

ಅರವತ್ತರ ದಶಕದ ಅಂಚಿನಲ್ಲಿ ಎಪ್ಪತ್ತರ ಆರಂಭದಲ್ಲಿ ಕನ್ನಡ ಸಿನಿಮಾಗಳು ವಿಶ್ವಮಾನ್ಯವಾಗಿದ್ದವು. ಉಯ್ಯಾಲೆ, ನಂದಾದೀಪ, ನಾಂದಿ, ಸಂಧ್ಯಾರಾಗದಂತಹ ಕಮರ್ಷಿಯಲ್ ಚಿತ್ರಗಳು ಒಂದೆಡೆಯಾದರೆ, ವಂಶವೃಕ್ಷ, ಕಾಡು, ಚೋಮನದುಡಿ, ಒಂದಾನೊಂದು ಕಾಲದಲ್ಲಿ, ಅರಿವು, ಸಂಸ್ಕಾರ ಮುಂತಾದ ಕಲಾತ್ಮಕ ಚಿತ್ರಗಳು ಕನ್ನಡ ಚಿತ್ರರಂಗಕ್ಕೆ ಹೊಸ ಆಯಾಮ ನೀಡುವುದರಲ್ಲಿ ಯಶಸ್ವಿಯಾಗಿದ್ದವು. ಇವುಗಳ ನಡುವೆ ಪುಟ್ಟಣ್ಣ ಕಣಗಾಲರ ಕಾದಂಬರಿ ಆಧಾರಿತ ಚಿತ್ರಗಳೂ ಸಹ ಕನ್ನಡ ಚಿತ್ರರಂಗದ ಘನತೆಯನ್ನು ಹೆಚ್ಚಿಸಿದ್ದವು. ಆದರೆ ಕಾಲಕ್ರಮೇಣ ಈ ಕಲಾತ್ಮಕ ಚಿತ್ರಗಳಿಗೆ ತಿಲಾಂಜಲಿ ನೀಡಲಾಯಿತು. ಪುಟ್ಟಣ್ಣ ಕಣಗಾಲ್, ಶಂಕರ್‌ನಾಗ್‌ರವರ ನಿಧನದ ನಂತರ ಗಿರೀಶ್ ಕಾಸರವಳ್ಳಿಯವರನ್ನು ಹೊರತುಪಡಿಸಿ ಕಲಾತ್ಮಕ ಚಿತ್ರಗಳನ್ನು ಮಾಡುವವರೇ ಇಲ್ಲವಾಗಿದ್ದು ದುರಂತ. ಅಳಿದುಳಿದ ಇಂತಹ ಪ್ರತಿಭಾವಂತರೂ ಇಂದು ಕಿರುತೆರೆಯ ಮೊರೆ ಹೋಗಿರುವುದು ಕನ್ನಡ ಚಿತ್ರರಂಗದ ಸ್ಥಿತಿಗತಿಗಳಿಗೆ ಕನ್ನಡಿ ಹಿಡಿದಂತಿದೆ.

ಅಚ್ಚರಿಯ ಅಂಶವೆಂದರೆ ೬ ದಶಕದ ಇತಿಹಾಸವಿರುವ ಕನ್ನಡ ಚಿತ್ರರಂಗ ಇಂದಿಗೂ ಒಂದು ಉದ್ದಿಮೆಯಾಗಿ ರೂಪುಗೊಂಡಿಲ್ಲ. ಬಾಲಕೃಷ್ಣ ಶಂಕರ್‌ನಾಗ್‌ರವರನ್ನು ಹೊರತುಪಡಿಸಿ ಯಾರೂ ಸಹ ಕನ್ನಡ ಸಿನಿಮಾಗಳಿಗಾಗಿ ಉತ್ತಮ ಸ್ಟುಡಿಯೋ ನಿರ್ಮಿಸಲಿಲ್ಲ. ಬಾಲಣ್ಣನವರ ಅಭಿಮಾನ ಮತ್ತು ನಾಗ್ ಸಹೋದರರ ಸಂಕೇತ ಸ್ಟುಡಿಯೋಗಳು ಕನ್ನಡ ಚಿತ್ರರಂಗದ ನಿರ್ಲಕ್ಷ್ಯದಿಂದಲೇ ಅವಸಾನ ಹೊಂದಿದವು. ಇವರ ಗರಡಿಯಲ್ಲಿ ಪಳಗಿದ್ದ ಅನೇಕ ನಟರು ಇಂದು ಕಿರುತೆರೆಯನ್ನು ಆಶ್ರಯಿಸಿರುವುದು ದುರಂತವಲ್ಲವೇ? ಕನ್ನಡಕ್ಕಾಗಿ ಯಾವುದೇ ತ್ಯಾಗಕ್ಕೂ ಸಿದ್ಧರಾಗಿರುವವರು ಒಂದು ಉತ್ತಮ ಸ್ಟುಡಿಯೋ ನಿರ್ಮಿಸಲಾಗುವುದಿಲ್ಲವೇ.

ಇನ್ನೂ ಚಿತ್ರಗಳ ಗುಣಮಟ್ಟವನ್ನು ನೋಡಿದರೆ ಕನ್ನಡ ಚಿತ್ರರಂಗ ದಿನೇ ದಿನೇ ಅಧೋಗತಿಗಿಳಿಯುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ದೊರೈ ಭಗವಾನ್, ಪುಟ್ಟಣ್ಣನವರ ನಂತರ ಕನ್ನಡದಲ್ಲಿ ಉತ್ತಮ ನಿರ್ದೇಶಕರೇ ಇಲ್ಲವಾಗಿದ್ದಾರೆ. ಅಲ್ಲೊಂದು ಇಲ್ಲೊಂದು ಉತ್ತಮ ಚಿತ್ರಗಳನ್ನು ಹೊರತುಪಡಿಸಿದರೆ ಬಹುತೇಕ ಕನ್ನಡ ಚಿತ್ರಗಳು



ಕೀಳು ಅಭಿರುಚಿಯದ್ದಾಗಿರುತ್ತದೆ. ಕರ್ನಾಟಕದ-ಕನ್ನಡಿಗರ ಸಂಸ್ಕೃತಿಯನ್ನು ರಕ್ಷಿಸಲು ಪಣ ತೊಡುವ ಚಿತ್ರೋದ್ಯಮದ ದಿಗ್ಗಜರು ತಮ್ಮಲ್ಲೇ ಸಿನಿಮಾಗಳಲ್ಲಿ ಏನನ್ನು ಪ್ರತಿಬಿಂಬಿಸುತ್ತಿದ್ದಾರೆಂದು ಅವಲೋಕಿಸುವುದು ಒಳಿತು. ರಿಮೇಕ್ ಸಂಸ್ಕೃತಿಗೆ ಶರಣಾಗಿರುವ ಚಿತ್ರೋದ್ಯಮ ತನ್ನ ಸ್ವಂತಿಕೆಯನ್ನೇ ಕಳೆದುಕೊಂಡುಬಿಟ್ಟಿದೆ. ತಾಂತ್ರಿಕವರ್ಗ, ಗಾಯಕರು, ಸ್ಟುಡಿಯೋ, ಗಾಯಕಿಯರು, ಖಳನಾಯಕರು, ಎಲ್ಲವೂ ಹೊರರಾಜ್ಯಗಳಿಂದಲೇ ಆಮದಾಗುತ್ತಿದೆ. ಇನ್ನು ಕಥೆಯ ಬಗ್ಗೆ ಹೇಳುವಂತೆಯೇ ಇಲ್ಲ. ಪರಭಾಷಾ ಚಿತ್ರಗಳನ್ನು ಗಡ್ಡ ಮೀಸೆ ಸಮೇತವಾಗಿ ಭಟ್ಟಿ ಇಳಿಸುವ ಪ್ರವೃತ್ತಿ ಇಂದು ಗಾಢವಾಗಿ ಹಬ್ಬಿದೆ. ಅತಿಹೆಚ್ಚು ಚಿತ್ರಗಳನ್ನು ನಿರ್ಮಿಸಿರುವ ದಾಖಲೆ ಹೊಂದಿರುವ ದ್ವಾರಕೀಶ್‌ರವರ ೪೬ ಚಿತ್ರಗಳಲ್ಲಿ ೪೨ ರಿಮೇಕ್‌ಗಳೇ ಆಗಿದೆ. (ಆಪ್ತಮಿತ್ರವನ್ನು ಸೇರಿದಂತೆ) ರಿಮೇಕ್ ಚಿತ್ರಗಳಲ್ಲಿ ನಟಿಸದೆ ಬಂದಿದ್ದ ಡಾ|| ರಾಜ್‌ರವರೂ ಸಹ ಈ ಬಲೆಗೆ ಸಿಲುಕಿದ್ದನ್ನು ಕಾಣಬಹುದು.

ಇಂದಿನ ಪರಿಸ್ಥಿತಿ ನೋಡಿದರೆ ಶೇ೯೦ ರಷ್ಟು ಚಿತ್ರಗಳು ರಿಮೇಕ್‌ಗಳಾಗಿರುತ್ತವೆ. ಏಕೆ ಕನ್ನಡದಲ್ಲಿ ಸಿನಿಮಾ ತಯಾರಿಸುವಂತಹ ಕಥೆ ಕಾದಂಬರಿಗಳಿಲ್ಲವೇ? ತಮಿಳು ನಾಡಿನ ಗ್ರಾಮೀಣ ರಾಜಕೀಯವನ್ನು ಪ್ರತಿಬಿಂಬಿಸುವ ಚಿತ್ರಗಳನ್ನು ಯಥಾವತ್ತಾಗಿ ಭಟ್ಟಿ ಇಳಿಸುವ ಬದಲು ಕರ್ನಾಟಕದ ಗ್ರಾಮೀಣ ಸಂಸ್ಕೃತಿಯನ್ನು ಹೊರಸೂಸುವ ಕಥೆ ಹೆಣೆಯಬಹುದಲ್ಲವೇ ? ಒಂದು ಕಾಲದಲ್ಲಿ ಜಿ.ವಿ. ಅಯ್ಯರ್, ನರಸಿಂಹರಾಜು, ಬಾಲಣ್ಣನವರು ಹಾಸ್ಯನಟನೆಗೆ ಪ್ರಸಿದ್ಧರಾಗಿದ್ದರು. ಆದರೆ ಇಂದು ಸಿನಿಮಾಗಳಲ್ಲಿ ಹಾಸ್ಯ ಸನ್ನಿವೇಶಗಳೂ ಸಹ ಆಮದಾಗುತ್ತಿವೆ. ಪ್ರಸಿದ್ಧ ರಂಗನಟರೂ ಸಹ ಹಾಸ್ಯನಟರಾಗಿ ಹೊಟ್ಟೆ ಹೊರೆಯಬೇಕಾಗಿದೆ. ಒಂದು ಹಾಸ್ಯ ಸನ್ನಿವೇಶವನ್ನು ಬರೆಯಲಾರದಷ್ಟು ಅಧೋಗತಿಗೆ ಕನ್ನಡ ಚಿತ್ರರಂಗ ಇಳಿದಿದೆಯೇ ? ಸಿನಿಮಾರಂಗಕ್ಕೆ ತಮ್ಮ ಅಮೂಲ್ಯ ಚಿತ್ರರತ್ನಗಳನ್ನು ನೀಡಿದ ವಾದಿರಾಜ್‌ರವರು ಇಂದು ಒಂದು ಚಿತ್ರ ಮಾಡಲು ಹೆಣಗಾಡಬೇಕಾಗಿದೆ ಎಂದರೆ, ನಾಗಾಭರಣ, ಕಾಸರವಳ್ಳಿ, ಕಾರ್ನಾಡ್ ಮುಂತಾದವರು ನಾಟಕ, ಕಿರುತೆರೆಗೆ ಮೊರೆಹೋಗುವಂತಾಗಿದ್ದಾರೆ. ಅದು ಕನ್ನಡ ಚಿತ್ರರಂಗದ ಅವಸಾನದ ಸೂಚನೆಯಷ್ಟೆ

ಕನ್ನಡ ಸಂಸ್ಕೃತಿಯನ್ನು ಸುಂದರವಾಗಿ ನಿರೂಪಿಸಿದ ನೀಲಾದಂತಹ ಚಿತ್ರಗಳನ್ನು ಯಶಸ್ವಿಯಾಗಿ ಓಡುತ್ತಿದ್ದರೂ ಎತ್ತಂಗಡಿ ಮಾಡಿಸಿದಾಗ ಈ ಸಂಸ್ಕೃತಿಯ ರಕ್ಷಕರು ಎಲ್ಲಿ ಅಡಗಿ ಕುಳಿತಿದ್ದರೋ ? ಗೃಹಭಂಗದಂತಹ ಮಹಾನ್ ಕೃತಿಯನ್ನು ಕಿರುತೆರೆಯಲ್ಲಿ ಅತ್ಯುತ್ತಮವಾಗಿ ಮೂಡಿಸಿದ ಕಾಸರವಳ್ಳಿಯಂಥವರು ಅದನ್ನೇ ಚಲನಚಿತ್ರ ಮಾಡಲು ಹಿಂಜರಿಯುತ್ತಾರೆ. ಏಕೆಂದರೆ ಅಂಥ ಚಿತ್ರಗಳು ಬಿಡುಗಡೆಯಾಗುವುದೇ ಇಲ್ಲ, ಚಿತ್ರಮಂದಿರಗಳೇ ದೊರೆಯುವುದಿಲ್ಲ, ದೊರೆತರೂ ಕನ್ನಡಾಭಿಮಾನಿಗಳು ಅದನ್ನು ನೋಡುವುದಿಲ್ಲ. ಏಕೆಂದರೆ ಅವು ಮೌಲ್ಯಯುತವಾಗಿರುತ್ತವೆ. ರಂಜನೀಯವಾಗಿರುವುದಿಲ್ಲ.

ಇಷ್ಟರ ನಡುವೆಯೂ ಉತ್ತಮವಾದ ಕನ್ನಡ ಚಿತ್ರಗಳು ಯಶಸ್ವಿಯಾಗುವುದನ್ನು ಕಾಣಬಹುದು. ಅಮೃತಘಳಿಗೆ, ಅಮೆರಿಕಾ ಅಮೆರಿಕಾ, ಚಿತ್ರಾದಂತಹ ಚಿತ್ರಗಳು ಯಶಸ್ಸು ಕಂಡಿವೆ. ಸದಭಿರುಚಿಯ ಚಿತ್ರಗಳಿಗೆ ಕನ್ನಡಿಗರು ಕರ್ನಾಟಕದ ಜನತೆ ಭಾಷೆಯ ಎಲ್ಲೆ ಮೀರಿ ಸ್ಪಂದಿಸಿದ್ದಾರೆ. ಶಂಕರಾಭರಣಂ, ಸಾಗರ ಸಂಗಮಂ, ಮುತ್ಯಾಲ ಮೊಗ್ಗು, ಮರೋ ಚರಿತ್ರದಂತಹ ತೆಲುಗು ಚಿತ್ರಗಳು ಮಹಾನದಿಯಂತಹ ತಮಿಳು ಚಿತ್ರಗಳು ತವರು ರಾಜ್ಯಗಳಿಗಿಂತಲೂ ಕರ್ನಾಟಕದಲ್ಲಿ ಹೆಚ್ಚು ಯಶಸ್ಸು ಕಂಡಿವೆ. ಆದರೆ ಆ ಗುಣಮಟ್ಟದ ಚಿತ್ರಗಳು ಕನ್ನಡದಲ್ಲಿ ಬರುತ್ತಿಲ್ಲ ಎಂಬುದೇ ವಿಷಾದಕರ ಅಂಶ.

ಕನ್ನಡ ಚಿತ್ರೋದ್ಯಮದ ಮತ್ತೊಂದು ನ್ಯೂನತೆ ಎಂದರೆ ತಂತ್ರಜ್ಞಾನದ ಕೊರತೆ ಮತ್ತು ಆಮದು ಸಂಸ್ಕೃತಿ. ಚಿತ್ರ ನಿರ್ಮಾಣಕ್ಕೆ ಬಂಡವಾಳ ಹಾಕುವವರು, ತಾಂತ್ರಿಕ ವರ್ಗ ಎಲ್ಲವೂ ಹೊರರಾಜ್ಯದವರೇ ಆಗಿರುತ್ತಾರೆ. ಆದ್ದರಿಂದಲೇ ಕನ್ನಡ ಚಿತ್ರರಂಗ ಒಂದು ಉದ್ಯಮವಾಗಿ ಬೆಳೆದಿಲ್ಲ. ಕ್ಷುಲ್ಲಕ ರಾಜಕೀಯ ಕಾರಣಗಳಿಗಾಗಿ ಚಿತ್ರೋದ್ಯಮ ಬಂದ್ ಮಾಡುವುದು, ಅದನ್ನೇ ನಂಬಿ ಬಾಳುವ ಕಾರ್ಮಿಕರಿಗೆ ಅನ್ಯಾಯವೆಸಗಿದಂತಾಗುತ್ತದೆ. ಕನ್ನಡ ಚಿತ್ರರಂಗ ಬೆಳೆಯಬೇಕಾದರೆ ಹಿಂಸೆ, ಅಶ್ಲೀಲತೆ, ಆಮದು ಸಂಸ್ಕೃತಿಯನ್ನು ತ್ಯಜಿಸಿ ಕನ್ನಡ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದು ಇಂದು ಅತ್ಯವಶ್ಯವಾಗಿದೆ. ದೇಶಭಕ್ತಿಯ ಹೆಸರಿನಲ್ಲಿ ಭಾಷಾಭಿಮಾನದ ಹೆಸರಿನಲ್ಲಿ ಹಿಂಸೆಯನ್ನು ವೈಭವೀಕರಿಸುವುದು ಸಮಾಜದ ಮೇಲೆ ನೇತ್ಯಾತ್ಮಕ ಪ್ರಭಾವ ಬೀರುತ್ತದೆ. ರಾಜ್ಯದ ಸಾಂಸ್ಕೃತಿಕ ಜೀವನದ ಅಭಿವ್ಯಕ್ತಿ ಮಾಧ್ಯಮವಾಗಿ ಕಾರ್ಯನಿರ್ವಹಿಸುವತ್ತ ಕನ್ನಡ ಚಿತ್ರರಂಗ ಗಮನಹರಿಸಿದಲ್ಲಿ ಜನರಿಂದ ಉತ್ತಮ ಪ್ರತಿಕ್ರಿಯೆ ದೊರೆಯಬಹುದು. ಬದಲಾಗಿ ಹಿಂಸೆ, ಅಶ್ಲೀಲತೆಯನ್ನೇ ವೈಭವೀಕರಿಸುವುದಾದರೆ ಅನ್ಯ ಭಾಷೆಯ ಚಿತ್ರಗಳಲ್ಲಿ ಇದನ್ನು ಇನ್ನೂ ಚೆನ್ನಾಗಿ ಮಾಡಲಾಗುತ್ತದೆ. ಹಾಗಾಗಿ ಕೇವಲ ಮನರಂಜನೆಗಾಗಿ ಸಿನಿಮಾ ನೋಡುವ ಮಂದಿ ಭಾಷೆಯನ್ನೂ ಲೆಕ್ಕಿಸದೆ ಪರಭಾಷಾ ಚಿತ್ರಗಳಿಗೆ ಶರಣಾಗುತ್ತಾರೆ. ಹಾಗಾಗಿಯೇ ಚಿಗುರಿದ ಕನಸು, ನೀಲಾಗಳಿಗಿಂತಲೂ, ಏ. ಕೆ. ೪೭ ದಂತಹ ಚಿತ್ರಗಳು ಹೆಚ್ಚು ಯಶಸ್ವಿಯಾಗುತ್ತವೆ.

ಉತ್ತಮ ಸದಭಿರುಚಿಯ ದೇಸೀ ಚಿತ್ರಗಳನ್ನು ನೀಡುವುದರೊಂದಿಗೆ ಚಿತ್ರೋದ್ಯಮವು ಕರ್ನಾಟಕದ ಜನತೆಯ ದೈನಂದಿನ ಸಾಮಾಜಿಕ ಆರ್ಥಿಕ ಸಮಸ್ಯೆಗಳಿಗೂ ಸ್ಪಂದಿಸಬೇಕಾಗುತ್ತದೆ. ಜನರ ಯಾವುದೇ ನೈಜ ಸಮಸ್ಯೆಗೂ ಸ್ಪಂದಿಸದ ಚಿತ್ರೋದ್ಯಮದವರಿಗೆ ಬಿಕ್ಕಟ್ಟು ಎದುರಾದಾಗ ಸಾಮಾನ್ಯ ಜನತೆ ಏಕೆ ಹೆಗಲು ನೀಡಬೇಕೆಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಸ್ಪಷ್ಟವಾಗಿ ಹೇಳುವುದಾದರೆ ಕನ್ನಡ ಭಾಷೆ ಸಂಸ್ಕೃತಿಯ ರಕ್ಷಣೆ ಕರ್ನಾಟಕದ ಸಮಸ್ತ ಜನತೆಯ ಜವಾಬ್ದಾರಿಯಾಗಬೇಕೇ ಹೊರತು ಧನಾರ್ಜನೆಯನ್ನೇ ಗಮನದಲ್ಲಿಟ್ಟುಕೊಂಡು ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಸಮಾಜದಲ್ಲಿ ಕ್ಷೋಭೆ ಉಂಟುಮಾಡುವಂತಹ ಚಿತ್ರಗಳನ್ನು ನಿರ್ಮಿಸುವ ಚಿತ್ರೋದ್ಯಮದ ಜವಾಬ್ದಾರಿಯಾಗಬಾರದು.

ಕನ್ನಡ ಭಾಷೆ ಸಂಸ್ಕೃತಿ ಪರಂಪರೆಗಳ ರಕ್ಷಣೆ ಕನ್ನಡಿಗರ ಹೊಣೆಯಾದಲ್ಲಿ ಮಾತ್ರ, ಇಂದಿನ ಸಂದಿಗ್ಧತೆ ನಿವಾರಣೆಯಾಗಬಹುದು. ರಕ್ಷಣೆ ಎಂದ ಮಾತ್ರಕ್ಕೆ ಕನ್ನಡ ಒಂದು ಭಾಷೆ ಸಂಸ್ಕೃತಿಯಾಗಿ ಅಪಾಯದ ಅಂಚಿನಲ್ಲಿದೆ ಎಂದರ್ಥವಲ್ಲ. ಆದರೆ ಕನ್ನಡ ಭಾಷೆ ಇನ್ನೂ ಎತ್ತರಕ್ಕೆ ಬೆಳೆಯಬೇಕಾಗಿದೆ. ನವ ಪೀಳಿಗೆಯ ಲೇಖಕರು ಕಡಿಮೆಯಾಗುತ್ತಿದ್ದಾರೆ. ಭೈರಪ್ಪ ಅನಂತಮೂರ್ತಿಯವರ ಕೃತಿಗಳನ್ನು ಹೊರತುಪಡಿಸಿ ಬೇರಾವ ಉತ್ತಮ ಕಾದಂಬರಿಗಳೂ ಹೊರಬರುತ್ತಿಲ್ಲ. ವಿಮರ್ಶಾ ಕೃತಿಗಳು, ಸಂಶೋಧನಾ ಕೃತಿಗಳು ಕಡಿಮೆಯಾಗುತ್ತಿವೆ. ಇದಕ್ಕೆ ಮುಖ್ಯ ಕಾರಣ ಕರ್ನಾಟಕದ ಜನತೆಯಲ್ಲಿ ಓದುವ ಹವ್ಯಾಸ ಕಡಿಮೆಯಾಗುತ್ತಿರುವುದು. ೭೦-೮೦ರ ದಶಕದ ಗುಣಮಟ್ಟದ ಕಾದಂಬರಿಗಳೂ ಇಂದು ಪ್ರಕಟವಾಗುತ್ತಿಲ್ಲ. ಕಾವ್ಯಲೋಕದಲ್ಲಿ ನಾಯಿಕೊಡೆಗಳಂತೆ ಕವಿಗಳು ಹುಟ್ಟಿಕೊಳ್ಳುತ್ತಿರುವುದಾದರೂ, ಉತ್ತಮ ಕಾವ್ಯ ರಚನೆಯಾಗುತ್ತಿಲ್ಲ. ಉತ್ತಮ ಕವಿಗಳೆಂದು ಹಣೆಪಟ್ಟಿ ಹೊತ್ತವರು ಜನತೆಯಿಂದ ವಿಮುಖರಾಗುತ್ತಿದ್ದಾರೆ. ಜನರ ಗ್ರಹಿಕೆಗೆ ಸಿಲುಕದ ವಸ್ತುವನ್ನೇ ಕಾವ್ಯ ಎನ್ನುವುದಾದರೆ ಅದು ಸಾಮಾಜಿಕ ಚೌಕಟ್ಟಿನಿಂದ ಹೊರಗೇ ಉಳಿಯುತ್ತದೆ. ಕಾವ್ಯದ ಸ್ವರೂಪವನ್ನು ಉಳಿಸಿಕೊಂಡು ಸಾಮಾನ್ಯ ಜನರ ಸಮಾಜದ

ಕನ್ನಡ ಸಂಸ್ಕೃತಿಯನ್ನು ಸುಂದರವಾಗಿ ನಿರೂಪಿಸಿದ ನೀಲಾದಂತಹ ಚಿತ್ರಗಳನ್ನು ಯಶಸ್ವಿಯಾಗಿ ಓಡುತ್ತಿದ್ದರೂ ಎತ್ತಂಗಡಿ ಮಾಡಿಸಿದಾಗ ಈ ಸಂಸ್ಕೃತಿಯ ರಕ್ಷಕರು ಎಲ್ಲಿ ಅಡಗಿ ಕುಳಿತಿದ್ದರೋ ? ಗೃಹಭಂಗದಂತಹ ಮಹಾನ್ ಕೃತಿಯನ್ನು ಕಿರುತೆರೆಯಲ್ಲಿ ಅತ್ಯುತ್ತಮವಾಗಿ ಮೂಡಿಸಿದ ಕಾಸರವಳ್ಳಿಯಂಥವರು ಅದನ್ನೇ ಚಲನಚಿತ್ರ ಮಾಡಲು ಹಿಂಜರಿಯುತ್ತಾರೆ. ಏಕೆಂದರೆ ಅಂಥ ಚಿತ್ರಗಳು ಬಿಡುಗಡೆಯಾಗುವುದೇ ಇಲ್ಲ, ಚಿತ್ರಮಂದಿರಗಳೇ ದೊರೆಯುವುದಿಲ್ಲ. ದೊರೆತರೂ ಕನ್ನಡಾಭಿಮಾನಿಗಳು ಅದನ್ನು ನೋಡುವುದಿಲ್ಲ. ಏಕೆಂದರೆ ಅವು ಮೌಲ್ಯಯುತವಾಗಿರುತ್ತವೆ. ರಂಜನೀಯವಾಗಿರುವುದಿಲ್ಲ. ಇಷ್ಟರ ನಡುವೆಯೂ ಉತ್ತಮ ಕನ್ನಡ ಚಿತ್ರಗಳು ಯಶಸ್ವಿಯಾಗುವುದನ್ನು ಕಾಣಬಹುದು. ಅಮೃತಘಳಿಗೆ, ಅಮೆರಿಕಾ ಅಮೆರಿಕಾ, ಚಿತ್ರಾದಂತಹ ಚಿತ್ರಗಳು ಯಶಸ್ಸು ಕಂಡಿವೆ. ಸದಭಿರುಚಿಯ ಚಿತ್ರಗಳಿಗೆ ಕನ್ನಡಿಗರು ಕರ್ನಾಟಕದ ಜನತೆ ಭಾಷೆಯ ಎಲ್ಲೆ ಮೀರಿ ಸ್ಪಂದಿಸಿದ್ದಾರೆ.

ಸಮಸ್ಯೆಗಳಿಗೆ ಸ್ಪಂದಿಸುವಂತಹ ಕಾವ್ಯ ಇಂದು ಹೆಚ್ಚು ಅಗತ್ಯವಾಗಿದೆ. ಕುವೆಂಪುರವರ ಹಾದಿಯಲ್ಲಿ ನಡೆಯುವುದು ಇಂದು ಅತ್ಯವಶ್ಯವಾಗಿದೆ.

ಇನ್ನೊಂದೆಡೆ ಕನ್ನಡ ಸಾಹಿತ್ಯ ಕೃತಿಗಳ ಬೆಲೆಗಳೂ ಸಾಮಾನ್ಯ ಜನರಿಗೆ ನಿಲುಕದಂತಾಗಿದೆ. ಸರ್ಕಾರವಾಗಲೀ, ಸಾಹಿತ್ಯ ಪರಿಷತ್ ಆಗಲೀ, ಕನ್ನಡ ಸಾಹಿತ್ಯ ಕೃತಿಗಳನ್ನು ಜನರ ಕೈಗೆಟಕುವ ದರದಲ್ಲಿ ನೀಡಲು ಯತ್ನಿಸುತ್ತಿಲ್ಲ. ಹಲವಾರು ಉದಯೋನ್ಮುಖ ಬರಹಗಾರರಿಗೆ, ಕವಿ, ಸಾಹಿತಿಗಳಿಗೆ ತಮ್ಮ ಕೃತಿಗಳನ್ನು ಪ್ರಕಟಿಸುವುದೇ ದುಸ್ತರವಾಗಿದೆ. ಕವಿ ಸಾಹಿತಿಗಳಲ್ಲಿ ಬೆಳೆದಿರುವ ಮಠದ ಸಂಸ್ಕೃತಿಯಿಂದ, ಗುಂಪುಗಾರಿಕೆಯಿಂದ ಯುವಕರಿಗೆ ಮನ್ನಣೆ ದೊರೆಯುತ್ತಿಲ್ಲ. ತಮ್ಮ ಕೃತಿ ಹೊರತರಲು ತಾವೇ ಹಣ ತೊಡಗಿಸಬೇಕಾದ ಪರಿಸ್ಥಿತಿ ಬಂದೊದಗಿದೆ. ಈ ನಿಟ್ಟಿನಲ್ಲಿ ಕನ್ನಡಪರ ಸಂಘಟನೆಗಳಾಗಲೀ ಕನ್ನಡ ಸಂಘಗಳಾಗಲೀ ಉಸಿರೆತ್ತದಿರುವುದು ವಿಷಾದನೀಯ.

ರಾಜ್ಯೋತ್ಸವದ ಜಾತ್ರೆ, ಮೆರವಣಿಗೆಗೆ, ಆಡಂಬರದ ಮನರಂಜನೆ, ಸಿನಿಮಾ ತಾರೆಯರ ವೈಭವೀಕರಣ, ವರ್ಷಕ್ಕೊಮ್ಮೆ ಧ್ವಜಾರೋಹಣ ಇಷ್ಟಕ್ಕೆ ಸೀಮಿತವಾಗಿರುವ ಕನ್ನಡ ಸಂಘ ಸಂಘಟನೆಗಳು, ಸಾಹಿತ್ಯದ ಬಗ್ಗೆ ಭಾಷಾ ಬೆಳವಣಿಗೆಯ ಬಗ್ಗೆ ಗಮನ ಹರಿಸುವಂತೆಯೇ ಕಾಣುವುದಿಲ್ಲ. ಎಲ್ಲೋ ಕೆಲವು ಸಂಘಗಳು (ಉದಾಹರಣೆಗೆ ನಾಗಮಂಗಲ) ಉತ್ತಮ ನಾಟಕ ಆಡುವುದನ್ನು ಬಿಟ್ಟರೆ ಉಳಿದಂತೆ ಕನ್ನಡ ಸಂಘಟನೆ ಒಂದು ದಂಧೆಯಾಗಿಬಿಟ್ಟಿದೆ. ಕೇವಲ ವಿಸಿಟಿಂಗ್ ಕಾರ್ಡ್ ಪ್ರೊಫೆಸರ್‌ಗಳಂತೆ ಪದವಿಗಳಿಗಾಗಿ ಸಂಘಗಳಲ್ಲಿ ಸೇರುವ ಗಣ್ಯರು ಒಂದು ರೀತಿಯಲ್ಲಿ ಕನ್ನಡ ಭಾಷೆಯ ಸ್ಥಗಿತತೆಗೆ ಕಾರಣರಾಗಿದ್ದಾರೆ. ಆಗಾಗ್ಗೆ ನಡೆಯುವ ಸಾಹಿತ್ಯ ಸಮ್ಮೇಳನ ಎಂಬ ಜಾತ್ರೆ ಸಮಾಜದಲ್ಲಿ ಇವರ ಘನತೆ ಹೆಚ್ಚಿಸುತ್ತದೆ. ಆದರೆ ಸಾಹಿತ್ಯ ಮೂಲೆಗುಂಪಾಗಿರುತ್ತದೆ. ಸಾಹಿತ್ಯ ಪರಿಷತ್ ಚುನಾವಣೆಗಳಲ್ಲಿ ನಡೆಯುವ ರಾಜಕೀಯ ಕಸರತ್ತುಗಳು ದೋಷಾರೋಪಗಳು, ನಿಂದನೆಗಳು ಇದಕ್ಕೆ ನಿದರ್ಶನವಿಷ್ಟೆ

ಈ ಹಿನ್ನೆಲೆಯಿಂದ ಪ್ರಸ್ತುತ ಕನ್ನಡಿಗರ ಸಂದಿಗ್ಧತೆಯನ್ನು ವಿಶ್ಲೇಷಿಸಿದಾಗ ಗ್ರಹಿಸಬಹುದಾದ ಒಂದು ಅಂಶವೆಂದರೆ ಕನ್ನಡಿಗರು ಆಕ್ರಮಿತ ಮನೋಭಾವದಿಂದ ಬಳಲುತ್ತಿದ್ದಾರೆ. ಮೊದಲಿನಂತೆ ಶಾಂತಿಪ್ರಿಯರಾಗಿಲ್ಲ. ಹಿಂಸಾ ಮನೋಭಾವ ಹೆಚ್ಚಾಗುತ್ತಿದೆ. ದ್ವೇಷ ಅಸೂಯೆಗಳು ಭಾಷಾಂಧತೆ, ಮತಾಂಧತೆಯನ್ನು ಬೆಳೆಸುತ್ತಿದೆ. ಅತೃಪ್ತ ಮನಸ್ಸುಗಳನ್ನು ದುರುಪಯೋಗಪಡಿಸಿಕೊಳ್ಳುವ ಹಿಂಸಾ ಪ್ರವೃತ್ತಿಯ ಶಕ್ತಿಗಳು ಯುವಜನಾಂಗವನ್ನು ತಪ್ಪು ದಾರಿಗೆಳೆಯುತ್ತಿವೆ.

ಕರ್ನಾಟಕದ - ಕನ್ನಡದ ರಕ್ಷಣೆಗೆ ಟೊಂಕ ಕಟ್ಟಿ ನಿಂತಿರುವ ಹೋರಾಟಗಾರರ ಪಡೆಗಳು ಹೆಚ್ಚು ಹಿಂಸಾತ್ಮಕ ರೂಪ ತಾಳುತ್ತಿವೆ. ರಚನಾತ್ಮಕವಾದ ಯಾವುದೇ ಕಾರ್ಯಕ್ರಮಗಳಿಲ್ಲದೆ ಸಮಾಜ ಘಾತುಕ ಶಕ್ತಿಗಳಿಗೆ ಮುಕ್ತ ಅವಕಾಶ ನೀಡಲಾಗುತ್ತಿದೆ. ಬಹುತೇಕ ಸಾಹಿತಿ ಕಲಾವಿದರು ಸಮಾಜದಿಂದ ಸಾಮಾಜಿಕ ಸಮಸ್ಯೆಗಳಿಂದ ವಿಮುಖರಾಗುತ್ತಿದ್ದಾರೆ. ಯುವ ಜನತೆಯಲ್ಲಿ ಮಾಧ್ಯಮಗಳ ದಾಳಿಯಿಂದ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಪುಸ್ತಕಗಳನ್ನು ಕೊಂಡು ಓದುವವರ ಸಂಖ್ಯೆ ಕ್ಷೀಣಿಸುತ್ತಿವೆ. ಅಶ್ಲೀಲ ಸಾಹಿತ್ಯ ಬಲಗೊಳ್ಳುತ್ತಿವೆ. ಇಷ್ಟು ಸಾಲದೆಂಬಂತೆ ಚಲನಚಿತ್ರ ಮಾಧ್ಯಮವು ಈ ಎಲ್ಲಾ ನ್ಯೂನತೆಗಳಿಗೂ ಪುಷ್ಟಿ ನೀಡುವಂತಹ ಚಿತ್ರಗಳನ್ನು ನೀಡುತ್ತಿವೆ.

ಕರ್ನಾಟಕದ - ಕನ್ನಡದ ರಕ್ಷಣೆಗೆ ಟೊಂಕ ಕಟ್ಟಿ ನಿಂತಿರುವ ಹೋರಾಟಗಾರರ ಪಡೆಗಳು ಹೆಚ್ಚು ಹಿಂಸಾತ್ಮಕ ರೂಪ ತಾಳುತ್ತಿವೆ. ರಚನಾತ್ಮಕವಾದ ಯಾವುದೇ ಕಾರ್ಯಕ್ರಮಗಳಿಲ್ಲದೆ ಸಮಾಜ ಘಾತುಕ ಶಕ್ತಿಗಳಿಗೆ ಮುಕ್ತ ಅವಕಾಶ ನೀಡಲಾಗುತ್ತಿದೆ. ಬಹುತೇಕ ಸಾಹಿತಿ ಕಲಾವಿದರು ಸಮಾಜದಿಂದ ಸಾಮಾಜಿಕ ಸಮಸ್ಯೆಗಳಿಂದ ವಿಮುಖರಾಗುತ್ತಿದ್ದಾರೆ. ಯುವ ಜನತೆಯಲ್ಲಿ ಮಾಧ್ಯಮಗಳ ದಾಳಿಯಿಂದ ಓದುವ ಹವ್ಯಾಸ ಕಡಿಮೆಯಾಗುತ್ತಿದೆ. ಪುಸ್ತಕಗಳನ್ನು ಕೊಂಡು ಓದುವವರ ಸಂಖ್ಯೆ ಕ್ಷೀಣಿಸುತ್ತಿವೆ. ಅಶ್ಲೀಲ ಸಾಹಿತ್ಯ ಬಲಗೊಳ್ಳುತ್ತಿವೆ. ಇಷ್ಟು ಸಾಲದೆಂಬಂತೆ ಚಲನಚಿತ್ರ ಮಾಧ್ಯಮವು ಈ ಎಲ್ಲಾ ನ್ಯೂನತೆಗಳಿಗೂ ಪುಷ್ಟಿ ನೀಡುವಂತಹ ಚಿತ್ರಗಳನ್ನು ನೀಡುತ್ತಿವೆ.

ಇಂದು ಪರಭಾಷಾ ಚಿತ್ರಗಳನ್ನು ನಿಷೇಧಿಸಲು ಹೋರಾಡುತ್ತಿರುವ ಚಿತ್ರೋದ್ಯಮದ ದಿಗ್ಗಜರು ಈ ಸಮಸ್ಯೆಗಳನ್ನು ಕುರಿತು ಯೋಚಿಸಿದ್ದಾರೆಯೇ ? ಇಂದು ತಮ್ಮ ಹೋರಾಟವನ್ನೇ ಸಮಸ್ತ ಕನ್ನಡಿಗರ ಹೋರಾಟ ಎಂದು ಪ್ರತಿಪಾದಿಸಿ ಜನಬೆಂಬಲ ಬಯಸುತ್ತಿರುವ ಚಿತ್ರೋದ್ಯಮ ಕನ್ನಡಿಗರಿಗಾಗಿ, ಕನ್ನಡ ಭಾಷೆ ಸಂಸ್ಕೃತಿ ಪರಂಪರೆಗಳ ರಕ್ಷಣೆ ಅಭಿವೃದ್ಧಿಗಾಗಿ ನೀಡಿರುವ ಕಾಣಿಕೆ ಏನು ? ಈ ನಿಟ್ಟಿನಲ್ಲಿ ರಾಜಕಾರಣಿಗಳಿಗೂ ಸಿನಿಮಾ ನಟರಿಗೂ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.

ಕನ್ನಡ ಚಿತ್ರೋದ್ಯಮದ ಸಮಸ್ಯೆ ಸಮಸ್ತ ಕನ್ನಡಿಗರ ಸಮಸ್ಯೆಯಲ್ಲ. ಈ ಹೋರಾಟಕ್ಕೆ ಕೆಲವು ಪುರೋಗಾಮೀ ಗುಂಪುಗಳೂ ಬೆಂಬಲ ಸೂಚಿಸಿರುವುದು ಅಚ್ಚರಿ ಮೂಡಿಸುವ ಸಂಗತಿಯಾಗಿದೆ. ಸಾಲದೆಂಬಂತೆ ಪ್ರಸ್ತುತ ಹೋರಾಟವನ್ನು ಗೋಕಾಕ್ ಚಳವಳಿಗೆ ಹೋಲಿಸಿರುವುದು ಹಾಸ್ಯಾಸ್ಪದವೆನಿಸುತ್ತದೆ. ಸಂಘಪರಿವಾರದವರು ಅಯೋಧ್ಯಾ ಚಳವಳಿಯನ್ನು ಎರಡನೇ ಸ್ವಾತಂತ್ರ್ಯ ಚಳವಳಿಗೆ ಹೋಲಿಸಿದಂತಾಗುತ್ತದೆ. ಎಲ್ಲೋ ಒಂದು ಕಡೆ ಕನ್ನಡ ಪರ ಸಂಘಟನೆಗಳು, ಚಿತ್ರೋದ್ಯಮದ ನಾಯಕರು ಸಂಘ ಪರಿವಾರದ ಪುರೋಹಿತಶಾಹಿ ಮನೋಭಾವಕ್ಕೆ ಜೋತು ಬಿದ್ದಿರುವುದು ಕಂಡುಬರುತ್ತದೆ. ಇಂತಹ ಪ್ರತಿಗಾಮೀ ಶಕ್ತಿಗಳಿಗೆ ಬೆಂಬಲ ನೀಡುವುದರಿಂದ ಕನ್ನಡಿಗರ ಭವಿಷ್ಯ ಕರಾಳವಾಗುವುದೇ ಹೊರತು ಅಭಿವೃದ್ಧಿ ಹೊಂದುವುದಿಲ್ಲ.

ಪ್ರಸ್ತುತ ಕರ್ನಾಟಕದ ಜನತೆ ಎದುರಿಸುತ್ತಿರುವ ಹಲವಾರು ಸಮಸ್ಯೆ, ಸಂದಿಗ್ಧತೆಯನ್ನು ನಿವಾರಿಸಲು ವಿಶಾಲ ದೃಷ್ಟಿಕೋನವುಳ್ಳ ಭಾಷಾ - ಸಾಹಿತ್ಯ ಕಾಳಜಿಯುಳ್ಳ, ದಾರ್ಶನಿಕತೆಯುಳ್ಳ ಸಂಘಟನೆಗಳು ಅಗತ್ಯವಾಗಿದೆ. ಕನ್ನಡಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧವಾಗಿರುವವರು ಈ ನಿಟ್ಟಿನಲ್ಲಿ ಯೋಚಿಸುವರೇ ಕಾದುನೋಡಬೇಕಾಗಿದೆ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಧರ್ಮ ಮತ್ತು ಪ್ರಜಾಪ್ರಭುತ್ವ

ಮಾನವ ನಂಬುಗೆಯ ಪ್ರಾಣಿ. ಆತನ ನಂಬುಗೆಗಳ ಸಂಕಲನವೇ ಧರ್ಮ. ಧರ್ಮವು ಆತನ ನಂಬುಗೆಯನ್ನು ಆಳುತ್ತದೆ. ನಂಬುಗೆಗಳಿಗೆ ಮಾನವ ಧರ್ಮಸ್ವರೂಪವನ್ನು ಕೊಟ್ಟುಕೊಂಡಿದ್ದಾನೆ. ಧರ್ಮವು ಕೇವಲ ಧಾರ್ಮಿಕ ಕ್ಷೇತ್ರಕ್ಕೆ ಮಹತ್ವ ಕೊಡುತ್ತಾ ಬಂದಿರುತ್ತದೆ. ಹೀಗೆ ಒಂದೇ ಕ್ಷೇತ್ರಕ್ಕೆ ತನ್ನನ್ನು ಸೀಮಿತಗೊಳಿಸಿಕೊಂಡ ಧರ್ಮವು ಜಡತ್ವವನ್ನ ಹೊಂದುವ ಸಂದರ್ಭಗಳೇ ಹೆಚ್ಚು. ಆ ದೃಷ್ಟಿಯಿಂದ ಧರ್ಮವು ನಿಂತ ನೀರಾಗಿದೆ; ನಿಂತ ನೀರು ರಾಡಿಯ ನೀರೂ ಆಗುತ್ತದೆ. ಹೊಸನೀರು ಹರಿದಾಗ ನಿಂತ ನೀರು ಮುಂದಕ್ಕೆ ಹೋಗುತ್ತದೆ. ನಿಂತ ನೀರಿಗೆ ಹೊಸ ನೀರು ಸೇರುವುದರಿಂದ ಹೊಸ ನೀರು ಸ್ವಲ್ಪ ಶುದ್ಧ ನೀರಾದೀತು. ಅದಕ್ಕಾಗಿ ನಿಂತ ನೀರನ್ನು ಹರಿಯುವ ನೀರಿನ ಸಂಗಡ ಬಿಡಬೇಕು. ಹರಿಯುವ ನೀರನ್ನು ಸೇರಿದ ನಿಂತ ನೀರು, ತನ್ನ ಕೊಳೆತನವನ್ನು ಕಳಕೊಂಡೀತು; ಸ್ವಲ್ಪ ಶುದ್ಧಿಯಾದೀತು. ಧರ್ಮವೆಂದರೆ ಹಳೆಯ ಶಾಸ್ತ್ರ ಸಂಪ್ರದಾಯಗಳ ಮೊತ್ತ. ಹಲವು ನಂಬುಗೆಗಳ ಸಂಕಲನವೆಂಬ ಭಾವವಿದೆ.

ಪ್ರಭುತ್ವ: ಧರ್ಮವು ಒಂದು ವಿಧದಲ್ಲಿ ಪ್ರಭುತ್ವಕ್ಕೆ ಒಳಗಾಗಿದೆ. ಪ್ರಭುತ್ವದ ಮಾತನ್ನು ಕೇಳುತ್ತಾ ಬಂದಿರುತ್ತದೆ. ಧರ್ಮವು ಸಾಧ್ಯವಾದರೆ ಪ್ರಭುತ್ವವನ್ನು ನಿಯಂತ್ರಿಸಬೇಕಾಗಿತ್ತು. ಅದು ಹಾಗೆ ಮಾಡದೆ,

ನಿರಂಕುಶತ್ವ : ಎಲ್ಲ ಧರ್ಮಗಳಿಗೂ ತನ್ನದೇ ಆದ ಧಾರ್ಮಿಕ ಪ್ರಚಾರಕರು ಇರುತ್ತಾರೆ. ಅವರಿಗೆ ತಮ್ಮದೇ ಆಗಿರುವ ನಿರ್ಬಂಧ ಗಳಿರುತ್ತವೆ. ಅವುಗಳನ್ನು ಮೀರಿ ಅವರು ವರ್ತಿಸಬಾರದು. ಆದರೆ ಇಂದು ಧಾರ್ಮಿಕ ನಾಯಕರು ನಿರಂಕುಶ ಪ್ರಭುಗಳನ್ನು ಹೋಲುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಅವರ ಮೇಲೆ ಯಾವ ಹಿಡಿತವಿಲ್ಲ, ಅವರೇ ಪ್ರಭುಗಳೋಪಾದಿಯಲ್ಲಿ ಮೆರೆಯುತ್ತಿದ್ದಾರೆ. ತಾವು ಧಾರ್ಮಿಕ ನಾಯಕರೆಂಬ ಹಣೆಪಟ್ಟಿ ಕಟ್ಟಿಕೊಂಡು ತಮ್ಮ ದರ್ಪವನ್ನು ತೋರಿಸುತ್ತಿದ್ದಾರೆ. ಧಾರ್ಮಿಕನು ದರ್ಪದ ಬೆನ್ನೇರಿ ಅವನು ಮಾಡುವು ದಾದರೂ ಏನನ್ನು? ದರ್ಪ ಇರುವಲ್ಲಿ ದೌರ್ಜನ್ಯ ಇರಲೇಬೇಕು. ದರ್ಪ ಮತ್ತು ದೌರ್ಜನ್ಯ ಎರಡೂ ಸೇರಿದಲ್ಲಿ ಶೋಷಣೆ. ಧರ್ಮವು ಇಂದಿನ ದಿನಮಾನಗಳಲ್ಲಿ ಶ್ರೀಸಾಮಾನ್ಯರನ್ನು, ಕಷ್ಟದಲ್ಲಿರುವವರನ್ನು ಬೆಂಕಿಯಲ್ಲಿ ಬೇಯುತ್ತಿರುವವರನ್ನು, ಅಮಾಯಕರನ್ನು ಶೋಷಿಸುವ ಒಂದು ಅಸ್ತ್ರವಾಗಿದೆ.

ಸ್ವರ್ಗ ನರಕಗಳ ಆಸೆಯನ್ನು ಹುಟ್ಟಿಸಿ ಪುಣ್ಯ ಪಾಪಗಳ ಬಲೆಯನ್ನು ಬೀಸಿ, ಪುನರ್ಜನ್ಮದ ಮೋಹವನ್ನು ತೋರಿಸಿ, ಆತ್ಮ-ಪರಮಾತ್ಮಗಳ ಕಲ್ಪನೆಯನ್ನು ಸೃಷ್ಟಿಸಿ ಅತೀ ಮುಗ್ಧರನ್ನು ವಂಚಿಸುತ್ತಿದೆ. ಈ ವಂಚನೆಗೆ ಒಳಗಾಗದವರೆ ಇಲ್ಲ. ಎಲ್ಲ ದೇಶ, ಎಲ್ಲ

ಪ್ರಭುತ್ವದ ಕೈಯಲ್ಲಿನ ಗೊಂಬೆಯಂತೆ ಇದ್ದುಕೊಂಡು ಬಂದಿದೆ. ಪ್ರಭುತ್ವವೆಂದರೆ, ಅಧಿಕಾರ. ಅಧಿಕಾರಶಾಹಿಯನ್ನು ಓಲೈಸುತ್ತಾ, ತನ್ನ ಸ್ವರೂಪವನ್ನು ಅದು ಮರೆತು ಕೈಕಟ್ಟಿ ಕುಳಿತ ಸಂದರ್ಭಗಳವು. ಪ್ರಭುತ್ವವಾದರೂ ತನ್ನ ಪ್ರಭಾವವನ್ನು ಶ್ರೀಸಾಮಾನ್ಯರ ಮೇಲೆ ಹೇರುವ ಪ್ರಯತ್ನದಲ್ಲಿ ಧರ್ಮವನ್ನು ದುರುಪಯೋಗ ಮಾಡುತ್ತ ಬಂದಿದೆ. ಪ್ರಭುತ್ವದ ಮುಖವಾಣಿಯೇ 'ನಾನು ಹೇಳಬೇಕು, ನೀನು ಕೇಳಬೇಕು', ನಾನು ಹೇಳಿದಂತೆ ನೀನು ಕೇಳಬೇಕು. ಈ ರೀತಿಯ ಧೋರಣೆ ಯಿಂದಾಗಿ ಪ್ರಭುತ್ವದ ಮೇಲೆ ಧರ್ಮಕ್ಕೆ ಯಾವುದೇ ಪ್ರಭುತ್ವವನ್ನು ಸಾಧಿ ಸಲು ಸಾಧ್ಯವಾಗಿಲ್ಲ. ಯಾವಾಗ ಧರ್ಮವು ಪ್ರಭುತ್ವದಿಂದ ಬಿಡುಗಡೆ ಗೊಂಡಿತೊ ಆ ಕ್ಷಣದಿಂದಲೆ ಅದು ಮತಾಂಧತೆಯಾಗಿ ಮಾರ್ಪಟ್ಟಿದೆ. ಧರ್ಮವು ಪ್ರಸುತ್ತ ಜಗತ್ತಿನಲ್ಲಿ ಮತಾಂಧತೆ ಯನ್ನು ಬಿತ್ತುವ ಕೆಲಸವನ್ನು ತುಂಬ ವ್ಯವಸ್ಥಿತ ವಾಗಿ ಮಾಡುತ್ತಿದೆ. ತನ್ಮೂಲಕ ಧರ್ಮವು ಇಂದು ಮತಾಂಧರ ಕೈಗೊಂಬೆಯಾಗಿದೆ. ಮತಾಂಧತೆಗೆ ವಿವೇಕ ಇರುವುದಿಲ್ಲ; ಮಾನವೀಯತೆಯ ಮುಖವು ಅದಕ್ಕಿರುವು ದಿಲ್ಲ, ಬರೀ ಹಿಂಸೆ. ಮಾನವ ಮಾನವರ ನಡುವೆ ಹಗೆಯನ್ನು ಹೊತ್ತಿಸಿ, ಹಿಂಸೆಯನ್ನು ಪ್ರಚೋದಿಸುತ್ತ ಅದು ಸಾಗಿದೆ. ಧರ್ಮದಲ್ಲಿ ಮತಾಂಧತೆ ಇಣುಕಿದ ಸಂದರ್ಭದಿಂದಲೇ ಧರ್ಮದ ಜೀವ ಹೋದಂತಾಗಿದೆ.

ಧರ್ಮವೆಂದರೆ ಮತಾಂಧತೆ ಅಲ್ಲ ಎಂಬುದು ಜಗತ್ತಿಗೆ ಅರ್ಥವಾಗಬೇಕು. ಇಲ್ಲದಿದ್ದರೆ ಅನಾಹುತವಾದೀತು. ಎಲ್ಲ ಧರ್ಮದ ಮುಖಂಡರು ಸೇರಿ ಧರ್ಮವು ಮತಾಂಧತೆ ಆಗುವುದನ್ನು ತಪ್ಪಿಸಬೇಕು. ಇಲ್ಲವಾದಲ್ಲಿ ಯಾವ ಧರ್ಮಕ್ಕೂ ಅಸ್ತಿತ್ವ ಉಳಿಯುವುದಿಲ್ಲ.

ಧರ್ಮಗಳಲ್ಲೂ ಈ ಶೋಷಣೆ ನಡೆದೇ ಇದೆ. ಧರ್ಮದಿಂದ ಮೊದಲು ಪಾಪ - ಪುಣ್ಯ ; ಸ್ವರ್ಗ - ನರಕ. ಆತ್ಮ ಪರಮಾತ್ಮ, ಅವತಾರ ಪುನರ್ಜನ್ಮ ಇಂಥ ವಿಚಾರಗಳನ್ನು ಕುರಿತು ಚಿಂತಿಸಿ, ಅವುಗಳಿಲ್ಲವೆಂದು ಪ್ರಚಾರಪಡಿಸುವ ಪ್ರಯತ್ನಗಳು ನಡೆಯಬೇಕಾಗಿದೆ. ಇಲ್ಲದಿದ್ದರೆ ಧರ್ಮದ ಹೆಸರಿನಲ್ಲಿ ಶೋಷಣೆ ನಿರಂತರ. ಧರ್ಮವೆಂದರೆ ಶೋಷಣೆ ಅಲ್ಲ; ಶೋಷಣೆಯಿಂದ ಸಮಾಜವನ್ನು ಹೊರತರಲು ನಾವೀಗ ಪ್ರಯತ್ನವನ್ನು ಆರಂಭಿಸಬೇಕಾಗಿದೆ. ಹೀಗೆ ಅರಿವು ಮೂಡುತ್ತಲೇ ಕೋಟಿಗಟ್ಟಲೇ ಮುಗ್ಧರಿಗೆ ಶೋಷಣೆಯಿಂದ ಮುಕ್ತಿ ಸಿಗುತ್ತದೆ.

ಪ್ರಜಾಪ್ರಭುತ್ವ : ಧರ್ಮದಲ್ಲಿ ಪ್ರಜಾಪ್ರಭುತ್ವದ ಆಶಯಗಳಿಗೆ ಅವಕಾಶವಿರಬೇಕು. ಧರ್ಮವಿಂದು ಪ್ರಜಾಪ್ರಭುತ್ವದ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾಗುತ್ತದೆ. ಪ್ರಜಾಪ್ರಭುತ್ವ ಸ್ತರದ ಮೇಲೆ ನಿಲ್ಲದ ಧರ್ಮವು 'ಕರ್ಮಠತನ' ಆಗುವ ಸಾಧ್ಯತೆಯೇ ಅಧಿಕ. ಧರ್ಮವೆಂದರೆ ಒಂದು ಮುಕ್ತ ಸ್ಥಿತಿ, ಒಂದು ಮುಕ್ತ ವಿಚಾರ ವೇದಿಕೆಯೆಂಬ ಭಾವ ಬಲಿಯಬೇಕಾಗಿದೆ. ಪ್ರಜಾಪ್ರಭುತ್ವದ ಆಶಯವೇ ಒಂದು ಸ್ವತಂತ್ರ ವಿಚಾರವಾದ. ಒಬ್ಬ ವ್ಯಕ್ತಿ ಇಷ್ಟಪಟ್ಟರೆ ತಾನು ಸ್ವತಂತ್ರವಾಗಿ ಆಲೋಚಿಸುವ ಅವಕಾಶವನ್ನು ಧರ್ಮವು ನೀಡಬೇಕಾಗುತ್ತದೆ. ಧರ್ಮದಲ್ಲಿ ಮುದ್ರಿಸ ಲ್ಪಟ್ಟ ವಿಚಾರವೇ ಅಂತಿಮವಲ್ಲ; ಹೊಸ ವಿಚಾರಗಳಿಗೂ ಅವಕಾಶ ಮಾಡಿಕೊಟ್ಟಾಗ, ಆ ಧರ್ಮ ಹೆಚ್ಚು ಸಮಕಾಲೀನ ಆಗುತ್ತದೆ. ಸಮಕಾಲೀನವಲ್ಲದ ಧರ್ಮವು ಯುಗಧರ್ಮವಾಗಲು ಸಾಧ್ಯವಿಲ್ಲ. ಸಮಕಾಲೀನ ಸಂಘರ್ಷಗಳಿಗೆ ಅವಕಾಶ ಮಾಡಿಕೊಡುವುದರ ಮೂಲಕ, ಒಂದು

ಚಿಂತನೆ

ಧರ್ಮವಿಂದು ಪ್ರಜಾಪ್ರಭುತ್ವದ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕು. ಪ್ರಜಾಪ್ರಭುತ್ವ ಸ್ತರದ ಮೇಲೆ ನಿಲ್ಲದ ಧರ್ಮವು 'ಕರ್ಮಠತನ' ಆಗುವ ಸಾಧ್ಯತೆಯೇ ಅಧಿಕ. ಧರ್ಮವೆಂದರೆ ಒಂದು ಮುಕ್ತ ಸ್ಥಿತಿ, ಒಂದು ಮುಕ್ತ ವಿಚಾರ ವೇದಿಕೆಯೆಂಬ ಭಾವ ಬಲಿಯಬೇಕಾಗಿದೆ. ಪ್ರಜಾಪ್ರಭುತ್ವದ ಆಶಯವೇ ಒಂದು ಸ್ವತಂತ್ರ ವಿಚಾರವಾದ. ಧರ್ಮದಲ್ಲಿ ಮುದ್ರಿಸಲ್ಪಟ್ಟ ವಿಚಾರವೇ ಅಂತಿಮವಲ್ಲ; ಹೊಸ ವಿಚಾರಗಳಿಗೂ ಅವಕಾಶ ಮಾಡಿಕೊಟ್ಟಾಗ, ಆ ಧರ್ಮ ಹೆಚ್ಚು ಸಮಕಾಲೀನ ಆಗುತ್ತದೆ. ಸಮಕಾಲೀನವಲ್ಲದ ಧರ್ಮವು ಯುಗಧರ್ಮವಾಗಲು ಸಾಧ್ಯವಿಲ್ಲ.

❍ ಶ್ರೀ ಶಿವಮೂರ್ತಿ ಶರಣರು

ಧರ್ಮ ತಾನು ಸಮಕಾಲೀನವೆಂಬುದನ್ನು ತೋರಿಸಿಕೊಡಬೇಕಾಗುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಸಂಘರ್ಷ ಅನಿವಾರ್ಯ. ಯಾವುದೇ ಒಬ್ಬ ವ್ಯಕ್ತಿ ತಾನು ಯಾವುದೇ ತತ್ವ ಅಥವಾ ಸಿದ್ಧಾಂತವನ್ನು ಅನುಸರಿಸುವ, ಚಿಂತನೆ ನಡೆಸುವ ಸ್ವಾತಂತ್ರ್ಯವನ್ನು ಧರ್ಮವು ನೀಡಬೇಕಾಗುತ್ತದೆ. ಸ್ವಾತಂತ್ರ್ಯ ಪ್ರತಿಯೊಬ್ಬರ ಪರಮಾಧಿಕಾರ. ಧರ್ಮವು ಯಾರೊಬ್ಬರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬಾರದು. ಬದಲಾಗಿ ಸ್ವಾತಂತ್ರ್ಯವಿಲ್ಲದವರಿಗೆ ಅದನ್ನು ಕೊಡಿಸಲು ಅದು ಹೋರಾಡಬೇಕಾಗುತ್ತದೆ. ಸ್ವಾತಂತ್ರ್ಯಕ್ಕೆ ಮಹತ್ವ ನೀಡದ ಧರ್ಮವು ಕಾಲಗತಿಯಲ್ಲಿ ಸತ್ತು ಹೋಗುತ್ತದೆ. ಪ್ರಜಾಪ್ರಭುತ್ವದ ಲಕ್ಷಣವಾದ ಸ್ವಾತಂತ್ರ್ಯ ತತ್ವವು ಧರ್ಮದ ಕಕ್ಷೆಯಲ್ಲಿ ಹೆಚ್ಚುಹೆಚ್ಚು ಚಿಂತನೆ ಆಗುವುದು ಮುಖ್ಯ. ಸ್ವಾತಂತ್ರ್ಯದ ಮತ್ತೊಂದು ತತ್ವವೇ ಸಮಾನತೆ. ಧರ್ಮವು ಈ ಅಂಶವನ್ನು ಸ್ವೀಕರಿಸಿಕೊಂಡು ಎಲ್ಲರನ್ನು ಸಮಾನ ದೃಷ್ಟಿಕೋನದಿಂದ ನೋಡಬೇಕು. ಅಲ್ಲಿ ಜಾತಿ, ವರ್ಣ, ವರ್ಗ, ವಯಸ್ಸು ಮತ್ತು ಲಿಂಗಭೇದಕ್ಕೆ ಅವಕಾಶ ಇರಬಾರದು. ಯಾವುದೇ ಒಬ್ಬ ವ್ಯಕ್ತಿಗೆ ಯಾವ ಆತಂಕವಿಲ್ಲದೆ ಧರ್ಮವನ್ನು ಅನುಭವಿಸುವ, ಆಚರಿಸುವ ಮುಕ್ತ ವಾತಾವರಣ ನಿರ್ಮಾಣವಾಗಬೇಕಾಗಿದೆ. ಮಾನವ ಮಾನವರ ನಡುವಿನ ಅಂತರ ನಿವಾರಣೆಯಾದರೆ ಜನಾಂಗೀಯ ಕಲಹಗಳು ನಿಲ್ಲುತ್ತವೆ. ಅಸಮಾನತೆ ಇರುವವರೆಗೂ ಜನಾಂಗೀಯ ಕಲಹಗಳು ನಡೆಯುತ್ತಿರುತ್ತವೆ. ಅಸಮಾನತೆ ನಿವಾರಣೆ ಆದ ದಿನದಂದೇ ಜನಾಂಗೀಯ ಕಲಹಗಳು ನಿಲ್ಲುತ್ತವೆ. ತನ್ಮೂಲಕ ಒಬ್ಬ ಶೂದ್ರ, ಅಲಕ್ಷಿತ ಅಥವಾ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅವಕಾಶ ಸಿಗಬೇಕು. ಅವನನ್ನೇ ಕೇಂದ್ರೀಕರಿಸಿಕೊಂಡೇ ಧರ್ಮಗಳು ಕೆಲಸ ಮಾಡಬೇಕಾಗುತ್ತದೆ.

೧೨ನೇ ಶತಮಾನದಲ್ಲಿ ಇಂಥದೊಂದು ಪ್ರಯೋಗ ನಡೆದಿರುವುದನ್ನು ಇಲ್ಲಿ ಸ್ಮರಿಸಬಹುದು. ಒಬ್ಬ ನೀಗ್ರೋ ಜನಾಂಗಕ್ಕೆ ಸೇರಿದ ವ್ಯಕ್ತಿಯೊಬ್ಬ ಒಂದು ಚರ್ಚ್‌ಗೆ ಬರುವಂತಾಗಬೇಕೆಂದು ಭಾವಿಸುವ ಇಂದಿನ ದಿನಮಾನಗಳಲ್ಲಿ ೮೫೦ ವರ್ಷಗಳ ಹಿಂದೆಯೇ ಬಸವಣ್ಣನವರು, ಅನುಭವ ಮಂಟಪವೆಂಬ ಪ್ರಥಮ ಧಾರ್ಮಿಕ ಸಂಸತ್ ನಿರ್ಮಿಸಿರುವುದು ಒಂದು ಮಹತ್ತರವಾದ ಸಾಧನೆ. ಏಕೆಂದರೆ, ಅಂದಿನ ದಿನಮಾನಗಳಲ್ಲಿ ಧರ್ಮದ ಆಚಾರ ವಿಚಾರಗಳು ಬಹು ಜಟಿಲವಾಗಿದ್ದವು. ಹಿಂದುಳಿದವರೊಂದಿಗೆ ಸಹಭೋಜನ ಮಾಡುವುದಿರಲಿ, ಅವರು ರಸ್ತೆಯಲ್ಲಿ ನಡೆಯುವಂತಿರಲಿಲ್ಲ; ಧರ್ಮಶ್ರವಣ ಮಾಡುವಂತಿರಲಿಲ್ಲ, ಅಂಥ ಕಾಲವದು. ಆಗಿನ ದಿನಗಳಲ್ಲೇ ಬಸವಣ್ಣನವರು, ಮಾದಾರ ಚೆನ್ನಯ್ಯನವರನ್ನು, ಡೋಹರ ಕಕ್ಕಯ್ಯನವರನ್ನು ಗೌರವಿಸಿದ್ದಾರೆ. ಇವರ ದಾಸ-ದಾಸಿಯರು ಬೆರಣಿಗೆ ಹೋದಾಗ ಕೂಡಿದರು. ಇಂಥವರಿಗೆ ಹುಟ್ಟಿದವ ನಾನೆಂದು ಸಮರ್ಥಿಸಿಕೊಳ್ಳುತ್ತಾರೆ. ಎಲ್ಲ ವರ್ಗದವರಿಗೂ ಮಾತ್ರವಲ್ಲ ಸ್ತ್ರೀಯರಿಗೂ ಅಲ್ಲಿ ಪ್ರವೇಶವನ್ನು ಕೊಡಿಸುತ್ತಾರೆ. ಸೂಳೆ ಸಂಕವ್ವೆಯೆಂಬ, ವಚನಕಾರ್ತಿ ಅನುಭವ ಮಂಟಪದಲ್ಲಿ ವಚನ ರಚಿಸಿದ ಉದಾಹರಣೆಯಿದೆ. ಹೆಂಡದ ಮಾರಯ್ಯನೆಂಬ ವ್ಯಕ್ತಿ ತಾನು ಶರಣನಾಗಿ ಸಾತ್ವಿಕ ಜೀವನ ನಡೆಸಿದ. ಎಲ್ಲಕ್ಕಿಂತ ಮುಖ್ಯವಾಗಿ ಬಸವಣ್ಣನವರು ಶೂನ್ಯಪೀಠವೊಂದನ್ನು ರಚಿಸಿ, ಅದಕ್ಕೆ ಅಲ್ಲಮಪ್ರಭುವನ್ನು ಅಧ್ಯಕ್ಷರನ್ನಾಗಿ ಮಾಡುತ್ತಾರೆ.

ಕುಣಿತ

ಮುಗಿಲು ಹಕ್ಕಿಗೆ ನವಿಲು ಗರಿ ಬಿಚ್ಚಿ ಕುಣಿದಂತೆ
ಮೈಯ ನರ ನರ ರಗತ ಮಾಂಸಗಳೆಲ್ಲ
ಕುಣಿದವ್ರೋ ಕುಣಿದವ್ರೋ

ನೀಲಿ ಮುಗಿಲಲ್ಲಿ ಹಕ್ಕಿ ತೇಲ್ಬಿಟ್ಟ ಹಾಂಗಂತೆ
ಮನಸು ಹಾರಾಡಿ ಮುಗಿದ ಕನಸುಗಳೆಲ್ಲ
ಕುಣಿದವ್ರೋ ಕುಣಿದವ್ರೋ

ಹಾಡೋಣ ಬಾ ಮನ ಮಣಿಯಾಲಿ
ಕುಣಿಯೋಣ ಬಾ ಕಾಲ್ಗಣಿಯಾಲಿ
ದಣಿವಿಲ್ಲದ ದಿನಗಳು
ಕುಣಿ ಕುಣಿದು ಹಾರಾಡೋ ಮನಗಳು
ಕುಣಿಯೋಣ ಹಾಡೋಣ ಕಾಡೋಣ
ಬಾ ಬಾ ಬೇಗ ಬಾ.

—ಬಂದಗದ್ದೆ ರಾಧಾಕೃಷ್ಣ



ಧರ್ಮವು ಒಂದು ವಿಧದಲ್ಲಿ ಪ್ರಭುತ್ವಕ್ಕೆ ಒಳಗಾಗಿದೆ. ಧರ್ಮವು ಸಾಧ್ಯವಾದರೆ ಪ್ರಭುತ್ವವನ್ನು ನಿಯಂತ್ರಿಸಬೇಕಾಗಿತ್ತು, ಹಾಗೆ ಮಾಡದೆ, ಪ್ರಭುತ್ವದ ಕೈಯಲ್ಲಿನ ಗೊಂಬೆಯಂತೆ ಇದೆ. ಪ್ರಭುತ್ವವಾದರೂ ತನ್ನ ಪ್ರಭಾವವನ್ನು ಶ್ರೀಸಾಮಾನ್ಯರ ಮೇಲೆ ಹೇರುವ ಪ್ರಯತ್ನದಲ್ಲಿ ಧರ್ಮವನ್ನು ದುರುಪಯೋಗ ಮಾಡುತ್ತ ಬಂದಿದೆ. ಪ್ರಭುತ್ವದ ಮುಖವಾಣಿಯೇ 'ನಾನು ಹೇಳಬೇಕು, ನೀನು ಕೇಳಬೇಕು'. ಈ ರೀತಿಯ ಧೋರಣೆಯಿಂದಾಗಿ ಪ್ರಭುತ್ವದ ಮೇಲೆ ಧರ್ಮಕ್ಕೆ ಯಾವುದೇ ಪ್ರಭುತ್ವವನ್ನು ಸಾಧಿಸಲು ಸಾಧ್ಯವಾಗಿಲ್ಲ. ಯಾವಾಗ ಧರ್ಮವು ಪ್ರಭುತ್ವದಿಂದ ಬಿಡುಗಡೆಗೊಂಡಿತೊ ಆ ಕ್ಷಣದಿಂದಲೆ ಅದು ಮತಾಂಧತೆಯಾಗಿ ಮಾರ್ಪಟ್ಟಿದೆ. ಧರ್ಮವು ಪ್ರಸ್ತುತ ಜಗತ್ತಿನಲ್ಲಿ ಮತಾಂಧತೆಯನ್ನು ಬಿತ್ತುವ ಕೆಲಸವನ್ನು ತುಂಬ ವ್ಯವಸ್ಥಿತವಾಗಿ ಮಾಡುತ್ತಿದೆ.

ಇಷ್ಟೇ ಅಲ್ಲದೆ ಹರಳಯ್ಯ ಮತ್ತು ಮಧುವಯ್ಯಗಳ ಮಕ್ಕಳ ಅಂತರ್ಜಾತಿ ಮದುವೆ ಮಾಡಿಸಿ ಜಾತಿ ನಿರ್ಮೂಲನಕ್ಕಾಗಿ ಹೋರಾಡಿದ್ದಾರೆ.

ಮುಂದೆ ವರ್ಣಸಂಕರವಾಗಿ, ದೊರೆ ಬಿಜ್ಜಳನು ಹರಳಯ್ಯ ಮಧುವಯ್ಯ ಮತ್ತವರ ಮಕ್ಕಳಿಗೆ ಎಳವಟೆ ಶಿಕ್ಷೆಯನ್ನು ವಿಧಿಸಿ, ಚಿತ್ರಹಿಂಸೆಯನ್ನು ಕೊಟ್ಟು ಸಾಯಿಸುತ್ತಾನೆ. ಶರಣರ ಮೇಲೆ ಎಲ್ಲೆಂದರಲ್ಲಿ ದೌರ್ಜನ್ಯ, ಕಗ್ಗೊಲೆ ನಡೆಯುತ್ತದೆ. ಬಸವಣ್ಣನವರು ಗಡಿಪಾರು ಶಿಕ್ಷೆಗೆ ಒಳಗಾಗುತ್ತಾರೆ.

ಬಸವ ಕ್ರಾಂತಿಯು ಪ್ರಜಾಪ್ರಭುತ್ವದ ನೆಲೆಯ ಮೇಲೆ ನಡೆದಿದೆ. ಪ್ರಜಾಪ್ರಭುತ್ವವು ಜನರಿಗೆ ಬೇಗ ಅರ್ಥವಾಗುತ್ತದೆ. ಏಕೆಂದರೆ ಅದು ಪ್ರಜೆಗಳಿಗೆ ಬಹಳ ಹತ್ತಿರದಲ್ಲಿದೆ. ವಾಕ್ ಸ್ವಾತಂತ್ರ್ಯ, ಬರೆಯುವ ಸ್ವಾತಂತ್ರ್ಯ, ಬದುಕುವ ಸ್ವಾತಂತ್ರ್ಯ ಎಲ್ಲ ಸ್ವಾತಂತ್ರ್ಯಗಳನ್ನು ಅದು ನೀಡುತ್ತದೆ. ಕಾರಣ ಧರ್ಮಗಳು ಕ್ರಮೇಣವಾದರೂ ಪ್ರಜಾಪ್ರಭುತ್ವದ ಕಡೆಗೆ ಸಾಗಿದರೆ ಹೆಚ್ಚು ಪ್ರಸ್ತುತ ಆಗುತ್ತದೆ.

(ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರು ಬ್ರೆಜಿಲ್‌ನ ಪೋರ್ಟೋ ಅಲೆಗ್ರೆ ನಗರದಲ್ಲಿ ವಿಶ್ವ ಸಾಮಾಜಿಕ ವೇದಿಕೆ ಏರ್ಪಡಿಸಿದ್ದ ಜಾಗತಿಕ ಸಮಾವೇಶದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿ ಮಂಡಿಸಿದ ಪ್ರಬಂಧ) ☐

ಬದುಕು

ಹೀಗೊಂದು ಆದಿವಾಸಿ ಬದುಕು...

ಆದಿವಾಸಿಗಳಲ್ಲಿ ಬಹಳ ಹಿಂದಿನವರು ಓದಲಿಲ್ಲ, ಬರವಣಿಗೆ ಕಲಿಯಲಿಲ್ಲ, ಅವರು ಪೇಟೆಯನ್ನೆ ನೋಡಿರಲಿಲ್ಲ, ಅವರಿಗೆ ಪೇಟೆಯೆಂದರೆ ಹೇಗಿರುತ್ತದೆ ಎಂಬ ಕಲ್ಪನೆಯೇ ಇರಲಿಲ್ಲ, ಅವರು ಆ ಬೆಳವಣಿಗೆಯಲ್ಲಿ ಗೆಡ್ಡೆ ಗೆಣಸು ಹಣ್ಣು ಹಂಪಲುಗಳನ್ನು ತಿಂದು ಬದುಕಿದವರು. ನಂತರ ಅವರಿಗೆ ಉಪ್ಪಿನ ಬಗ್ಗೆ ತಿಳುವಳಿಕೆ ಬಂದ ಮೇಲೆ ಪೇಟೆಗೆ ಹೋಗಲು ಪ್ರಾರಂಭಿಸಿದರು. ಅದೂ ಕಾಡಿನ ಹೊರಗೆ ಇರುವ ಸಣ್ಣ ಪುಟ್ಟ ಅಂಗಡಿಗಳನ್ನು ಪೇಟೆಗಳೆಂದು ಭಾವಿಸುತ್ತಿದ್ದರು. ಹುಳಿ ಮೆಣಸಿನಕಾಯಿ ತರಕಾರಿಗಳು ಮನೆಗೆ ಏನು ಬೇಕೋ ಅದನ್ನ ಬೆಳೆದುಕೊಳ್ಳುತ್ತಿದ್ದರು. ಅವರಿಗೆ ಉಪ್ಪನ್ನು ತಯಾರಿಸುವುದು ಗೊತ್ತಿರುತ್ತಿದ್ದರೆ, ಬಹುಶಃ ಇನ್ನೂ ಕೂಡ ಪೇಟೆಯನ್ನೆ ನೋಡುತ್ತಿರಲಿಲ್ಲವೇನೋ. ಮೊದಲು ಪೇಟೆಯವರು ಯಾರಾದರೂ ಪ್ಯಾಂಟು ಶರಟು ಹಾಕಿದವರು ಅವರ ಊರಿಗೆ ಬಂದರೆ ಜನ ಓಡಿ ಹೋಗಿ ಕಾಡಿನಲ್ಲಿ ಅವಿತು ಕದ್ದು ಕೂರುತ್ತಿದ್ದರು.

ಬಹಳ ಹಿಂದೆ ಜನ, ಕಷ್ಟದಲ್ಲಿ ಬದುಕುತ್ತಿದ್ದರು. ಊಟಕ್ಕೆ ಭತ್ತ ಬೆಳೆಯುತ್ತಿರಲಿಲ್ಲ, ಬಹಳ ಹಿಂದೆ ನನಗೆ ತಿಳಿದಂತೆ ೧೦-೧೨ ವರ್ಷಗಳಿಂದಲೂ ಗೆಡ್ಡೆ ಗೆಣಸು ತಿಂದು ಬೈನೆ ಹಿಟ್ಟು ತೆಗೆದು ತಿನ್ನುತ್ತಿದ್ದರು. ಅಷ್ಟೆ ಅಲ್ಲದೆ, ಕವಲೆಗೆಡೆ, ಮರಗೆಣಸು, ಈಚಲು ಗೆಡ್ಡೆ, ನೂರಿ ಗೆಡ್ಡೆ ಇದನ್ನೆಲ್ಲ ತಿಂದು ಬದುಕುತ್ತಿದ್ದರು. ಜನ ಒಂದು ಬೈನೆ ಕಡಿದು ಹಿಟ್ಟು ತೆಗೆಯಬೇಕೆಂದರೆ ಒಂದು ದಿನವೇ ಬೇಕಾಗುತ್ತಿತ್ತು. ಅಷ್ಟು ಇದ್ದರೂ ಜನ ಮಾಡುತ್ತಿದ್ದರು ಅಂದರೆ ಈ ಸಮಾಜದಲ್ಲಿ ಹಾಗೆ ಇರುವುದರಿಂದ ಹಾಗೆ ಯೋಚಿಸುತ್ತಿದ್ದರು. ಹೆಣ್ಣು ಮಕ್ಕಳು ಎಷ್ಟು ಜರಿದರೂ ಒಂದೇ. ಕೊನೆಗೆ ಮುಸರೆ ತೊಳೆಯಲಿಕ್ಕೆ, ಇಲ್ಲ ಅಡುಗೆ ಮನೆಗೆ ಸೀಮಿತ ಎಂದುಕೊಂಡು ಅವರು ಕಳಿಸುತ್ತಿರಲಿಲ್ಲ, ಇದು ಅವರ ತಪ್ಪಲ್ಲ, ಈ ಸಮಾಜ ಹಾಗೆ ಇರುವುದರಿಂದ ಅವರು ಆ ರೀತಿಯ ಆಲೋಚನೆ ಮಾಡುತ್ತಿದ್ದರು.

ಆದಿವಾಸಿಗಳಲ್ಲಿ ಚಿಕ್ಕ ಚಿಕ್ಕ ಮಕ್ಕಳನ್ನು ಅಂದರೆ ೭-೮ ವರ್ಷದ ಆಟ ಆಡುವಂತಹ ಮಕ್ಕಳನ್ನು ಭತ್ತ ಕುಟ್ಟಲಿಕ್ಕೆ, ಸೌದೆ ಸೊಪ್ಪು ತರಲಿಕ್ಕೆ ಕಳಿಸುತ್ತಾರೆ. ಇಲ್ಲ ಅಂದರೆ ಅಡುಗೆ ಮನೆಗೆ ದೂಡುತ್ತಿದ್ದರು. (ಈಗಲೂ ಕೆಲವು ಕಡೆ ಇದೆ) ಅದನ್ನ ಮಾಡ್ಲಿಲ್ಲ ಅಂದರೆ ಅವರಿಗೆ ಊಟವೂ ಇರುತ್ತಿರಲಿಲ್ಲ, ಮತ್ತು ಹೊಡೆಯುವುದು ಅಥವಾ ಕೆಟ್ಟದಾಗಿ ಬೈಗುಳ ಕೇಳಬೇಕಿತ್ತು. ದಿನನಿತ್ಯ ಕಣ್ಣಲ್ಲಿ ನೀರು ಸುರಿಸುತ್ತಿದ್ದರು. ಇಂತಹ ಶೋಷಣೆಯಲ್ಲಿ ಬಹಳ ಮಹಿಳೆಯರು ಕಿರುಕುಳ ತಾಳದೆ, ತಮ್ಮ ಪ್ರಾಣವನ್ನೆ ಕಳೆದುಕೊಂಡವರೂ ಇದ್ದಾರೆ. ಮನೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಇದ್ದಾಗ ಮಹಿಳೆಯರು ಹೊತ್ತಿಗೆ ಸರಿಯಾಗಿ ಅಡಿಗೆ ಮಾಡಿ ಹಾಕದೆ ಇದ್ದರೆ ತುಂಬಾ ಬೈಗುಳ ಅಥವಾ ಹೊಡೆತಗಳು ಇರುತ್ತಿದ್ದವು. ಮತ್ತೆ ಅವರು ಎಷ್ಟು ಕೆಲಸ ಮಾಡಬೇಕು ಅಂದರೆ ಒಂದು ಭತ್ತ ಕುಟ್ಟಿಕೊಳ್ಳಬೇಕು, ಸೌದೆ ತಂದುಕೊಳ್ಳಬೇಕು, ಕೊಟ್ಟಿಗೆಗೆ ಸೊಪ್ಪು ತಂದುಕೊಳ್ಳಬೇಕು ಮತ್ತು ಅದೇ ಸಮಯದಲ್ಲಿ ಗದ್ದೆ ಕೆಲಸ ಏನಾದರೂ ಇದ್ದರೆ ಅದನ್ನು ಕೂಡ ಮಾಡಬೇಕು. ಅಷ್ಟೆಲ್ಲಾ ಮಾಡಿಕೊಂಡು ನಟ್ಟಿಗೆ ಹೋಗಬೇಕಿತ್ತು. ಇಷ್ಟೆಲ್ಲ ಇದ್ದಾಗ ಮಹಿಳೆಯರು ಒಂದು ಮಾತು ಪುರುಷರಿಗೆ ಏನಾದರೂ ತಿರುಗಿ ಮಾತನಾಡಿದರೆ ಊರು ಜನ ಏನ್ ಅಂದ್ಕೊಳ್ಳುತ್ತಾರೆ. ನಾಳೆ ನಿಮ್ಮನ್ನ ಯಾರಾದರೂ ಕೇಳಲಿಕ್ಕೆ ಬರುವವವರು ಕೂಡ ಬರುವುದಿಲ್ಲ ಗೊತ್ತಿದೆಯಾ ಎಂದು ಕೇಳುತ್ತಿದ್ದರು. ನಿಮಗೆ ಮರಿಯಾದಿ ಇಲ್ಲ ಅಂದರೆ ನಮಗೆ ಮರಿಯಾದಿ ಇದೆ. ಯಾಕೆಂದರೆ ನಿಮ್ಮನ್ನ ಹೆತ್ತು ಸಾಕಿದ್ದಕ್ಕೆ ನಾವು ಮಾತು ಕೇಳಬೇಕು ಅಂತ ಹೇಳುತ್ತಿದ್ದರು.

ಭೂಮಾಲೀಕರು ನೂರಾರು ಸಾವಿರಾರು ಎಕರೆ ಭೂಮಿ ಇಟ್ಟುಕೊಂಡು ಹಲವಾರು ಎಕರೆ ಭೂಮಿಯನ್ನು ಹಡ್ಲೂ ಬಿಟ್ಟಿದ್ದಾರೆ. ಒಂದು ಕಡೆ ಬಡವರಿಗೆ ಭೂಮಿ ಇಲ್ಲದೆ ಕಡುಬಡತನದಲ್ಲಿ ಜೀವನ ನಡೆಸುತ್ತಿದ್ದರೆ ಭೂಮಾಲೀಕರ ೧೦-೫೦ ಎಕರೆವರೆಗೆ ಭೂಮಿಯು ವೇಸ್ಟ್ ಆಗಿ ಹೋಗುತ್ತಿದೆ. ಅದನ್ನು ಬಡವರಿಗೂ ಕೊಡದೆ ಶ್ರಮದ ಲೂಟಿಯನ್ನು ಮಾಡಲಾಗುತ್ತಿದೆ. ಇದೆಲ್ಲ ಭೂಮಾಲೀಕರು ನಡೆಸುತ್ತಿರುವ ಶೋಷಣೆ. ಇದನ್ನೆಲ್ಲ ಕೊನೆಗೊಳಿಸ ಬೇಕೆಂದರೆ ಜನರ ಸಂಘಟಿತ ಶಕ್ತಿಯಿಂದ ಮಾತ್ರ ಸಾಧ್ಯ. ಅವರು ತಮ್ಮ ಅಧಿಕಾರವನ್ನು ಚಲಾಯಿಸಬೇಕೆಂದರೆ ಹೋರಾಡುವುದೊಂದೇ ದಾರಿ.

○ ಸುಕನ್ಯಾ ಸಿರಿಮನೆ

ಕಡಿದು ತೆಗೆಯುತ್ತಿದ್ದರು. ತೆಗೆಯದೆ ಇದ್ದರೆ, ಊಟಕ್ಕೆ ಇಲ್ಲ, ಅದನ್ನೆ ಕಡಿದು ತೆಗೆಯುತ್ತಿದ್ದರು. ಮತ್ತು ಕವಲೆ ಗೆಡ್ಡೆ ತೆಗೆಯಲಿಕ್ಕೂ ಕೂಡ ಅಷ್ಟೇ ಕಷ್ಟ ಇದೆ. ಅದನ್ನು ಹೆಣ್ಣು ಮಕ್ಕಳು ಕೂಡ ತೆಗೆಯಲಿಕ್ಕೆ ಹೋಗುತ್ತಿದ್ದರು. (ಈಗಲೂ ಕೂಡ ಹೋಗುತ್ತಾರೆ) ಒಬ್ಬರು ತಂದಿದ್ದು ಸಾಕಾಗುತ್ತಿರಲಿಲ್ಲ, ಹಲಸಿನ ಹಣ್ಣು, ಮಾವಿನ ಹಣ್ಣು ಎಲ್ಲಾ ಇರುವಾಗ ಬೈನೆ ಹಿಟ್ಟು ತೆಗೆದರೆ ಅದನ್ನ ಉಳಿಸಿಕೊಳ್ಳುತ್ತಿದ್ದರು. ಒಂದು ಅಥವಾ ಎರಡು ಹೊತ್ತು ಅದನ್ನೆ ತಿಂದು ಬದುಕುತ್ತಿದ್ದರು.. ಹಣ್ಣುಗಳು ಇಲ್ಲದೆ ಇರುವಾಗ ಅದನ್ನೆ ಕಷ್ಟಪಟ್ಟು ತೆಗೆಯುತ್ತಿದ್ದರು. ಒಂದು ದಿನ ತಂದಿದ್ದು ಒಂದೇ ದಿನಕ್ಕೆ ಸರಿ ಹೋಗುತ್ತಿತ್ತು. ಇದೆಲ್ಲ ನಡೆಯುತ್ತಿದ್ದಂತೆ ಜನ ಸ್ವಲ್ಪ ಕುಂಬ್ರಿ ಬ್ಯಾಸಾಯಾ ಮಾಡಲಿಕ್ಕೆ ಶುರುಮಾಡಿಕೊಂಡರು. ಆಗ ಮೊದಲಿಗಿಂತ ಸ್ವಲ್ಪ ಪರವಾಗಿಲ್ಲ ಅನ್ನೊ ಮಟ್ಟಕ್ಕೆ ಬಂತು. ಆದರೂ ಅದು ಊಟಕ್ಕೆ ಸಾಕಾಗುತ್ತಿರಲಿಲ್ಲ.

ಇದೆಲ್ಲ ಮಾಡುತ್ತಾ ಭೂಮಾಲೀಕನ ಮನೆಗೆ ಜೀತಕ್ಕೆ ಹೋಗಲಿಕ್ಕೆ ಶುರುಮಾಡಿಕೊಂಡರು. ಮೊದಲು ಮಕ್ಕಳಿಗೆ ವಿದ್ಯಾಭ್ಯಾಸ ಇಲ್ಲದೆ ಜನ ಬಾಯಿ ಲೆಕ್ಕದಲ್ಲಿ ಅಥವಾ ಕೈ ಬೆರಳು ಲೆಕ್ಕದಲ್ಲಿ ನಮಗಿಂತ ಮುಂಚೆಯೇ ಲೆಕ್ಕವನ್ನು ಹೇಳುತ್ತಿದ್ದರು. ಮತ್ತೆ ಶಾಲೆ ಆದ ಮೇಲೆ ಮಕ್ಕಳನ್ನು ಶಾಲೆಗೆ ಕಳಿಸಲಿಕ್ಕೆ ಶುರುಮಾಡಿದರು. ಮೊದಲು ಶಾಲೆಗೆ ಕಳಿಸುತ್ತಿರುವವರು, ಹೆಚ್ಚು ಪುರುಷರನ್ನು ಕಳಿಸುತ್ತಾರೆ. ಹೆಣ್ಣು ಮಕ್ಕಳನ್ನು ಕಳಿಸಲೇ ಇಲ್ಲ ಅಂತ ಅಲ್ಲ, ಕೆಲವೇ ಕೆಲವರನ್ನ ಮಾತ್ರ ಕಳಿಸಿದ್ದಾರೆ. ಈ ವ್ಯವಸ್ಥೆಯನ್ನ ಅರ್ಥ ಮಾಡಿಕೊಂಡವರು ಮಾತ್ರ ಹೆಣ್ಣು ಮಕ್ಕಳನ್ನ ಕಳಿಸಿದ್ದು ಬಿಟ್ಟರೆ ಇನ್ನುಳಿದ ಹೆಣ್ಣು ಮಕ್ಕಳೆಲ್ಲ ಭೂಮಾಲೀಕನ ಮನೆಗೆ ಜೀತಕ್ಕೆ, ಇಲ್ಲವೆ ಅಡುಗೆ ಮನೆಗೆ. ಈ ರೀತಿಯ ಶೋಷಣೆಗೆ ಒಳಗಾಗಿದ್ದಾರೆ. ತಂದೆ ತಾಯಿ ಏಕೆ ಹಾಗೆ ಯೋಚನೆ

ಭೂಮಾಲೀಕರು ಆಗಿನ ಕಾಲದಲ್ಲಿ ಕೂಲಿ ಎಷ್ಟು ಕೊಡುತ್ತಿದ್ದರೆಂದರೆ ನನಗೆ ಗೊತ್ತಿರುವಂತೆ ೧-೨ ರೂಪಾಯಿಗಳು ಇರುತ್ತಿತ್ತು. ಅದರಲ್ಲೂ ಅವರು ಪೂರಾ ಕೊಡುತ್ತಿರಲಿಲ್ಲ, ೫೦ ಪೈಸೆ ಅಥವಾ ೧ ರೂಪಾಯಿ ಕೊಡುತ್ತಿದ್ದರು. ಅದರಲ್ಲೂ ಲಾಭ ಮಾಡುತ್ತಿದ್ದರು. ಅದನ್ನೆಲ್ಲಾ ನೋಡಿದ ಜನ ಭೂಮಾಲೀಕ ಅಷ್ಟೊಂದು ಅಡಿಕೆ ಕಾಫಿ, ಏಲಕ್ಕಿ, ಭತ್ತ ಎಲ್ಲಾ ಬೆಳೆಯುತ್ತಾನಲ್ಲ, ನಾವು ಕೂಡ ಹಾಗೆ ಅಡಿಕೆ, ಕಾಫಿ, ಏಲಕ್ಕಿ ಎಲ್ಲಾ ಬೆಳೆದರೆ ಚೆನ್ನಾಗಿ ಬದುಕಬಹುದಲ್ಲ ಅನ್ನೊ ಆಲೋಚನೆ ಬಂದಿತು. ಆ ಮೇಲೆ ಸ್ವಲ್ಪ ಅಡಿಕೆ, ಏಲಕ್ಕಿ, ಕಾಫಿ ಎಲ್ಲಾ ಬೆಳೆಯುತ್ತಿದ್ದರು. ಸ್ವಲ್ಪ ಬೆಳೆಯುತ್ತಿದ್ದಂತೆ ಸ್ವಲ್ಪ ಮಾರಬಹುದು ಅಂದ್ಕೊಳ್ಳುತ್ತಿರುವಾಗಲೇ ಅದಕ್ಕೆ ಬೆಲೆ ಕುಸಿಯಲಿಕ್ಕೆ ಶುರುವಾಯಿತು. ಈ ಆದಿವಾಸಿಗಳು ೧೦ ರಿಂದ ೫೦ ಕೆಜಿ ವರೆಗೆ ಬೆಳೆಯುತ್ತಾರೆ, ಹೆಚ್ಚೆಂದರೆ ೫-೬ ಕ್ವಿಂಟಾಲ್ ಬೆಳೆಯಬಹುದು ಅಷ್ಟೇ. ಈಗಲೂ ಕೂಡ ಅಡಿಕೆಗೆ ಕೆಜಿಗೆ ೫೦ ರಿಂದ ೬೦ರೂ. ವರೆಗೆ ಇದೆ. ಎಲ್ಲ ಜನ ಮೊದಲಿನ ರೇಟು ನೋಡಿ ಗದ್ದೆಗಳಿಗೆಲ್ಲ ಅಡಿಕೆ, ಕಾಫಿ, ಏಲಕ್ಕಿಯನ್ನು ಹಾಕಲಿಕ್ಕೆ ಶುರುಮಾಡಿಕೊಂಡರು. ಜನ ಭೂಮಾಲೀಕನ ಮನೆಗೆ ಕೆಲಸಕ್ಕೆ ಹೋದರೆ ೨೦ ರಿಂದ ೨೫ ರೂ ಸಂಬಳ

ಕೊಡುತ್ತಾರೆ. ಅದರಲ್ಲಿ ಅವರಿಗೆ ಎರಡು ಕೆ.ಜಿ. ಅಕ್ಕಿ ಕೂಡ ಬರುವುದಿಲ್ಲ. ಆದರೂ ಜನ ಹೋಗಲೇಬೇಕಾಗಿದೆ.

ಗದ್ದೆ ತೋಟ ಇಲ್ಲದವರು ಅವರ ಮನೆ ಕೆಲಸಕ್ಕೆ ಹೋಗಲೇಬೇಕು ಇಲ್ಲವಾದರೆ ಕಾಡತ್ಪತಿ ಮಾಡಬೇಕು. ಅದೂ ಭೂಮಾಲಿಕರ ಜಾಗದಲ್ಲಿ ಇದನ್ನ ತರಲಿಕ್ಕೆ ಹೋದರೆ ಬೈಯುತ್ತಿದ್ದರು. ಆದರೂ ಎಲ್ಲೋ ಹೋಗಿ ಹುಡುಕಿ ತಂದರೂ ಅದಕ್ಕೆ ಸರಿಯಾದ ಬೆಲೆ ಕೂಡ ಸಿಗುವುದಿಲ್ಲ. ಆದಿವಾಸಿಗಳು ಯಾಕೆ ಬಡವರಾಗುತ್ತಿದ್ದಾರೆಂದರೆ ಅವರ ಎಲ್ಲಾ ಶ್ರಮವನ್ನು ಭೂಮಾಲೀಕನ ಹೊಟ್ಟೆ ತುಂಬಿಸಲಿಕ್ಕೆ ವಿನಿಯೋಗಿಸುತ್ತಿರುವುದಕ್ಕೆ. ಇವರು ದುಡಿದ ಅಲ್ಪ ಸ್ವಲ್ಪದರಲ್ಲೇ ಅವರ ಮನೆಯಲ್ಲಿರುವವರನ್ನೆಲ್ಲ ಸಾಕಿಕೊಳ್ಳಬೇಕು. ಮಳೆಯಾಗಲಿ, ಹೊಳೆಯಾಗಲಿ ಕೆಲಸಕ್ಕೆ ಹೋಗಲಿಲ್ಲವಾದರೆ ಊಟಕ್ಕಿಲ್ಲ. ಮತ್ತೆ ಅವರ ಮನೆಯಲ್ಲಿ ೨೦ ರಿಂದ ೩೦ ವರ್ಷಗಳವರೆಗೆ ಕೆಲಸ ಮಾಡಿದರೂ ಒಂದು ಎಕರೆ ಭೂಮಿಯಾಗಲಿ, ಒಂದು ವಸ್ತುವಾಗಲಿ ಹಾಗೇ ಕೊಡುತ್ತಿರಲಿಲ್ಲ. ಒಂದು ವಸ್ತುವನ್ನು ಆರೋಗ್ಯ ಸಮಸ್ಯೆ ಇದೆ ಅಂದರೂ ಕೂಡ ಕೊಡುತ್ತಿರಲಿಲ್ಲ. ಮತ್ತೆ ಯಾರಿಗಾದರೂ ಆರೋಗ್ಯ ಸಮಸ್ಯೆ ಇದ್ದಾಗ ಅವರ ಮನೆ ಜೀಪು ಏನಾದರೂ ತಂದರೆ ಒಂದಕ್ಕೆ ಎರಡು ಸೇರಿಸಿ ಸಾಲ ಬರೆಯುತ್ತಿದ್ದರು. ಅವರ ಮನೆ ಹತ್ತಿರ ಇರುವ ಜನರ ಭೂಮಿಯನ್ನು ಇವರೇ ಒಳಗೆ ಹಾಕಿಕೊಳ್ಳುತ್ತಾರೆ. (ಈಗಲೂ ಹಾಕಿಕೊಳ್ಳುತ್ತಿದ್ದಾರೆ) ಅದರಲ್ಲಿ ಕೆಲವರಿಗೆ ಭೂಮಿ ಇರುವುದು ಹೆಸರಿಗೆ ಮಾತ್ರ. ಅದೂ ಒಂದು ವರ್ಷವಿಡೀ ಊಟಕ್ಕೆ ಸಾಕಾಗುವುದಿಲ್ಲ. ಅದರಲ್ಲಿ ಕೆಲವೇ ಕೆಲವು ಮನೆಗಳಲ್ಲಿ ಕಷ್ಟದಲ್ಲಿ ಒಂದು ವರ್ಷ ಕಳೆಯುತ್ತಾರೆ.

ಹೀಗೆ ಇರುವುದರಿಂದ ಕೆಲವರು ಅಡಿಕೆ ಫಸಲನ್ನು ಮಾಡಲಿಕ್ಕೆ ಹೋಗುತ್ತಾರೆ. ಊಟಕ್ಕೆ ಸಾಕಾದರೂ ಬೇರೆಯ ವಸ್ತುಗಳನ್ನು ಕೊಳ್ಳುವುದಕ್ಕಾಗಿ ಮತ್ತು ಮನೆಯಲ್ಲಿ ಮದುವೆ ಏನಾದರೂ ಇದ್ದರೆ ಮೊದಲು ಮಾಡಿದ ಹಣ ಸ್ವಲ್ಪ ಉಳಿದರೆ ಅದಕ್ಕೆ ಇನ್ನೂ ಸ್ವಲ್ಪ ಸೇರಿಸಿ ತರುತ್ತಾರೆ. ಇಲ್ಲವಾದರೆ ಮನೆಗೆ ಹೆಂಚು ಬಾಗಿಲುಗಳನ್ನು ತರುತ್ತಾರೆ. ನಮಗೆ ಅಷ್ಟು ಉಪಕಾರ ಮಾಡಿ ಎಂದು ಭೂಮಾಲೀಕನಿಗೆ ಹೇಳಿ ತರುತ್ತಾರೆ. ಮುಂದಿನ ವರ್ಷ ಕೂಡ ಇಲ್ಲಿಗೆ ಬರುತ್ತೇನೆ ಎಂದು ಹೇಳಿ ತರುತ್ತಾರೆ. ಅಷ್ಟೆಲ್ಲ ಹೇಳಿದ ಮೇಲೆ ಅವರು ಬಡ್ಡಿ ಹಾಕಿಕೊಂಡು ಕೊಡುತ್ತಿದ್ದರು. ಜನರು ಒಂದು ವೇಳೆ ಆ ವರ್ಷ ಹೋಗಲಿಕ್ಕೆ ಆಗಿಲ್ಲ ಅಂದರೆ ಅವನು ಮನೆಗೆ ಬಂದು ಕರೆದುಕೊಂಡು ಹೋಗುತ್ತಿದ್ದ. ಇಲ್ಲ ಅಂದರೆ ಹಣ ಕೊಡಬೇಕಿತ್ತು. ಅದನ್ನ ಕೊಡಲಿಕ್ಕೆ ಆಗಿಲ್ಲ ಅಂದರೆ ಬೇರೆ ಜನ ಮಾಡಿಕೊಡಬೇಕು. ಅವರು ಎಷ್ಟು ಹಣ ತಗೊಂಡಿದ್ರೊ ಅಷ್ಟನ್ನು ಕೂಡ ಅವರಿಗೆ ಕೊಡಬೇಕಿತ್ತು. ನೀನು ಕೊಟ್ಟಿಲ್ಲಿ ಅಂದರೆ ನಿನ್ನ ಮೇಲೆ ಕಂಪ್ಲೆಂಟ್ ಕೊಡುತ್ತೇನೆ. ನೋಡು ನಾನು ಹೇಳಿದಷ್ಟು ಮಾಡಿಲ್ಲ ಅಂದರೆ ನಿನ್ನ ಏನು ಮಾಡಬೇಕು ಅಂತ ನನಗೆ ಗೊತ್ತಿದೆ ಅಂತ ಹೆದರಿಸುತ್ತಿದ್ದರು.

ಅವರು ಹೇಳಿದ ಸಮಯಕ್ಕೆ ಕೆಲಸಕ್ಕೆ ಹೋಗಿಲ್ಲ ಅಂದರೆ ಅವರಿಗೆ ಚಾಟಿಯಿಂದ ಹೊಡೆಯುವುದು ಮತ್ತು ನೀನು ಬರುವುದು ಲೇಟ್ ಆಯಿತು, ಮನೆಗೆ ಹೋಗು ಅನ್ನುವುದು. ಮನೆಗೆ ಕರೆಯದೆ ಗೇಟಿನಿಂದ ಹೊರಗಡೆ ನಿಲ್ಲಿಸುವುದು ಮಾಡುತ್ತಿದ್ದರು. ಇಲ್ಲ ಅಂದರೆ ಕೂಲಿ ಕಡಿಮೆ ಮಾಡುವುದು. ಅಷ್ಟಲ್ಲದೆ ಲೇಟಾಗಿ ಕೆಲಸ ಬಿಡುವುದು. ಮಧ್ಯಾಹ್ನ ಊಟ ಹಾಕದೆ ಇರುವುದು, ಇದನ್ನೆಲ್ಲ ಮಾಡುತ್ತಿದ್ದರು. ಮತ್ತೆ ಅವರು ಹೇಳಿದ ಮಾತಿಗೆ ಅಲ್ಲ ಅಂದರೆ ಅವರನ್ನು ಹೊಡೆಯುವುದು, ಬಡಿದು ಸಾಯಿಸಿ ಮರಕ್ಕೆ ನೇಣಿನಿಂದ ನೇತು ಹಾಕುವುದು ಮಾಡುತ್ತಿದ್ದರು. ಅವರು ಇಷ್ಟೆಲ್ಲ ಮಾಡಿದಾಗಲೂ ಕೂಡ ಜನ ಅವರ ಮನೆಗೆ ಕೆಲಸಕ್ಕೆ ಹೋಗುತ್ತಾರೆ. ಅವರಿಗೆ ಏನೂ ತಿರುಗಿ ಮಾತನಾಡದೆ ಪುಕ್ಕಟ್ಟೆ ಕೆಲಸ ಮಾಡಿಕೊಡುತ್ತಾರೆ.

ಆದಿವಾಸಿಗಳಿಗೆ ಇರುವ ಭೂಮಿ ನೋಡುವುದಾದರೆ ಒಂದು ಮನೆಯಲ್ಲಿ ನಾಲ್ಕು ಜನ ಮಕ್ಕಳಿದ್ದಾರೆ. ಅಂದರೆ ಅವರ ಮನೆಯಲ್ಲಿ ನಾಲ್ಕು ಎಕರೆ ಭೂಮಿ ಇದೆ. ಅಂದರೆ ಅಲ್ಲಿ ನಾಲ್ಕು ಜನ ಮಕ್ಕಳಿಗೆ ಹಂಚುವಾಗ ಅಲ್ಲಿ ಒಬ್ಬರಿಗೆ ಭೂಮಿ ಎಷ್ಟು ಅಂದರೆ ಒಂದೊಂದು ಎಕರೆ ಮಾತ್ರ ಬರುತ್ತದೆ. ಅಷ್ಟೇ ಅಷ್ಟು ಭೂಮಿ ಇಟ್ಟುಕೊಂಡು ಬದುಕಲಿಕ್ಕೆ ಸಾಧ್ಯವಿಲ್ಲ. ಅಲ್ಲಿ ಬೇರೆ ಭೂಮಿ ಮಾಡಲಿಕ್ಕೆ ಹೋದರೆ ಈ ಸರ್ಕಾರ ಅರಣ್ಯ ಇಲಾಖೆಗಳು ಇವೆಲ್ಲ ಬಿಡುತ್ತಿಲ್ಲ. ಇದೆಲ್ಲ ಒತ್ತುವರಿ ಎಂದು ಹೇಳಿಕೊಂಡು ಅದನ್ನು ಮಾಡಲಿಕ್ಕೆ ಬಿಡುತ್ತಿಲ್ಲ. ಇಲ್ಲಿ ಜನರಿಗೆ ಭೂಮಿಯ ಸಮಸ್ಯೆ ತೀವ್ರವಾಗಿದೆ. ಇದರಿಂದ ಜನ ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದಾರೆ.

ಅದೇ ವೇಳೆಯಲ್ಲಿ ಆದಿವಾಸಿಗಳಿಗೆ ಇರುವ ಭೂಮಿ ನೋಡುವುದಾದರೆ ಒಂದು ಮನೆಯಲ್ಲಿ ನಾಲ್ಕು ಜನ ಮಕ್ಕಳಿದ್ದಾರೆ. ಅಂದರೆ ಅವರ ಮನೆಯಲ್ಲಿ ನಾಲ್ಕು ಎಕರೆ ಭೂಮಿ ಇದೆ. ಅಂದರೆ ಅಲ್ಲಿ ನಾಲ್ಕು ಜನ ಮಕ್ಕಳಿಗೆ ಹಂಚುವಾಗ ಅಲ್ಲಿ ಒಬ್ಬರಿಗೆ ಭೂಮಿ ಎಷ್ಟು ಅಂದರೆ ಒಂದೊಂದು ಎಕರೆ ಮಾತ್ರ ಬರುತ್ತದೆ. ಅಷ್ಟೇ ಅಷ್ಟು ಭೂಮಿ ಇಟ್ಟುಕೊಂಡು ಬದುಕಲಿಕ್ಕೆ ಸಾಧ್ಯವಿಲ್ಲ. ಅಲ್ಲಿ ಬೇರೆ ಭೂಮಿ ಮಾಡಲಿಕ್ಕೆ ಹೋದರೆ ಈ ಸರ್ಕಾರ ಅರಣ್ಯ ಇಲಾಖೆಗಳು ಇವೆಲ್ಲ ಬಿಡುತ್ತಿಲ್ಲ. ಇದೆಲ್ಲ ಒತ್ತುವರಿ ಎಂದು ಹೇಳಿಕೊಂಡು ಅದನ್ನು ಮಾಡಲಿಕ್ಕೆ ಬಿಡುತ್ತಿಲ್ಲ. ಇಲ್ಲಿ ಜನರಿಗೆ ಭೂಮಿಯ ಸಮಸ್ಯೆ ತೀವ್ರವಾಗಿದೆ. ಇದರಿಂದ ಜನ ಸಂಕಷ್ಟದಲ್ಲಿ ಸಿಲುಕಿಕೊಂಡಿದ್ದಾರೆ.

ಇನ್ನೊಂದು ಕಡೆ ಭೂಮಾಲೀಕರು ನೂರಾರು ಸಾವಿರಾರು ಎಕರೆ ಭೂಮಿ ಇಟ್ಟುಕೊಂಡು ಹಲವಾರು ಎಕರೆ ಭೂಮಿಯನ್ನು ಹಡ್ಲೂ ಬಿಟ್ಟಿದ್ದಾರೆ. ಒಂದು ಕಡೆ ಬಡವರಿಗೆ ಭೂಮಿ ಇಲ್ಲದೆ ಕಡುಬಡತನದಲ್ಲಿ ಜೀವನ ನಡೆಸುತ್ತಿದ್ದರೆ ಭೂಮಾಲೀಕರ ೧೦-೫೦ ಎಕರೆವರೆಗೆ ಭೂಮಿಯು ವೇಸ್ಟ್ ಆಗಿ ಹೋಗುತ್ತಿದೆ. ಅದನ್ನು ಬಡವರಿಗೂ ಕೊಡದೆ ಶ್ರಮದ ಲೂಟಿಯನ್ನು ಮಾಡಲಾಗುತ್ತಿದೆ. ಇದೆಲ್ಲ ಭೂಮಾಲೀಕರು ನಡೆಸುತ್ತಿರುವ ಶೋಷಣೆ. ಇದನ್ನೆಲ್ಲ ಕೊನೆಗೊಳಿಸಬೇಕೆಂದರೆ ಜನರ ಸಂಘಟಿತ ಶಕ್ತಿಯಿಂದ ಮಾತ್ರ ಸಾಧ್ಯ. ಅವರು ತಮ್ಮ ಅಧಿಕಾರವನ್ನು ಚಲಾಯಿಸಬೇಕೆಂದರೆ ಹೋರಾಡುವುದೊಂದೆ ದಾರಿ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, ' ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೮೦೪೮೩೦೬

ಎಚ್ಚೆನ್ : ನೈತಿಕ ಪ್ರೇರಣೆಯ ಸೆಲೆ



ಡಾ|| ಎಚ್ಚೆನ್ ಅವರನ್ನು ಶಿಕ್ಷಣತಜ್ಞ ಮತ್ತು ವಿಚಾರವಾದಿ ಎಂದು ಸಾಮಾನ್ಯವಾಗಿ ಗುರುತಿಸಲಾಗುತ್ತದೆ. ಈ ಕಾರಣದಿಂದಾಗಿ ಅವರು ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಮಾನ್ಯತೆಯನ್ನು ಪಡೆದವರಾಗಿದ್ದರು. ಶಿಕ್ಷಣ ಮತ್ತು ವೈಚಾರಿಕತೆಯ ಡಾ|| ಎಚ್ಚೆನ್ ಅವರು ತಮ್ಮ ಬದುಕಿನ ಕ್ರಿಯಾಶೀಲ ಭಾಗವನ್ನು ಮುಡಿಪಾಗಿಟ್ಟು ದುಡಿದರು ಎಂದು ಹೇಳಬಹುದು. ಭಾರತೀಯ ಸಮಾಜವು ಮೂಢನಂಬಿಕೆಗಳ ಸಮಾಜವಾಗಿದ್ದುದರಿಂದ ವೈಚಾರಿಕ ನೆಲೆಗಟ್ಟಿನ ಮೇಲೆ ಅದನ್ನು ಪುನರ್ರಚಿಸುವ ಆಶಯವನ್ನು ಅವರು ಹೊಂದಿದ್ದರು. ವೈದಿಕ ನೆಲೆಗಟ್ಟಿನಿಂದ ವೈಚಾರಿಕ ನೆಲೆಗಟ್ಟಿಗೆ ಸಮಾಜವು ರೂಪಾಂತರ ಗೊಳ್ಳಬೇಕಾದರೆ ಪುರೋಹಿತಶಾಹಿ ಗುಣಲಕ್ಷಣಗಳಿಂದ ಅದನ್ನು ಮುಕ್ತಗೊಳಿಸಬೇಕೆಂದು ಅವರ ವಿಚಾರವಾಗಿತ್ತು. ಶಿಕ್ಷಣ ಹಾಗೂ ವೈಚಾರಿಕತೆಗೆ ಸಂಬಂಧಿಸಿದಂತೆ ಡಾ|| ಎಚ್ಚೆನ್ ಅವರು ಸ್ವಾಮಿ ವಿವೇಕಾನಂದ ಹಾಗೂ ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದ ಕಾರಣ ಸುಧಾರಣಾವಾದಿ ಮಾರ್ಗವನ್ನು ಅಳವಡಿಸಿಕೊಂಡು ಈ ಕ್ಷೇತ್ರಗಳಲ್ಲಿ ಕಾರ್ಯಪ್ರವೃತ್ತರಾದರು.

ಈ ಎರಡು ವಿಷಯಗಳಿಗೆ ತಮ್ಮ ಆಲೋಚನಾ ಕ್ರಮ ಮತ್ತು ಕಾರ್ಯಚಟುವಟಿಕೆಯನ್ನು ಎಚ್ಚೆನ್ ಬಹುಪಾಲು ಸೀಮಿತಗೊಳಿಸಿ ಕೊಂಡವರು. ಸಮಾಜದ ಇತರ ಅನಿಷ್ಟಗಳನ್ನು ಕುರಿತು ಅವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೂ, ಆ ಅಭಿಪ್ರಾಯಗಳಲ್ಲಿ ಅವರ ಕಾಳಜಿಯು ವ್ಯಕ್ತವಾಗುತ್ತಿದ್ದರೂ ಅವು ಎಂದೂ ಆದ್ಯತೆಯ ಅರ್ಥದಲ್ಲಿ ಎಚ್ಚೆನ್ ಅವರ ಆಸಕ್ತಿಯನ್ನು ಕೆರಳಿಸಿಲ್ಲ ಎನ್ನುವ ಅಂಶವು ಮೇಲ್ನೋಟಕ್ಕೆ ಕೂಡ ಕಾಣುವಂತಹದ್ದು. ಶಿಕ್ಷಣವು ಮಾನವೀಕರಣಗೊಳ್ಳಬೇಕು ಎಂಬುದು ಅವರ ಆದ್ಯತೆಯ ಆಶಯವಾಗಿತ್ತು. ಅವರ ಬಾಲ್ಯದ ದಿನಗಳ ಅನುಭವಗಳು ಗಾಂಧೀಜಿಯವರ ಉದಾರವಾದಿ ಚಿಂತನೆಗಳು ಮತ್ತು ಕಾರ್ಯಕ್ರಮಗಳಿಂದ ವಿಶಿಷ್ಟವೆನಿಸುವ ಅರ್ಥವನ್ನು ಪಡೆದುಕೊಂಡವು. ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಅವರು ಗಮನಾರ್ಹವಾದ ಸುಧಾರಣೆಗಳನ್ನು ತಂದರು. ಮೌಲ್ಯ ಶಿಕ್ಷಣದ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಸಾಮಾಜಿಕ ಹೊಣೆಗಾರಿಕೆ ಮತ್ತು ನೈತಿಕ ಪ್ರಜ್ಞೆಯನ್ನು ಬೆಳೆಸುವ ಕೆಲಸ ಮಾಡಿದರು. ಶಿಕ್ಷಣ ಕ್ಷೇತ್ರವು ನೈತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಬಿತ್ತುವ ಉಪಯುಕ್ತ ಉದಾರವಾದಿ ವ್ಯವಸ್ಥೆಯಾಗಬೇಕೆಂದು ಅವರ ಆಶಯವಾಗಿತ್ತು.

ಈ ಪ್ರಮುಖ ಅಂಶಗಳನ್ನು ಬೆಸೆಯುವ ಪ್ರಯತ್ನವನ್ನೂ ಅವರು ಮಾಡಿದರು. ಬಸವನಗುಡಿ ನ್ಯಾಷನಲ್ ಕಾಲೇಜು ವಿಚಾರವಾದಿ ಚಟುವಟಿಕೆಗಳ ಕೇಂದ್ರವಾಯಿತು. ವೈಜ್ಞಾನಿಕ ಮನೋಭಾವ, ವೈಚಾರಿಕತೆಗಳ ಬಗ್ಗೆ ಶಿಕ್ಷಕರು, ವಿದ್ಯಾರ್ಥಿಗಳಷ್ಟೇ ಅಲ್ಲದೆ ಸಾರ್ವಜನಿಕರಲ್ಲಿ ಕೂಡ ಆಸಕ್ತಿ ಮೂಡಿಸುವ ವಾತಾವರಣ ಸೃಷ್ಟಿಯಾಯಿತು. ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆಗಳ ಬಗ್ಗೆ ಗಂಭೀರ ಚಿಂತನೆಯನ್ನು ಮೂಡಿಸುವ ಕೃತಿಗಳು ಕೂಡ ವ್ಯವಸ್ಥಿತವಾಗಿ ಪ್ರಕಟಗೊಳ್ಳಲು ಎಚ್ಚೆನ್ ಶ್ರಮಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಕಾಲೇಜು ವಿದ್ಯಾರ್ಥಿಗಳಿಗೆ ವಿಚಾರವಾದಿ ನೆಲೆಯ ಪುಸ್ತಕಗಳನ್ನು ಪಠ್ಯಕ್ರಮದ ಅಂಗವಾಗಿ ರೂಪಿಸಲು ನೆರವಾಗಿದ್ದಾರೆ. ಹಾಗೆಯೇ ಈ ಎರಡೂ ಸಂಸ್ಥೆಗಳ ಜೊತೆಗೆ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಮೂಲಕವೂ ಈ ವಿಚಾರಗಳು ಪ್ರಚಾರವಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ. ಮೂಢನಂಬಿಕೆಗಳ ಹಿಡಿತದಲ್ಲಿರುವವರೆಗೆ ಭಾರತೀಯ ಸಮಾಜವು ಪ್ರಗತಿ ಸಾಧಿಸಲಾರದು ಎಂಬುದು ಅವರ ನಿಲುವಾಗಿದ್ದ ಕಾರಣ ಎಚ್ಚೆನ್ ವಿದ್ಯಾರ್ಥಿಗಳು ಇವುಗಳ ಬಗ್ಗೆ ಚಿಂತಿಸಿ ಸಮಾಜಮುಖಿಯಾಗಿ ಕಾರ್ಯಪ್ರವೃತ್ತರಾಗಬೇಕೆನ್ನುವ ಆಶಯವನ್ನಿಟ್ಟುಕೊಂಡಿದ್ದರು. ಇಂತಹ ಅರಿವು ಮೂಡಿಸುವ ಕಾರ್ಯಕ್ರಮಗಳ ಮೂಲಕ ಸಮಾಜವನ್ನು ತಿದ್ದುವ ಸುಧಾರಣಾವಾದಿ ಭೂಮಿಕೆಯಲ್ಲಿ ಎಚ್ಚೆನ್ ಕೆಲಸ ಮಾಡಿದರು.

ಸಾಯಿಬಾಬಾ ಅವರ ಪವಾಡಗಳು ರಹಸ್ಯ ಬಯಲು ಮಾಡುವ ಸವಾಲುಗಳನ್ನು ಸ್ವೀಕರಿಸಿ ಆ ಬಗ್ಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ತನಿಖಾ ಸಮಿತಿಯನ್ನು ರಚಿಸಿ ಕಾರ್ಯಪ್ರವೃತ್ತರಾದದ್ದು ಇದೇ ಭೂಮಿಕೆಯ ಮುಂದುವರೆದ ಭಾಗವಾಗಿತ್ತು. ಡಾ|| ಎಚ್ಚೆನ್ ಈ ಅಂಶವನ್ನು ಕುರಿತಂತೆ ಅದು ತಮ್ಮ ಮಹತ್ವದ ಸಾಧನೆಗಳಲ್ಲೊಂದು ಎಂಬ ಅಭಿಮತಕ್ಕೆ ತಲುಪಿದ್ದರು. ಡಾ|| ಭಗವಂತಂನಂತಹವರು ಸಾಯಿಬಾಬಾ ಸನ್ನಿಯಿಂದ ಹೊರಬಂದದ್ದು ಯಶೋಗಾಥೆಯ ಸಂಕೇತವೆಂದು ಅವರು ಬಗೆದಿದ್ದರು. ಈ ಪ್ರಕರಣದ ಯಶಸ್ಸು ಜನತೆಯ ಮೇಲೆ ಅಚ್ಚಳಿಯದ ಪ್ರಭಾವವನ್ನುಂಟು ಮಾಡುತ್ತದೆ ಎಂಬ ನಿರೀಕ್ಷೆ ಅವರದಾಗಿತ್ತು.

ಈ ಎರಡು ಪರಸ್ಪರ ಪೂರಕ ಕ್ಷೇತ್ರಗಳನ್ನು ಬಿಟ್ಟಂತೆ ಡಾ|| ಎಚ್ಚೆನ್ ಇತರ ಸಮಸ್ಯೆಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತಳೆಯಲಿಲ್ಲ ಎಂಬುದು ಅವರು ಆಯ್ಕೆ ಮಾಡಿಕೊಂಡ ನೆಲೆಯ ಮತ್ತು ಮಾರ್ಗದ ಪರಿಮಿತಿಯಾದರೆ, ಅವರ ವಿಚಾರಗಳಲ್ಲಿ ಪ್ರತಿಕ್ರಿಯೆಗಳಲ್ಲಿ ಹಾಗೂ ಸವಾಲುಗಳನ್ನು ನಿಭಾಯಿಸುವಲ್ಲಿ ವೈರುಧ್ಯಗಳು ತುಂಬಿ ತುಳುಕುತ್ತಿದ್ದವು. ತಮ್ಮ ವಿಚಾರವಾದಕ್ಕೆ ಪುಷ್ಟಿಯನ್ನು ನೀಡುವ ಹೇಳಿಕೆಯು ಭಗವದ್ಗೀತೆಯಲ್ಲೇ ಇದೆ ಎಂದು ತೋರಿಸುವ ಸಲುವಾಗಿ ಅವರು ಅಲ್ಲಿನ 'ತದ್ವಿದ್ಧಿ ಪರಿಪ್ರಶ್ನೇನ' ಎಂಬ ಶ್ಲೋಕದ ಭಾಗವನ್ನು ಕೋಟ್ ಮಾಡುತ್ತಿದ್ದರು. ವಿಷಾದದ ಸಂಗತಿಯೆಂದರೆ ಭಗವದ್ಗೀತೆಯು ವರ್ಣಾಶ್ರಮ ಧರ್ಮಕ್ಕೆ ಸಾಂಸ್ಥಿಕವಾದ ಧಾರ್ಮಿಕ ಸಮ್ಮತಿಯನ್ನು ಕಲ್ಪಿಸಿದ ಗ್ರಂಥ; ಅದರಲ್ಲಿನ 'ಮಮೇಕಂ ಶರಣಂ ನಾಸ್ತಿ' ಎನ್ನುವ ಮಾತುಗಳು ವಿಚಾರವಾದೀ ನೆಲೆಯನ್ನು ಅಲ್ಲಗಳೆಯುವಂತಹವು.

ಅಗ್ಗಳಿಕೆ

ಆದರ್ಶಗಳನ್ನು ಬೆನ್ನಿಗೆ ಕಟ್ಟಿಕೊಂಡು ಬೆಳೆದ ಎಚ್ಚೆನ್ ಅವರ ನಿಲುವು ಪ್ರಶ್ನಾತೀತವಲ್ಲ. ಜೊತೆಗೆ ಜಾತಿ ಮತ್ತು ವರ್ಗದ ಪೂರ್ವಾಗ್ರಹ ಗಳನ್ನು ಬಿಟ್ಟುಕೊಡದ ಮೇಲ್ಜಾತಿ ಮಧ್ಯಮವರ್ಗದ ಬುದ್ಧಿಜೀವಿಗಳನ್ನು ಕಟ್ಟಿಕೊಂಡು ಸಮಾಜದಲ್ಲಿ ಬದಲಾವಣೆಯನ್ನು ತರುತ್ತೇನೆಂದು ಜೀವ ತೇಯ್ದದ್ದು ಸಾಮಾಜಿಕವಾಗಿ ಅವರ ಬದುಕಿನ ದುರಂತವಾಗಿತ್ತು. ಅರಾಜಕತಾವಾದಿಗಳ ನೆಲೆಯಲ್ಲಿ ನಿಂತು ಅವರನ್ನು ಕುಹಕದ ಮಾತುಗಳಿಂದ ನಿಂದಿಸುವುದಕ್ಕಿಂತ ಸಹಾನುಭೂತಿಯ ನೆಲೆಯಲ್ಲಿ ನಿಂತು ನೋಡಿದರೆ ಎಲ್ಲೋ ಒಂದು ಕಡೆ ಅವರು ನಮಗೆಲ್ಲ ನೈತಿಕವಾದ ಪ್ರೇರಣೆಯಾಗಿದ್ದರು ಎನ್ನಿಸುತ್ತದೆ.

○ ಬಿ. ಗಂಗಾಧರ ಮೂರ್ತಿ

ಹಿಂದೂ ಸಮಾಜದ ಅಸಮ್ಮಾನತೆಗೆ ಅತಿಮಾನುಷ ಮೂಲದ ಸಮರ್ಥನೆ ನೀಡುತ್ತದೆ ಎಂಬ ಕಾರಣಕ್ಕಾಗಿಯೇ ಈ ಗ್ರಂಥವನ್ನು ಧಿಕ್ಕರಿಸಿದ್ದವರಿದ್ದರು. ಸಾಂಕೇತಿಕವಾಗಿ ಅದನ್ನು ಸಾರ್ವಜನಿಕವಾಗಿ ಸುಟ್ಟುಹಾಕಿದ ಹೋರಾಟಗಾರರಿದ್ದರು ಎಂಬುದು ಡಾ॥ ಎಚ್ಚೆನ್ ಅವರಿಗೆ ತಿಳಿದಿರಲಿಲ್ಲ ಎನ್ನುವಂತಿಲ್ಲ. ಧರ್ಮವೆನ್ನುವುದು ನಿಂತ ನೀರು... ಅದಕ್ಕಿರುವುದು ಹಿನ್ನೋಟವೇ ಹೊರತು ಮುನ್ನೋಟವಲ್ಲ; ನಿಜವಾದ ಧರ್ಮವೆಂದರೆ ಮಾನವ ಧರ್ಮವೇ ಎಂದು ಹೇಳುತ್ತಾ ಒಂದು ಧರ್ಮಕ್ಕೆ ಸೇರಿದ ಪುನರ್ಜನ್ಮದಲ್ಲಿ ತಮಗೆ ನಂಬಿಕೆ ಇದೆ ಎಂದು ಘೋಷಿಸುತ್ತಿದ್ದರು.

ತಮ್ಮ ಸಂಸ್ಥೆಯ ಶಾಲಾ ಕಾಲೇಜುಗಳಲ್ಲಿ 'ಯಂ ಬ್ರಹ್ಮಾವರುಣೇಂದ್ರ ರುದ್ರ ಮರುತಃ' ಎಂಬ ಸಂಸ್ಕೃತ ಭಾಷೆಯ ಪ್ರಾರ್ಥನೆಯು ಧರ್ಮನಿರಪೇಕ್ಷ ಸಂದರ್ಭದಲ್ಲಿ ಅಸಂಬದ್ಧ ಎಂದು ಗೊತ್ತಿದ್ದರೂ ಅದನ್ನು ಬದಲಾಯಿಸುವ ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಇಂತಹ ಪ್ರಾರ್ಥನೆಗಳಿಂದ ಶೈಕ್ಷಣಿಕ ಮಟ್ಟದಲ್ಲಿ ಗುಣಾತ್ಮಕ ಬದಲಾವಣೆಯಾಗಲಾರದು ಎಂಬುದೂ ಅವರಿಗೆ ಗೊತ್ತಿತ್ತು. ಆದರೂ ಅದು ಇಂದಿಗೂ ನ್ಯಾಷನಲ್ ಶಿಕ್ಷಣ ಸಂಸ್ಥೆಯಲ್ಲಿ ಮುಂದುವರೆಯುತ್ತಿದೆ. ಸಂಸ್ಥೆಯು ಮಾಡುವ 'ಮಂಗಳ' ಕಾರ್ಯಗಳಿಗೆ, ಪೂಜಾ ಸಮಾರಂಭಗಳಿಗೆ ಬ್ರಾಹ್ಮಣ ಅರ್ಚಕರೇ ಇರುತ್ತಾರೆ. ಅರ್ಚಕರಿಗೆ 'ಅರ್ಥ'ವತ್ತಾಗಿ ಮಂಗಳಾರತಿಯನ್ನು ಎಚ್ಚೆನ್ ಸ್ವೀಕರಿಸುತ್ತಲೇ ಬಂದವರು. ಇಂತಹ ಪುರೋಹಿತಶಾಹಿ ವಾತಾವರಣ ಸಂಸ್ಥೆಯೊಳಗೆ ಬದಲಾಗದೆ ಉಳಿದುಬಂದುವು. ಸಂಸ್ಥೆಯ ಅಧ್ಯಕ್ಷನಾಗಿ ಅಸಹಾಯಕ ಸ್ಥಿತಿ ನನ್ನದು ಎನ್ನುತ್ತಿದ್ದರು. ಇಂತಹ ವೈರುಧ್ಯಗಳಿಂದಾಗಿ ಸಂಸ್ಥೆಯೊಳಗೂ ಡಾ॥ ಎಚ್ಚೆನ್‌ಗೆ ತಾತ್ವಿಕ ನೆಲೆಯಲ್ಲಿ ವಿರೋಧಗಳು ಬೆಳೆದುನಿಂತಿದ್ದವು.

ನಂಬಿಕೆ ಮತ್ತು ವೈಚಾರಿಕತೆಗಳ ಸವಾಲು ಎದುರಾದಾಗ ಸಹಜ ಹಾಸ್ಯ ಪ್ರಜ್ಞೆಯ ಡಾ॥ ಎಚ್ಚೆನ್ ಹಲವು ಬಾರಿ ಜೋಕ್‌ಗಳ ಮೂಲಕ ತೇಲಿಸಿಬಿಡುತ್ತಿದ್ದರು. ಅವರ ಚಿಂತನಾಕ್ರಮದ ಒಂದು ವಿನ್ಯಾಸ ಇದು: ಅಸ್ವಸ್ಥವಾಗಿ ಹಾಸಿಗೆ ಹಿಡಿದ ಅವರ ವಿದ್ಯಾರ್ಥಿ ಹೆರಂಜಾಲ್ - ದೇವರಲ್ಲಿ ನಿಮಗೆ ನಂಬಿಕೆ ಇದೆಯೇ ? ಎಂದು ಕೇಳುತ್ತಾನೆ. ಇದೆ ಎನ್ನುತ್ತಾರೆ ಎಚ್ಚೆನ್. ಅದು 'ಹೈಟೆಕ್ ಮೂಢನಂಬಿಕೆ ಇರಬಹುದು' ಎಂದು ಎಲ್ಲರನ್ನೂ ನಗಿಸುವ ಉತ್ತರ ನೀಡುತ್ತಾರೆ. ಸಾವಿನ ದವಡೆಯಲ್ಲಿದ್ದ ಹೆರಂಜಾಲ್‌ನನ್ನು ಉಳಿಸಿಕೊಳ್ಳುವ ಪ್ರಯತ್ನವಾಗಿ ತಾಯಿ ದೇವರಿಗೆ ಪೂಜೆ ಮಾಡಿಸುತ್ತಾಳೆ. ವಿಭೂತಿಯನ್ನು ತಂದು ಹುಡುಗ ಹೆರಂಜಾಲ್ ಹಣೆಗೆ ಹಚ್ಚುತ್ತಾಳೆ. ಹೆರಂಜಾಲ್ ಅದನ್ನು ಅಳಿಸಿ ಹಾಕುತ್ತಾನೆ. ಸಾವಿನ ಸಂದರ್ಭದಲ್ಲಿ ವೈಚಾರಿಕತೆಯನ್ನು ಬಿಟ್ಟುಕೊಡದ ವಿದ್ಯಾರ್ಥಿ. ಆದರೆ ಡಾ॥ ಎಚ್ಚೆನ್ ಅವರಿಗೆ ಅವನು ಕಠೋರ ವಿಚಾರವಾದಿಯಾಗಿ ಕಾಣುತ್ತಾನೆ.

ಎಚ್ಚೆನ್ ಈ ಗುಂಪಿಗೆ ಸೇರುವ ವಿಚಾರವಾದಿಯಲ್ಲ. ಅವರೊಬ್ಬ ಸೌಮ್ಯರೂಪದ ವಿಚಾರವಾದಿ. ಈ ವಿವರಗಳನ್ನು ವಸ್ತುನಿಷ್ಠವಾಗಿ ಪರಿಶೀಲಿಸಿದರೆ ಡಾ॥ ಎಚ್ಚೆನ್ ಅವರಲ್ಲಿ ಕಂಡುಬರುತ್ತಿದ್ದ ವೈರುಧ್ಯಗಳು ನಿರ್ದಿಷ್ಟರೂಪದ ಸಾಮಾಜಿಕ ಪರಿಣಾಮಗಳನ್ನು ಸೃಷ್ಟಿಸಿದ್ದುದು ಕಾಣುತ್ತದೆ. ಮೇಲ್ಜಾತಿ ಮಧ್ಯಮ- ವರ್ಗಕ್ಕೆ ಎಚ್ಚೆನ್ ಧಾರ್ಮಿಕ ಪರಿಭಾಷೆಯಲ್ಲಿ ಮಾತನಾಡುತ್ತಿದ್ದಂತೆ ಭಾಸವಾಗುತ್ತಿದ್ದರೆ, ಕೆಳ-ಮಧ್ಯಮ ಜಾತಿಗಳ ಮಧ್ಯಮ ವರ್ಗಕ್ಕೆ ಅದು ಬದಲಾವಣೆಯ ಪರಿಭಾಷೆಯಾಗಿ ಭಾಸವಾಗುತ್ತಿತ್ತು. ಹೀಗಾಗಿ ವಿಚಾರವಾದಿ ಎಚ್ಚೆನ್ ಎರಡೂ ವಿಭಾಗಗಳ ಮಧ್ಯಮವರ್ಗಕ್ಕೆ ಸ್ವೀಕಾರ ಯೋಗ್ಯವಾಗಬಲ್ಲ ಮಧ್ಯಮ ಮಾರ್ಗವನ್ನು ಅನುಸರಿಸಿದರು. ಇದು ಅವರು ಅಂತಃಸಾಕ್ಷಿಯಾಗಿ ಒಪ್ಪಿಕೊಂಡ ಸಿದ್ಧಾಂತದ ಪರಿಮಿತಿಯಾಗಿತ್ತು. ಇಂತಹ ಸಿದ್ಧಾಂತವು ಕೆಲವರಿಗೆ ನಿರುಪದ್ರವಿಯಾದರೆ ಇನ್ನು ಕೆಲವರಿಗೆ ಹಿಪಾಕ್ರಸಿಯಾಗಿ ಕಾಣತೊಡಗಿತು.

ಡಾ॥ ಎಚ್ಚೆನ್ ಅವರು ಸಾಮಾಜಿಕ ಚಳವಳಿಗಳಲ್ಲಿ ತೊಡಗಿಸಿಕೊಳ್ಳಲು ಹಿಂಜರಿಯುತ್ತಿದ್ದರು. ಕರ್ನಾಟಕದ ತಳಮಟ್ಟದ ಬದುಕನ್ನು ರೂಪಾಂತರಿಸುವಲ್ಲಿ ದಲಿತ ಚಳವಳಿ, ರೈತ ಚಳವಳಿ ಹಿಂದುಳಿದ ವರ್ಗಗಳ ಚಳವಳಿಗಳ್ಯಾವುದರೊಂದಿಗೂ ಸಂಘಟನಾತ್ಮಕವಾಗಿ ಅವರು ಗುರುತಿಸಿಕೊಳ್ಳಲಿಲ್ಲ. ಅಷ್ಟೇ ಏಕೆ ಉಗುರು ಬೆಚ್ಚಗಿನ ಅನುಭವಕ್ಕಿಂತ ಹೆಚ್ಚು ಆಳಕ್ಕಿಳಿಯುವ ಯಾವುದೇ ಕಾರ್ಯಕ್ರಮಗಳೊಂದಿಗೂ ಗುರುತಿಸಿಕೊಳ್ಳುತ್ತಿರಲಿಲ್ಲ. ದೇವಾಲಯ/ಮಠಗಳಲ್ಲಿ ದಲಿತ ಅರ್ಚಕರ ಸಮಸ್ಯೆಯನ್ನೇ ತೆಗೆದುಕೊಳ್ಳಿ. ಮಾನವ ಧರ್ಮಪೀಠದ ಸ್ವಾಮೀಜಿಯವರು ಗೂಳೂರು ಮಠದಲ್ಲಿ ದಲಿತ ಅರ್ಚಕರನ್ನು ನೇಮಿಸುವ ಸಲುವಾಗಿ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಲು ಒಂದು ಸಮಿತಿಯನ್ನು ರಚಿಸುವ ನಿರ್ಧಾರ ಮಾಡಿ ಡಾ॥ ಎಚ್ಚೆನ್ ಅವರು ಸದಸ್ಯರಾಗುವಂತೆ ಕೇಳಿದಾಗ ಎಚ್ಚೆನ್ ಒಪ್ಪಲಿಲ್ಲ. ಇಂತಹ ಕಾರ್ಯಕ್ರಮಗಳು ಅವರಿಗೆ ವೇಗಗಾಮಿ ಹಾಗೂ ತೀವ್ರಗಾಮಿಯಾಗಿ ಕಾಣುತ್ತಿದ್ದವು. 'ನನ್ನ ಹೆಸರನ್ನು ದಯವಿಟ್ಟು ತರಬೇಡಿ' ಎಂದು ಹೇಳಿ ನನ್ನನ್ನು ಸ್ವಾಮೀಜಿಯವರನ್ನು ಕಳುಹಿಸಿಕೊಟ್ಟರು.

ಸಾಮಾಜಿಕ ಚಳವಳಿಗಳ ಬಗ್ಗೆ ಎಚ್ಚೆನ್ ಅವರಿಗೆ ಸಹಾನುಭೂತಿ ಇತ್ತು. ಚಳವಳಿಗಳ ಹಲವು ಮುಖಂಡರೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದರು. ಜಾತಿ ವ್ಯವಸ್ಥೆ ಬಡತನ, ಅಸ್ಪೃಶ್ಯತೆ ಎಲ್ಲವುಗಳನ್ನು ತೊಲಗಿಸಬೇಕೆನ್ನುವ ಆಶಯವಿತ್ತು. ಆದರೆ ಅವರು ಇಂತಹ ಯಾವುದೇ ಸಮಸ್ಯೆಗಳನ್ನು activist ದೃಷ್ಟಿಯಿಂದ ಬಗೆಹರಿಸಲು ಸಿದ್ಧರಿರಲಿಲ್ಲ. ಪ್ರಗತಿಪರರು, ಚಳವಳಿಗಾರರು ಎಚ್ಚೆನ್ ಅವರಲ್ಲಿ - ಚಿಂತನೆ, ದೃಷ್ಟಿಕೋನ ಮತ್ತು ಕಾರ್ಯಕ್ರಮಗಳಲ್ಲಿ ಅಂತರ್ಗತವಾಗಿದ್ದ ಈ ಅಂಶದ ಬಗ್ಗೆ ಅಸಮಾಧಾನವನ್ನು ಕೂಡ ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಈ ನಿಲುವಿನವರಿಗೆ ಡಾ॥ ಎಚ್ಚೆನ್ ಅವರು ಸಮಾಜಕ್ಕೆ ಯಾವುದೇ ಗಣನೀಯ ಕೊಡುಗೆಯನ್ನು ನೀಡಿಲ್ಲ ಎಂಬ ಅಭಿಪ್ರಾಯವೂ ಇದೆ.

ಮೇಲ್ಜಾತಿ ಮಧ್ಯಮ ವರ್ಗಕ್ಕೆ ಎಚ್ಚೆನ್ ಧಾರ್ಮಿಕ ಪರಿಭಾಷೆಯಲ್ಲಿ ಮಾತನಾಡುತ್ತಿದ್ದಂತೆ ಭಾಸವಾಗುತ್ತಿದ್ದರೆ, ಕೆಳ-ಮಧ್ಯಮ ಜಾತಿಗಳ ಮಧ್ಯಮ ವರ್ಗಕ್ಕೆ ಅದು ಬದಲಾವಣೆಯ ಪರಿಭಾಷೆಯಾಗಿ ಭಾಸವಾಗುತ್ತಿತ್ತು. ಹೀಗಾಗಿ ವಿಚಾರವಾದಿ ಎಚ್ಚೆನ್ ಎರಡೂ ವಿಭಾಗಗಳ ಮಧ್ಯಮವರ್ಗಕ್ಕೆ ಸ್ವೀಕಾರ ಯೋಗ್ಯವಾಗಬಲ್ಲ ಮಧ್ಯಮ ಮಾರ್ಗವನ್ನು ಅನುಸರಿಸಿದರು.


ಗಾಂಧೀ ತಾತನೊಂದಿಗೆ ಬಾಲಕ ಎಚ್ಚೆನ್

ಎಚ್ಚೆನ್ ಅವರ ವೈಯಕ್ತಿಕ ಸಾಧನೆಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಉನ್ನತ ಸ್ಥಾನಗಳನ್ನು ಅವರು ಗಳಿಸಿದ್ದು ಪವಾಡವೇ ಸರಿ ಎಂಬಂತಹ ಮಾತುಗಳಿವೆ. ಅದು ಸತ್ಯವೂ ಹೌದು. ಸರಳತೆ, ಪ್ರಾಮಾಣಿಕತೆಯಿಂದ ಆದರ್ಶಮಯ ಬದುಕನ್ನು ಸಾಗಿಸಿದರು. ಹಣ ಸಂಪಾದಿಸಿ ಐಷಾರಾಮದಿಂದ ಜೀವನ ನಡೆಸಬಹುದಾದ ಸ್ಥಾನಗಳಲ್ಲಿದ್ದರೂ ಇವಾವಕ್ಕೂ ಅವರು ಬಲಿಯಾಗಲಿಲ್ಲ. ಶುದ್ಧ, ನಿಸ್ಪೃಹ, ನಿಸ್ವಾರ್ಥ ಬದುಕನ್ನು ಬದುಕಿದರು ಎಂಬ ಅಂಶವು ಎಲ್ಲಕ್ಕಿಂತ ಹೆಚ್ಚಿನ ಪ್ರಭೆಯನ್ನು ಅವರ ವ್ಯಕ್ತಿತ್ವಕ್ಕೆ ತಂದುಕೊಟ್ಟಿದೆ.

ಕೊನೆಯದಾಗಿ, ಪರ್ಸನಲ್ ಎನಿಸಬಹುದಾದರೂ ಒಂದು ವಿಷಯದ ಪ್ರಸ್ತಾಪದ ಅವಶ್ಯಕತೆಯು ನನಗೆ ಕಂಡು ಬರುತ್ತಿದೆ. ಡಾ॥ ಎಚ್ಚೆನ್ ಅವರಿಗೂ ನನಗೂ ಸುಮಾರು ಕಾಲುಶತಮಾನಕ್ಕೂ ಮೀರಿದ ಸಂಬಂಧವಿತ್ತು. ನಾನು ನ್ಯಾಷನಲ್ ಕಾಲೇಜಿಗೆ ಸೇರಲು ಎಚ್ಚೆನ್ ಕಾರಣರು. ಅವರಿಂದ ಹೀಗೆ ನಾನು ಉಪಕೃತನಾಗಿದ್ದೇನೆ, ಅವರಿಗೆ ಕೃತಜ್ಞನಾಗಿದ್ದೇನೆ. ಆದರೂ ನನ್ನ ಅವರ ನಡುವೆ ಹಲವಾರು ಭಿನ್ನಾಭಿಪ್ರಾಯಗಳು ಕಾಣಿಸಿಕೊಂಡಿವೆ. ಸುಮಾರು ಆರು ವರ್ಷಗಳ ಕಾಲ ನಾವು ಪರಸ್ಪರ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ನನ್ನ ಮೇಲೆ ಹಲ್ಲೆಯಾದ ಸಂದರ್ಭದಲ್ಲಿ ಡಾ॥ ಎಚ್ಚೆನ್ ನನ್ನ ಬೆಂಬಲಕ್ಕೆ ಬರಲಿಲ್ಲ. ಈಗ್ಗೆ ಮೂರು ವರ್ಷದ ಹಿಂದೆ ಒಂದು ಬೆಳಿಗ್ಗೆ ದೂರವಾಣಿ ಮೂಲಕ ನನ್ನನ್ನು ಬೆಂಗಳೂರಿಗೆ ಬರಲು ಹೇಳಿದರು. ಆರೋಗ್ಯ ಕುಸಿಯುತ್ತಿದ್ದ ದಿನಗಳು. 'ನನಗೂ ವಯಸ್ಸಾಯಿತು. ಇನ್ನು ಮೇಲೆ ನಾವು ವೈರಿಗಳಂತೆ ಇರೋದು ಬ್ಯಾಡಪ್ಪ. ನೀನು ತಪ್ಪು ಮಾಡಿದ್ದೀಯ. ನನ್ನಿಂದಲೂ ತಪ್ಪುಗಳಾಗಿವೆ. ಮರೆತು ಬಿಡೋಣ, ಫ್ರೆಂಡ್ಸ್ ಆಗಿ ಇರೋಣ, ಇನ್ನಷ್ಟು ದಿನ' ಅಂತೆಲ್ಲಾ ಮಾತಾಡಿದರು.

ನಾನು ಅವರಿಂದ ಈ ಮಾತುಗಳನ್ನು ನಿರೀಕ್ಷಿಸಿರಲಿಲ್ಲ. ಒಂದು ಕ್ಷಣ ಭಾವುಕ ಸನ್ನಿವೇಶ ಉಂಟಾದಂತಾಗಿತ್ತು. ನಂತರ ಹಲವು ಬಾರಿ ಅವರನ್ನು ಭೇಟಿಯಾಗಿ ಮಾತಾಡಿದ್ದೇನೆ. ನಿವೃತ್ತನಾದ ಮೇಲೆ ನಮ್ಮಿಂದ ದೂರಾಗಬೇಡಪ್ಪ. ಕಾಲೇಜಿನಲ್ಲಿ ನಾಲ್ಕು ಗಂಟೆಯಾಗಲೀ ಪಾಠ ಮಾಡು ಎನ್ನುತ್ತಿದ್ದರು. ನಮ್ಮ ನಡುವಿನ ವೈಯಕ್ತಿಕ ಸಂಬಂಧದ ಕಂದರ ಮುಚ್ಚಿತ್ತು. ಆದರೆ ಅವರ ಸಿದ್ಧಾಂತದ ಬಗೆಗಿನ ಭಿನ್ನಾಭಿಪ್ರಾಯ ಮಾತ್ರ ಮುಂದುವರೆಯುತ್ತಲೇ ಇತ್ತು. ಹಲವು ಆದರ್ಶಗಳನ್ನು ಬೆನ್ನಿಗೆ ಕಟ್ಟಿಕೊಂಡು ಹಲವು ದಶಕಗಳ ಕಾಲ ಬೆಳೆಸಿದ ನ್ಯಾಷನಲ್ ಶಿಕ್ಷಣ ಸಂಸ್ಥೆಯನ್ನು ಬ್ರಾಹ್ಮಣವಾದಿಗಳ ಮಡಿಲಿಗೆ ಹಾಕಿ ಹೊರಟು ಹೋದದ್ದು ಅವರ 'ಹೋರಾಟ'ದ ಅರ್ಥವಂತಿಕೆಯನ್ನು ಪ್ರಶ್ನಿಸುವ ರೀತಿಯದ್ದಾಗಿದೆ. ಜೊತೆಗೆ ಜಾತಿ ಮತ್ತು ವರ್ಗದ ಪೂರ್ವಾಗ್ರಹಗಳನ್ನು ಬಿಟ್ಟುಕೊಡಲು ಸಿದ್ಧರಿಲ್ಲದ ಮೇಲ್ಜಾತಿ ಮಧ್ಯಮವರ್ಗದ ಬುದ್ಧಿಜೀವಿಗಳನ್ನು ಕಟ್ಟಿಕೊಂಡು ಸಮಾಜದಲ್ಲಿ ಬದಲಾವಣೆಯನ್ನು ತರುತ್ತೇನೆಂದು ಜೀವ ತೇಯ್ದದ್ದು ಸಾಮಾಜಿಕವಾಗಿ ಅವರ ಬದುಕಿನ ದುರಂತವಾಗಿತ್ತು. ಅರಾಜಕತಾವಾದಿಗಳ ನೆಲೆಯಲ್ಲಿ ನಿಂತು ಅವರನ್ನು ಕುಹಕದ ಮಾತುಗಳಿಂದ ನಿಂದಿಸುವುದಕ್ಕಿಂತ ಸಹಾನುಭೂತಿಯ ನೆಲೆಯಲ್ಲಿ ನಿಂತು ನೋಡಿದರೆ ಎಲ್ಲೋ ಒಂದು ಕಡೆ ಅವರು ನಮಗೆಲ್ಲ ನೈತಿಕವಾದ ಪ್ರೇರಣೆಯಾಗಿದ್ದರು ಎನ್ನಿಸುತ್ತದೆ. □

ಮತ್ತೆ ಬಾ ಸುನಾಮಿ...

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಭೂಕಂಪದ ಅನಧಿಕೃತ ಪುತ್ರಿಯೇ ಈ ಸುನಾಮಿ. ನೀಲ ಆಳದಿ ಹೊಂಚು ಹಾಕಿ ನಿಂತ ಹೇಡಿ ನೀನು. ರಕ್ತದಾಹಿಯಾದ ನೀನು ಹಸುಳೆ, ಮುದಿ ವಯಸ್ಕರೆನ್ನದೆ ಅವರನ್ನು ಬರಸೆಳೆದು ಅಪ್ಪಿಬಿಟ್ಟೆ

ಪ್ರಕೃತಿಯ ಹಾರೈಕೆಯ ಗಿಡ-ಮರ-ಬಳ್ಳಿಗಳನ್ನು ಬುಡ ಮೇಲು ಮಾಡಿದೆ. ೨,೦೦,೦೦೦ ಜೀವಗಳೊಡನೆ ನೀನು ಭಾನುವಾರದ ಸರಸಕ್ಕೆಳೆದುಕೊಂಡೆ. ಬೆತ್ತಲಾಯ್ತು ನಿನ್ನ ರಾಕ್ಷಸೀ ಗುಣ. ಮಿಲಿಯಗಟ್ಟಳೆ ನಿರಾಶ್ರಿತರನ್ನು ನೋಡಿ ಕೇಕೆ ಹಾಕುತ್ತಾ ಬತ್ತಿದ ಕಣ್ಣುಗುಡ್ಡೆಯ ತಬ್ಬಲಿಗಳನ್ನು ಅಣಕ ಮಾಡುತ್ತಿರುವಿ.

ಒಣ ವೈಭವ ಪೂಜಿತೆ ನೀನು ದುಃಖಾಂತೆ. ನೋವಿನಲ್ಲಿ ನಲಿಯುತ್ತೀ. ಆದರೆ ನಿನ್ನೀ ಕ್ರೌರ್ಯಕ್ಕೆ ಮತ್ತೊಂದು ಹೆಸರೇ ನೀನೆಂದು ಖುಷಿ ಪಡೆಯುವುದು ತಮಾಷೆಯಾದೀತು.

ಸರ್ವನಾಶ ಮತ್ತು ಸಾವಿನ ನಡುವೆ ನೀ ರಾಜಾಜಿಸುತ್ತಿರುವಿ. ನೀ ನಮ್ಮೀ ಸೊಂಟದಡಿ ಒದ್ದು ಬಿಟ್ಟೆ, ನೀ ಸುಲಿಗೆ ಕೋರ ನಂತೆ ಸುಳಿವಿಲ್ಲದೆ ಬರಸೆಳೆದೆ. ಮರಣ ಶಾಸನ ಸತ್ಯವಾಯ್ತು ನಿಜ. ಮರು ನಿರ್ಮಾಣ ನಮಗೆ ತಿಳಿದಿದೆ. ನಮ್ಮೀ ಮಕ್ಕಳು ಮುಂದಿನ ತಲೆಮಾರಿನ ಕಾರಣಿಗಳು.

ಮತ್ತೊಮ್ಮೆ ಮನೆಗಳು ನಿರ್ಮಾಣವಾಗಿ, ಹಸುಳೆಗಳು ನೀಲ ಸಾಗರದಿ ದೋಣಿ ಮುನ್ನಡೆಸುವರು.

ಮಾನವತೆ ನನ್ನೊಡನಿದೆ. ಯು.ಎಸ್, ಯೂರೋಪ್, ಆಸ್ಟ್ರೇಲಿಯಾ, ಕೋಫಿ ಅನ್ನಾನ್, ಕಾಲಿನ್ ಪೊವೆಲ್, ಫಾರ್ಚ್ಯುನ್ ೫೦೦ ಕಂಪನಿಗಳು, ಭಾರತದ ಸಣ್ಣ ವಾಣಿಜ್ಯ ಮನೆಗಳು, ಎಲ್ಲರೂ ನನ್ನ ಮಕ್ಕಳ ನೆರವಿಗೆ ಧಾವಿಸಿದ್ದಾರೆ. ನಾನು ಸರ್ವನಾಶವಾದರೂ ಅವಮಾನ ಇಲ್ಲ,

ಭ್ರಮೆಯ ವ್ಯಕ್ತಿತ್ವದಿ ಜೀವಿಸದಿರು. ನೀನೇಯೇನು ಅಂತಿಮ ಶಕ್ತಿ ಯಮಗಂಡ. ನೀನು ಕಲ್ಪನಾತೀತ, ಆಲೋಚನಾರಹಿತ. ಆದ್ದರಿಂದ ನನ್ನ ನೀ ಅವಮಾನಿಸಲಾರೆ. ಸಣ್ಣ ಅಣುವಿನ ಕೂಸಾದ ನೀನು ಧಾರ್ಮಿಕ/ಸಾಮಾಜಿಕ ಮಾನ್ಯತೆಯನ್ನೇನು ಖುಷಿಪಡಲಾರೆ.

ಪ್ರಿಯ ಸುನಾಮಿ, ಮಗದೊಮ್ಮೆ ಬಾ, ಭಾರತದ ನಾಗಪಟ್ಟಣಕ್ಕೆ ಭೇಟಿ ನೀಡು. ನನ್ನ ಜೀವತುಂಬಿದ ಚಲನೆಯನ್ನು ನೋಡು. ನಾನು ಭಾರತದ ಅಸ್ಪೃಶ್ಯತೆ. ಧರ್ಮ ಮಾನ್ಯ ಮಾಡಿದ ವರ್ಣ ವ್ಯವಸ್ಥೆಯ ಅಕ್ರಮ ಕೂಸು ನಾನು. ಆಧ್ಯಾತ್ಮಿಕವಾಗಿ ನಾನು ಆಚರಣೆಗೊಳಗಾಗಿದ್ದೇನೆ. ಆಚರಣೆಯೇ ಆಧ್ಯಾತ್ಮ.

ಸಾವು ಮತ್ತು ನಾಶವೇ ನನ್ನ ಜೀವನಾಡಿ. ಸಾವಿರ ವರ್ಷಗಳ ನಿನ್ನ ಬಲಿಗಳ ಮತ್ತು ದಶಕದ ನನ್ನೊಡನೆ ಎಣಿಸುವಿಯಾ? ಅವಮಾನ ಒಂದು ಶಿಸ್ತು, ಅದು ನಿನಗೆ ತಿಳಿದಿಲ್ಲ, ಅಲ್ಲವೇ?

ಸುನಾಮಿ, ಪುನರ್ವಸತಿ ಶಿಬಿರಗಳೆಡೆ ಬಂದು ನೋಡು. ನಾನು ಏನಾಗಿದ್ದೇನೆಂದು ನೋಡು ಬಾ. ಯುನಿಸೆಫ್, ಪತ್ರಕರ್ತ ಬಳಗ, ಫ್ರಾನ್ಸ್ ಸಂಸ್ಥೆಗಳು, ಬಿಬಿಸಿ, ಸಿಎನ್‌ಎನ್, ಆಕ್ಸ್‌ಫಾಮ್, ಸರ್ಕಾರಿ ಅಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳು - ಎಲ್ಲರೆದುರು

ನಾನು ಫೆಲೋಶಿಪ್‌ಗಳಿಗೆ ಸಮರ್ಥನು : ಪೋಷಕರನ್ನು ಕಳೆದುಕೊಂಡು ಸುನಾಮಿಯ ಹೊಡೆತ ತಪ್ಪಿಸಿಕೊಂಡ ಅಸ್ಪೃಶ್ಯ ಅವನು. ಒಬ್ಬ ಸಹೋದರ ಮತ್ತು ಪುಟ್ಟ ತಂಗಿ ನನ್ನ ಮೀನುಗಾರರ ಶವಗಳನ್ನು ಮೊದಲು ಹೂಳುತ್ತಿದ್ದಾರೆ, ಆತನ ಶವಗಳು ಕಾಯುತ್ತವೆ.

ಮೆಚ್ಚಿನ ಸುನಾಮಿ, ನಾನು ಅಸ್ಪೃಶ್ಯತೆ. ಸರ್ವನಾಶದ ಕ್ಷಣದಲ್ಲಿ ನಾನು ಸಾಮ್ರಾಟರ ಮಧ್ಯೆಯೂ ನನ್ನದೇ ಆದರ್ಶಗಳಲ್ಲಿ ನಾ ಜೀವಿಸುತ್ತೇನೆ. ದೇವಸ್ಥಾನ, ಚರ್ಚ್, ಮಸೀದಿ, ಶಾಲಾ ಆವರಣಗಳೊಳಗೆ ನುಸುಳಿದ, ಬದುಕುಳಿದ ಅಸ್ಪೃಶ್ಯರನ್ನು ನಾನು ಮೇಲೆ-ಕೆಳಗೆ ಎಸೆಯುತ್ತಿದ್ದೇನೆ. ತಾತ್ಕಾಲಿಕವಾಗಿ ನಿರ್ಮಿಸಿದ ಶೌಚಾಲಯಗಳು, ಯುನಿಸೆಫ್ ಲಾರಿಗಳು, ಮಿನರಲ್ ನೀರು, ಆಹಾರ ಪದಾರ್ಥಗಳು, ಬಟ್ಟೆ ಮತ್ತು ಔಷಧಿಗಳು ಅವರನ್ನು ನಿಷೇಧಿಸಿವೆ. ಅವರು ತಿಂದುಳಿದದ್ದನ್ನು ಮಾತ್ರ ತಿನ್ನಬೇಕು. ಅದೇ ನನ್ನ ಆಜ್ಞೆ. ಯಾರು ಮೀರುವಂತಿಲ್ಲ.

ನೀನೇನೋ ಆಕಸ್ಮಿಕ ಶಕ್ತಿಯಷ್ಟೆ. ಆದರೆ ನಾನು ಒಂದು ಆಚರಣಾ ಪದ್ಧತಿ, ಒಂದು ಸಿದ್ಧಾಂತ, ಒಂದು ಧರ್ಮ, ನಾನೊಬ್ಬ ಅಸ್ಪೃಶ್ಯತೆ, ಅವಮಾನಿಸುವುದರಲ್ಲಿ, ವರ್ಗೀಕರಿಸುವಲ್ಲಿ, ಸಾವು ಮತ್ತು ನಾಶದಲ್ಲಿ ಪಳಗಿದವನು.

ಸುನಾಮಿ, ಮತ್ತೆ ಬಾ. ನಿನ್ನ ಮಿತಿಗಳನ್ನು ಅರಿಯಲು ಬಾ. ಭಾರತೀಯ ಜೀವನಾಡಿಯನ್ನು ನಿಯಂತ್ರಿಸುವ ನಾನು ಪುರಾತನ ಕಾಲದಿಂದಲೇ ಪ್ರಾಣಿಗಳಿಗಿಂತಲೂ ಅಸಹ್ಯವಾಗಿ ಸಮುದಾಯಗಳನ್ನು ಹೊಲಸುಗೆಡವಿದ್ದೇನೆ.

ವಿಶ್ವಸಂಸ್ಥೆ, ಯುನಿಸೆಫ್, ಪತ್ರಿಕಾ ಬಳಗ, ಫ್ರಾನ್ಸ್ ಸಂಸ್ಥೆಗಳು, ಬಿಬಿಸಿ, ಸಿಎನ್‌ಎನ್, ಆಕ್ಸ್‌ಫಾಮ್, ಕೊಕೊ ಕೋಲ -ಇವರ‍್ಯಾರು ನನ್ನನ್ನು ದೂಡಲಾಗದು.

ನಾನು ಭಾರತದ ಜಾತಿ ಪದ್ಧತಿ? ಯಾರು ಬಲಿಷ್ಠರು, ಪ್ರಶ್ನಾತೀತರು, ವಂಚಕರು ಮತ್ತು ಶಾಶ್ವತವಾಗಿರುವವರು ಯಾರೆಂದು ನೀನೇ ನಿರ್ಧರಿಸು.

ದಲಿತ್ ಡೈರಿ

ಸುನಾಮಿ, ಮತ್ತೆ ಬಾ. ನಿನ್ನ ಮಿತಿಗಳನ್ನು ಅರಿಯಲು ಬಾ. ಭಾರತೀಯ ಜೀವನಾಡಿಯನ್ನು ನಿಯಂತ್ರಿಸುವ ನಾನು ಪುರಾತನ ಕಾಲದಿಂದಲೇ ಪ್ರಾಣಿಗಳಿಗಿಂತಲೂ ಅಸಹ್ಯವಾಗಿ ಸಮುದಾಯಗಳನ್ನು ಹೊಲಸುಗೆಡವಿದ್ದೇನೆ. ವಿಶ್ವಸಂಸ್ಥೆ, ಯುನಿಸೆಫ್, ಪತ್ರಿಕಾ ಬಳಗ, ಫ್ರಾನ್ಸ್ ಸಂಸ್ಥೆಗಳು, ಬಿಬಿಸಿ, ಸಿಎನ್‌ಎನ್, ಆಕ್ಸ್‌ಫಾಮ್ ಕೊಕೊ ಕೋಲ -ಇವರ‍್ಯಾರು ನನ್ನನ್ನು ದೂಡಲಾಗದು. ನಾನು ಭಾರತದ ಜಾತಿ ಪದ್ಧತಿ? ಯಾರು ಬಲಿಷ್ಠರು, ಪ್ರಶ್ನಾತೀತರು, ವಂಚಕರು ಮತ್ತು ಶಾಶ್ವತವಾಗಿರುವವರು ಯಾರೆಂದು ನೀನೇ ನಿರ್ಧರಿಸು.

○ ಅನು : ಡಿ. ಡೊಮಿನಿಕ್

ಮೈಖಲ್‌ನ ಪ್ರಮೇಯ

ಭಾರತೀಯ ಕೈಗಾರಿಕಾ ಕೇಂದ್ರಗಳ ಒಕ್ಕೂಟದ ಉಪಾಧ್ಯಕ್ಷ ಉದ್ಧರಿಸಿದ್ದ ಅಂದಾಜಿಸಿರುವ ಪ್ರಕಾರ 'ಭಾರತವು ಬೇಗನೆ ಗ್ರಾಹಕ ಪದಾರ್ಥಗಳ ಮಾರುಕಟ್ಟೆಯಲ್ಲಿ ೧೩.೦೪ ಬಿಲಿಯನ್ ಡಾಲರ್ ಮೌಲ್ಯವುಳ್ಳದಾಗುತ್ತದೆ. ಹಾಗೆಯೇ ಪಕ್ಕದ ಚೈನಾದಲ್ಲೂ ದೊಡ್ಡ ಜನಸಂಖ್ಯೆಯನ್ನು ಹೊಂದಿದ್ದು ೧೮೧೧.೬ ಬಿಲಿಯನ್ ಡಾಲರ್ ಮೌಲ್ಯದ್ದಾಗಿದೆ'.

'ಪ್ರಿಯ ಕೈಗಾರಿಕೋದ್ಯಮಿ ಸಹಪಾಠಿಗಳೇ, ನೀವೆಲ್ಲಾ ತಿಳಿದಿರುವಂತೆ, ಅಂತರಾಷ್ಟ್ರೀಯವಾಗಿ ನಮ್ಮ ಕಂಪನಿಗಳು ಸ್ಪರ್ಧಿಸಬೇಕಾದರೆ ಅವು ಬೃಹದಾಸ್ತ್ರದ್ದಾಗಿರಬೇಕಿದೆ. ಅಲ್ಲದೆ ದೇಶೀಯವಾಗಿ ಹೆಚ್ಚಿನ ಗ್ರಾಹಕ ವಲಯವನ್ನು ಹೊಂದಿರದಿದ್ದಲ್ಲಿ ನಾವು ಸಣ್ಣ ವಾಣಿಜ್ಯ ಗುಡಾರಗಳಾಗಿ ಉಳಿದುಕೊಳ್ಳುತ್ತೇವೆ. ಅಂದರೆ ಜಾಗತಿಕ ಮಾರುಕಟ್ಟೆಯಲ್ಲಿ ಅಪಹಾಸ್ಯಕ್ಕೊಳಗಾಗುತ್ತೇವೆ' ಎಂದು ಅಧ್ಯಕ್ಷ ಘೋಷಿಸಿದ. ಇಡೀ ಸಭಾಂಗಣ ತದೇಕ ಚಿತ್ತದಿಂದ ಆಲಿಸುತ್ತಿತ್ತು.

'ಭಾರತೀಯರು ಕೊಳ್ಳುವ ಪ್ರವೃತ್ತಿಯಲ್ಲಿ ಬಡತನ ರೇಖೆಗಿಂತ ಕೆಳಗಿನವರಾಗಿದ್ದಾರೆ'- ಎಂದು ಗುಡುಗಿದ. ಇಡೀ ಸಭೆ ಅದರ ಬಗ್ಗೆ ಕಾಳಜಿ ತೋರಿಸಿದ್ದು ಸಹಜವಾಗಿತ್ತು. 'ಸಾವಿರಕ್ಕಿಂತ ಅಧಿಕವಿರುವಲ್ಲಿ ಕೇವಲ ೩೫೦ ಮಿಲಿಯನ್ ಮಾರುಕಟ್ಟೆಯ ಭಾಗವಾಗಿದ್ದಾರಷ್ಟೆ' ಎಂದು ಅಧ್ಯಕ್ಷ ಗದ್ಗದಿತನಾಗಿ ಹೇಳಿದ್ದ.

'ಹಲವಾರು ದಶಕಗಳಿಂದ ನಮ್ಮ ಬಹುಮುಖ್ಯ ಕಾಳಜಿಯೆಂದರೆ ಮಾರುಕಟ್ಟೆಯನ್ನು ವಿಸ್ತರಿಸದೇ ಇದ್ದದ್ದು. ಇದಕ್ಕೆ ಕಾರಣ ಏನೆಂದು ನಮಗೆ ತಿಳಿಯದು' ಎಂದು ಅಧ್ಯಕ್ಷ ಒಪ್ಪಿಕೊಂಡಿದ್ದ. 'ಭಾರತೀಯ ಮಾರುಕಟ್ಟೆ ಏಕೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿಲ್ಲವೆಂದು ಆರು ವಾರಗಳ ಹಿಂದೆಯಷ್ಟೇ ಒಕ್ಕೂಟವು ಒಂದು ಅಧ್ಯಯನ ಸಮಿತಿಯನ್ನು ರಚಿಸಿದೆ'.

ಸಭಿಕರೆಲ್ಲ ಉಸಿರಿಡಿದು ಕಾಯುತ್ತಿದ್ದರು. 'ಅದು ಏನೆಂದರೆ ಭಾರತದ ಬಡವರೆಂದು ಕರೆಯಲಾಗುವವರು ಮಾರುಕಟ್ಟೆ ವಿಸ್ತಾರವನ್ನು ತಡೆಹಿಡಿದಿದ್ದಾರೆ'. 'ಈ ಸಂಗತಿಯನ್ನು ಬೇರ್‍ಯಾರು ಅಲ್ಲದೆ, ಫಿಲಿಡೆಲ್ಫಿಯಾದ ಅರ್ಥಶಾಸ್ತ್ರಜ್ಞ ಮತ್ತು ಫ್ರೀಲಾನ್ಸ್ ನೋಬೆಲ್ ಪ್ರಶಸ್ತಿ ಸಮರ್ಥನಾದ ಮೈಖಲ್ ಬಾಯಿ ಪಟೇಲ್ ತನ್ನ ಅಧ್ಯಯನದಲ್ಲಿ ತಿಳಿಸಿದ್ದಾನೆ. ಈ ಶ್ರೇಷ್ಠ ವ್ಯಕ್ತಿಗೆ ನಮ್ಮ ಅಭಿನಂದನೆಗಳು' ಎಂದು ಹಿರಿಯ ಕೈಗಾರಿಕೋದ್ಯಮಿ ಉದ್ಘರಿಸಿದ್ದ.

'ಮೈಖಲ್ ಭಾರತದ ಉದ್ದ-ಅಗಲಕ್ಕೂ ಸುತ್ತಿ ಆಯ್ದ ಸ್ಲಂಗಳಿಂದ ಮಾದರಿಗಳನ್ನು ಸಂಗ್ರಹಿಸಿದ್ದ. ಆತ ತನ್ನ ಕಂಪ್ಯೂಟರ್ ಮೂಲಕ ಮಂಡಿಸುವ ಮುನ್ನ, ಆತನ ಕೆಲವು ಮುಖ್ಯ ಶೋಧನೆಗಳ ಬಗ್ಗೆ ಒತ್ತಿ ಹೇಳಲೇಬೇಕಿದೆ' ಎಂದು ಅಧ್ಯಕ್ಷ ಮುಂದುವರೆದಿದ್ದ.

'ಬಡವರು ತಮ್ಮ ವಿಪುಲವಾದ ಸಂಪತ್ತಿನ ಬಗ್ಗೆ ಅಜ್ಞಾನಿಗಳಾಗಿದ್ದಾರೆ' ಎಂದು ಮೈಖಲ್ ಬಾಯಿ ಪ್ರಮೇಯದ ಮುಖ್ಯಾಂಶವನ್ನು ಅಧ್ಯಕ್ಷ ಹೊರ ಹಾಕಿದ.

'ಈ ಅಜ್ಞಾನದಿಂದಾಗಿಯೇ ಭಾರತೀಯ ಬಡವರು ಮಾರುಕಟ್ಟೆಯನ್ನು ಸೇರಲು 'ಬಯಸುತ್ತಿಲ್ಲ' ಎಂದು ಅಪನಂಬುಗೆಯ ಸಭಿಕರಿಗೆ ಹೇಳಿದ. 'ಆದ್ದರಿಂದ ಅಂತಿಮವಾಗಿ ನಾವು ಈ ಬಡಜನತೆಯ ಅಜ್ಞಾನ ಮತ್ತು ಅವರ ವೆಚ್ಚ ಮಾಡುವ ಅಸಾಮರ್ಥ್ಯದ ಬಲಿಪಶುಗಳಾಗಿದ್ದೇವೆ ಎಂದು ದುಃಖಿಸಿದ ಅಧ್ಯಕ್ಷ. 'ಮೈಖಲ್ ಬಾಯಿ ಮಾಡಿರುವ ಅಧ್ಯಯನದ ಮಾದರಿಗಳಾದ 'ಚಿಂದಿ ಆಯುವವರ ವಿಶ್ಲೇಷಣೆ ಅತ್ಯದ್ಭುತವಾಗಿ ಈ ಸಂಗತಿಯನ್ನು ವಿವರಿಸುತ್ತದೆ. ಈ ನಿದರ್ಶನವನ್ನು ನಾನೆಂದೂ ಕಂಡಿರಲಿಲ್ಲ-' ಎಂದು ಅಧ್ಯಕ್ಷ ಸಭೆಗೆ ತಿಳಿಸಿದ.

ದಲಿತ್ ಡೈರಿ

'ಈ ಚಿಂದಿ ಆಯುವ ಕುಟುಂಬದ ವಾರ್ಷಿಕ ಆದಾಯ ರೂ. ಒಂದು ಲಕ್ಷಕ್ಕೂ ಮೀರಿದೆ.' ಎಂದು ಸೂಚಿಸಿದ ಅಧ್ಯಕ್ಷ. 'ನೀವೆಂದಾದರೂ ಒಬ್ಬ ಚಿಂದಿ ಆಯುವವ ಎರಡು ಚಕ್ರದ ಬೈಕ್ ಕೊಂಡಿದ್ದಾನೆಯೇ ?' ಎಂದು ಅಚ್ಚರಿ ತುಂಬಿದ ಸಭೆಗೆ ಕೇಳಿದ. 'ಈ ಚಿಂದಿ ಆಯುವವರಿಗೆ ನಾಚಿಕೆಗೇಡು' ಎಂದು ಒಬ್ಬ ಮುದಿ ಯಂತ್ರ ತಯಾರಕ ಗುಡುಗಿದ. 'ಒಂದು ಚಿಂದಿ ಆಯುವ ಕುಟುಂಬದ ಗಳಿಕೆ ೧೦ ವರ್ಷಗಳಲ್ಲಿ ರೂ. ೧.೨೯ ಮಿಲಿಯನ್‌ಗೆ ಏರುತ್ತದೆ' ಎಂದು ಅಧ್ಯಕ್ಷ ತನ್ನ ಗಣಿತವನ್ನು ತೋರಿಸಿದ್ದ. 'ಅವನೇನಾದರೂ ಒಂದು ಕಾರ್ ಶೋ ರೂಂ ಪ್ರವೇಶಿಸಿದ್ದಾನೆಯೇ ?' 'ಇಲ್ಲ.. ಇಲ್ಲ...' ಎಂದು ಒಬ್ಬ ಯಂತ್ರ ಬಿಡಿಭಾಗದ ಮೇಲ್ವಿಚಾರಣೆ ಮಾಡುತ್ತಿದ್ದ ಆಕ್ಸ್‌ಫರ್ಡ್ ವಿದ್ವಾಂಸ ಹೇಳಿದ. 'ಓ... ಚಿಂದಿ ಆಯುವವನೇ ನನ್ನ ಮಾರುಕಟ್ಟೆಯನ್ನು ನನಗೆ ನೀಡು, ನಿನ್ನ ಪ್ಯಾಕೆಟ್ ಓಪನ್ ಮಾಡು'- ಎಂದು ಕಾರು ತಯಾರಕನೊಬ್ಬ ಗೋಗರೆಯುತ್ತಿದ್ದ.

'ಆತನ ಈ ಪರಿವರ್ತನಾ ನಿದರ್ಶನ ಮುಂದಿಡುವ ಸಂಗತಿಯೆಂದರೆ ಒಬ್ಬ ಚಿಂದಿ ಆಯುವವ ನಿಗದಿತ ದಿನಕ್ಕೆ ರೂ. ೩೦/-ನ್ನು ಸಾಮಾನ್ಯವಾಗಿ ಸಂಪಾದಿಸುತ್ತಾನೆ. ಆತನ ಕುಟುಂಬದ ೫ ಮಂದಿಯೂ ಇದೇ ಕೆಲಸವನ್ನು ಮಾಡುತ್ತಾರೆ. ಅಲ್ಲದೆ ಅಧಿಕ ಅವಧಿಯ ಕೆಲಸದಲ್ಲಿ ತೊಡಗುತ್ತಾರೆ. ಅಂದರೆ ನಿಜವಾಗಿಯೂ ಈ ಕುಟುಂದ ೫ ಮಂದಿ, ೧೦ ಮಂದಿಯ ಕೆಲಸ ಮಾಡುತ್ತಾರೆ-' ಎಂದು ಅಧ್ಯಕ್ಷ ವಿವರಿಸತೊಡಗಿದ.

'ನನ್ನ ಸಹದ್ಯೋಗಿಗಳೇ ಮೈಖಲ್ ಬಾಯಿಯ ಅರ್ಥಶಾಸ್ತ್ರ ಸಾಧಿಸುವುದೇನೆಂದರೆ ಚಿಂದಿ ಆಯುವ ಒಂದು ಕುಟುಂಬ ದಿನಕ್ಕೆ ರೂ. ೩೦೦/-ನ್ನು ಗಳಿಸುತ್ತದೆ' ಎಂದು ಅಧ್ಯಕ್ಷ ತಿಳಿಸಿದ.

'ಹೂಂ.. ಹೂಂ...' ಸಭೆ ಅಚ್ಚರಿ ವ್ಯಕ್ತಪಡಿಸಿತು.

'ಎಂದಾದರೂ ಈ ಚಿಂದಿ ಆಯುವವ ಸೈಬರ್ ಕೆಫೆಗೆ ಭೇಟಿ ನೀಡುವುದನ್ನು ನೀವೆಂದಾದರೂ ಕಂಡಿದ್ದೀರಾ?' ಅಧ್ಯಕ್ಷ ವಿಚಾರಿಸಿದ. 'ಇಲ್ಲವೇ ಇಲ್ಲ' ಎಂದನೊಬ್ಬ ಯುವ ಉದ್ಯಮಿ. 'ಚಿಂದಿ ಆಯುವವನೊಬ್ಬ ಸೈಬರ್ ಕೆಫೆಗೆ ಭೇಟಿ ನೀಡಲು ೧೦ರೂ. ಖರ್ಚು ಮಾಡಲು ಸಾಧ್ಯವಿಲ್ಲವೇ ?' ಪುನಃ ಅಧ್ಯಕ್ಷ ವಿಚಾರಿಸಿದ. 'ಚಿಂದಿ ಆಯುವವರಿಗೆ ಧಿಕ್ಕಾರ' ಎಂದು ಕೂಗಿದನೊಬ್ಬ ಐಟಿ ಉದ್ಯಮಿಯ ಮ್ಯಾನೇಜರ್. 'ಈ ಚಿಂದಿ ಆಯುವ ಕುಟುಂಬ ತಿಂಗಳಿಗೆ ೯,೦೦೦/- ಗಳಿಸುತ್ತದೆ' ಎಂದು ಅಧ್ಯಕ್ಷ ಸೇರಿಸಿದ.

'ಚಿಂದಿ ಆಯುವವನೊಬ್ಬ ಎಂದಾದರೂ ಚರ್ಮ ರಕ್ಷಣೆಯ ಕ್ರೀಮ್ ಕೊಂಡಿದ್ದಾನೆಯೇ' ಎಂದಾಗ 'ಇಲ್ಲ.. ಇಲ್ಲ...' ಎಂಬ ಒಕ್ಕೊರಲ ಧ್ವನಿ ಹೊಮ್ಮಿತು. ಅದರೊಡನೆ ಒಬ್ಬ ಕಾಸ್ಮೆಟಿಕ್ ತಯಾರಕ 'ಚಿಂದಿ ಆಯುವವರಿಗೆ ಧಿಕ್ಕಾರ' ಎಂದು ಅಬ್ಬರಿಸಿದ.

'ಈ ಚಿಂದಿ ಆಯುವ ಕುಟುಂಬದ ವಾರ್ಷಿಕ ಆದಾಯ ರೂ. ಒಂದು ಲಕ್ಷಕ್ಕೂ ಮೀರಿದೆ.' ಎಂದು ಸೂಚಿಸಿದ ಅಧ್ಯಕ್ಷ. 'ಎಂದಾದರೂ ಒಬ್ಬ ಚಿಂದಿ ಆಯುವವ ಎರಡು ಚಕ್ರದ ಬೈಕ್ ಕೊಂಡಿದ್ದಾನೆಯೇ ?' ಎಂದು ಅಚ್ಚರಿ ತುಂಬಿದ ಸಭೆಗೆ ಕೇಳಿದ. 'ಈ ಚಿಂದಿ ಆಯುವವರಿಗೆ ನಾಚಿಕೆಗೇಡು' ಎಂದು ಒಬ್ಬ ಮುದಿ ಯಂತ್ರ ತಯಾರಕ ಗುಡುಗಿದ.

'ಒಂದು ಚಿಂದಿ ಆಯುವ ಕುಟುಂಬದ ಗಳಿಕೆ ೧೦ ವರ್ಷಗಳಲ್ಲಿ ರೂ. ೧.೨೯ ಮಿಲಿಯನ್‌ಗೆ ಏರುತ್ತದೆ' ಎಂದು ಅಧ್ಯಕ್ಷ ತನ್ನ ಗಣಿತವನ್ನು ತೋರಿಸಿದ್ದ. 'ಅವನೇನಾದರೂ ಒಂದು ಕಾರ್ ಶೋ ರೂಂ ಪ್ರವೇಶಿಸಿದ್ದಾನೆಯೇ ?' 'ಇಲ್ಲ.. ಇಲ್ಲ...' ಎಂದು ಒಬ್ಬ ಯಂತ್ರ ಬಿಡಿಭಾಗದ ಮೇಲ್ವಿಚಾರಣೆ ಮಾಡುತ್ತಿದ್ದ ಆಕ್ಸ್‌ಫರ್ಡ್ ವಿದ್ವಾಂಸ ಹೇಳಿದ.

'ಓ... ಚಿಂದಿ ಆಯುವವನೇ ನನ್ನ ಮಾರುಕಟ್ಟೆಯನ್ನು ನನಗೆ ನೀಡು, ನಿನ್ನ ಪ್ಯಾಕೆಟ್ ಓಪನ್ ಮಾಡು'- ಎಂದು ಕಾರು ತಯಾರಕನೊಬ್ಬ ಗೋಗರೆಯುತ್ತಿದ್ದ. 'ಮೈಖಲ್ ಬಾಯಿ ಪಟೇಲ್ ಪ್ರಮೇಯ ಈ ಬಡಜನತೆಯನ್ನು ಜಾಗೃತಗೊಳಿಸಲು ಒಂದು ಜಾಹೀರಾತನ್ನು ನಿರೂಪಿಸುತ್ತದೆ. ನೆನಪಿಡಿ.. ಒಂದು ಚಿಂದಿ ಆಯುವ ಕುಟುಂಬ ರೂ. ೫.೪ ಮಿಲಿಯನ್ ೫೦ ವರ್ಷಗಳಲ್ಲಿ ಗಳಿಸುತ್ತದೆ', ಎಂದು ಮುಕ್ತಾಯಗೊಳಿಸಿದ ಅಧ್ಯಕ್ಷ.

ಮೈಖಲ್ ಬಾಯಿ ತನ್ನ ಮಂಡನೆಯನ್ನು ಆರಂಭಿಸಿದ.

ದಲಿತ್ ಡೈರಿ

ಗಣರಾಜ್ಯದ ಗೊತ್ತುವಳಿಗಳು

ಭಾರತ ಗಣರಾಜ್ಯಕ್ಕೆ ಈಗ ೫೬ ವರ್ಷಗಳ ವಯಸ್ಸಾಗಿದೆ. ಪ್ರತೀ ವರ್ಷ ಜನವರಿ ೨೬, ಅದು ಮೂಲ ಗೊತ್ತುವಳಿಗಳಿಗಿಂತ ಹೆಚ್ಚಾಗಿ ಭಾರತದ ಮಿಲಿಟರಿ ಮತ್ತು ಪಾರಿತೋಷಕಗಳ ಘೋಷಣೆಯನ್ನು ಪ್ರದರ್ಶಿಸುವುದಕ್ಕೆ ಮಾತ್ರ ಪ್ರಸಿದ್ಧವಾಗಿದೆ.

ದೇಶದುದ್ದಕ್ಕೂ ಬಣ್ಣ ಬಣ್ಣದ ಪೆರೇಡುಗಳನ್ನು ಸ್ವಯಂ ಪ್ರೇರಣೆಯಿಂದ ನಡೆಸಲಾಗುತ್ತದೆ. ನಾವು ಪ್ರಗತಿಯ ಪಥದಲ್ಲಿದ್ದೇವೆ ಎಂದು ನಂಬುವುದಕ್ಕೆ ಇದರ ಅಗತ್ಯವಿದೆ. ೧೯೫೦ರ ಆಹಾರ ಕೊರತೆಯಿಂದ ೨೦೦೫ರ ಹೊತ್ತಿಗೆ ಆಹಾರ ಮಿಗುತೆಯನ್ನು ಸಾಧಿಸುವ ಮೂಲಕ ಭಾರತವು 'ದಾನಿ' ದೇಶವಾಗಿ ಹೆಚ್ಚುಗ್ಗಾರಿಕೆ ಪಡೆದಿದೆ ಮತ್ತು ವಿಶ್ವಸಂಸ್ಥೆಯಲ್ಲಿ ಭದ್ರತಾ ಮಂಡಳಿಯ ಶಾಶ್ವತ ಸ್ಥಾನ ಪಡೆಯುವ ಕಾನೂನು ಬದ್ಧ ಹಕ್ಕನ್ನು ಹೊಂದಿದೆ ಎಂದು ಅರಚುತ್ತಿದೆ.

ವಿದೇಶೀ ಬಂಡವಾಳದಲ್ಲಿ ಹೆಚ್ಚಳ, ಸ್ಟಾಕ್ ವಿನಿಮಯದಲ್ಲಿ ಸ್ಥಿರತೆ ಮತ್ತು ಸಿಲಿಕಾನ್ ವ್ಯಾಲಿ ಹೆಮ್ಮೆ.... ಎಲ್ಲವೂ ಗಣರಾಜ್ಯ ದಿನದ ಪೇರೇಡ್‌ಗೆ ಅನುರೂಪವೆಂಬಂತೆ ಕಂಡುಬರುತ್ತಿದೆ. ಅಲ್ಲದೆ ಅಂದು ಕ್ಷಿಪಣಿಗಳೊಡನೆ ಶಾಲಾ ಮಕ್ಕಳ ನೃತ್ಯವೂ ಸಹ ಕಾಣಿಸುತ್ತದೆ. ಲಾರಿಗಳ ತುಂಬಾ ಬುಲ್ಲೆಟ್ ಫಿರಂಗಿಗಳು ಸಾಲಾಗಿ ಸಾಗುತ್ತಿರುತ್ತವೆ.

ಹೇಳುವುದು? ಒಬ್ಬ ಕೈಗಾರಿಕೋದ್ಯಮಿ ಹೆಚ್ಚಿನ ಲಾಭ ಪಡೆದರೂ ಮ್ಯಾನೇಜ್‌ಮೆಂಟ್ ಪದವೀಧರ ದಲಿತನನ್ನು ನೇಮಕ ಮಾಡುವುದು ಕೇಡೆಂದು ಭಾವಿಸುತ್ತಾನೆ. ಉಪ-ಕುಲಪತಿ ಯು ದಲಿತ ಫ್ಯಾಕಲ್ಟಿ ತಿರಸ್ಕರಿಸುವಲ್ಲಿ ಯಾವ ತಪ್ಪು ಕಾಣುತ್ತಿಲ್ಲ.

ಪ್ರಸಿದ್ಧ ಚಲನ ಚಿತ್ರ ನಿರ್ಮಾಪಕರು ಈ ಸಾಧನೆಗಳನ್ನು ಮಾಡುವುದಕ್ಕೆ ದಲಿತರನ್ನು ಪ್ರೋತ್ಸಾಹಿಸಬೇಕು ಎಂಬುದನ್ನು ಪರಿಗಣಿಸುತ್ತಿಲ್ಲ. ಇಲೆಕ್ಟ್ರಾನಿಕ್ ಮಾಧ್ಯಮದಲ್ಲಿ ದಲಿತರ ಗೈರುಹಾಜರಿಯ ಬಗ್ಗೆ ಪ್ರಸಿದ್ಧ ಟಿವಿ ಚಾನೆಲ್ ಚರ್ಚಿಸುವುದು ಹಾಸ್ಯಾಸ್ಪದವೆನಿಸುತ್ತದೆ. ಸುದ್ದಿ ಪತ್ರಿಕೆ ಸಂಪಾದಕನು ಮುದ್ರಣ ಮಾಧ್ಯಮದಲ್ಲಿ ದಲಿತರ ಗೈರುಹಾಜರಿ ಬಗ್ಗೆ ಅವರನ್ನೇ ನಿಂದಿಸುತ್ತಾನೆ.

ಗಣರಾಜ್ಯದ ಸಂಸ್ಥೆಗಳನ್ನು ಹೊರತುಪಡಿಸಿ ದಲಿತರು ಸಮಾಜದಲ್ಲಿ ಯಾವುದೇ ಹಕ್ಕು ಬಾಧ್ಯತೆಗಳಿಗೆ ಯೋಗ್ಯರಲ್ಲ. ಪೊಲೀಸರ ಭಯಾನಕ ಅವಮಾನಗಳ ನಡುವೆಯೂ ಅಂತಿಮವಾಗಿ ದಲಿತರು ಪೊಲೀಸ್ ಠಾಣೆಗಳಿಗೆ ಮೊರೆ ಹೋಗಬೇಕಾಗಿದೆ. ಎಂದರೆ, ಗಣ ರಾಜ್ಯ ಮತ್ತು ನಾಗರಿಕ ಸಮಾಜ ಗಳೆರಡು ತದ್ವಿರುದ್ಧ ಉದ್ದೇಶ ಗಳೊಂದಿಗೆ ಕೆಲಸ ಮಾಡುತ್ತಿವೆ.

ಕಬಳಿಸಲು ರಾಜಕೀಯ ಶಕ್ತಿಗಳು ಹೇಸುವುದಿಲ್ಲ. ಹೀಗಿರುವಲ್ಲೂ ಅಂಥ ರಾಜಕೀಯ ಪಕ್ಷಗಳು ವಿದೇಯ ದಲಿತರನ್ನೇ ಕಣಕ್ಕಿಳಿಸುತ್ತವೆ. ಆದ್ದರಿಂದಲೇ ಅಧಿಕಾರಕ್ಕೆ ಬಂದಾಕ್ಷಣ ಆ ಪಕ್ಷವು ದಲಿತ ನೌಕರರನ್ನು ತಿರಸ್ಕರಿಸಲಾಗುವುದಿಲ್ಲ. ಕೆಲವು ಮಂತ್ರಿ ಪದವಿಗಳನ್ನು ದಲಿತರಿಗೆ ನೀಡಿ, ಕೆಲವರನ್ನಾದರೂ ಜಿಲ್ಲಾಧಿಕಾರಿ, ಪೊಲೀಸ್ ಅಧಿಕಾರಿಗಳನ್ನಾಗಿ ನೇಮಿಸಬೇಕಾಗುತ್ತದೆ.

ಈ ನಿರ್ಧಾರಾತ್ಮಕ ಸ್ಥಿತಿ ಬಂದಿರುವುದೇ ಗಣರಾಜ್ಯದಿಂದಾಗಿ. ಇಷ್ಟ ಇಲ್ಲದಿದ್ದರೂ ಮಾಡಲೇಬೇಕಾದ

ಈ ಸಾಧನೆಗಳು ಸಹ ಗಣರಾಜ್ಯದ ಹೇಳಿಕೊಳ್ಳದ ಉದ್ದೇಶಗಳಾಗಿವೆ. ಮತ್ತು ಅವುಗಳನ್ನು ಗಳಿಸಿಕೊಳ್ಳಲು ಪ್ರತಿಯೊಂದು ರಾಷ್ಟ್ರಗಳು ಅಂಥ ಸಾಧನೆಗಳಿಗೆ ಹೆಣಗಾಡುತ್ತಿವೆ. ಆದರೆ ಇದರ ಜೊತೆಗೆ, ಮಿಲಿಯಗಟ್ಟಲೆ ಭಾರತೀಯರು ಆಹಾರ ಸಿಗದೆ ಒದ್ದಾಡುತ್ತಿದ್ದಾರೆ. ೫೬ ವರ್ಷಗಳ ನಂತರವೂ, ತಮಿಳುನಾಡಿನ ನಾಗಪಟ್ಟಣಂನ ಮೀನುಗಾರರು, ದಲಿತರ ಜೊತೆ ಕಣ್ಣೀರು ಸುರಿಸಲು ತಯಾರಾಗಿಲ್ಲ. ಜಾತಿ ಶ್ರೇಣಿಯಲ್ಲಿ ಕೆಳಗಿರುವ, ಆದರೆ ಅಸ್ಪೃಶ್ಯತೆಗಿಂತ ಮೇಲಿರುವ ಅಂಥ ಹೆಚ್ಚಿನ ಗುಂಪುಗಳಿಗೆ ಸ್ಪೃಶ್ಯ ಸ್ಥಾನಮಾನವೇ ಬದುಕಲು ಇರುವ ಒಂದು ಕಾರಣವಾಗಿದೆ.

ದಲಿತರ ಮನೆಯಲ್ಲಿ ಒಂದು ಗ್ಲಾಸು ನೀರು ತೆಗೆದುಕೊಳ್ಳಲು ನಿರಾಕರಿಸುವುದರಿಂದ ಅಸ್ಪೃಶ್ಯೇತರ ಬಡವರು ಅಧಿಕ ಬಲವನ್ನು ಗಳಿಸಿಕೊಳ್ಳುತ್ತಾರೆ. ಇದನ್ನು ಪರಿಗಣಿಸಿ ಅವರ ಬಗ್ಗೆ ಮರುಕ ತೋರಿಸಬೇಕು. ಆದರೆ ಸುಸಂಸ್ಕೃತ ಮತ್ತು ಸಾಧನೆಗಳನ್ನು ಮಾಡಿರುವವರ ಬಗ್ಗೆ ಏನು

ಗಣರಾಜ್ಯವು ಅದರ ಆಧುನಿಕ ಸಂವಿಧಾನದೊಂದಿಗೆ, ಸಹಜವಾಗಿ ಬೇರೂರಿರುವ ಪಾರಂಪರಿಕ ಅಧಿಕಾರ ಸ್ಥಾನ ಮತ್ತು ಶ್ರೇಣಿಗಳನ್ನು ನಾಶ ಮಾಡುವ ಮೂಲಕ ಭಾರತೀಯ ಸಮಾಜವನ್ನು ಆಧುನೀಕರಿಸಲು ಪ್ರಯತ್ನಿಸುತ್ತದೆ. ಈ ಗೊತ್ತುವಳಿ ಸಂವಿಧಾನದ ಮೊದಲ ಪುಟದಲ್ಲೇ ಸ್ಥಾಪಿತವಾಗಿದೆ. ಮತ್ತು ಇದರ ಮೂಲಕ ಗಣರಾಜ್ಯವು ನಡೆಯುತ್ತಿದೆ. ಗಣರಾಜ್ಯದ ಮೂಲಭೂತ ಸತ್ವ ಎಂದು ಸೂಚಿಸಿ ಅದು ಗಣರಾಜ್ಯವನ್ನು ಎತ್ತಿ ಹಿಡಿಯುವಂತೆ ಆಳುವವರಿಗೆ ಎಚ್ಚರಿಕೆ ನೀಡುತ್ತದೆ.

ಆದರೆ ಇದನ್ನು ತುಂಬಾ ಸೂಕ್ಷ್ಮ ವಿಧಾನಗಳ ಮೂಲಕ ತಡೆಯಲಾಗುತ್ತದೆ. ಅದನ್ನೇ ಗಣರಾಜ್ಯ ಗೊತ್ತುವಳಿಗಷ್ಟೇ ಸೀಮಿತಗೊಳಿಸಿ ಪಾರಂಪರಿಕ ಸಾಮಾಜಿಕ ವ್ಯವಸ್ಥೆಯೇ ತನ್ನ ಮೂಗು ತೂರಿಸಿ ಗಣರಾಜ್ಯವನ್ನು ನಿಯಂತ್ರಿಸುತ್ತದೆ. ಆದ್ದರಿಂದಲೇ ಇಂಥ ಸಾಮಾಜಿಕ ಸನ್ನಿವೇಶದಲ್ಲೂ ದಲಿತರಿಗೆಂದು ಮೀಸಲಿಟ್ಟ ಕ್ಷೇತ್ರಗಳನ್ನು ಸಹ

> ವಿದೇಶೀ ಬಂಡವಾಳದಲ್ಲಿ ಹೆಚ್ಚಳ, ಸ್ಟಾಕ್ ವಿನಿಮಯದಲ್ಲಿ ಸ್ಥಿರತೆ ಮತ್ತು ಸಿಲಿಕಾನ್ ವ್ಯಾಲಿ ಹೆಮ್ಮೆ.... ಎಲ್ಲವೂ ಗಣರಾಜ್ಯ ದಿನದ ಪೇರೇಡ್‌ಗೆ ಅನುರೂಪ ವೆಂಬಂತೆ ಕಂಡುಬರುತ್ತಿದೆ. ಅಲ್ಲದೆ ಅಂದು ಕ್ಷಿಪಣಿಗಳೊಡನೆ ಶಾಲಾ ಮಕ್ಕಳ, ನೃತ್ಯವೂ ಸಹ ಕಾಣಿಸುತ್ತದೆ. ಲಾರಿಗಳ ತುಂಬಾ ಬುಲ್ಲೆಡ್ ಫಿರಂಗಿಗಳು ಸಾಲಾಗಿ ಸಾಗುತ್ತಿರುತ್ತವೆ.

ಅನಿವಾರ್ಯತೆಯನ್ನು ಅದು ಸೃಷ್ಟಿಸಿದೆ. ಆದರೆ, ಒಬ್ಬ ಉದ್ಯಮಿ ಅಥವಾ ಸಂಪಾದಕ, ಪ್ರಗತಿಪರನೆಂದು ಸಾರ್ವಜನಿಕವಾಗಿ ಹೆಸರು ಮಾಡಿದ್ದರೂ ಸಹ, ಸಾವಿರ ವರ್ಷಗಳ ತನ್ನ ಪೂರ್ವಿಕರನ್ನೇ ಅನುಸರಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತಾನೆ. ಆದ್ದರಿಂದಲೇ ಗಣರಾಜ್ಯ ನಿರ್ದೇಶಿಸುವುದನ್ನು ಗಾಳಿಗೆ ತೂರಿ, ಆತ ತನ್ನ ಪಾರಂಪರಿಕ ಸಾಮಾಜಿಕ ಮೌಲ್ಯಗಳನ್ನು ಗಣರಾಜ್ಯದೊಳಗೆ ಹಸ್ತಕ್ಷೇಪ ಮಾಡುವಂತೆ ವರ್ತಿಸಿ, ದಲಿತರನ್ನು ಹೊರಗಿರಿಸಲು ಹೆಣಗಾಡುತ್ತಿರುತ್ತಾನೆ.

ಇಂಥ ಸಾಮಾಜಿಕ ವ್ಯವಸ್ಥೆ ಹೇಗೆ ಗಣರಾಜ್ಯದ ಗೊತ್ತುವಳಿಗಳನ್ನು ಗಾಳಿಗೆ ತೂರಿವೆ ಎನ್ನುವುದಕ್ಕೆ ಇಲ್ಲಿ ನಿದರ್ಶನವೊಂದನ್ನು ಗಮನಿಸೋಣ. ಗಣರಾಜ್ಯದಂದು ನೂರಾರು ಪಾರಿತೋಷಕಗಳನ್ನು ರಾಷ್ಟ್ರಪತಿ ಭವನದಲ್ಲಿ ನೀಡಲಾಗುತ್ತದೆ. ಆದರೆ ಇಲ್ಲಿಯವರೆಗೆ ಜಾತಿವ್ಯವಸ್ಥೆಯ ವಿರುದ್ಧ ಹೋರಾಡಿ, ದಲಿತರ ಬಹಿಷ್ಕಾರವನ್ನು ತಡೆದವರಿಗೆ ಪ್ರಶಸ್ತಿಯನ್ನು ನೀಡಲಾಗಿದೆಯೇ?

ಇಲ್ಲವೇ ಇಲ್ಲ.

ಅಸ್ಪೃಶ್ಯರೆ ? ೫೬ ವರ್ಷಗಳ ನಂತರವೂ ಒಬ್ಬ ನಾಗಪಟ್ಟಣದ ಬೆಸ್ತ, ಒಬ್ಬ ಬಾಲಿವುಡ್ ಸಿನಿಮಾ ನಿರ್ದೇಶಕ, ಒಬ್ಬ ಸಂಪಾದಕ, ಒಬ್ಬ ಉದ್ಯಮಿ, ಒಬ್ಬ ಜಮೀನ್ದಾರ, ಒಬ್ಬ ಪೂಜಾರಿ, ಒಬ್ಬ ಸಮಾಜವಾದಿ ಎಲ್ಲರನ್ನು ಒಳಗೊಂಡಂತೆ ದಲಿತ ಪ್ರಶ್ನೆ ಬಂದಾಗ ಬದಿಗೆ ಸರಿಸಿಬಿಡುತ್ತಾರೆ.

ತಮ್ಮ ಚರಿತ್ರೆಯಲ್ಲಿ ಎಂದೂ ಕಾಣದಂತಹ ಅದ್ಭುತವಾದ ಗಣರಾಜ್ಯದಂತಹ ಸಾಂಸ್ಥಿಕ ರೂಪವನ್ನು ಸೋಲಿಸುವಂತಹ ಸಾಮರ್ಥ್ಯ ಭಾರತೀಯರಿಗೆ ಮಾತ್ರ ಸಾಧ್ಯ.

ದಲಿತ್ ಡೈರಿ

ಗಣರಾಜ್ಯ ಆಕ್ರಮಣಕ್ಕೊಳಗಾಗಿದೆ

ತನ್ನ ೫೬ನೇ ಗಣರಾಜ್ಯದ ವಾರ್ಷಿಕೋತ್ಸವ ಸಂದರ್ಭದಲ್ಲಿ ರಾಷ್ಟ್ರಪತಿ ಭವನದಲ್ಲಿ ಆಹ್ವಾನಿತರಾದ ಶ್ರೇಷ್ಠ ಅತಿಥಿಗಳಿಗೆ ಒಂದು ಟೀ ಸತ್ಕಾರ ಮಾಡದಷ್ಟು ಅಯೋಗ್ಯ ಸ್ಥಿತಿಯನ್ನು ತಲುಪಿದೆಯಾ ? ಪ್ರೊಫೆಸರ್ ರೊಮಿಲಾ ಥಾಪರ್, ಪ್ರಸಿದ್ಧ ಮಾರ್ಕ್ಸಿಸ್ಟ್ ಚರಿತ್ರಕಾರರಾಗಿ ಅಮೇರಿಕಾದ ವಾಷಿಂಗ್ಟನ್ ಡಿ.ಸಿ.ಯ ಕಾಂಗ್ರೆಸ್‌ನ ಲೈಬ್ರರಿಯೊಟ್ಟಿಗೆ ಸೇರಿಕೊಂಡವರಾಗಿ, ಪದ್ಮಭೂಷಣ ಪ್ರಶಸ್ತಿಯನ್ನು ತಿರಸ್ಕರಿಸಿದ್ದಾರೆ. ರಾಷ್ಟ್ರಪತಿಗೆ ಬರೆದಿರುವ ಆಕೆಯ ಕಾಗದದಲ್ಲಿ ನಾನು ಕೆಲವು ವರ್ಷಗಳ ಹಿಂದೆಯೇ ನಿರ್ಧರಿಸಿದ್ದೇನೆಂದರೆ ನಾನು ಅಕಾಡೆಮಿಕ್ ಸಂಸ್ಥೆಗಳು ಮತ್ತು ನನ್ನ ವೃತ್ತಿಗೆ ಸಂಬಂಧಪಟ್ಟಂಥ ಪ್ರಶಸ್ತಿಗಳನ್ನಷ್ಟೇ ಸ್ವೀಕರಿಸುತ್ತೇನಲ್ಲದೆ ರಾಜ್ಯಾಂಗ ನೀಡುವ ಪ್ರಶಸ್ತಿಯನ್ನು ಸ್ವೀಕರಿಸುವುದಿಲ್ಲ.'

ಅಂದರೆ, ಭಾರತೀಯ ಗಣರಾಜ್ಯಕ್ಕೆ ಅವಮಾನ. ಆದರೆ ಅಕಾಡೆಮಿಕ್ ಪ್ರಶಸ್ತಿಗಳಿಗೆ ಸ್ವಾಗತ. ಸತ್ಯದ ದೃಷ್ಟಿಯಿಂದ ನೋಡುವುದಾದರೆ ಭಾರತೀಯ ಗಣರಾಜ್ಯಕ್ಕಿಂತ ಅಕಾಡೆಮಿಕ್ ಸಂಸ್ಥೆಗಳು, ಅತ್ಯಾಧುನಿಕವಾಗಿ ಸಾಮಾಜಿಕ ಪ್ರಶ್ನೆಗಳಿಗೆ ಸ್ಪಂದಿಸುವ, ಒಳಗೊಳ್ಳುವ ಕ್ರಿಯೆಯಲ್ಲಿ ತೊಡಗಿದ್ದಾವೆಂದೂ ಒಬ್ಬ ಚಕಿತಗೊಂಡು ಕೇಳಬಹುದಲ್ಲವೇ ?

ಭಾರತದಲ್ಲಿರುವ ಯಾವ ಸಂಸ್ಥೆ ಗಣರಾಜ್ಯಕ್ಕಿಂತ ಅತ್ಯಾಧುನಿಕ, ಪ್ರಗತಿಪರ, ಮತ್ತು ಒಳಗೊಳ್ಳುವ ಸಂಗತಿಯಾಗಿದೆಯೆಂದು ಒಬ್ಬ ದಲಿತ ನೋಡಬಹುದು ? ಯಾವುದೇ ಒಂದು ಸರ್ಕಾರಿ ಇಲಾಖೆ ಅಥವಾ ಕಛೇರಿಯನ್ನು ತೆಗೆದುಕೊಂಡರೂ ಅಲ್ಲಿ ಕೆಲವರಾದರೂ ದಲಿತರಿರುತ್ತಾರೆ. ಆದಿವಾಸಿಗಳೊಡನೆ ದಲಿತರ ಶ್ರಮಶಕ್ತಿ ಶೇ. ೧೮ ರಷ್ಟು ಇದೆ. ಗ್ರೂಪ್ 'ಎ' ವಿಭಾಗದಲ್ಲೂ ದಲಿತರು ಶೇ ೧೨ ರಷ್ಟಿದ್ದಾರೆ. ಹೀಗಿರುವಲ್ಲಿ ಒಂದೇ ಉಸುರಿಗೆ ದಲಿತನೊಬ್ಬ ತನಗೆಂದಾದರೂ ರಾಜ್ಯಾಂಗದ ಪದ್ಮವಿಭೂಷಣ ಪ್ರಶಸ್ತಿ ದೊರೆತಲ್ಲಿ ತಿರಸ್ಕರಿಸಬಹುದೇ ?

ಈ ಗಣರಾಜ್ಯದ ಹೊರಗೆ ಎಷ್ಟು ಶ್ರೇಷ್ಠ ಸಂಸ್ಥೆಗಳಿವೆ! ನಿದರ್ಶನಕ್ಕೆ ರೊಮಿಲಾ ಥಾಪರ್ ಜೆಎನ್‌ಯು ಅಥವಾ ದೆಹಲಿ ವಿ.ವಿ. ಅಥವಾ ಹೈದ್ರಾಬಾದ್ ವಿಶ್ವವಿದ್ಯಾಲಯಗಳು ನೀಡುವ ಗೌರವವನ್ನು ತಿರಸ್ಕರಿಸುವುದಿಲ್ಲವಂತೆ.

ಈ ಅಕಾಡೆಮಿಕ್ ಸಂಸ್ಥೆಗಳು ಎಷ್ಟು ಒಳಗೊಳ್ಳುವುಗಳಾಗಿವೆ ? ಅವೆಷ್ಟು ಆಧುನಿಕ ಮತ್ತು ಪ್ರಗತಿಪರವಾಗಿವೆ ? ದಲಿತರಿಗೆ ಸರ್ಕಾರಿ ಸ್ವಾಮ್ಯದ ಸಂಘಟನೆಗಳಾದ ಎನ್‌ಟಿಪಿಸಿ, ಐಓಸಿ, ಬಿಎಚ್‌ಇಎಲ್, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾಗಳು ಈ ಜೆಎನ್‌ಯು, ದೆಹಲಿ ವಿ.ವಿ. ಅಥವಾ ಹೈದ್ರಾಬಾದ್ ವಿ.ವಿಗಳಿಗಿಂತ ಹೆಚ್ಚಾಗಿ ಆಧುನಿಕ ಮತ್ತು ಪ್ರಗತಿಪರವಾಗಿಲ್ಲವೆ. ಈ ಎಲ್ಲಾ ವಿಶ್ವವಿದ್ಯಾಲಯಗಳು ಒಂದು ಹಳ್ಳಿಯ ಪಂಚಾಯತ್‌ನಷ್ಟು ಸ್ವಾಯತ್ತತೆಯನ್ನು ಅನುಭವಿಸುತ್ತವಷ್ಟೆ

ಈ ಹಳ್ಳಿ ಪಂಚಾಯತ್‌ಗಳು ದಲಿತರಿಗೆಷ್ಟು ನರಕವಾಗಿವೆ. ಒಂದುವರೆ ದಶಕಗಳ ಹಿಂದೆ ದಿವಂಗತ ರಾಜೀವ್ ಗಾಂಧಿ ತಂದ ಈ ರಾಕ್ಷಸ ಪಂಚಾಯತ್ ರಾಜ್ ಮಸೂದೆ ೧೯೯೨ರಲ್ಲಿ ೭೩ನೇ ಸಂವಿಧಾನ ತಿದ್ದುಪಡಿಯಲ್ಲಿ ಅಂತ್ಯವಾಗುತ್ತದೆ. ರಾಜ್ಯಾಂಗದ ಹಿಡಿತದಿಂದ ಆದಷ್ಟು ವಿಕೇಂದ್ರಗೊಳಿಸಬೇಕೆನ್ನುವ ತರಲೆ ವಾದಗಳು ಪದೇ ಪದೇ ಬರುತ್ತಲೇ ಇವೆ. ಆದರೆ ಅದೇ ಸಂದರ್ಭದಲ್ಲೇ ತುಂಡು ಕೈಗಾರಿಕಾ ದನಿಗಳು ಕಾಣಿಸಿಕೊಂಡು 'ಇನ್ಸ್‌ಪೆಕ್ಟರ್ ರಾಜ್' ಅಂತ್ಯಗೊಳ್ಳಬೇಕೆಂಬ ಘೋಷಣೆ ಹೊರಡಿಸಿದ್ದು.

ತಾಂತ್ರಿಕವಾಗಿ ಒಬ್ಬ ಇನ್ಸ್‌ಪೆಕ್ಟರ್‌ನ ಕೆಲಸವೆಂದರೆ ಒಂದು ಉತ್ಪಾದನಾ ಘಟಕದಲ್ಲಿ ಎಷ್ಟು ಉತ್ಪಾದನೆ ಆಗಿದೆಯೆನ್ನುವುದರ ಕುರಿತ ದಾಖಲೆ ಇಡುವುದು ಅಥವಾ ಒಂದು ಉದ್ಯಮದ ಆದಾಯವನ್ನು ಪರಿಶೀಲಿಸಿ ತೆರಿಗೆ ಅಧಿಕಾರಿಗಳ ಎದುರು ಘೋಷಿಸುವುದು. ಈ ಇನ್ಸ್‌ಪೆಕ್ಟರ್ ತೆರಿಗೆ ವಂಚಕರನ್ನು ಹಿಡಿದು ಲಂಚ ವಸೂಲಿ ಮಾಡುವುದು ನಿಜ. ಆದರೆ ಈ ವಾಣಿಜ್ಯ ಮಳಿಗೆಗಳು 'ಇನ್ಸ್‌ಪೆಕ್ಟರ್ ರಾಜ್'ನ ಅಂತ್ಯವನ್ನು ಬಯಸಿದವೇ ಹೊರತು ಲಂಚವನ್ನು ಅಲ್ಲ. ಅಂದರೆ ಅವರು ತೆರಿಗೆ ವಂಚನೆಯನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಬೇಕೆ ಹೊರತು ಅವರಿಗೆ ಬೇರೆ ಹಿತಾಸಕ್ತಿಯೇನೂ ಇಲ್ಲ.

ಭಾರತೀಯ ಗ್ರಾಮಗಳಲ್ಲಿ ಕಾನೂನು ವ್ಯವಸ್ಥೆ ಕುಸಿದಿದೆ. ಕಾನೂನು ಮುರಿಯುವುದೆಂದರೆ ಅಲ್ಲಿ ಅದು ಧೈರ್ಯ ಪ್ರದರ್ಶನ. ಅನೇಕ ಬಾರಿ ಪಂಚಾಯತ್ ಚುನಾವಣೆಯಲ್ಲಿ ಗೆಲ್ಲುವವರು ಕಾನೂನು ವಿರೋಧಿಗಳಾಗಿಯೇ ಇರುತ್ತಾರೆ. ಇವರಿಗೆ ರಾಜ್ಯಾಂಗ ಎಂದೂ ಕಡು ವೈರಿಯಾಗಿ ಕಾಣುತ್ತದೆ. ಆದ್ದರಿಂದ ಅವರ ಹೆದರಿಕೆ ನೇರವಾಗಿಯೇ ಪೊಲೀಸ್ ಹುದ್ದೆಯ ವಿರುದ್ಧವೇ. ಪಂಚಾಯತ್ ವ್ಯವಸ್ಥೆಯನ್ನು ಎಷ್ಟೇ ರಮ್ಯಾತ್ಮಕವಾಗಿ ಹೊಗಳಿದರೂ ಸಹ ಅದರಲ್ಲಿ ವಿಶೇಷ ಅರ್ಥವೇನೂ ಇಲ್ಲ. ಇಂತೆಡೆ ದಲಿತರು ಪಂಚಾಯತ್ ಪ್ರೆಸಿಡೆಂಟ್ ಆದರೂ ಸಹ ಅವರ ಸಾಮಾಜಿಕ ಅಲ್ಪ ಸಂಖ್ಯೆಯಿಂದಾಗಿ ಏನೂ ಮಾಡಲಾಗದು.

ಈ ಹಿಂದೆ ದಲಿತನೊಬ್ಬ ಅಭಿವೃದ್ಧಿ ಕೆಲಸದ ಕುರಿತಂತೆ ತಾಲ್ಲೂಕು ಅಧಿಕಾರಿಗಳ ವಿರುದ್ಧ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ದೂರು ಸಲ್ಲಿಸಬಹುದಾಗಿತ್ತು. ಆದರೆ ಈಗ ಪಂಚಾಯತ್ ಪ್ರೆಸಿಡೆಂಟ್‌ನ ವಿರುದ್ಧ ದೂರು ಕೊಡಲಾದೀತೆ? ಈ ಪಂಚಾಯತ್ ರಾಜ್ ವ್ಯವಸ್ಥೆಯಿಂದಾಗಿ ರಾಜ್ಯವು ಹಳ್ಳಿಯ ಸಮಾಜದೊಳಗೆ ಪ್ರವೇಶಿಸಲಾಗದು. ಅಂದರೆ ಗಣರಾಜ್ಯ ವ್ಯವಸ್ಥೆ ಗ್ರಾಮೀಣ ಬದುಕಿನಲ್ಲಿ ಏನೇನೂ ಮಾಡಲಾಗದು. ರಾಜ್ಯಾಂಗದ ಗೈರು ಹಾಜರಿಯಿಂದಾಗಿ ಸಂಪ್ರದಾಯಿಕ ಸಮಾಜದಲ್ಲಿ ಏನೂ ನಡೆಯುತ್ತದೆ. ಇದು ಗಣರಾಜ್ಯದ ಉದ್ದೇಶಗಳ ವಿರುದ್ಧವೇ ಇರುವುದು. ಆದ್ದರಿಂದ ಗ್ರಾಮ ಪಂಚಾಯತ್ ಎನ್ನುವುದು ಜಾತಿ ಪಂಚಾಯತಿಯ ಮುಂಧುವರಿದ ಭಾಗವೇ ಆಗಿದ್ದು ದಲಿತರು ಜಾತಿ ಕಾನೂನನ್ನು ಅನುಸರಿಸುವಂತೆ ಒತ್ತಾಯಿಸಲಾಗುತ್ತದೆ.

ಇಂದು ಈ ಗಣರಾಜ್ಯವು ತನ್ನ ಅಧಿಕಾರವನ್ನೇ ಕಳೆದುಕೊಳ್ಳುವ ಸಂದರ್ಭವನ್ನು ಎದುರಿಸಬೇಕಾಗಿ ಬಂದಿದೆ. ಭಾರತ ತನ್ನ ವಿಸ್ತೃತ ನೆಲೆಯಲ್ಲಿ ಎರಡು ಸಂಸ್ಥೆಗಳನ್ನು ಹೊಂದಿದೆ. ೧) ರಾಜ್ಯಾಂಗ ೨) ಸಮಾಜ. ರಾಜ್ಯಾಂಗವೂ ಆಧುನಿಕತೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಆದರ್ಶಗಳಿಗೆ ನಿಂತರೆ, 'ಸಮಾಜ'ವು ಪ್ರತಿಗಾಮಿತನ, ಶ್ರೇಣೀಕೃತ ಜಾತಿ ಪದ್ಧತಿ ಮತ್ತು ದಲಿತರನ್ನು ಮತ್ತು ಆದಿವಾಸಿಗಳನ್ನು ಹೊರಗಿಡಲಷ್ಟೇ ಶಕ್ತವಾದುದು. ಯಾವಾಗ ಗಣರಾಜ್ಯದ ಅಧಿಕಾರವನ್ನು ಅಕಾಡೆಮಿಕ್ ತಿರಸ್ಕರಿಸುತ್ತವೋ ಆಗ ಗ್ರಾಮ ಪಂಚಾಯತಿಗಳು ಮತ್ತು ಪ್ರಜಾಪ್ರಭುತ್ವ ಬಲಿಪಶುವಾಗುತ್ತದೆ. ಸ್ಪಷ್ಟವಾಗಿ ಇಂದು ಭಾರತದಲ್ಲಿ ಅಪ್ರಜಾಸತ್ತಾತ್ಮಕ ಕ್ರಿಯೆಗಳೇ ಪುರಸ್ಕಾರಗೊಳ್ಳುತ್ತಿವೆ. ದುರಂತವೆಂದರೆ ಇದಕ್ಕೆ ರಾಷ್ಟ್ರೀಯ ಮಟ್ಟದ ಸಮ್ಮತಿಯೂ ಸಹ ದೊರೆಯುತ್ತಿದೆ. □

> ಇಂದು ಈ ಗಣರಾಜ್ಯವು ತನ್ನ ಅಧಿಕಾರವನ್ನೇ ಕಳೆದುಕೊಳ್ಳುವ ಸಂದರ್ಭವನ್ನು ಎದುರಿಸಬೇಕಾಗಿ ಬಂದಿದೆ. ಭಾರತ ತನ್ನ ವಿಸ್ತೃತ ನೆಲೆಯಲ್ಲಿ ಎರಡು ಸಂಸ್ಥೆಗಳನ್ನು ಹೊಂದಿದೆ. ೧) ರಾಜ್ಯಾಂಗ ೨) ಸಮಾಜ. ರಾಜ್ಯಾಂಗವೂ ಆಧುನಿಕತೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಆದರ್ಶಗಳಿಗೆ ನಿಂತರೆ, 'ಸಮಾಜ'ವು ಪ್ರತಿಗಾಮಿತನ, ಶ್ರೇಣೀಕೃತ ಜಾತಿ ಪದ್ಧತಿ ಮತ್ತು ದಲಿತರನ್ನು ಮತ್ತು ಆದಿವಾಸಿಗಳನ್ನು ಹೊರಗಿಡಲಷ್ಟೇ ಶಕ್ತವಾದುದು. ಯಾವಾಗ ಗಣರಾಜ್ಯದ ಅಧಿಕಾರವನ್ನು ಅಕಾಡೆಮಿಕ್ ತಿರಸ್ಕರಿಸುತ್ತವೋ ಆಗ ಗ್ರಾಮ ಪಂಚಾಯತಿಗಳು ಮತ್ತು ಪ್ರಜಾಪ್ರಭುತ್ವ ಬಲಿಪಶುವಾಗುತ್ತದೆ. ಇಂದು ಭಾರತದಲ್ಲಿ ಅಪ್ರಜಾಸತ್ತಾತ್ಮಕ ಕ್ರಿಯೆಗಳೇ ಪುರಸ್ಕಾರಗೊಳ್ಳುತ್ತಿವೆ. ದುರಂತವೆಂದರೆ ಇದಕ್ಕೆ ರಾಷ್ಟ್ರೀಯ ಮಟ್ಟದ ಸಮ್ಮತಿಯೂ ಸಹ ದೊರೆಯುತ್ತಿದೆ.

ಆದರ್ಶ - ನಿಷ್ಠಾವಂತರಿಂದ ಪರ್ಯಾಯ ಸಾಧ್ಯ

೧. ಈಗಿನ ರಾಜಕಾರಣ ಕಲುಷಿತ ಎಂಬುದರ ಬಗ್ಗೆ ಎರಡು ಮಾತಿಲ್ಲ. ಇದನ್ನು ಬಿಟ್ಟು ಸ್ವಚ್ಛ ರಾಜಕಾರಣ ಸಾಧ್ಯವೇ ಎಂಬುದನ್ನು ವಿಚಾರಣೆಗೊಳಪಡಿಸಬೇಕಾಗಿದೆ. ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಇವೆರಡೂ ಸಮಸ್ತ ಜನಸಮುದಾಯದ ಚಳವಳಿಗಳೆಂದು ಹೇಳಲು ಸಾಧ್ಯವಿಲ್ಲ. ದಲಿತ ಸಂಘರ್ಷ ಸಮಿತಿಯು ದಲಿತರಿಗೆ ಮೀಸಲಾತಿ, ರಿಯಾಯಿತಿಗಳು ಮತ್ತು ಉಚಿತ ಸೌಲಭ್ಯಗಳ ಬಗ್ಗೆ ಮಾತ್ರ ಕಾಳಜಿ ಹೊಂದಿದೆ. ಅದರ ಮುಖಂಡರು ವೈಯಕ್ತಿಕ ಪ್ರತಿಷ್ಠೆಗಾಗಿ ಈ ಚಳವಳಿಯನ್ನು ಚೂರು ಮಾಡಿದ್ದಾರೆ. ರೈತ ಸಂಘ ಎನ್ನುವುದು ಎರಡು ಮೇಲ್ಜಾತಿಗಳಲ್ಲಿನ ಭೂ ಮಾಲೀಕರ ಹಿತ ಕಾಪಾಡುವುದಕ್ಕೋಸ್ಕರ ಬೆಂಬಲ ಬೆಲೆ ಮತ್ತು ರಿಯಾಯಿತಿಗಳ ಬಗ್ಗೆ ಹೋರಾಡುತ್ತಾ ಜಾತಿಯ ಆಧಾರದ

○ ಪಿ. ಕೋದಂಡರಾಮಯ್ಯ
ಮಾಜಿ ಲೋಕಸಭಾ ಸದಸ್ಯರು

ಮೇಲೆ ಎರಡು ಗುಂಪಾಗಿದೆ. ಆದುದರಿಂದ ಈ ಎರಡು ಜನಪರ ಚಳವಳಿಗಳೆಂದು ಹೇಳಲಾಗದು. ಆದುದರಿಂದ ಈ ಪ್ರಯತ್ನ ಯಶಸ್ವಿಯಾಗುವ ಸಾಧ್ಯತೆಗಳು ಕಡಿಮೆ.

೨. ಹೊಸ ರಾಜಕೀಯ ಶಕ್ತಿ ಬೆಳೆಯಬೇಕಾದರೆ ಎಲ್ಲಾ ಸಂಘಟನೆಗಳಲ್ಲಿರುವ (ರಾಜಕೀಯ ಪಕ್ಷಗಳಲ್ಲಿರುವವರನ್ನೂ ಸಹ ಸೇರಿಸಿಕೊಂಡು) ಆದರ್ಶ ಮತ್ತು ನಿಷ್ಠಾವಂತ ರಾಜಕಾರಣಿಗಳು ಒಂದಾಗಿ ರೂಪಿಸಿದರೆ ಮಾತ್ರ ಸಾಧ್ಯ. ಇವುಗಳ ಅನುಷ್ಠಾನದಲ್ಲಿ ಜಾತಿ, ಕುಟುಂಬ, ದುರಾಸೆ ಮತ್ತು ದೌರ್ಜನ್ಯಗಳನ್ನು ಒಳಗೊಂಡಿವೆ. ನಕ್ಸಲೀಯರು ತಮ್ಮದೇ ಪರ್ಯಾಯ ರಾಜಕಾರಣವೆಂದು ಸಾರಿದ್ದಾರೆ. ಹಿಂಸೆಯಿಂದ ಬಾಳುವವರು ಹಿಂಸೆಯಿಂದಲೇ ಕೊನೆಗೊಳ್ಳುವರು. ಆದುದರಿಂದ ಹಿಂಸಾರಹಿತ ಉಗ್ರ ಹೋರಾಟ ಹೊಂದಿರುವ ಸಂಘಟನೆಯೇ ಪರ್ಯಾಯ ರಾಜಕಾರಣವನ್ನು ರೂಪಿಸಲು ಸಾಧ್ಯ.

೩. ವ್ಯಕ್ತಿಗಳಿಗೆ ಶಕ್ತಿ ಇದೆ. ಶಕ್ತಿಯು ವ್ಯಕ್ತಿಗಳ ಸಂಘಟನೆಯಿಂದ ಕೂಡಿದೆ. ಆದುದರಿಂದ ಸೈದ್ಧಾಂತಿಕ ಶಕ್ತಿ ಮತ್ತು ನಿಷ್ಠುರ ವ್ಯಕ್ತಿಗಳು ಒಗ್ಗೂಡಿದರೆ ಮಾತ್ರ ಹೊಸ ರಾಜಕೀಯ ಶಕ್ತಿಯನ್ನು ರೂಪಿಸಲು ಸಾಧ್ಯ. ಸಿದ್ಧಾಂತವಾಗಲೀ ಅಥವಾ ವ್ಯಕ್ತಿಯಾಗಲೀ ಕುದುರೆ ಕಣ್ಣಿಗೆ ಕಟ್ಟಿದ ನೇರದೃಷ್ಟಿಯಾಗಿರಬಾರದು. ರಾಜಕೀಯದಲ್ಲಿ ಜನರ ಹಿತಾಸಕ್ತಿಯನ್ನು ಕಾಪಾಡುವ ಮತ್ತು ಬೆಳೆಸುವ ಉದ್ದೇಶ ಅನಿವಾರ್ಯ. ಇದನ್ನು ಕಾರ್ಯಗತಗೊಳಿಸಲು ಅಧಿಕಾರಕ್ಕೆ ಬರುವುದು ಸಹ ಅಷ್ಟೇ ಅನಿವಾರ್ಯ. ಒಂದು ಸಂಘಟನೆಯಲ್ಲಿ ಬಹುತೇಕ ಶಕ್ತಿಗಳು ಮತ್ತು ವ್ಯಕ್ತಿಗಳು ನಿಸ್ವಾರ್ಥಿಗಳಾಗಿರಬೇಕು. ಅಂತಹ ರಾಜಕೀಯ ಶಕ್ತಿ ಬೆಳೆದು ಅದರಲ್ಲಿ ಆಕಸ್ಮಿಕವಾಗಿ ಬಂದಿರಬಹುದಾದ ದುಷ್ಟ ಶಕ್ತಿಗಳನ್ನು ಉಚ್ಚಾಟಿಸುತ್ತಾ ಮುಂದೆ ಸಾಗಬೇಕು. ನಮ್ಮ ಸಮಾಜ ಎಷ್ಟು ವಿಕೃತವಾಗಿ ಬೆಳೆದಿದೆ ಎಂದರೆ ಸಾಮಾನ್ಯರಲ್ಲಿ ಬಹುತೇಕ ಮಂದಿ ಮನೋ ದೌರ್ಬಲ್ಯಗಳನ್ನು ಈಡೇರಿಸಿಕೊಳ್ಳಲು ತಮ್ಮನ್ನು ಮಾರಾಟ ಮಾಡಿಕೊಳ್ಳಲು ಸಹಾ ತಯಾರಾಗಿದ್ದಾರೆ. ಯಾವುದೇ ಚುನಾವಣೆ ನೋಡಿದರೂ ಎರಡು ವಿಷಯಗಳು ಮನದಟ್ಟಾಗುತ್ತವೆ. ಒಂದು ಜಾತಿ, ಮತ್ತೊಂದು ಆಮಿಷಗಳಿಗೆ ಬಲಿಯಾಗುವುದು. ಇವನ್ನು ಹೋಗಲಾಡಿಸಲು ಡಾ॥ ರಾಮಮನೋಹರ ಲೋಹಿಯಾರವರ ಸಾಮಾಜಿಕ ನ್ಯಾಯ ಮತ್ತು ಜಯಪ್ರಕಾಶ್ ನಾರಾಯಣರ ಪ್ರಾಮಾಣಿಕ ರಾಜಕೀಯಗಳಿಗೆ ಒತ್ತು ಕೊಡುವ ತತ್ವ ಬದ್ಧತೆ ಬೇಕು. ಧರ್ಮವನ್ನು ಬಲು ದೂರ ಇಡಬೇಕು. ಮಠಗಳತ್ತ ನೋಡಲೂಬಾರದು. ಉಗ್ರ ಮತ್ತು ಸಂಪೂರ್ಣ ಕ್ರಾಂತಿಯಿಂದ ಸಮಾಜದಲ್ಲಿನ ದುಷ್ಟ ಶಕ್ತಿಗಳನ್ನು ಹತ್ತಿಕ್ಕುವ ಪರಿಸ್ಥಿತಿಯನ್ನು ಸೃಷ್ಟಿಸಬೇಕು. ಇವೆಲ್ಲವೂ ಕಷ್ಟಸಾಧ್ಯ. ಆದರೆ ಸಿನಿಕತನವನ್ನು ಬಿಡಬೇಕು.

೪. ನಿಜವಾದ ಸಮಾಜವಾದಿ ಚಿಂತಕರು ನಮ್ಮ ಮಧ್ಯದಲ್ಲೇ ಇದ್ದಾರೆ. ಡೊಂಕು ಸಮಾಜವಾದಿಗಳು ಅಧಿಕಾರ

ಪರ್ಯಾಯ ರಾಜಕಾರಣ ಸಮಾಲೋಚನ ಸಭೆಯಲ್ಲಿ ಭಾಗವಹಿಸಿದ್ದ ಕಾರ್ಯಕರ್ತರು

ಎಪ್ಪತ್ತರ ದಶಕದಲ್ಲಿ ಆರಂಭಗೊಂಡ ಜನಪರ ಚಳವಳಿಯ ಕವಲುಗಳಾದ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಇತರೇ ಜನಪರ ಚಳವಳಿಗಳು ಹಾಗೂ ವ್ಯಕ್ತಿ-ಶಕ್ತಿಗಳೊಂದಿಗೆ ಜೊತೆಗೂಡಿ ಪರ್ಯಾಯ ರಾಜಕಾರಣವನ್ನು ರೂಪಿಸುವ ಐತಿಹಾಸಿಕ ಪ್ರಯತ್ನವೊಂದಕ್ಕೆ ಮುಂದಾಗಿವೆ. ಸ್ವಾರ್ಥ ಮತ್ತು ಅಧಿಕಾರ ಲಾಲಸೆಯೇ ರಾಜಕಾರಣದ ಜೀವಾಳವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಪರ್ಯಾಯ ರಾಜಕಾರಣದ ಈ ಪ್ರಯತ್ನ ಜನಪರ ವಿಚಾರಧಾರೆಯುಳ್ಳವರಲ್ಲಿ ಹೊಸ ಸಂಚಲನವನ್ನು ಮೂಡಿಸಿದೆ. ಹಿಂದೆ ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡು ಕಾಲಾನಂತರ ವಿವಿಧ ರಾಜಕೀಯ ಪಕ್ಷಗಳಲ್ಲಿ ಸೇರಿಹೋಗಿದ್ದ ವ್ಯಕ್ತಿಗಳೂ ಈ ಪ್ರಯತ್ನದಿಂದಾಗಿ ಖುಷಿಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ 'ಸಂವಾದ' ನಾಡಿನ ಚಿಂತಕರೊಂದಿಗೆ ಚರ್ಚೆ ನಡೆಸಬೇಕೆಂದು ಇಚ್ಛಿಸಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಮುಂದಿನ ಸಂಚಿಕೆಗಳಲ್ಲಿ ಉಳಿದವುಗಳನ್ನು ಪ್ರಕಟಿಸುತ್ತೇವೆ. ಓದುಗರೂ ಈ ಸಂವಾದದಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

ಪ್ರಶ್ನೆಗಳು

೧. ಜನಪರ ಚಳವಳಿಗಳು (ವಿಶೇಷವಾಗಿ ದಸಂಸ ಮತ್ತು ರೈತಸಂಘ) ಜೊತೆಗೂಡಿ ರೂಪಿಸ ಹೊರಟಿರುವ ಪರ್ಯಾಯ ರಾಜಕಾರಣ ಪ್ರಯತ್ನಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

೨. ಪ್ರಸ್ತುತ ಚಾಲ್ತಿಯಲ್ಲಿರುವ ರಾಜಕಾರಣಕ್ಕೆ ಹೊರತಾದ 'ಪರ್ಯಾಯ ರಾಜಕಾರಣ' ಹೇಗಿರಬೇಕೆಂದು ನೀವು ಬಯಸುತ್ತೀರಿ ?

೩. ಎಂಥ ಶಕ್ತಿಗಳು ಮತ್ತು ವ್ಯಕ್ತಿಗಳು ಒಗ್ಗೂಡಿದರೆ 'ಪರ್ಯಾಯ ರಾಜಕಾರಣ' ರೂಪಿಸಲು ಸಾಧ್ಯ ?

೪. ಜನಪರ ಚಳವಳಿಗಳು - ವ್ಯಕ್ತಿ - ಶಕ್ತಿಗಳು ಒಗ್ಗೂಡಲು ತಾವು ಸೂಚಿಸುವ ಮಾರ್ಗೋಪಾಯಗಳೇನು ?

೫. ಪರ್ಯಾಯ ರಾಜಕೀಯ ಶಕ್ತಿ (ಪಕ್ಷ) ಹೊಂದಬಹುದಾದ ನೀತಿ ಸಂಹಿತೆ ಮತ್ತು ಕಾರ್ಯಸೂಚಿಗಳೇನು ?

ಲಾಲಸೆ ಮತ್ತು ಹಣದಾಸೆಯಿಂದ ನಾನಾ ಪಕ್ಷಗಳಿಗೆ ಮಿನಿಸ್ಟರು ಮತ್ತು ಮುಖಂಡರುಗಳಾಗಿ ಹೋಗಿದ್ದಾರೆ. ಕಟ್ಟಾ ಸಮಾಜವಾದಿಗಳು ಪ್ರಚಾರಪ್ರಿಯರಾಗದೇ ತಮ್ಮ ಶಕ್ತಿಯನುಸಾರ ಜನಪರ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಮಾಜವಾದವನ್ನು ಅನುಸರಿಸು ವವರು ಪ್ರಾಮಾಣಿಕತೆಯನ್ನು ಸಹ ಮೈಗೂಡಿಸಿಕೊಂಡಿದ್ದಾರೆ. ಸಮಾಜವಾದವನ್ನು ಅನುಸರಿಸುವವರು ಪ್ರಾಮಾಣಿಕತೆಯನ್ನು ಸಹ ಮೈಗೂಡಿಸಿಕೊಂಡಿದ್ದಾರೆ. ಅಂತಹವರು ಎಲ್ಲಾ ಪಕ್ಷಗಳಲ್ಲೂ ಇದ್ದಾರೆ. ಆ ವ್ಯಕ್ತಿಗಳನ್ನು ಗುರುತಿಸಿ ಒಂದು ಗೂಡಿಸಿ ಒಂದು ಶಕ್ತಿಯನ್ನಾಗಿ ಬೆಳೆಸಬೇಕಾಗಿದೆ. ಯಾವುದೇ ಸಿದ್ಧಾಂತವು ಸದಾ ಕಾಲಕ್ಕೆ ಸರಿಯಾಗಿದೆ ಎಂದು ಭಾವಿಸಲು ಸಾಧ್ಯವಿಲ್ಲ. ಕಾಲಾನುಗುಣವಾಗಿ ಸಿದ್ಧಾಂತಗಳಲ್ಲಿ ಬದ ಲಾವಣೆಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಗಾಂಧಿ ಮತ್ತು ಲೋಹಿಯಾ ತತ್ವಗಳಲ್ಲಿ ಸಹ ಬದಲಾವಣೆಗಳಾಗಬೇಕು. ಉದಾರೀಕರಣ ವಾದವನ್ನು ಸಂಪೂರ್ಣ ನಿರ್ಲಕ್ಷಿಸಲು ಸಾಧ್ಯವಿಲ್ಲ. ವ್ಯಕ್ತಿ ಸ್ವತಂತ್ರವನ್ನು ನಿಯಂತ್ರಣಗಳ ಚೌಕಟ್ಟಿನಲ್ಲಿ ಚಲಾಯಿಸುವ ಉದಾರತೆಯನ್ನು ಮೈಗೂಡಿಸಿಕೊಳ್ಳಬೇಕು. ರಿಯಾಯಿತಿಗಳು ಮತ್ತು ಮೀಸಲಾತಿಗಳಿಗೆ ಕಡಿವಾಣ ಹಾಕಬೇಕು. ಜಾತಿ ಸಂಘಟನೆಗಳಲ್ಲಿ ಯಾರು ಭಾಗವಹಿ ಸದಂತೆ ಕಟ್ಟುನಿಟ್ಟಾಗಿ ವ್ಯವಹರಿಸಬೇಕು. ಕಾಲಾನುಗುಣವಾಗಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡು ಸಾಮಾಜಿಕ ನ್ಯಾಯ ಮತ್ತು ಪ್ರಾಮಾಣಿಕ ರಾಜಕೀಯವನ್ನೇ ಸೂತ್ರಗಳಾಗಿ ಅಳವಡಿಸಿಕೊಂಡು ಸಂಪೂರ್ಣ ಸ್ವಾತಂತ್ರ್ಯ ಸಾಧಿಸಲು ಉಗ್ರ ಹೋರಾಟಗಳನ್ನು ಹಮ್ಮಿಕೊಳ್ಳಬೇಕು. ಜೆ.ಪಿ. ಚಳವಳಿಯನ್ನು ಪುನಃ ಪ್ರಾರಂಭಿಸಲು ಈಗ ಒಳ್ಳೆಯ ಸಮಯ.

೫. ಮೊದಲನೆಯದಾಗಿ ಜನಸಂಖ್ಯಾ ನಿಯಂತ್ರಣ ವನ್ನು ಆದ್ಯತೆ ಮೇಲೆ ಜಾರಿಗೊಳಿಸಬೇಕು. ಎರಡನೆಯದಾಗಿ ರಿಯಾಯಿತಿಗಳನ್ನು ಕಡಿಮೆ ಮಾಡುವುದಲ್ಲದೆ ಎಲ್ಲಿ ರಿಯಾಯಿತಿಗಳು ಅಗತ್ಯವೆಂದೆನಿಸುತ್ತದೋ ಅಲ್ಲಿ ದುರ್ಬಲರಿಗೆ ಹೆಚ್ಚಿನ ರಿಯಾಯಿತಿ ಮತ್ತು ಸಬಲರಿಗೆ ಕಡಿಮೆ ರಿಯಾಯಿತಿ ಕೊಡಬೇಕು. ಭೂ ಸಂಸ್ಕರಣಗಳನ್ನು ಜಾರಿ ಮಾಡಿ ಉಳುವವನೇ ಒಡೆಯ ಎಂಬ ಸಿದ್ಧಾಂತವನ್ನು ಅಲ್ಪಾವಧಿಯಲ್ಲಿ ಅನುಷ್ಠಾನಗೊಳಿಸಬೇಕು. ಬಂಡವಾಳ ಹೂಡಿಕೆ, ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದಾದರೆ ಪ್ರೋತ್ಸಾಹಿಸಬೇಕು. ಅನಾವಶ್ಯಕ ಮುಷ್ಕರಗಳನ್ನು ಹಿಮ್ಮೆಟ್ಟಬೇಕು. ಸರ್ಕಾರಿ ಮತ್ತು ಸಹಕಾರಿ ಉದ್ಯಮಗಳಲ್ಲಿ ಮುಷ್ಕರಗಳನ್ನು ರದ್ದುಗೊಳಿಸಬೇಕು. ಹಕ್ಕುಗಳೊಂದಿಗೆ ಕರ್ತವ್ಯಗಳನ್ನು ಪಾಲಿಸುವ ನೀತಿ ಸಂಹಿತೆಯನ್ನು ರಚಿಸಬೇಕು.

ಭ್ರಷ್ಟ ರಾಜಕಾರಣಿಗಳ ಮೇಲೆ ನ್ಯಾಯಾಲಯ ಆರೋಪ ಹೊರಿಸಿದರೆ ಅಂತಹವರಿಗೆ ಸದರಿ ಮೊಕದ್ದಮೆಗಳಲ್ಲಿ ನಿರಪರಾಧಿಗಳೆಂದು ಘೋಷಿಸುವ ತನಕ ಯಾವುದೇ ಚುನಾವಣೆಯಲ್ಲಿ ಪಾಲ್ಗೊಳ್ಳುವ ಅವಕಾಶ ನೀಡಬಾರದು. ಶಿಕ್ಷಣ, ಆರೋಗ್ಯ, ರಸ್ತೆ ಕುಡಿಯುವ ನೀರಿನಂತಹ ಅಗತ್ಯ ಸೇವೆಗಳಿಗೆ ಅನುದಾನವನ್ನು ಹೆಚ್ಚಿಸಬೇಕು.

ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಮತ್ತು ಅಷ್ಟೇ ಬಾಧ್ಯತೆಗಳನ್ನು ಒಪ್ಪಿಸಬೇಕು. ಸರ್ಕಾರಿ ನೌಕರರು ಯಾವುದೇ ಜಾತಿ ಸಂಘಟನೆಗಳಲ್ಲಿ ಭಾಗವಹಿಸದಂತೆ ಕಟ್ಟು ನಿಟ್ಟಾಗಿ ನಿಯಮಗಳನ್ನು ಜಾರಿಗೊಳಿಸಬೇಕು. ಹೊಸದಾಗಿ ರಚಿಸಲ್ಪಡುವ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವ ಮತ್ತು ಸಾಮೂಹಿಕ ನಾಯಕತ್ವಕ್ಕೆ ಆದ್ಯತೆ ನೀಡುವುದು ಅಗತ್ಯ. □

೧. ದಸಂಸ ಮತ್ತು ರೈತಸಂಘ ಜೊತೆಗೂಡಿ ಪರ್ಯಾಯ ರಾಜಕೀಯವನ್ನು ರೂಪಿಸಲು ಪ್ರಯತ್ನಿಸ ಹೊರಟಿರುವುದು ಸ್ವಾಗತಾರ್ಹವಾದುದು. ಕೊನೆಗೂ ಪರ್ಯಾಯ ವ್ಯವಸ್ಥೆಗೆ ಮೂಲಶಕ್ತಿ ಆಗಬೇಕಾದುದು ಈ ಎರಡು ಶಕ್ತಿಗಳ ಒಂದುಗೂಡುವಿಕೆಯೇ. ಆದರೆ ಇದು ಕೂಡಲೇ ಆಗಿಬಿಡುತ್ತದೆ ಎಂದು ನನಗೆ ನಂಬಿಕೆಯಿಲ್ಲ. ಅಂಥ ಅನಿಸಿಕೆಯ ಮಧ್ಯೆಯೂ ಈ ಪ್ರಯತ್ನ ಸ್ವಾಗತಾರ್ಹ ವಾದುದು. ಏಳು-ಬೀಳುಗಳು ಹೋರಾಟದಲ್ಲಿ ಸಹಜವೆ.

ನೆಪದಲ್ಲಿ ತರಬೇಕೆಂದು ಬರಬರಾಟೆಯಲ್ಲಿದೆ. ಅದಕ್ಕೆ ಧರ್ಮಸೂತ್ರದ ಬೆಡಗಿನ ಬಣ್ಣವಿದೆ. ಹಾಗೆ ಕೇಳಿದರೆ ಅಂಚಿನಲ್ಲಿರುವ ಮನುಷ್ಯರ ಪರವಾದ ಧೋರಣೆಗಾಗಿ ಸಮಗ್ರ ವ್ಯಕ್ತಿತ್ವದಿಂದ ತೊಡಗಿಸಿಕೊಳ್ಳುತ್ತಿರುವ ಪಕ್ಷವೆಂದರೆ ಕಮ್ಯುನಿಸ್ಟ್ ಪಕ್ಷಗಳು. ಇದನ್ನು ಯಾರು ಒಪ್ಪಲಿ ಬಿಡಲಿ ಅದರ ಬದ್ಧತೆ ಮಾತ್ರ ಸದ್ಯಕ್ಕೆ ಅಚಲವಾದುದು. ಆದ್ದರಿಂದ ಜನಪರವಾದ- ದಲಿತಪರವಾದ ನಿಲುವಿಗೆ ತಕ್ಕಾದ ಸೈದ್ಧಾಂತಿಕ ನೆಲೆಯನ್ನು ಹೊಂದಿ, ಪಾರದರ್ಶಕವಾದ ಬದ್ಧತೆಯನ್ನು

ಸಂತೆಗೆ ನೇಯ್ದ ಬಟ್ಟೆ ಆಗುವುದು ಬೇಡ



○ ಆರ್.ವಿ. ಭಂಡಾರಿ
ಸಾಹಿತಿ, ಚಿಂತಕರು

ಅದೇನೇ ಇದ್ದರೂ ಈ ಪ್ರಯತ್ನ ಸಫಲವಾಗಬೇಕೆಂದರೆ ನೀವೇ ಕೇಳಿದ ಮುಂದಿನ ನಾಲ್ಕು ಪ್ರಶ್ನೆಗಳಿಗೆ ಖಚಿತವಾಗಿ ಉತ್ತರವನ್ನು ರೂಪಿಸಿಕೊಳ್ಳಬೇಕು. ಅದರ ವಿವರವೇ ಆ ಪ್ರಶ್ನೆಗಳಲ್ಲಿ ಅಡಕವಾಗಿದೆ ಎಂದು ತಿಳಿಯುತ್ತೇನೆ.

೨. ನಿಜವಾದ ರಾಜಕೀಯ - ರಾಜಕಾರಣವೆಂದರೆ ಆಡಳಿತ ಸೂತ್ರವನ್ನೇ ಹೇಗಾದರೂ ಮಾಡಿ ಕೈಯಲ್ಲಿ ಹಿಡಿಯುವುದಲ್ಲ, ಹಾಗೆ ಅಂಥ ಸೂತ್ರವನ್ನು ಹಿಡಿಯುವುದಕ್ಕೆ ಒಂದು ಘನವಾದ ಉದ್ದೇಶವಿರಬೇಕು. ಮತ್ತು ಅಂಥ ಉದ್ದೇಶದ ಸಾಧನೆಗಾಗಿ ಅದು ಒಂದು ಹೋರಾಟದಂತೆ ಬಳಸಲ್ಪಡಬೇಕು. ಮತ್ತು ಅದು ಗುಣಾತ್ಮಕವಾದ (ಕ್ವಾಲಿಟೇಟಿವ್) ಬದಲಾವಣೆಗೆ ಕಾರಣವಾಗಬೇಕು. ಈಗ ಚಾಲ್ತಿಯಲ್ಲಿರುವ ಯಾವ ಪಕ್ಷದ ರಾಜಕೀಯ ಎಂಥದು ? ಕಾಂಗ್ರೆಸ್ ತನಗಿನ್ನು ಭವಿಷ್ಯವೇ ಇಲ್ಲವೇನೋ ಅನ್ನುವಂತೆ ಆದಷ್ಟು ಹೆಚ್ಚನ್ನು ಆದಷ್ಟು ಬೇಗ ಬಾಚಿಕೊಳ್ಳಬೇಕೆಂಬ ಗಾಬರಿಯಲ್ಲಿದ್ದರೆ, ಬಿಜೆಪಿ ಅದೇ ಉದ್ದೇಶವನ್ನು ಮೂರು ಸಾವಿರ ವರ್ಷಗಳ ಹಿಂದಿನ ಸಂಸ್ಕೃತಿಯ ಮರುಕಳಿಕೆಯ

> **ಪರ್ಯಾಯ ರಾಜಕಾರಣ ಚುನಾವಣೆ ಸಮೀಪವಾದಾಗ ಸಂತೆಗೆ ನೇಯ್ದ ಮೂರು ಮೊಳದ ಬಟ್ಟೆ ಆಗಬಾರದು. ಅದರ ಬದಲು ಒಂದು ಚಳವಳಿಯಾಗಬೇಕು.**

ತೋರುವ ಪರ್ಯಾಯದ ರಾಜಕಾರಣ ಇಂದಿನ ಅವಶ್ಯಕತೆಯಾಗಿದೆ.

೩. ದಲಿತರು, ಸಣ್ಣ ರೈತರು ಮತ್ತು ಕಾರ್ಮಿಕ ಪರವಾದ ಶಕ್ತಿಗಳು ಒಂದು ಸಾಮೂಹಿಕ, ಸಮಾನ ಸೈದ್ಧಾಂತಿಕ ನೆಲೆಯನ್ನು ರೂಪಿಸಿಕೊಂಡು ಅದನ್ನು ವ್ಯಾಪಕವಾಗಿ ಯುವಜನಾಂಗದ ಮಧ್ಯೆ ಪ್ರಚುರ ಪಡಿಸುತ್ತ ಜನರ ಮಧ್ಯೆ ಹೋಗುವಂಥ ಶಕ್ತಿ ಮತ್ತು ನಿರಾಡಂಬರ, ಸೇವಾ ಮನೋಭಾವ, ಸರಳ ಜೀವನವನ್ನು ತಾವಾಗಿ ಸ್ವೀಕರಿಸಿ ಅಂತೆಯೇ ನಡೆಯುವ ವ್ಯಕ್ತಿಗಳ ಮುಂದಾಳ್ತನದ ಸಂಯೋಗ ಸಾಧ್ಯವಾಗಬೇಕು.

೪. ಮೊದಲು ತಾತ್ವಿಕದ ನಿರೂಪಣೆ, ಅದರ ವಿವರಣೆಯನ್ನು ರಾಜ್ಯದಾದ್ಯಂತ ಶಿಬಿರ, ವಿಚಾರಸಂಕಿರಣ, ಇತರ ಪಕ್ಷಗಳ ಕಾರ್ಯಕ್ರಮದ ವಿಶ್ಲೇಷಣೆ ಇತ್ಯಾದಿಗಳನ್ನು ವ್ಯಾಪಕವಾಗಿ ನಡೆಸಬೇಕು. ಅದೊಂದು ಚುನಾವಣೆ ಸಮೀಪ ವಾದಾಗ ಸಂತೆಗೆ ನೇಯ್ದ ಮೂರು ಮೊಳದ ಬಟ್ಟೆ ಆಗಬಾರದು. ಅದರ ಬದಲು ಒಂದು ಚಳವಳಿಯಾಗಬೇಕು. ಅದು ನಡತೆಯಲ್ಲಿ ಮೂಡಿಬರಬೇಕು.

೫. ಪರ್ಯಾಯ ರಾಜಕೀಯ ಅನ್ನುವ ಬದಲು ಪರ್ಯಾಯ ವ್ಯವಸ್ಥೆಯನ್ನು ತರುವ ಆಶಯ ಎಂದಿಟ್ಟು ಕೊಳ್ಳಬೇಕು. ಯಾಕೆಂದರೆ ಪರ್ಯಾಯ ರಾಜಕೀಯ ಎನ್ನುವುದು ಕೇವಲ ಅಧಿಕಾರ ಗಳಿಕೆಯ ಸಾಧನವಾಗದೆ ಅದೊಂದು ಸಾಂಸ್ಕೃತಿಕ ಪರ್ಯಾಯ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ಜಾತ್ಯತೀತತೆ - ಸೆಕ್ಯುಲರಿಸಂ- ಅದರ ಆದ್ಯಂತವಾದ ತತ್ವಗಳಲ್ಲಿ ಒಂದು. ಎರಡನೆಯದಾಗಿ ಅಸ್ಪೃಶ್ಯತೆಯ ವಿನಾಶ ಮತ್ತು ನಿಷೇಧ, ಒಂದು ಧಾರ್ಮಿಕ ಝೀಲ್ ಎನ್ನುವಂತೆ ಮುಂದಾಳುಗಳ ನಡತೆಯಲ್ಲಿ ನೀತಿಯೂ ಮೂಡಬೇಕು. ಪ್ರಚಾರವೂ ಆಗಬೇಕು. ನಮ್ಮ ದೇಶದ ಯುವಕ ಯುವತಿಯರ ಕೈಗೆ ಉದ್ಯೋಗ ಕೊಡುವಷ್ಟರ ತನಕ ಮತ್ತು ನಮ್ಮ ಔದ್ಯೋಗಿಕತೆಯ ವಿಸ್ತಾರವಿರಬೇಕು. ಅಂದರೆ ಅತಿಯಾದ ಯಂತ್ರಗಾರಿಕೆ ಉದ್ದೇಶವಾಗಬಾರದು. ಹಾಗೆಯೇ ರಾಜ್ಯ ಭಾಷೆ ಕನ್ನಡವನ್ನು ಕಡಿಮೆಯೆಂದರೂ ಪಿ.ಯು.ಸಿ. ತನಕವಾದರೂ ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವುದು ಮತ್ತು ಸಂಪೂರ್ಣವಾಗಿ ಆಡಳಿತ ಭಾಷೆಯನ್ನಾಗಿ ಮಾಡುವ ಬಗ್ಗೆ ಬದ್ಧತೆ ಹೊಂದಿರಬೇಕು. ಆರ್ಥಿಕ ಧೋರಣೆಯಲ್ಲಿ ಸಮ್ಮಿಶ್ರ ಆರ್ಥಿಕತೆ ಹೊಂದಿರಬೇಕು. ಇವು ಪರ್ಯಾಯದ ಬೆನ್ನೆಲುಬು ಎಂದು ನಾನು ಅಂದುಕೊಳ್ಳುತ್ತೇನೆ. □

ಹಠಮಾರಿತನ ಬಿಟ್ಟು ಜನಪರ ಕಾಳಜಿ ಸಾಬೀತುಪಡಿಸಲಿ

○ ಹರೀಶ್ ಕುಮಾರ್ ಗಂಗನಬೀಡು
ಲೇಖಕರು, ಚಿಂತಕರು



೧. ಜನ ಸಮುದಾಯ ಚುನಾವಣೆಯಲ್ಲಿ ತನ್ನ ಪ್ರತಿನಿಧಿಯನ್ನಾಗಿ ಕಡಿಮೆ ಅಯೋಗ್ಯನನ್ನು ಆಯ್ಕೆ ಮಾಡುವಂತಾ ನಕಾರಾತ್ಮಕ ಮನೋಗುಣವನ್ನು ಬೆಳೆಸಿಕೊಂಡಿರುವ ಇಂದಿನ ಸನ್ನಿವೇಶದಲ್ಲಿ ಪರ್ಯಾಯ ರಾಜಕಾರಣದ ಅವಶ್ಯಕತೆ ಖಂಡಿತಾ ಇದೆ.

ರೈತ-ದಲಿತ ಬಣಗಳು ಒಂದಗಿ ಪರ್ಯಾಯ ರಾಜಕಾರಣಕ್ಕೆ ಮುಂದಾಗಿರುವುದು ಆಶಾದಾಯಕ ಬೆಳವಣಿಗೆ. ಹಾಗೂ ಇದು ಬಹುವರ್ಷಗಳಿಂದ ನಿರೀಕ್ಷಿಸುತ್ತಿದ್ದ ಒಂದು ಆಯಾಮ ಕೂಡ. ಜನಪರವಾಗಿ ಚಿಂತಿಸುವ ಉಳಿದ ರೈತ-ದಲಿತ ಬಣಗಳು ತಮ್ಮ ಹಠಮಾರಿತನಗಳನ್ನು ಬಿಟ್ಟು ಪರ್ಯಾಯ ರಾಜಕಾರಣದಲ್ಲಿ ಸಹಭಾಗಿತ್ವವನ್ನು ತೋರುವುದರ ಮೂಲಕ ತಮ್ಮ ಜನಪರ ಕಾಳಜಿಗಳನ್ನು ಸಾಬೀತು ಪಡಿಸಬೇಕಿದೆ. ನಿನ್ನೆಯ ಹಿನ್ನೆಲೆಗಳನ್ನು ಮರೆತು ನಾಳಿನ ಮುನ್ನಡೆಯ ದಿಕ್ಕಿನಲ್ಲಿ ಇವು ಯೋಚಿಸಬೇಕಿದೆ. ಎಲ್ಲರ ಒಳಿತಿನ ಸಾಧನೆಗಾಗಿ ಇವರ ಅಭಿಪ್ರಾಯಗಳು ಒಂದಾಗಲೇ ಬೇಕಾದ ಸತ್ಯವನ್ನು ಈ ಬಣಗಳ ನಾಯಕರು ಅರಿಯಬೇಕಿದೆ.

ದಲಿತರು, ರೈತರು ಒಂದಾಗಿ ಬಾಳಬಲ್ಲರು ಎಂಬ ವಾತಾವರಣವನ್ನು ನಿರ್ಮಿಸಿ ನಂತರ ಪರ್ಯಾಯ ರಾಜಕಾರಣದ ಬಗ್ಗೆ ಯೋಚಿಸಬೇಕೆಂಬ ಮಾತುಗಳು ಕೇಳಿಬರುತ್ತಿವೆ. ಪ್ರಸ್ತುತ ರಾಜಕಾರಣದ ಬಗ್ಗೆ ಇವರೀರ್ವರೂ ಒಂದೇ ಧೋರಣೆ ಹೊಂದಿರುವಂಥವರು, ಆ ಕಾರಣಗಳೇ ಇಂದು ಇವರನ್ನು ಪರ್ಯಾಯ ರಾಜಕಾರಣಕ್ಕೆ ಪ್ರೇರೇಪಿಸುತ್ತಿವೆ. ಈ ಹಿಂದೆ ಚುನಾವಣೆಗಳ ಸಂದರ್ಭದಲ್ಲಿ ಈ ಎರಡೂ ಗುಂಪುಗಳು ಪರಸ್ಪರರ ಬೆಂಬಲಕ್ಕೆ ಚರ್ಚಿಸಿ ಗೆಲುವಿಗೆ ಶ್ರಮಿಸಿದ ಉದಾಹರಣೆಗಳಿವೆ. ಆದ್ದರಿಂದ ಒಂದಾಗುವ ಪ್ರಕ್ರಿಯೆ ಎಲ್ಲೋ ಒಂದು ಕಡೆ ಶುರುವಾದರೆ ತದನಂತರ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುವುದು ಕಷ್ಟವಾಗಲಾರದು.

೨. ಅ) ಪರ್ಯಾಯ ರಾಜಕಾರಣದ ಹಾದಿ ಪಾವಿತ್ರ್ಯದಿಂದ ಕೂಡಿರಬೇಕು; ಅದರ ಮಾತು-ಕೃತಿಯಲ್ಲಿ ಅಂತರ ಇರಬಾರದು. ಆ) ಆಸ್ತಿ ಮತ್ತು ಅಧಿಕಾರ ಕೇಂದ್ರಿಕೃತವಾಗುವುದನ್ನು ತಡೆಹಿಡಿಯಬೇಕು; ಇದರ ಮೂಲಕ ಮೇಲುವರ್ಗದ ನಿಯಂತ್ರಣಕ್ಕೆ ಒಳಪಟ್ಟ ದುರ್ಬಲ ವರ್ಗಗಳನ್ನು ತನ್ನತ್ತ ಕರೆದುಕೊಳ್ಳಬೇಕು. ಇ) ಜಾತಿ, ಸ್ವಜನ ಪಕ್ಷಪಾತ, ಅಧಿಕಾರ ಲಾಲಸೆ, ಭ್ರಷ್ಟಾಚಾರಗಳನ್ನು ಮೆಟ್ಟಿನಿಲ್ಲುವ ದೃಢ ನಿಲುವು ಹೊಂದಬೇಕು. ಈ) ಕೋಮುವಾದಿಗಳ ಕೈಗೆ ಸಿಲುಕಿ ಜೀವನವನ್ನು ದುರಂತಮಯವನ್ನಾಗಿ ಮಾಡಿಕೊಳ್ಳುತ್ತಿರುವ ಯುವ ಜನತೆಯನ್ನು ಕೋಮು ದ್ವೇಷದಿಂದ ವಿಮುಖರನ್ನಾಗಿಸುವ ಪ್ರಯತ್ನಗಳು ಮೊದಲಾಗಬೇಕು. ಇದರ ಮೂಲಕ ಸದೃಢ, ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ಯುವಶಕ್ತಿಯನ್ನು ಬಳಸಿಕೊಳ್ಳಬೇಕು. ಉ. ನಮ್ಮೆಲ್ಲಾ ಅಸ್ತಿತ್ವಗಳನ್ನು ನಾಶಮಾಡುತ್ತಾ ಭಾರತವು ಸೇರಿದಂತೆ ಪ್ರಪಂಚದ ಬಡದೇಶಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ಅಧಿನಾಯಕನಾಗಲು ಹೊರಟಿರುವ ಬಂಡವಾಳಶಾಹಿ, ಸಾಮ್ರಾಜ್ಯಶಾಹಿಗಳ, ಜಾಗತೀಕರಣದ ವಿರುದ್ಧ ಹೋರಾಡಿ ಶೋಷಿತ ವರ್ಗಗಳ ತಲ್ಲಣಗಳಿಗೆ ಮುಕ್ತಿ ಹಾಡುವುದು, ಇವು ಪ್ರಸ್ತುತ ರಾಜಕಾರಣಕ್ಕೆ ಹೊರತಾದ ಪರ್ಯಾಯ ರಾಜಕಾರಣವೆನಿಸಿಕೊಳ್ಳುತ್ತದೆ.

೩. ಪರ್ಯಾಯ ರಾಜಕಾರಣಕ್ಕೆ ಬುಡಕಟ್ಟು ಜನ, ಕೆಳವರ್ಗದವರು, ಅಲ್ಪಸಂಖ್ಯಾತರು, ಸ್ತ್ರೀಶಕ್ತಿ, ರೈತರು, ಕಾರ್ಮಿಕ ಶಕ್ತಿಗಳು ಪ್ರಮುಖ ಶಕ್ತಿಗಳಾಗಬಲ್ಲವು. ಜನಪರ ಸಂಘಟನೆಗಳು, ಅದರ ಮುಂಚೂಣಿಯಲ್ಲಿರುವ ನಾಯಕರು ಈ ಎಲ್ಲಾ ಸಮುದಾಯ, ವರ್ಗಗಳ ಏಕೀಕರಣಕ್ಕೆ ಶ್ರಮಿಸಿ ಅವರನ್ನು ಒಂದೇ ನೆಲೆಗೆ ತರುವ ಮೂಲಕ ಪರ್ಯಾಯ ರಾಜಕಾರಣಕ್ಕೆ ಸಾಂಘಿಕ ಶಕ್ತಿಯ ಒತ್ತಾಸೆಯನ್ನು ನೀಡಬಹುದಾಗಿದೆ. ಈ ಎಲ್ಲಾ ಶಕ್ತಿಗಳ ಸಹಭಾಗಿತ್ವದ ಮೂಲಕ ಸಾಮಾಜಿಕ ಅನಿಷ್ಟಗಳನ್ನು ಖಂಡಿತಾ ನಾಶಮಾಡಬಹುದು.

೪. ಕೆಲ ಜನಪರ ಚಳವಳಿಗಳ ವ್ಯಕ್ತಿ-ಶಕ್ತಿಗಳನ್ನು ಒಟ್ಟುಗೂಡಿಸುವ ಎಲ್ಲಾ ಬಗೆಯ ಪ್ರಯತ್ನಗಳು ಇಲ್ಲಿಯವರೆವಿಗೂ ನಿರಾಶಾದಾಯಕ ಫಲಿತಾಂಶವನ್ನೇ ನೀಡಿವೆ. ಇವರನ್ನು ಒಂದಾಗಿ ಕೂಡಿಸುವ ಮಾರ್ಗ ಸದ್ಯಕ್ಕೆ ಯಾವುದೂ ಗೋಚರಿಸುತ್ತಿಲ್ಲ, ಆದರೆ ಪ್ರಸ್ತುತ ರಾಜಕಾರಣ ಇವರು ತಮ್ಮ ಹಠಮಾರಿತನ, ಅಹಮಿಕೆ, ಪ್ರತಿಷ್ಠೆಗಳನ್ನು ಪಕ್ಕಕ್ಕಿಟ್ಟು ಒಂದಾಗಲೇಬೇಕಾದ ಅನಿವಾರ್ಯತೆಯನ್ನು ನಿರ್ಮಿಸಿರುವುದಂತೂ ಸತ್ಯ. ಒಗ್ಗೂಡದಿರುವವರ ಬಗ್ಗೆ ತಲೆ ಕೆಡಿಸಿಕೊಂಡು ಸಮಯ ವ್ಯರ್ಥ ಮಾಡದೇ ಲಭ್ಯವಿರುವ ಶಕ್ತಿಯನ್ನೇ ಬಳಸಿಕೊಂಡು ಪರ್ಯಾಯ ರಾಜಕಾರಣದತ್ತ ದಿಟ್ಟ ಹೆಜ್ಜೆಗಳನ್ನಿಡಬೇಕಿದೆ.

೫. ಪ್ರಾಮಾಣಿಕತೆ, ದಕ್ಷತೆ, ಪ್ರಗತಿಪರ ಧೋರಣೆ, ಜಾತ್ಯತೀತತೆ, ಧರ್ಮ ನಿರಪೇಕ್ಷಗಳಂತಹ ವಿಷಯಗಳೇ ನೀತಿ ಸಂಹಿತೆಯಾಗಬೇಕು. ಇವುಗಳಿಗೆ ಪರ್ಯಾಯ ರಾಜಕಾರಣ ಬದ್ಧವಾಗಿದ್ದರೆ ಆ ಬದ್ಧತೆಯ ಒಳಗೇ ಜನಪರ ಕಾಳಜಿಯ ಕಾರ್ಯಸೂಚಿಗಳು ಜೀವ ಪಡೆಯತೊಡಗುತ್ತವೆ. □

ಜನಪರವಾಗಿ ಚಿಂತಿಸುವ ಉಳಿದ ರೈತ-ದಲಿತ ಬಣಗಳು ತಮ್ಮ ಹಠಮಾರಿತನಗಳನ್ನು ಬಿಟ್ಟು ಪರ್ಯಾಯ ರಾಜಕಾರಣದಲ್ಲಿ ಸಹಭಾಗಿತ್ವವನ್ನು ತೋರಬೇಕಾಗಿದೆ.

ಸಂವಾದ



ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗ ಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ತಮ್ಮಟೆ ಬಾರಿಸಲು ಹೇಳಬೇಡಿ !



ನಿಮ್ಮ ಹುಲಿವೇಷಕ್ಕೆ
ನಮ್ಮನ್ನು
ತಮ್ಮಟೆ ಬಾರಿಸಲು ಹೇಳಬೇಡಿ !
ಷೆಡ್ಯೂಲ್ ಕಾಸ್ಟ್ ಮತ್ತು ಷೆಡ್ಯೂಲ್ ಟ್ರೈಬಿನ
ಗಂಡಬೇರುಂಡ
ನೆಲದ ಮೇಲೆ ನೆಲೆ ಕಾಣದೆ
ಗೂಡು ಕಟ್ಟದೆ
ಆ ತ್ರಿಶಂಕು ಸ್ವರ್ಗದಲ್ಲೇ
ಹಾರಾಡಿ
ಶತಮಾನವೇನು ಸಹಸ್ರಮಾನಗಳಿಂದ
ಚೀರಾಡಿ
ಬಯಕೆಯ ಆ ಶೂನ್ಯದಲ್ಲೇ ಮಾತಾಡಿ
ನನಸಾಗದ ಕನಸುಗಳಲ್ಲಿ ಕನವರಿಸಿ ಸುಸ್ತಾಗಿದೆ -
ನಿಮ್ಮ ಹುಲಿವೇಷಕ್ಕೆ
ನಮ್ಮನ್ನು ತಮ್ಮಟೆ ಬಾರಿಸಲು ಹೇಳಬೇಡಿ !
'ನಿಮ್ಮ ಚಿಂತೆ ನಿಮಗೆ ಸಾಲದೇ' ಎಂದು
ನಮ್ಮ ಭಾಗ್ಯವಿಧಾತ ಎಚ್ಚರಿಸುತ್ತಿದ್ದಾನೆ -
ನೀವು ಹೇಳುವಂತೆ
ನಿಮಗೂ ನಮಗೂ ಇರುವ ನಂಟನ್ನು
ನೀವು ಒಪ್ಪುವುದಾದರೆ -
ನೀವು ಆಕ್ರಮಿಸಿರುವ ನೆಲವನ್ನು
ನಮಗೆ ಹಂಚಿಕೊಡಿ,
ನೀವು ಅತಿಕ್ರಮಿಸಿರುವ ಮನೆಯಲ್ಲಿ
ಪಾಲುಕೊಡಿ,
ಕಿತ್ತುಕೊಂಡಿರುವ ಯಜಮಾನಿಕೆಯನ್ನು
ಸಮ ಸಮ ವಹಿಸಿಕೊಡಿ !
ಇದೊಂದು ಕೇಳಿದರೆ ಕೊಡುವುದಿಲ್ಲವಾದರೆ
ನಾವು ನಿಮ್ಮ ತಿಪ್ಪೆಗೆ
ಕಸಕಡ್ಡಿ ಗೊಬ್ಬರವಾಗಲು ಒಪ್ಪುವರಲ್ಲ !
ನಾವು ನಮ್ಮ ತಮ್ಮಟೆಯನ್ನು
ಮಾರಿಯ ಥಕ್ಕೆಯಾಗಿ
ಜಗಜೀವನ ರಾಮರ ಡಮರುಗವಾಗಿ
ಬಾಬಾ ಅಂಬೇಡಕರರ ಡಿಂಡಿಮವಾಗಿ
ಮಲೆಯ ಮಾದೇಶ್ವರನ ಪಾಂಚಜನ್ಯವಾಗಿ
ದಿಕ್ಕು ದಿಕ್ಕಿಗೆ ಮೊಳಗಿಸಿ
ಮಾರ್ಮೊಳಗಿಸಿ
ವಿಜಯ ಪತಾಕೆಯನ್ನು
ನಿಮ್ಮ ಕೋಟೆ ಕೊತ್ತಲಗಳ ಮೇಲೆ
ಹಾರಿಸಿ - ಆಗ
ನಮ್ಮ ತಮ್ಮಟೆಯನ್ನು ಬಾರಿಸುತ್ತೇವೆ !

ನಿಮ್ಮ ಹುಲಿವೇಷಕ್ಕೆ
ನಮ್ಮನ್ನು
ತಮ್ಮಟೆ ಬಾರಿಸೆಂದು ಹೇಳಬೇಡಿ !
ನಮ್ಮ ನಿಮ್ಮ ಸಂಧಾನ ನೆರವೇರದಿದ್ದರೆ
ನಮ್ಮ ಬಿಲ್ಲಿಗೆ
ಬಾಣದ ಅನುಸಂಧಾನ ತಪ್ಪದು ತಪ್ಪದು !
ನಮಗೆ ಸತ್ತದನಗಳ ಚರ್ಮ ಸುಲಿಯುವ
ಕಲೆ ಕರಗತವಾಗಿದೆ !
ನಿಮ್ಮ ಹುಲಿವೇಷಕ್ಕೆ
ನಮ್ಮನ್ನು
ತಮ್ಮಟೆ ಬಾರಿಸಲು ಹೇಳಬೇಡಿ !

○ ಡಾ॥ ಎಲ್. ಬಸವರಾಜು

ವಿಶ್ಲೇಷಣೆ

ಏಕರೂಪಿ ಮತ್ತು ಬಹುರೂಪಿ ಸಂಸ್ಕೃತಿಗಳ ಮುಖಾಮುಖಿ

> ಸಂಸ್ಕೃತಿ ಎಂದರೆ ಏನು ಎಂಬ ಬಗ್ಗೆ ನೂರೆಂಟು ವ್ಯಾಖ್ಯಾನಗಳು ಬಂದಿವೆ. ಆದಾಗ್ಯೂ ಇದರ ವ್ಯಾಖ್ಯೆ ಇದಮಿತ್ಥಂ ಎಂಬಂತೆ ಯಾವತ್ತೂ ಖಚಿತಗೊಂಡಿಲ್ಲ. ಇದರ ವ್ಯಾಖ್ಯಾನ ನಿರಂತರ ಚಲನಶೀಲವಾಗಿದೆ. ವಿದ್ವಾಂಸರು ಈ ಬಗ್ಗೆ ಏನಾದರೂ ವ್ಯಾಖ್ಯಾನ ನೀಡಿರಲಿ, ಆದರೆ ಈ ಪದವನ್ನು ನಾವು ಏನಕ್ಕೆಲ್ಲ ಬಳಸುತ್ತಿದ್ದೇವೆ ಎಂಬುದನ್ನು ಒಮ್ಮೆ ನೋಡುತ್ತ ಹೋದರೆ ಇದಕ್ಕೆ ಇರುವ ಬಹು ಅರ್ಥಗಳು ಎದ್ದು ಕಾಣುತ್ತವೆ. ಉದಾಹರಣೆಗೆ ನಮ್ಮಲ್ಲಿ ಸುಸಂಸ್ಕೃತಿ, ಕುಸಂಸ್ಕೃತಿ, ಜನಪ್ರಿಯ ಸಂಸ್ಕೃತಿ, ಚಡ್ಡಿ ಸಂಸ್ಕೃತಿ, ಹಿಪ್ಪಿ ಸಂಸ್ಕೃತಿ, ಸೋಲಿಗ ಸಂಸ್ಕೃತಿ, ಭಾರತೀಯ ಸಂಸ್ಕೃತಿ, ಕನ್ನಡ ಸಂಸ್ಕೃತಿ, ಮುಸ್ಲಿಂ ಸಂಸ್ಕೃತಿ- ಹಿಂದೂ ಸಂಸ್ಕೃತಿ ಇತ್ಯಾದಿ ಇತ್ಯಾದಿ...

○ ರಾಮಲಿಂಗಪ್ಪ ಟಿ. ಬೇಗೂರು

ಚರಿತ್ರೆ ಮತ್ತು ವರ್ತಮಾನದ ತಲ್ಲಣಗಳನ್ನು ವ್ಯಾಖ್ಯಾನಿಸಿಕೊಳ್ಳಲು ನಮ್ಮಲ್ಲಿ ಅನೇಕ ಪರಿಭಾಷೆಗಳಿವೆ. ಅಂಥವುಗಳಲ್ಲಿ ಇದೂ ಒಂದು. ಜಾಗತೀಕರಣದ ರೆಂಬೆ ಕೊಂಬೆಗಳಾದ ಮುಕ್ತ ಪೈಪೋಟಿ, ಕೊಳ್ಳುಬಾಕತನ, ಕೈಗಾರೀಕರಣ, ವ್ಯಾಪಾರೀಕರಣ, ಖಾಸಗೀಕರಣ, ಉದಾರೀಕರಣ, ನಗರೀಕರಣ, ಕೇಂದ್ರೀಕರಣ, ಕಂಪ್ಯೂಟರೀಕರಣ ಇತ್ಯಾದಿ ಹಲ ರೀತಿಯ ಕರಣ ಸಂಸ್ಕೃತಿಯ ದುಷ್ಫಲಗಳು ಮತ್ತು ಅವುಗಳೆದುರು ಹುಟ್ಟಿಕೊಳ್ಳಬಹುದಾದ ಪ್ರತಿರೋಧಗಳನ್ನು ಕುರಿತ ಚರ್ಚೆಗೆ ಈ ಪರಿಭಾಷೆ ರೂಪಗೊಂಡಂತೆ ಕಾಣುತ್ತದೆ.

ಸಂಸ್ಕೃತಿ ಎಂದರೆ ಏನು ಎಂಬ ಬಗ್ಗೆ ನೂರೆಂಟು ವ್ಯಾಖ್ಯಾನಗಳು ಬಂದಿವೆ. ಆದಾಗ್ಯೂ ಇದರ ವ್ಯಾಖ್ಯೆ ಇದಮಿತ್ಥಂ ಎಂಬಂತೆ ಯಾವತ್ತೂ ಖಚಿತಗೊಂಡಿಲ್ಲ. ಇದರ ವ್ಯಾಖ್ಯಾನ ನಿರಂತರ ಚಲನಶೀಲವಾಗಿದೆ. ವಿದ್ವಾಂಸರು ಈ ಬಗ್ಗೆ ಏನಾದರೂ ವ್ಯಾಖ್ಯಾನ ನೀಡಿರಲಿ, ಆದರೆ ಈ ಪದವನ್ನು ನಾವು ಏನಕ್ಕೆಲ್ಲ ಬಳಸುತ್ತಿದ್ದೇವೆ ಎಂಬುದನ್ನು ಒಮ್ಮೆ ನೋಡುತ್ತ ಹೋದರೆ ಇದಕ್ಕೆ ಇರುವ ಬಹು ಅರ್ಥಗಳು ಎದ್ದು ಕಾಣುತ್ತವೆ.

ಉದಾಹರಣೆಗೆ ನಮ್ಮಲ್ಲಿ ಸುಸಂಸ್ಕೃತಿ, ಕುಸಂಸ್ಕೃತಿ, ಜನಸಂಸ್ಕೃತಿ, ಪ್ರತಿಸಂಸ್ಕೃತಿ, ಕೃತಿಸಂಸ್ಕೃತಿ, ಜನಪ್ರಿಯ ಸಂಸ್ಕೃತಿ, ಸಮನ್ವಯ ಸಂಸ್ಕೃತಿ, ಚಡ್ಡಿ ಸಂಸ್ಕೃತಿ, ಹಿಪ್ಪಿ ಸಂಸ್ಕೃತಿ, ಸೋಲಿಗ ಸಂಸ್ಕೃತಿ, ಲಿಂಗಾಯತ ಸಂಸ್ಕೃತಿ, ಭಾರತೀಯ ಸಂಸ್ಕೃತಿ, ಕನ್ನಡ ಸಂಸ್ಕೃತಿ, ಜಲಸಂಸ್ಕೃತಿ-ಅಗ್ನಿ ಸಂಸ್ಕೃತಿ, ವೈದಿಕ ಸಂಸ್ಕೃತಿ - ಅವೈದಿಕ ಸಂಸ್ಕೃತಿ, ಜಡಸಂಸ್ಕೃತಿ-ಚೈತನ್ಯ ಸಂಸ್ಕೃತಿ, ಮುಸ್ಲಿಂ ಸಂಸ್ಕೃತಿ-ಹಿಂದೂ ಸಂಸ್ಕೃತಿ, ಪ್ರಧಾನ ಸಂಸ್ಕೃತಿ-ಅಧೀಣ ಸಂಸ್ಕೃತಿ, ನಿಜಸಂಸ್ಕೃತಿ- ಹುಸಿ ಸಂಸ್ಕೃತಿ, ಇತ್ಯಾದಿ ಇತ್ಯಾದಿ ಸಿಕ್ಕಾಪಟ್ಟೆಯಾಗಿ ಸಂಸ್ಕೃತಿಯ ವ್ಯಾಖ್ಯೆಗಳೆಲ್ಲ ಕಿತ್ತುಕೊಂಡು ಹೋಗುವ ಹಾಗೆ ಈ ಪದವನ್ನು ಬಳಸಲಾಗುತ್ತಿದೆ. ಸಂಸ್ಕೃತಿ ಎಂಬುದಕ್ಕೆ ಒಂದು ವ್ಯಾಖ್ಯಾನವಿಲ್ಲ ಎಂಬುದಕ್ಕೆ ಇದು ನಿದರ್ಶನ. ಇದೇ ರೀತಿ ಬಹುರೂಪಿ ಸಂಸ್ಕೃತಿ ಮತ್ತು ಏಕರೂಪಿ ಸಂಸ್ಕೃತಿಗಳ ಮುಖಾಮುಖಿ ಎಂಬುದೂ ಮತ್ತೊಂದು ಸಂಸ್ಕೃತಿ ಪರಿಭಾಷೆಯಾಗಿ ಬಳಕೆಯಾಗುತ್ತಿದೆ.

ದ್ವಿಮಾನ ವ್ಯಾಖ್ಯಾನ ಕ್ರಮ

ದ್ವಿಮಾನ ವೈರುಧ್ಯಗಳ (Binary oppositions) ನೆಲೆಯಲ್ಲಿಯೇ ಸಾಂಸ್ಕೃತಿಕ ಸಂಕಥನವನ್ನು ಪ್ರತಿನಿಧೀಕರಿಸುವ ಹಲವು ಕ್ರಮಗಳು ನಮ್ಮಲ್ಲಿವೆ. ಅಂಥ ಹಲ ಕ್ರಮಗಳ ಅಖಂಡ ನೋಟವೆಂಬಂತೆ ಈ ಏಕ ಮತ್ತು ಬಹುರೂಪಿ ಪರಿಭಾಷೆ ಇದೆ. ಈ ಪರಿಭಾಷೆಯಲ್ಲಿ ಪ್ರಥಮ ಜಗತ್ತು ಮತ್ತು ಮೂರನೇ ಜಗತ್ತು ಪೂರ್ವ ಮತ್ತು ಪಶ್ಚಿಮ, ಮಾರ್ಗ ಮತ್ತು ದೇಸಿ, ಶಿಷ್ಟ ಮತ್ತು ಜಾನಪದ, ಗ್ರಾಮ ಮತ್ತು ನಗರ, ಪ್ರಧಾನ ಮತ್ತು ಅಧೀನ ಇತ್ಯಾದಿ ವೈರುಧ್ಯಗಳನ್ನು ಪರಸ್ಪರ ಏಕರೂಪಿ ಮತ್ತು ಬಹುರೂಪಿಗಳೆಂದು ತಿಳಿಯುವ ಕ್ರಮ ಇದೆ. ಆದರೆ ವಸ್ತುಸ್ಥಿತಿ ಆ ಥರದ್ದಲ್ಲ. ಈ ಪರಿಭಾಷೆಯು ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿ ಎಂಬಂತೆ ಕಂಪಾರ್ಟ್‌ಮೆಂಟ್‌ಗಳ ಹಾಗೆ ಎರಡು ತೆರನ ಸಂಸ್ಕೃತಿಗಳು ಇರುತ್ತವೆ ಮತ್ತು ಅವು ಸದಾ ಸಂಘರ್ಷಿಸುತ್ತಿರುತ್ತವೆ ಎಂದು ಭಾವಿಸುವಂತೆ ಮೇಲ್ನೋಟಕ್ಕೆ ಕಾಣುತ್ತದೆ. ಆದರೆ ಅದೂ ವಾಸ್ತವವಲ್ಲ. ಎಂದಿಗೂ ಎಲ್ಲೂ ಒಂದು ಏಕರೂಪಿ ಸಂಸ್ಕೃತಿ ಎಂಬುದು ಇರಲಾರದು. ಇರುವ ಎಲ್ಲ ಸಾಂಸ್ಕೃತಿಕ ಸಮುದಾಯಗಳೂ ಬಹುರೂಪಿಗಳೇ.

ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿ ಎಂಬವು ಎರಡು ಭಿನ್ನ ಸಂಸ್ಕೃತಿಗಳು ಎಂಬುದಕ್ಕಿಂತ ಇವು ಒಂದೇ ಸಂಸ್ಕೃತಿಯ ಎರಡು ಭಿನ್ನ ಆಲೋಚನಾ ವಿಧಾನಗಳು, ಒಂದೇ ಸಮುದಾಯದ ಮನಸ್ಸಿನ ಎರಡು ಭಿನ್ನ ಧೋರಣೆಗಳು ಎಂದು ತಿಳಿಯಬಹುದಾಗಿದೆ. ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿಗಳನ್ನು ಪರಸ್ಪರ ವೈರಿ ಘಟಕಗಳೆಂದೇನೂ ತಿಳಿಯಬೇಕಿಲ್ಲ. ಈ ಎರಡೂ ನೆಲೆಗಳೂ ಪರಸ್ಪರ ಪ್ರಭಾವಗಳನ್ನು ಸ್ವೀಕರಿಸುತ್ತಾ, ನಿರಾಕರಿಸುತ್ತಾ, ಸಂಚಲನೆಗೆ ಒಳಗಾಗುತ್ತಾ ರೂಪಾಂತರಗೊಳ್ಳುತ್ತಿರಬಹುದು.

ಪ್ರಥಮ ಜಗತ್ತೆಂದರೆ ಅಮೇರಿಕಾ, ಜಾಗತೀಕರಣವೆಂದರೆ ಅಮೇರಿಕೀಕರಣ. ಹಾಗಾಗಿ ಅಮೇರಿಕಾ ಸಂಸ್ಕೃತಿ ಏಕರೂಪಿಯಾದದ್ದು ಭಾರತೀಯ ಸಂಸ್ಕೃತಿ ಬಹುರೂಪಿಯಾದದ್ದು ಎಂಬ ತಿಳವಳಿಕೆ ನಮ್ಮಲ್ಲಿದೆ. ಹಾಗೇ ಬಹು ಅಮೂರ್ತವಾದ ಪೂರ್ವ-ಪಶ್ಚಿಮ ಕಲ್ಪನೆಯಲ್ಲಿಯೂ ಸ್ವ ಮತ್ತು ಅನ್ಯರ (Self and other) ಪಡಿನೆಳಲಂತೆ ಪಾಶ್ಚಿಮಾತ್ಯ ಸಂಸ್ಕೃತಿಯು ಏಕರೂಪಿ, ಪೌರ್ವಾತ್ಯವು ಬಹುರೂಪಿ ಎಂಬ ತಿಳವಳಿಕೆ ನಮ್ಮಲ್ಲಿದೆ. ವಸಾಹತೀಕರಣ ಸಂದರ್ಭದಲ್ಲಿ ಅನ್ಯದ ಎದುರು ಹುಟ್ಟಿದ ರಾಷ್ಟ್ರೀಯತೆಯ ಪರಿಭಾವನೆಯು ಹೀಗೆ ಪಶ್ಚಿಮವೆಲ್ಲ ಒಂದೇ ವೈರಿ ಘಟಕ ಎಂಬ ತಿಳುವಳಿಕೆಯನ್ನು ಹುಟ್ಟಿಸಿದೆ. (ಸ್ವದೇಶಿ-ವಿದೇಶಿ, ಕರಿ-ಬಿಳಿ ಎಂಬ ದೇಶೀಯ ಜನಾಂಗೀಯ ಭೇದಗಳೂ ಈ ಹಿನ್ನೆಲೆಗೆ ಕೆಲಸ ಮಾಡಿವೆ.) ಶೋಷಣೆಯ ದಾಳಿ ನಡೆಸುವ ಯಾವುದೇ ಅನ್ಯ ಸಂಸ್ಕೃತಿಗಳು ಶೋಷಿತರಿಗೆ ಕಾಣುವುದು ಹೀಗೆ ಯಾವತ್ತೂ ಏಕರೂಪಿಯಾಗಿಯೇ.

ನಮ್ಮಲ್ಲಿ ಶಿಷ್ಟ ಏಕರೂಪಿಯಾದದ್ದು, ಜಾನಪದ ಬಹುರೂಪಿಯಾದದ್ದು ಮತ್ತು ಮಾರ್ಗ ಏಕರೂಪಿ, ದೇಸಿ ಬಹುರೂಪಿ

ಎಂಬ ತಿಳವಳಿಕೆಯೂ ಇದೆ. ಇವೆರಡೂ ಬಹು ಅಮೂರ್ತವಾದ ವಿಭಾಗೀಕರಣಗಳು. ಇಲ್ಲಿ ಯಾವುದು ಶಿಷ್ಟ ಯಾವುದು ಜಾನಪದ, ಯಾವುದು ದೇಸಿ, ಯಾವುದು ಮಾರ್ಗ ಎಂಬುದೇ ಖಚಿತವಲ್ಲ. ಈ ದ್ವಿಮಾನ ಘಟಕಗಳು ಸದಾ ಕಾಲ, ದೇಶ, ಭಾಷೆ, ಸಮುದಾಯಗಳಿಗನುಸಾರವಾಗಿ ಸಾಪೇಕ್ಷವಾಗಿರುತ್ತವೆ. ಅಲ್ಲದೆ ಇವು ಸದಾ ಪರಸ್ಪರ ಸಂಚಲನೆಗೆ (Osmosys) ಒಳಗಾಗುತ್ತಿರುತ್ತವೆ. ಹೀಗಾಗಿ ಇವೆರಡನ್ನೂ ಶುದ್ಧಾಂಗವಾಗಿ ಏಕ-ಬಹುರೂಪಿಗಳೆಂದು ವಿಂಗಡಿಸಲಾಗದು. ಸಂಸ್ಕೃತಿಯೊಂದರ ತೋಪುತನ ಮತ್ತು ಕಾಡುತನಗಳನ್ನೇ ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿ ಎಂದೂ ಹೇಳಲಾಗುತ್ತಿದೆ. ದೇಸಿ ಮತ್ತು ಮಾರ್ಗದ ವಿಸ್ತರಿತ ಚಿಂತನೆಯಿದು.

ವೈದಿಕ-ಅವೈದಿಕ

ವೈದಿಕ ಮತ್ತು ಅವೈದಿಕ ಎಂಬ ದ್ವಿಮಾನ ಕಲ್ಪನೆ ಬಹುಕಾಲದಿಂದ ನಮ್ಮ ಅಧ್ಯಯನಗಳಲ್ಲಿ ವ್ಯಾಪಕವಾಗಿ ಚರ್ಚಿತಗೊಳ್ಳುತ್ತ ಬಂದಿದೆ. ವೈದಿಕವೆನ್ನುವುದು ಏಕರೂಪಿ ಸಂಸ್ಕೃತಿಯೆಂದು, ಅವೈದಿಕವೆನ್ನುವುದು ಬಹುರೂಪಿ ಸಂಸ್ಕೃತಿಗಳ ಸಮೂಹವೆಂದೂ ಇಂಥಾ ಚರ್ಚೆಗಳಲ್ಲಿ ಸಾಧಾರಣವಾಗಿ ತಿಳಿಯಲಾಗಿದೆ. ಭಾರತೀಯ ಸಂಸ್ಕೃತಿಗಳನ್ನು ಹೀಗೆ ಇಬ್ಭಾಗ ಮಾಡಿ ನೋಡುವಾಗೆಲ್ಲ ಇವೆರಡೂ ಪರಸ್ಪರ ವೈರಿ ಘಟಕಗಳೆಂಬ ಭಾವನೆಯೇ ಇದೆ. ಪರ್ಯಾಯ ಪ್ರತಿ ಸಂಸ್ಕೃತಿಗಳ ಚರ್ಚೆಯಲ್ಲಿ ಇದು ಹೆಚ್ಚು ಢಾಳಾಗಿ ಕಾಣುತ್ತದೆ. ಇಲ್ಲಿ ವೈದಿಕವು ದಾಳಿಕೋರ-ಯಾಜಮಾನೀಯ ನೆಲೆಯದ್ದು ಮತ್ತು ಅವೈದಿಕವು ಪ್ರತಿರೋಧದ ನೆಲೆಯದ್ದು ಎಂಬ ಭಾವನೆಯಿದೆ. ಇದು ನಿಜವೇ ಎನ್ನೋಣ. ಆದರೆ ಹಾಗೆ ಯಾವುದೇ ಸಾಂಸ್ಕೃತಿಕ ಯಾಜಮಾನ್ಯ ಮತ್ತು ಪ್ರತಿರೋಧದ ಚರಿತ್ರೆಯನ್ನು ಹೀಗೆ ಕೇವಲ ದ್ವಿಮಾನ ನೆಲೆಯಲ್ಲಿ ಮಾತ್ರ ಕಾಣಲಾಗದು. ಹತ್ತು ಹಲವು ತರತಮ ನೆಲೆಗಳು, ಹತ್ತಾರು ಮಾರ್ಗ ದೇಸಿ ನೆಲೆಗಳು ಸದಾ ಸಂಚಲನೆ, ಸಂಘರ್ಷ, ಸಹಕಾರಿ ಮೊದಲಾದ ಬಹು ಮಜಲುಗಳಲ್ಲಿ ಬಾಳುತ್ತ ಬಂದಿವೆ. ಸಂಸ್ಕೃತಿ ಚರಿತ್ರೆಯ ಆಗು ಹೋಗುಗಳನ್ನು ಹೀಗೆ ಬರೀ ಎರಡಾಗಿ ಮಾತ್ರ ನೋಡಲು ಆಗುವುದಿಲ್ಲ. ಅದು ಬಹುಮುಖಿಯಾದದ್ದು. ಎಲ್ಲವನ್ನೂ ಎರಡಾಗಿ ಮಾತ್ರ ನೋಡುವ ಈ ದ್ವಿಮಾನ ನೆಲೆಯೂ ಒಂಥರಾ ಏಕರೂಪಾತ್ಮಕವಾದದ್ದೇ.

ದ್ವಿಮಾನ ನೆಲೆಯ ಚರ್ಚೆಯು ಸದಾ ಸಾಧಾರಣೀಕೃತ, ಸಮೀಕೃತ (Totalised), ಆಂಶಿಕ ಚರ್ಚೆಯೇ ಆಗಿರುತ್ತದೆ. (ನೋಡಿ : 'ಕೊನೆಗೆ ಮೊದಲು' ಭಾಗ)

ಕದನ ಕಲ್ಪನೆ

ವಸಾಹತೀಕರಣದ ನಂತರದಲ್ಲಾದ ಅನೇಕ ಪರಿಣಾಮಗಳಲ್ಲಿ ನಮ್ಮ ಹಲವು 'ಸ್ಥಳೀಕ' ಮಾನದಂಡಗಳನ್ನು-ಹತಾರಗಳನ್ನು ನಾವು ನಷ್ಟ ಮಾಡಿಕೊಂಡದ್ದೂ ಒಂದು. ಹಾಗೇ ಎಲ್ಲವನ್ನೂ ಹೋರಾಟ ಮತ್ತು ಸಂಘರ್ಷದ ನೆಲೆಯಲ್ಲಿಯೇ ಪರಿಭಾವಿಸುವ ಚಾಳಿಯೂ ಈ ಕಾಲದಲ್ಲೇ ಬೆಳೆಯಿತು. ನಿರ್ವಸಾಹತೀಕರಣ, ನಿರ್ಜಾಗತೀಕರಣ ಪ್ರವೃತ್ತಿಗಳು ಕೂಡ ಇಂಥ ಕದನ ಕಲ್ಪನೆಯಿಂದಲೇ ಚಾಲಿತಗೊಳ್ಳುತ್ತವೆ. ಹೀಗಾಗಿ ನಮಗಿಂದು ಎರಡು ಸಾಂಸ್ಕೃತಿಕ ಸಮುದಾಯಗಳ ನಡುವಿನ ಸಹಜ ಆದಾನ ಪ್ರದಾನವಾಗಲೀ ಅಥವಾ ಸಂಚಲನ (osmosys)ವಾಗಲೀ ಎಲ್ಲವೂ ಪರಸ್ಪರ ಹೋರಾಟದಂತೆಯೇ ಕಾಣುತ್ತಿವೆ.

ಎಲ್ಲವೂ ವ್ಯಾಪಾರವಾಗುವ, ಸೇವೆಯೂ ಸೇರಿದಂತೆ ಲೋಕದ ಚರಾಚರವೂ ಸರಕಾಗುವ ಸಂಸ್ಕೃತಿಯೇ ಜಾಗತೀಕರಣ. ಇದಕ್ಕೆ ಇಡೀ ಲೋಕವೇ ಒಂದು ಅಂಗಡಿ. ಇದರಿಂದ ನಿಮ್ನ ಸಮುದಾಯಗಳಿಗೆ ಅಷ್ಟೋ ಇಷ್ಟೋ ಅನುಕೂಲ ಆದಂತೆ ಅನ್ನಿಸಬಹುದು. ಆದರೆ ನಿಜಕ್ಕೂ ಅದು ಅನುಕೂಲವೇನೂ ಅಲ್ಲ. ಜಾಗತೀಕರಣವಲ್ಲ, ಅದರ ಅಪ್ಪರು ಬರಲಿ, ನಿಮ್ನರಿಗೆ ಅವರದೇ ಬದುಕಿನ ಮಾರ್ಗಗಳು ತಿಳಿದಿವೆ. ಆದರೆ ಕರಡಿಯೊಂದು ಜೇನನ್ನು ಕಿತ್ತು ತಿನ್ನುವಾಗ ಒಂದೆರಡು ಜೇನಹನಿ ನೆಲಕ್ಕೂ ಉದುರಬಹುದು. ಅದನ್ನು ಸವಿದ ಇರುವೆಗಳು ಆಹಾ ಕರಡಿ ಜೇನು ತಿನ್ನಲು ಬಂದದ್ದೇ ನಮ್ಮ ಉದ್ಧಾರಕ್ಕೆ ಕಾರಣವಾಯಿತು ಎಂದು ಭಾವಿಸಿದರೆ ಹೇಗೆ!

ಸಂಸ್ಕೃತಿಗಳ ಮುಖಾಮುಖಿ ಎಂಬ ಮಾತಿನಲ್ಲೂ ಈ ರೀತಿಯ ಪರಸ್ಪರ ಕದನದ ಧ್ವನಿಯೇ ಕಾಣುತ್ತದೆ. ನಮ್ಮ ಚರಿತ್ರೆಯನ್ನು ಬರೀ ಕದನಗಳ ಚರಿತ್ರೆಯೆಂಬಂತೆ ಕಟ್ಟಿಕೊಂಡಿರುವುದರ ಫಲವಿದು.

ಜಾಗತೀಕರಣ ಮತ್ತು ಏಕರೂಪತೆಯ ದಾಳಿ

ನಮ್ಮಲ್ಲಿಂದು ಜಾಗತೀಕರಣದ ವ್ಯಾಖ್ಯಾನ ಮತ್ತು ಪ್ರತಿರೋಧದ ಚರ್ಚೆಗಳು ನಿರಂತರ ಆಗುತ್ತಲೇ ಇವೆ. ಬ್ರಿಟೀಷರ ಆಗಮನದಿಂದ ನಿರ್ಲಕ್ಷಿತ ಸಮುದಾಯಕ್ಕೆ ಈ ಹಿಂಸೆ ಅನುಕೂಲವೇ ಆಗಿದೆ ಎಂಬ ಒಮ್ಮುಖಿ ನಂಬಿಕೆಯ ಹಾಗೆಯೇ ಇಂದೂ ಕೂಡ ಜಾಗತೀಕರಣ ನಿಮ್ನ ಸಮುದಾಯಗಳಿಗೆ ಆಪದ್ಬಾಂಧವನಂತೆ ಒದಗಿಬಂದಿದೆ ಎಂಬ ತಿಳವಳಿಕೆಯೂ ಇದೆ. ಇದರ ಜೊತೆಗೆ ನಿರ್ಜಾಗತೀಕರಣ ಚಿಂತನೆಯು ಇದೊಂದು ರಾಕ್ಷಸೀ ಅಪಾಯವೆಂದೇ ಭಾವಿಸಿ ಪ್ರತಿರೋಧ ಮೂಡಿಸುತ್ತಿದೆ.

ಜಾಗತೀಕರಣದ ದಾಳಿ ಒಂದು ತೆರನಾದದ್ದಲ್ಲ. ಅದು ಬಹುರೂಪಿಯಾದದ್ದು ಎಂಬುದು ಸರ್ವವಿಧಿತ. ಆದರೆ ಅದು ಸದಾ ನಮ್ಮನ್ನು ಹೀರಲೆಂದೇ ಬರುತ್ತದೆ, ಅಥವಾ ಬಹುರೂಪಿಯಾದ ಜಾಗತೀಕರಣ ಪ್ರಕ್ರಿಯೆಯು ತನ್ನೆಲ್ಲ ರೂಪಗಳಲ್ಲೂ ದಾಳಿಯಾಗಿಯೇ ಬರುತ್ತದೆ ಮತ್ತು ವೈರಿಯಾಗಿಯೇ ಇರುತ್ತದೆ ಎಂದೇನೂ ಅಲ್ಲ. ಭಿನ್ನ ಜನ ಸಮುದಾಯಗಳಿಗೆ ಇದು ಭಿನ್ನ ರೀತಿಯಲ್ಲಿಯೇ ಧಕ್ಕೆ - ಅನುಕೂಲ - ಅಪಾಯಗಳನ್ನು ಏಕಕಾಲಕ್ಕೆ ಉಂಟುಮಾಡಬಹುದು. ಈ ದೃಷ್ಟಿಯಿಂದ ಬಹುರೂಪತೆಯು ಸದಾ ಅನುಕೂಲಕಾರಿ, ಏಕರೂಪತೆಯು ಸದಾ ಅಪಾಯಕಾರಿ ಎಂದೂ ತಿಳಿಯಬೇಕಾಗಿಲ್ಲ ಎಂದು ಸರಳವಾಗಿ ತರ್ಕ ಮಾಡಬಹುದು. ಆದರೆ ಜಾಗತೀಕರಣ ವಿಚಾರದಲ್ಲಿ ಹೀಗೆ ತರ್ಕಿಸಲು ಸಾಧ್ಯವಿಲ್ಲ. ಯಾಕೆಂದರೆ ಬಲಶಾಲಿಗಳು ಮತ್ತು ಕಡಿಮೆ ಬಲಶಾಲಿಗಳ ನಡುವಿನ ಆದಾ ಪ್ರದಾನದಲ್ಲಿ ಯಾವಾಗಲೂ ಯಾಜಮಾನೀಯ ಧೋರಣೆಗಳೇ ಇರುವುದರಿಂದ ಅನುಕೂಲ ಸಿಂಧು ರಾಜಕಾರಣವೇ ಬಲಿಷ್ಠರಲ್ಲಿ ಕೆಲಸ ಮಾಡುತ್ತಿರುತ್ತದೆ. ಹಾಗಾಗಿ ಜಾಗತೀಕರಣದ ಬಹುರೂಪತೆಯ ಹಿಂದಿನ ಉದ್ದೇಶ ಒಂದೇ, ಅದು ಶೋಷಣೆ. ಶೋಷಣೆ ಬಹುರೂಪಿಯಾದಷ್ಟು ಅದು ಜೀವಕುಲಕ್ಕೆ ಅಪಾಯಕಾರಿಯೇ.

ಭಾಷಿಕ-ಜನಾಂಗಿಕ-ಧಾರ್ಮಿಕ-ಭೌಗೋಳಿಕ ಗಡಿಗಳೆಲ್ಲವನ್ನೂ ದಾಟಿ ಜಾಗತಿಕವಾಗಿ ಎಲ್ಲ ಬಂಡವಾಳಶಾಹಿ, ಅಧಿಕಾರಶಾಹಿ ಮತ್ತು ಜ್ಞಾನಶಾಹಿಗಳು ಪರಸ್ಪರ ಒಗ್ಗೂಡುತ್ತಿರುವ ಪ್ರಕ್ರಿಯೆಯೇ ಜಾಗತೀಕರಣ. ಇದರ ಯಾವತ್ತೂ ಕೆಲಸ ವರ್ಗತಾರತಮ್ಯದ ಸ್ಥಿರೀಕರಣ. ಇದರಿಂದ ಸಾಮಾಜಿಕ ನ್ಯಾಯಕ್ಕೆ ತರಗೆಲೆಯ ಬೆಲೆಯೂ ಇಲ್ಲವಾಗುತ್ತಿದೆ. ಎಲ್ಲವೂ ವ್ಯಾಪಾರವಾಗುವ, ಸೇವೆಯೂ ಸೇರಿದಂತೆ ಲೋಕದ ಚರಾಚರವೂ ಸರಕಾಗುವ ಸಂಸ್ಕೃತಿಯೇ ಜಾಗತೀಕರಣ. ಇದಕ್ಕೆ ಇಡೀ ಲೋಕವೇ ಒಂದು ಅಂಗಡಿ. ಇದರಿಂದ ನಿಮ್ನ ಸಮುದಾಯಗಳಿಗೆ ಅಷ್ಟೋ ಇಷ್ಟೋ ಅನುಕೂಲ ಆದಂತೆ ಅನ್ನಿಸಬಹುದು. ಆದರೆ ನಿಜಕ್ಕೂ ಅದು ಅನುಕೂಲವೇನೂ ಅಲ್ಲ. ಜಾಗತೀಕರಣವಲ್ಲ, ಅದರ ಅಪ್ಪರು ಬರಲಿ, ನಿಮ್ನರಿಗೆ ಅವರದೇ ಬದುಕಿನ ಮಾರ್ಗಗಳು ತಿಳಿದಿವೆ. ಆದರೆ ಕರಡಿಯೊಂದು ಜೇನನ್ನು ಕಿತ್ತು ತಿನ್ನುವಾಗ ಒಂದೆರಡು ಜೇನಹನಿ ನೆಲಕ್ಕೂ ಉದುರಬಹುದು. ಅದನ್ನು ಸವಿದ ಇರುವೆಗಳು ಆಹಾ ಕರಡಿ ಜೇನು ತಿನ್ನಲು ಬಂದದ್ದೇ ನಮ್ಮ ಉದ್ಧಾರಕ್ಕೆ ಕಾರಣವಾಯಿತು ಎಂದು ಭಾವಿಸಿದರೆ ಹೇಗೆ!

ಉತ್ಪಾದನೆ-ವ್ಯಾಪಾರವೆಂಬ ಏಕರೂಪಿ ಗತಿ

ಏಕರೂಪಿ ಸಂಸ್ಕೃತಿಯ ಕಬಂಧ ಬಾಹುಗಳು ಜಗತ್ತಿನಾದ್ಯಂತ ರಾಕ್ಷಸ ವೇಗದಲ್ಲಿ ಹಬ್ಬಲು ಕಾರಣವಾದ ಎರಡು ಬೆಳವಣಿಗೆಗಳೆಂದರೆ ಕೈಗಾರೀಕರಣ ಮತ್ತು ವ್ಯಾಪಾರೀಕರಣಗಳು. ಜಾಗತೀಕರಣದ ಎರಡು ಮುಖ್ಯ ಕೊಂಬೆಗಳಿವು. ರೆನೈಸಾನ್ಸ್ ಕಾಲದ ವೈಜ್ಞಾನಿಕ ಶೋಧಗಳಿಂದ ಇದಕ್ಕೆ ಇನ್ನಷ್ಟು ವೇಗ ಬಂತು. ಈ ರೆನೈಸಾನ್ಸ್ ಕಾಲವು ಬೃಹತ್ ಕೈಗಾರಿಕೆಗಳ, ಬೃಹತ್ ಸಾಮ್ರಾಜ್ಯಗಳ ಸ್ಥಾಪನೆಯಾಗಿ ದಬ್ಬಾಳಿಕೆಗಳು ಜಗದ್ವ್ಯಾಪಿಯಾಗಿ ವೃದ್ಧಿಸಿದ ಕಾಲ. ಆ ಕಾಲದ ವ್ಯಾಪಾರಿ ಮಾರ್ಗಗಳ ಶೋಧವು ಇಂದೂ ಕೂಡ ಬೇರೆ ಬೇರೆ ನೆಲೆಯಲ್ಲಿ ನಡೆಯುತ್ತಲೇ ಇದೆ. ಆ ಕಾಲದ ಜನೋದ್ಧಾರದ ಹೆಸರಿನಲ್ಲಿ ಆದ ಅಂದರೆ (ವೈಟ್‌ಮ್ಯಾನ್ಸ್ ಬರ್ಡನ್) ಬಿಳಿಯರ ಹೊರೆಯ ಹೆಸರಿನಲ್ಲಿ ಆದ ಸಂಪತ್ತಿನ ಕೇಂದ್ರೀಕರಣವು ಕೂಡ ಇಂದು ಬೇರೆ ಬೇರೆ ರೀತಿಯ ಎನ್‌ಲೈಟನ್‌ಮೆಂಟ್ ಪ್ರಾಜೆಕ್ಟ್‌ಗಳ ಮೂಲಕ ಆಗುತ್ತಿದೆ. ಜಾಗತಿಕ ಬಹುರೂಪಿ ನೆಲೆಗಳ ದಮನ ಮತ್ತು ಏಕರೂಪಿ ನೆಲೆಗಳ ಪ್ರತಿಷ್ಠಾಪನೆ ಬೃಹತ್ ಮಟ್ಟದಲ್ಲಿ ಆರಂಭವಾದದ್ದೇ ಈ ರೆನೆಸಾನ್ಸ್ ಕಾಲದಲ್ಲಿ. ಬಲಿಷ್ಠರ ನೆಲೆಯಿಂದ ಜಾಗತಿಕ ಜ್ಞಾನ ಹಾಗೂ ಚರಿತ್ರೆಗಳ ವ್ಯಾಖ್ಯಾನವಾದ ಕಾಲವಿದು. ಇದರ ಅಡ್ಡ ಪರಿಣಾಮಗಳನ್ನೇ ನಾವಿನ್ನೂ ಅನುಭವಿಸುತ್ತಿದ್ದೇವೆ.

ಸ್ವಾತಂತ್ರ್ಯದ ಹೊಸತರಲ್ಲಿ ಬಹುಮುಖಿ ಭಾರತದ ಅಭಿವೃದ್ಧಿಗೆ ಏಕಮುಖೀ ಸಿದ್ಧಾಂತಗಳನ್ನೇ ಕೈಗಾರೀಕರಣ-ವ್ಯಾಪಾರೀಕರಣ ನೆಲೆಯಲ್ಲಿ ಅನ್ವಯಿಸಿದ್ದರಿಂದಾಗಿ ಹಲವು ರೀತಿಯ ದುಷ್ಪರಿಣಾಮಗಳು ನಮ್ಮಲ್ಲುಂಟಾಗಿವೆ. ಇಂದಿನ ಬೃಹತ್ ಅಣೆಕಟ್ಟು, ಸೂಪರ್ ಹೈವೇಗಳ ನಿರ್ಮಾಣ, ಖಾಸಗೀಕರಣ, ಡಿಸಿನ್‌ವೆಸ್ಟ್‌ಮೆಂಟ್, ಉದಾರೀಕರಣ, ಮುಕ್ತಮಾರುಕಟ್ಟೆ ಮುಕ್ತ ಪೈಪೋಟಿ, ಬೌದ್ಧಿಕ ಆಸ್ತಿ ನಿರ್ಬೀಜೀಕರಣ, ನದೀ ಜೋಡಣೆಯ ವಿಚಾರಗಳೆಲ್ಲ ಈ

ಏಕಮುಖಿ ಸಿದ್ಧಾಂತಗಳ ದುಷ್ಫಲಗಳೇ ಆಗಿವೆ. ಭಾರತದಲ್ಲಿವು ಬಹುಪಾಲು ಆಚರಣೆಗೂ ಬರುತ್ತಿವೆ. ಬಂಡವಾಳಶಾಹಿ ರಾಜಕಾರಣದಲ್ಲಿ ಇಂಥ ಏಕಮುಖಿ ಸಿದ್ಧಾಂತಗಳದ್ದೇ ಕಾರುಬಾರು. ಇವತ್ತು ಶೋಷಣೆಗೆ ಈ ಏಕರೂಪಿ ಸಿದ್ಧಾಂತಗಳು ಚೆನ್ನಾಗಿ ಕೆಲಸಕ್ಕೆ ಬರುತ್ತವೆ. ಆದರೆ ಸರ್ವಾಂಗೀಣ ಅಭಿವೃದ್ಧಿಗೆ ಇವುಗಳಿಂದ ಅಂತಹ ಪ್ರಯೋಜನವಿಲ್ಲ. ಅಂತಾರಾಷ್ಟ್ರೀಯ ಬಂಡವಾಳಶಾಹಿಗಳು ಶೋಷಣೆಗೆ ಬಳಸುವ ಸಿದ್ಧಾಂತಗಳನ್ನೇ ನಾವು ಇಂದು ಅಭಿವೃದ್ಧಿಗೆ ಬಳಸುತ್ತೇವೆ ಅಂದರೆ ಸೋಜಿಗ!

ನಗರೀಕರಣವೆಂಬ ರಕ್ಕಸ ಕೂಸು

ವ್ಯಾಪಾರೀಕರಣ, ಕೈಗಾರೀಕರಣದ ಬಹುದೊಡ್ಡ ಉತ್ಪನ್ನವೇ ನಗರೀಕರಣ. ಈ ನಗರೀಕರಣವು ಬಹುರೂಪಿ ಸಂಸ್ಕೃತಿಯನ್ನು ಸದಾ ಕೊಂದೇ ಬೆಳೆಯುತ್ತಿರುತ್ತವೆ. ನಗರಗಳಲ್ಲಿ ಸಂಪರ್ಕ ಕ್ರಾಂತಿಯ ಪರಿಣಾಮವೆಂಬಂತೆ ಇಂದು ಬಹುಪಾಲು ಬಿಳಿ ಕಾಲರಿನ ಕಾರ್ಮಿಕರು ಮನುಷ್ಯ ಸಂಬಂಧಗಳಿಗೂ ಯಂತ್ರ ಸಂಬಂಧಗಳಿಗೂ ಭೇದವನ್ನೇ ಅರಿಯದವರಾಗಿದ್ದಾರೆ. ಉತ್ಪಾದನಾ ವ್ಯವಸ್ಥೆಗೆ ಎಲ್ಲವೂ ಒಗ್ಗಿಕೊಳ್ಳುತ್ತಲಿದೆ. ಪರ್ಸನಲ್ ಕಂಪ್ಯೂಟರು, ಇಂಟರ್‌ನೆಟ್ಟು ಮೊಬೈಲುಗಳಂತಹ ಸಾಧನಗಳಿಂದಾಗಿ ಕಛೇರಿಗೂ ಮನೆಗೂ ವ್ಯತ್ಯಾಸವೇ ಇಲ್ಲವಾಗುತ್ತಿದೆ. ಹಗಲಿಗೂ ಇರುಳಿಗೂ ವ್ಯತ್ಯಾಸವೇ ಇಲ್ಲವಾಗುತ್ತಿದೆ. ಮನೆಗೂ ಮಾರುಕಟ್ಟೆಗೂ ವ್ಯತ್ಯಾಸವೇ ಇಲ್ಲವಾಗುತ್ತಿದೆ. ಮನೆಗಳೇ ಅಂಗಡಿಗಳಾಗುತ್ತಿವೆ. ಇನ್ನು ಸಂಬಂಧಗಳ ಗತಿ! ಏಕರೂಪಿ ಸಂಸ್ಕೃತಿಯು ದಾಳಿಯಿಕ್ಕುವ ನವೀನ ಪರಿ ಇದು.

ನಮ್ಮ ನಗರಗಳು ಇಂದು ಪಡೆದುಕೊಳ್ಳುತ್ತಿರುವ ರೂಪ ನೋಡಿದರೆ ಇದು ಯಾಕೆ ಹೀಗೆ ಪರಾವಲಂಬಿಯಾಗುತ್ತಿದೆ ಎಂದು ಭಯವಾಗುತ್ತದೆ. ಪರಾವಲಂಬಿತನವು ಏಕರೂಪಿ ಸಂಸ್ಕೃತಿಯ ಒಂದು ಪ್ರಧಾನ ಲಕ್ಷಣ. ಎಲ್ಲಿ ನೋಡಿದರಲ್ಲಿ ಮನೆಗಳ ಜೊತೆ ನೆಲದ ತುಂಬ, ಗಾಳಿಯ ತುಂಬ ವಿದ್ಯುತ್‌ತಂತಿಗಳು, ಟಿವಿ ಕೇಬಲ್ಲುಗಳು, ನೀರಿನ ಪೈಪುಗಳು, ಟೆಲಿಫೋನ್ ಕೇಬಲ್ಲುಗಳು ತುಂಬಿಕೊಳ್ಳುತ್ತಿವೆ. ಮನೆ ಮನೆಯ ತುಂಬ ಟಿವಿ, ಫೋನು, ಫ್ರಿಜ್ಜು ಕಂಪ್ಯೂಟರ್ ಪೆಟ್ಟಿಗೆಗಳು ತುಂಬಿಕೊಳ್ಳುತ್ತಿವೆ. ಕೊರಳು ಕೊರಳನ್ನೂ ಮೊಬೈಲುಗಳೆಂಬ ಹೊಸ ತಾಳಿಗಳು ಅಲಂಕರಿಸುತ್ತಿವೆ. ಜನರನ್ನು ಪರಾವಲಂಬಿಯನ್ನಾಗಿ ಮಾಡುವ, ಬಂಡವಾಳ ಶಾಹಿ ಮತ್ತು ವಿಜ್ಞಾನಶಾಹಿ ಆಕ್ಟೋಪಸ್ ಹಿಡಿತಗಳಿವು. ಈ ಎಲ್ಲ ಬೆಳವಣಿಗೆಗಳು ಅಪಾಯಕಾರಿಯೇ, ಅಲ್ಲವೇ ಎಂಬ ತಿಳವಳಿಕೆ ಜನರಲ್ಲಿ ಮೂಡುವ ಮೊದಲೇ ಇವು ಜನರನ್ನೆಲ್ಲ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿವೆ. ವಿದ್ಯುತ್ತು, ಕೇಬಲ್ಲು, ನೀರು, ಫೋನು ಇವುಗಳಿಂದಾಗಿ ಜಗತ್ತು ನಡೆಯುತ್ತಿದೆ ಎಂಬಂತಾಗಿದೆ. ಇವುಗಳಲ್ಲಿ ಒಂದು ನಿಂತರೆ ಮತ್ತೆಲ್ಲವೂ ನಿಂತು ಹೋಗಿ ಇಡೀ ನಗರ ಬದುಕೇ ಕತ್ತಲಲ್ಲಿ ಮುಳುಗುತ್ತದೆ. ಪರ್ಯಾಯ ಬದುಕು, ಸ್ವಯಂ ಶಕ್ತ ಬದುಕಿನ ವಿನ್ಯಾಸಗಳೇ ನಗರಗಳಲ್ಲಿ ನಷ್ಟಗೊಳ್ಳುತ್ತಾ ಇವೆ.

ಒಂದೇ ತೆರನ ಪಾರ್ಕುಗಳು, ಒಂದೇ ತೆರನ ಗಾಳಿ, ನೀರು, ಹಾಲುಗಳು, ಬೀಜವಿಲ್ಲದ ಹಣ್ಣುಗಳು, ಹಳ್ಳ ಕೆರೆ ಮಾಳಗಳೆಲ್ಲ ಬುಲ್ಡೋಜರು ಹೊಡೆದ ಸೈಟು-ಮನೆಗಳು, ನೆಲದ ರಕ್ತನಾಳಗಳಂತಿದ್ದ ತೊರೆ, ಝರಿ, ಕೋಡಿಬಾಯಿಗಳೆಲ್ಲ ತ್ಯಾಜ್ಯ ಸಾಗಿಸುವ ಡ್ರೈನೇಜುಗಳು, ನೆಲದ ಮೇಲೂ ರಸ್ತೆ ಗಾಳಿಯಲ್ಲೂ ರಸ್ತೆ, ನೆಲದೊಳಗೂ ರಸ್ತೆ, ಎತ್ತ ನೋಡಿದರತ್ತ ಯಂತ್ರ-ಮನುಷ್ಯರು ಮಾತ್ರ. ಇನ್ನೇನೂ

ವ್ಯಾಪಾರೀಕರಣ, ಕೈಗಾರೀಕರಣದ ಬಹುದೊಡ್ಡ ಉತ್ಪನ್ನವೇ ನಗರೀಕರಣ. ಈ ನಗರೀಕರಣವು ಬಹುರೂಪಿ ಸಂಸ್ಕೃತಿಯನ್ನು ಸದಾ ಕೊಂದೇ ಬೆಳೆಯುತ್ತಿರುತ್ತವೆ. ಉತ್ಪಾದನಾ ವ್ಯವಸ್ಥೆಗೆ ಎಲ್ಲವೂ ಒಗ್ಗಿಕೊಳ್ಳುತ್ತಲಿದೆ. ಪರ್ಸನಲ್ ಕಂಪ್ಯೂಟರು, ಇಂಟರ್‌ನೆಟ್ಟು ಮೊಬೈಲುಗಳಂತಹ ಸಾಧನಗಳಿಂದಾಗಿ ಕಛೇರಿಗೂ ಮನೆಗೂ ವ್ಯತ್ಯಾಸವೇ ಇಲ್ಲವಾಗುತ್ತಿದೆ. ಹಗಲಿಗೂ ಇರುಳಿಗೂ ವ್ಯತ್ಯಾಸವೇ ಇಲ್ಲವಾಗುತ್ತಿದೆ. ಮನೆಗೂ ಮಾರುಕಟ್ಟೆಗೂ ವ್ಯತ್ಯಾಸವೇ ಇಲ್ಲವಾಗುತ್ತಿದೆ. ಮನೆಗಳೇ ಅಂಗಡಿಗಳಾಗುತ್ತಿವೆ. ಇನ್ನು ಸಂಬಂಧಗಳ ಗತಿ! ಏಕರೂಪಿ ಸಂಸ್ಕೃತಿಯು ದಾಳಿಯಿಕ್ಕುವ ನವೀನ ಪರಿ ಇದು.

ಇಲ್ಲ. ಇದೇ ಅಭಿವೃದ್ಧಿ. ನೆಲದಲ್ಲಿ ಯಂತ್ರಗಳೂ, ಮಾನವನೂ ಮಾತ್ರ ಅಂತಿಮವಾಗಿ ಮೆರೆಯುವುದೇ ಅಭಿವೃದ್ಧಿ. ದುರಂತವೆಂದರೆ ಒಟ್ಟಾರೆ ವ್ಯವಸ್ಥೆ ಎತ್ತ ಎಳಕೊಂಡು ಹೋಗುತ್ತದೋ ಅತ್ತ ಹೋಗಿಬಿಡುವುದೇ ನಿತ್ಯ ಕಾಯಕವಾಗಿದೆ.

ಕೆಲವರಿಗಂತೂ ನಿಜಕ್ಕೂ ಅಭಿವೃದ್ಧಿ ಮಾಡುವುದು ಬೇಕಿಲ್ಲ. ಅಭಿವೃದ್ಧಿ ಮಾಡುತ್ತಲೇ ಇರುವುದು ಬೇಕಾಗಿದೆ.



ಮೇಯುವುದಕ್ಕೆ ಜಾಗ ಬೇಡವೇ! ಅಭಿವೃದ್ಧಿ ಮಾಡುತ್ತಲೇ ಇರಬೇಕೆಂದಾಗ ಮೊದಲಿಗೆ ಇರುವ ಸ್ಥಿತಿಯನ್ನು ಹಾಳುಗೆಡವಿ ನಂತರ ಅಭಿವೃದ್ಧಿಗೆ ಪ್ಲಾನು ಹಾಕಬೇಕಾಗುತ್ತದೆ. (ಉದಾಹರಣೆಗೆ ಬೆಂಗಳೂರಿನ ಕಾರ್ಪೋರೇಶನ್ ಸರ್ಕಲ್ಲನ್ನು ಈ ಸ್ಥಿತಿಗೆ ತಂದಿರುವುದು ಇಂಪ್ರೂಮೆಂಟು ಎಂದು ತಂದವರು ಭಾವಿಸಿದ್ದಾರೆ. ಆದರೆ ಅದನ್ನು ಈ ಸ್ಥಿತಿಗೆ ತರಲು ಇದಕ್ಕಿಂತ ಕಳಪೆಯಲ್ಲದ ಇದರ ಹಿಂದಿನ ಸ್ಥಿತಿಯನ್ನು ಹಾಳುಗೆಡವಿದರು ಎಂಬುದು ನೋಡುತ್ತಿರುವ ನಮಗೆ ಗೊತ್ತಿದೆ) ಕಟ್ಟುವುದಕ್ಕೆ ಖರ್ಚು ಮಾಡುವುದಕ್ಕಿಂತ, ಕಿತ್ತು ಕಟ್ಟುವುದಕ್ಕೆ ಖರ್ಚು ಮಾಡುವುದು ಹೆಚ್ಚು ಲಾಭದಾಯಕವಲ್ಲವೇ! ಪ್ರತಿಯೊಂದನ್ನೂ ವ್ಯಾಪಾರೀಕರಿಸುವ ದುಷ್ಫಲ ಏಕರೂಪಿ ಸಂಸ್ಕೃತಿಯ ಕೊಡುಗೆ. ಇದರಿಂದಾಗಿ ಬದುಕಿನ ಎಲ್ಲ ವಲಯಗಳಿಗೂ ಲಾಭಕೋರತನವೇ ವ್ಯಾಪಿಸುವಂತಾಗುತ್ತಿದೆ.

ಸ್ವಾವಲಂಬಿ ಬದುಕನ್ನು ನಾಶಗೊಳಿಸಿ ಪರಾವಲಂಬಿ ಬದುಕನ್ನು ಹುಟ್ಟುಹಾಕುವ ಈ ನಗರೀಕರಣವು ಏಕರೂಪಿ ಸಂಸ್ಕೃತಿಯ ರಕ್ಕಸ ಕೂಸಾಗಿದೆ. ಈ ನಗರೀಕರಣದ ಈ ಕ್ಷಣದ ಪರಿಣಾಮವೆಂದರೆ ನಗರದ ಎಲ್ಲ ರಸ್ತೆಗಳೂ ದೇಶದ ಮೂಲೆ ಮುಡುಕುಗಳನ್ನು ಹೀರುವ ನಾಲಿಗೆಗಳಾಗುತ್ತಿರುವುದು ಮತ್ತು ನಗರದ ಹೊರವಲಯಗಳು ತ್ಯಾಜ್ಯದ ತಿಪ್ಪೆಗುಂಡಿಗಳಾಗುತ್ತಿರುವುದು. ಇದೊಂದು ಜಾಗತಿಕ ಏಕರೂಪಿ ಪ್ರಕ್ರಿಯೆ. ಹೀಗಾಗಿಯೇ ಎಲ್ಲ ಗ್ರಾಮಗಳಿಗೂ ತಾವೂ ನಗರಗಳಾಗುವ ತೀವ್ರ ಆಕಾಂಕ್ಷೆ ಉಂಟಾಗಿದೆ. ಸ್ಥೂಲವಾಗಿ ನಗರ ಮತ್ತು ಗ್ರಾಮಗಳ ನಡುವೆ ಇಂದು ವ್ಯತ್ಯಾಸವೇ ಅಳಿಸಿಹೋಗುತ್ತಿದೆ. ಅಂದರೆ ನಗರಗಳೆಲ್ಲವೂ ಏಕರೂಪಿ ಮತ್ತು ಗ್ರಾಮಗಳೆಲ್ಲವೂ ಬಹುರೂಪಿ ಸಂಸ್ಕೃತಿಯ ನೆಲೆಗಳು ಎಂದು ಈ ಮಾತಿನ ಅರ್ಥವಲ್ಲ. ಗ್ರಾಮಗಳಲ್ಲೂ ಇಂದು ಬೀಜ, ಗೊಬ್ಬರ, ತಳಿ, ಕೃಷಿ ಪದ್ಧತಿ, ರಾಜಕೀಯ, ಜೀವನಕ್ರಮಗಳೆಲ್ಲ ಏಕರೂಪಿಯಾಗುತ್ತಿವೆ. ಮಾರುಕಟ್ಟೆಯ ಎಲ್ಲ ಹತಾರಗಳೂ ಹಳ್ಳಿಗಳಿಗೆ ಪ್ರವೇಶಿಸಿವೆ. ನಗರದಲ್ಲಿನ ಎಲ್ಲ ಕೆಡುಕುಗಳೂ ಗ್ರಾಮಗಳಿಗೆ ಪ್ರವೇಶಿಸಿವೆ. ಆದರೆ ನಗರದಲ್ಲಿನ ಸೌಕರ್ಯಗಳು ಮಾತ್ರ ಗ್ರಾಮಗಳಿಗೆ ದಕ್ಕಿಲ್ಲ. ಅಮೇರಿಕಕ್ಕೆ ಭಾರತದಂತಹ ದೇಶಗಳು ಹೇಗೋ ಹಾಗೇ ಮಹಾನಗರಗಳಿಗೆ ಗ್ರಾಮಗಳು ಆಟಿಕೆಗಳಾಗಿವೆ.

ಚಿಕ್ಕ ಗ್ರಾಮದಿಂದ ಮಹಾನಗರದವರೆಗೆ ನಗರೀಕರಣ ಪ್ರಕ್ರಿಯೆ ಸರ್ವ ವ್ಯಾಪಿಯಾಗಿದೆ. ಹಾಗಾಗಿ ನಮ್ಮಲ್ಲಿಂದು ಇರುವುದು ಚಿಕ್ಕಪುಟ್ಟ - ಮಧ್ಯಮ ಮತ್ತು ಮಹಾನಗರಗಳು ಮಾತ್ರ. (ಗ್ರಾಮ ಮತ್ತು ನಗರವೆಂಬ ಬರೀ ಬೈನರಿ ಸ್ಥಿತಿಯಲ್ಲ) ಗ್ರಾಮ ನಗರವೆಂಬ ಭೇದ ಬರೀ ಧೋರಣೆ-ಸಂವೇದನೆ-ಧಾರ್ಮಿಕ, ಸಾಂಸ್ಕೃತಿಕ ಚಹರೆಗಳಲ್ಲಿ ಉಳಿದುಕೊಂಡಿದೆ ಎಂಬಂತೆಯೂ ಹೇಳುವ ಹಾಗಿಲ್ಲ. ಈ ಎಲ್ಲವುಗಳಲ್ಲೂ ನಗರ ಗ್ರಾಮಗಳ ನಡುವಿನ ಭೇದ ಅಳಿಸಿಹೋಗುತ್ತಿದೆ. ನಗರೀಕರಣವೊಂದೇ ಸಾಮಾನ್ಯ ಕ್ರಿಯೆಯಾಗಿ ಬೆಳೆಯುತ್ತಿದೆ. ಕಡಿಮೆ ಜನದಟ್ಟಣೆ ಮತ್ತು ಕಡಿಮೆ ಸೌಲಭ್ಯ ಹಾಗೂ ಕಡಿಮೆ ಶ್ರೀಮಂತರು ಇರುವುವೇ ಹಳ್ಳಿಗಳು. ಹೆಚ್ಚು ಜನದಟ್ಟಣೆ ಮತ್ತು ಹೆಚ್ಚು ಸೌಲಭ್ಯಗಳು ಹಾಗೂ ಹೆಚ್ಚಿನ ಶ್ರೀಮಂತರು ಇರುವುದೇ ನಗರಗಳು ಎಂಬಂತೆ ಇಂದಿನ ಸ್ಥಿತಿ ಇದೆ. ಇದು ಇಡೀ ಸಾಮಾಜಿಕ ಚಲನೆಯೇ ಏಕರೂಪಿ ಸಂಸ್ಕೃತಿಯ ಕಡೆಗೆ ಹೊರಳುತ್ತಿರುವುದರ ಲಕ್ಷಣ.

ಐಕ್ಯತೆ - ರಾಷ್ಟ್ರೀಯತೆಗಳ ಮಿಶ್ರಣ

ಐಕ್ಯತೆ, ಏಕೀಕರಣ, ಸಾಂಘಿಕತೆ, ಸಾರೂಪ್ಯ, ಸಾಮಾನ್ಯ ಚಹರೆ ಇವುಗಳಿಗೂ ಏಕರೂಪಿ ಚಹರೆಗಳಿಗೂ ಸಂಬಂಧವಿಲ್ಲ. ಇವುಗಳೆಲ್ಲ ಸಾಧಿತವಾಗುವುದೇ ಬಹುರೂಪಿ ಸಂಸ್ಕೃತಿಯ ಚಹರೆಗಳಾದ ಸಹನೆ, ಸಹಬಾಳ್ವೆ, ಸಹಮತ ತತ್ವಗಳನ್ನು ಗೌರವಿಸುವುದರಿಂದ ಮತ್ತು ಆಚರಿಸುವುದರಿಂದ. ಉದಾಹರಣೆಗೆ ನಾನು ಕರ್ನಾಟಕದವ, ನಾನು ಕನ್ನಡಿಗ ನಾವಿಬ್ಬರು ಒಂದೇ. ನಾನು ಹಿಂದೂ ನಾನು ಜೈನ ಆದಾಗ್ಯೂ ನಾವು ಭಾರತೀಯರು ಎಂಬಲ್ಲಿ ಬಹುರೂಪತೆಯನ್ನು ಗೌರವಿಸುವ ಸಾಮ್ಯತೆ ಇರುತ್ತದೆ. ಕರ್ನಾಟಕ ಏಕೀಕರಣ ವಿಚಾರದಲ್ಲಿ ಕನ್ನಡಿಗರೆಲ್ಲ ಒಂದೇ ಎಂಬ ಭಾವ ಏಕರೂಪಿ ಸಂಸ್ಕೃತಿಯ ಭಾವವಲ್ಲ. ಬಹುರೂಪಿಗಳನ್ನು ಒಪ್ಪಿದ ಐಕ್ಯತಾಭಾವ. ಆದರೆ ಕನ್ನಡ ನಾಡಿನಲ್ಲಿ ಕನ್ನಡ ಮಾತನಾಡುವವರು ಮಾತ್ರ ಇರಬೇಕು ಎಂಬುದು ಏಕರೂಪಿ ಸಂಸ್ಕೃತಿಯ ಲಕ್ಷಣ. ಭಾರತದಲ್ಲಿ ಹಿಂದೂಗಳು ಮಾತ್ರ ಇರಬೇಕು ಎಂಬ ಕೋಮುವಾದಕ್ಕಿಂತ ಇದು ಭಿನ್ನವಾದುದೇನಲ್ಲ. ಆಡಳಿತದ ಅನುಕೂಲಕ್ಕೆ ಭಾಷಾವಾರು ಪ್ರಾಂತ್ಯಗಳನ್ನು ವಿಂಗಡಿಸಿದಾಕ್ಷಣ ಆಯಾ ಗಡಿ ನೆಲವನ್ನು ಆಯಾ ಭಾಷೆಗಳಿಗೆ ಗುತ್ತಿಗೆ ಕೊಟ್ಟಿಲ್ಲ. ಆದರೆ ಜನ ಹಾಗೆ ಆಡತೊಡಗಿದ್ದಾರೆ. ಒಂದೇ ಭಾಷೆ ಮಾತ್ರ ಮಾತಾಡುವ ಜನ ಎಂದೂ ಎಲ್ಲೂ ಇರಲಿಲ್ಲ, ಇರುವುದೂ ಇಲ್ಲ ಕೂಡ.

ಐಕ್ಯತೆ ಎಂಬುದು ಬಹುರೂಪಿ ಸಂಸ್ಕೃತಿಯ ಲಕ್ಷಣ. ಪ್ರತ್ಯೇಕತೆ ಎಂಬುದು ಏಕರೂಪಿ ಸಂಸ್ಕೃತಿಯ ಲಕ್ಷಣ. ಭಾರತದಲ್ಲಿಂದು ರಾಷ್ಟ್ರೀಯತೆ, ಧಾರ್ಮಿಕತೆ ಮತ್ತು ದೇಶಭಕ್ತಿಗಳೆಲ್ಲ ಕಲಸಿಕೊಂಡಂತೆ ಕಾಣುತ್ತಿವೆ. ಇವುಗಳ ನಡುವಿನ ವ್ಯತ್ಯಾಸ ಇಲ್ಲವಾಗುತ್ತಿದೆ. ಇವೆಲ್ಲವೂ ಭಿನ್ನ ಚಹರೆಗಳು ಎಂದು ತಿಳಿದಿದ್ದೂ ನಮ್ಮ ಮೂಲಭೂತವಾದಿಗಳು ಭಾರತೀಯ ಎಂದರೆ ಹಿಂದೂ, ಭಾರತವೆಂದರೆ ಹಿಂದೂಸ್ಥಾನ ಎನ್ನುತ್ತಿದ್ದಾರೆ. ಇಲ್ಲಿನ ಮುಸಲ್ಮಾನನೊಬ್ಬ ಏಕಕಾಲಕ್ಕೆ ಮುಸ್ಲಿಮನಾಗಿಯೂ ಭಾರತೀಯನಾಗಿಯೂ ಇರಬಹುದಾದ ಸಾಧ್ಯತೆಯೇ ಇವರಿಗೆ ಪಥ್ಯವಿಲ್ಲ. ಏಕಕಾಲಕ್ಕೆ ಎರಡು ಚಹರೆಗಳನ್ನು ಅಥವಾ ಬಹುಚಹರೆಗಳನ್ನು ಹೊಂದಿರುವುದೇ ಅಸಾಧ್ಯ ಮತ್ತು ಅಸಾಧು ಎಂಬ ನಂಬಿಕೆ ನಮ್ಮ ಎಲ್ಲ ಮೂಲಭೂತವಾದಿಗಳಲ್ಲಿದೆ. ಏಕರೂಪಿ ಚಿಂತನೆಯ ಅಪಾಯವಿದು.

ಬಹುರೂಪಿ ಜೀವನ ಕ್ರಮಗಳನ್ನು ಗೌರವಿಸದೆ ಏಕರೂಪಿ ನಿರ್ಬಂಧಗಳನ್ನು ಹೇರುವ ಪ್ರಜಾಪ್ರಭುತ್ವ ಅದು ಹೇಗಾದರೂ ಪ್ರಜಾಪ್ರಭುತ್ವವಾದೀತು? ಅಖಂಡ ಭಾರತಕ್ಕೆ ಒಂದೇ ಸಂವಿಧಾನ ಇರಬೇಕು ಸರಿ. ಆದರೆ ಎಲ್ಲ ಭಾರತೀಯರಿಗೂ ಏಕರೂಪದ ನಾಗರಿಕ ಕಾನೂನು ಯಾಕಿರಬೇಕು? ಸಾಂಸ್ಕೃತಿಕ ನಂಬಿಕೆ-ಆಚಾರಗಳನ್ನು ಏಕರೂಪಿ ಕಾನೂನುಗಳಿಂದ ನಿರ್ಬಂಧಿಸುವ ಅಗತ್ಯವಿಲ್ಲ. ಇದರರ್ಥ ಧಾರ್ಮಿಕ ಕಂದಾಚಾರಗಳಿಗೆ ಕಾನೂನಿನ ರಕ್ಷೆ ಇರಬೇಕು ಎನ್ನುವುದಲ್ಲ. ಹಾಗೆ ಜಡವಾದ, ಸದಾ ಒಂದೇ ತೆರನ ಆಚರಣೆಗಳಿಗೆ ಕಟ್ಟುಬಿದ್ದ ಯಾವ ಧರ್ಮವೂ ಚರಿತ್ರೆಯಲ್ಲಿ ಉಳಿಯುವುದಿಲ್ಲ. ವಿದ್ರೋಹವಾದಿ, ಸುಧಾರಣಾವಾದಿ ಪ್ರತಿರೋಧಗಳು ಎಲ್ಲ ಜಡತೆಯ ಎದುರು ಹುಟ್ಟೇ ಹುಟ್ಟುತ್ತವೆ. ಇವೆಲ್ಲ ಏಕರೂಪತೆಗೆ ಒಡ್ಡುವ ಪ್ರತಿರೋಧವೇ ಆಗಿರುತ್ತವೆ.

ಧರ್ಮದ ಗುತ್ತಿಗೆ ಹಿಡಿದ ಕಮಲಮುಖಿಗಳು ಭಾರತವೆಂದು ಹೇಳುವ ಭಾರತದಲ್ಲಿ ಮಸೀದಿ ಒಡೆದು ಮಂದಿರ ಕಟ್ಟಬೇಕು. ಆ ಮಂದಿರಕ್ಕೆ ದೇಶದ ಎಲ್ಲ ಜಾತಿಯವರೂ ಇಟ್ಟಿಗೆ ದುಡ್ಡು ಕಳಿಸಬೇಕು. ಆದರೆ ಆ ಮಂದಿರಕ್ಕೆ ಪ್ರವೇಶ ಕೆಲವರಿಗೆ ಮಾತ್ರ ಇರಬೇಕು. ಇಡೀ ಭಾರತಕ್ಕೆಲ್ಲ ಒಬ್ಬನೇ ರಾಮ ಇರಬೇಕು. ಅಯೋಧ್ಯೆಯನ್ನು ಹಿಂದೂಗಳ ಮೆಕ್ಕಾ ಮಾಡಬೇಕು. ಧಾರ್ಮಿಕ ಚಕ್ರಾಧಿಪತ್ಯಕ್ಕೆ ಇಡೀ ಭಾರತವೇನು ಇವರ ಮಠವಾ? ಇಷ್ಟಕ್ಕೂ ಭಾರತದಲ್ಲಿ ಒಬ್ಬ ರಾಮ - ಒಂದು ರಾಮಾಯಣ ಯಾವತ್ತೂ ಇರಲಿಲ್ಲ. ಇಂದಿಗೂ ನಮ್ಮಲ್ಲಿ ಅನೇಕ ರಾಮಾಯಣಗಳಿವೆ. ನಮ್ಮ ದೇಶ ಇವತ್ತು ಒಂದೇ ಆದರೂ ಒಂದು ಭಾಷೆ, ಒಂದು ಧರ್ಮ, ಒಂದು ದೇವರು, ಒಂದು ನೀತಿ, ಒಂದು ಸತ್ಯ, ಒಂದು ಕಾನೂನು ಇಲ್ಲಿ ಇಲ್ಲ, ಇರಬೇಕಿಲ್ಲ. ಇದು ಬಹು ಸಂಸ್ಕೃತಿಯ ದೇಶ. ಸಹಬಾಳ್ವೆಯನ್ನು ಕೊಲ್ಲುವ, ಪ್ರತ್ಯೇಕತೆಯನ್ನು ಹುಟ್ಟುಹಾಕುವ ಆ ಮೂಲಕ ಮಾನವ ದ್ವೀಪಗಳನ್ನು ನಿರ್ಮಿಸುವ ಏಕರೂಪಿ ಸಂಸ್ಕೃತಿ ಭಾರತಕ್ಕೆ ಸಲ್ಲದು.

ಕೊನೆಗೆ ಮೊದಲು

ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿಗಳ ಮುಖಾಮುಖಿ ಎಂಬುದು ಸಂಸ್ಕೃತಿಯ ಹತ್ತಾರು ಅಂಗಗಳಲ್ಲಿ ಇರಬಹುದಾದ ಊನತೆ-ನ್ಯೂನತೆಗಳ ಚರ್ಚೆಗೆ ಇರುವ ಪರಿಭಾಷೆಯೇ ? ಎಂಬ ಪ್ರಶ್ನೆ ಇಷ್ಟೆಲ್ಲ ಹೇಳಿದ ಮೇಲೂ ನನ್ನಲ್ಲಿನ್ನೂ ಉಳಿದುಕೊಂಡಿದೆ. ಕೊಂಕಣ ಸುತ್ತಿ ಮೈಲಾರಕ್ಕೆ ಬಂದರೂ ಮತ್ತೆ ಮತ್ತೆ ಸಂಸ್ಕೃತಿ ಚರ್ಚೆಯಲ್ಲಿ ದ್ವಿಮಾನ ವೈರುಧ್ಯ (Binary opposition) ಕಲ್ಪನೆಗೇ ಢಿಕ್ಕಿ ಹೊಡೆದಂತೆ ಅನ್ನಿಸುತ್ತಿದೆ. ನಮ್ಮ ಸಂಸ್ಕೃತಿ ಅಧ್ಯಯನದ ಅನೇಕ ಸಂಕಥನ ವಿನ್ಯಾಸಗಳಲ್ಲಿ ಮತ್ತೆ ಮತ್ತೆ ಪ್ರಧಾನವಾಗಿ ತಲೆ ಹಾಕುವ ಒಂದು ವಿನ್ಯಾಸವೆಂದರೆ ದ್ವಿಮಾನ ವೈರುಧ್ಯದ ವಿನ್ಯಾಸ. ಈ ದ್ವಿಮಾನ ವೈರುಧ್ಯದ ನೆಲೆ ಎಷ್ಟರ ಮಟ್ಟಿಗೆ ನಮ್ಮೆಲ್ಲ ಸಂಕಥನ ವಿನ್ಯಾಸಗಳಲ್ಲಿ ತಲೆಹಾಕಿದೆ ಎಂದರೆ ಇದೊಂದು ಸಂಸ್ಕೃತಿ ಅಧ್ಯಯನ ಶಿಸ್ತಿನ ಪರಿಕಲ್ಪನೀಯ ಯಾಜಮಾನ್ಯ (Conceptual Legemony) ಎಂಬಷ್ಟರ ಮಟ್ಟಿಗೆ ತಲೆಹಾಕಿದೆ. ತಲೆ ಹಾಕುತ್ತಲೇ ಇದೆ. ಇದು ಪಾಶ್ಚಾತ್ಯ ಪ್ರಣೀತ ಚಿಂತನಾ ಕ್ರಮ ಎಂದೇನೂ ಅಲ್ಲ. ಇದೊಂದು ಜಾಗತಿಕ ವ್ಯಾಪ್ತಿಯ ಅಪ್ರೋಚು. ಆಳುವ ಸಂಸ್ಕೃತಿಗಳಿಂದ ಸೃಷ್ಟಿಯಾಗಿರುವ ಪರಿಭಾಷೆಯಿದು. ತರತಮವೇ ಇದರ ಮೂಲಮಾನ. ನಮ್ಮ ಸಂಸ್ಕೃತಿ ಚಿಂತನೆಯನ್ನು ಬಹುಕಾಲದಿಂದ ಆಳುತ್ತ ಬಂದಿರುವ ಅಪ್ರೋಚು ಇದು. ಈ ಲೇಖನವೂ ಕೂಡ ಏಕರೂಪಿ ಮತ್ತು ಬಹುರೂಪಿ ಎಂಬ ಬೈನರಿಯನ್ನೇ ಒಪ್ಪಿದಂತೆ ಕೆಲಕಡೆ ಬೆಳೆದಿದೆ.



ಐಕ್ಯತೆ ಎಂಬುದು ಬಹುರೂಪಿ ಸಂಸ್ಕೃತಿಯ ಲಕ್ಷಣ. ಪ್ರತ್ಯೇಕತೆ ಎಂಬುದು ಏಕರೂಪಿ ಸಂಸ್ಕೃತಿಯ ಲಕ್ಷಣ. ಭಾರತದಲ್ಲಿಂದು ರಾಷ್ಟ್ರೀಯತೆ, ಧಾರ್ಮಿಕತೆ ಮತ್ತು ದೇಶಭಕ್ತಿಗಳೆಲ್ಲ ಕಲಸಿಕೊಂಡಂತೆ ಕಾಣುತ್ತಿವೆ. ಇವುಗಳ ನಡುವಿನ ವ್ಯತ್ಯಾಸ ಇಲ್ಲವಾಗುತ್ತಿದೆ. ಇವೆಲ್ಲವೂ ಭಿನ್ನ ಚಹರೆಗಳು ಎಂದು ತಿಳಿದಿದ್ದೂ ನಮ್ಮ ಮೂಲಭೂತ ವಾದಿಗಳು ಭಾರತೀಯ ಎಂದರೆ ಹಿಂದೂ, ಭಾರತವೆಂದರೆ ಹಿಂದೂಸ್ಥಾನ ಎನ್ನುತ್ತಿದ್ದಾರೆ.

ಆರ್ಯ-ದ್ರಾವಿಡ, ದೇಸಿ-ಮಾರ್ಗ, ಶಿಷ್ಟ-ಜಾನಪದ, ವೈದಿಕ-ಅವೈದಿಕ, ಪ್ರಧಾನ-ಉಪ, ಹಿಂದೂ-ಮುಸ್ಲಿಂ, ಮೌಖಿಕ-ಲಿಖಿತ, ಹೆಣ್ಣು-ಗಂಡು, ಕಾಡು-ತೋಪು, ಜಲ-ಅಗ್ನಿ ಹೀಗೆ ಬಹುಪಾಲು ಸಂಸ್ಕೃತಿ ಸಂಕಥನವೆಲ್ಲ ಇಂಥ ದ್ವಿಮಾನ ವೈರುಧ್ಯಗಳ ಮೂಲಕವೇ ನಿರ್ವಚಿತವಾದಂತೆ ಕಾಣುತ್ತದೆ. ಯಾವ ಚಿಂತನೆಗಳನ್ನು ನೋಡಿದರೂ ಈ ಬೈನರಿ ನೆಲೆಗಳೇ ನಮ್ಮ ಮನಸ್ಸು ಮತ್ತು ಗ್ರಹಿಕೆಗಳನ್ನು ಆಳಿರುವಂತೆ ಕಾಣುತ್ತದೆ. ಈ ರೀತಿಯಲ್ಲಿ ಬರೀ ಎರಡಾಗಿ ಸಂಸ್ಕೃತಿಯನ್ನು ಅರ್ಥೈಸಲು ಆಗುವುದಿಲ್ಲ. ಅಧ್ಯಯನದ ಅನುಕೂಲಕ್ಕೆ ಸಂಸ್ಕೃತಿ ವಿನ್ಯಾಸಗಳನ್ನು ಚರಿತ್ರೆಯ ಕಾಲಘಟ್ಟಗಳನ್ನು ವಿಭಾಗಿಸಿ ಗುರ್ತಿಸಿಕೊಳ್ಳುವುದು ಬೇರೆ. ಆದರೆ ಸಂಸ್ಕೃತಿಯನ್ನು ಇಡಿಯಾಗಿ ದ್ವಿಮಾನ ವೈರುಧ್ಯಗಳಲ್ಲಿ ವ್ಯಾಖ್ಯಾನಿಸುವುದು ಬೇರೆ. ಇಂಥಲ್ಲಿ ಶ್ರೇಷ್ಠ-ಕನಿಷ್ಠ ಬಲಿಷ್ಠ-ದುರ್ಬಲ, ಉನ್ನತ-ಕೀಳು ಎಂಬಂತಹ ತಾರತಮ್ಯ ನೆಲೆಯಲ್ಲೇ ಸಂಸ್ಕೃತಿಯನ್ನು ಇಬ್ಭಾಗವಾಗಿ ನಿರ್ವಚಿಸಲಾಗುತ್ತಿರುತ್ತದೆ. ಬಹಳ ಸ್ಪಷ್ಟವಾಗಿ ಈ ವಿನ್ಯಾಸವು ಒಬ್ಬರನ್ನು ಏರಿಸಿ ಇನ್ನೊಬ್ಬರನ್ನು ಇಳಿಸಲೆಂದೇ ಸೃಷ್ಟಿಯಾದಂತೆ ಕಾಣುತ್ತದೆ.

ಹೀಗೆ ವೈರ, ವೈರುಧ್ಯ, ಸಂಘರ್ಷಗಳು ಮಾತ್ರವುಳ್ಳ ಇಮ್ಮುಖಿ ತಾರತಮ್ಯದ ಮೂಲಕ ಮಾತ್ರವೇ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ ? ಈ ರೀತಿಯ ಪರಿಕಲ್ಪನಾತ್ಮಕ ಯಾಜಮಾನ್ಯ ನಮ್ಮ ಸಂಸ್ಕೃತಿ ಅಧ್ಯಯನಕ್ಕೆ ಎಷ್ಟರಮಟ್ಟಿಗೆ ಆರೋಗ್ಯಕಾರಿ ? ಇದಕ್ಕಿಂತ ಭಿನ್ನವಾದ ನವೀನ ಬಹುಮುಖಿ ಅಪ್ರೋಚುಗಳು ನಮ್ಮಲ್ಲಿ ಶೋಧಿತವಾಗಬೇಕಿದೆ. ಇಲ್ಲದಿದ್ದರೆ ಯಾಜಮಾನೀಯ ನೆಲೆಯಿಂದಲೇ ಸಂಸ್ಕೃತಿಯನ್ನು ನಾವೂ ನೋಡುತ್ತ ಹೋಗಬೇಕಾಗುತ್ತದೆ.

ಹಾಗೆ ನೋಡಿದರೆ ಏಕರೂಪಿ ಸಂಸ್ಕೃತಿ ಮತ್ತು ಬಹುರೂಪಿ ಸಂಸ್ಕೃತಿಗಳ ಮುಖಾಮುಖಿ ಎಂಬ ಪರಿಭಾಷೆ ಕೂಡ ಬೈನರಿ ವೈರುಧ್ಯ ನೆಲೆಯ ವಿಸ್ತರಣೆಯೇ ಆಗಿದೆ. ಇದು ಕೂಡ ಒಂದು ರೀತಿ ನಮ್ಮ ಬೌದ್ಧಿಕ ವ್ಯಾಖ್ಯಾನ ಚರಿತ್ರೆಯ ಏಕರೂಪಿ ಸಂಸ್ಕೃತಿಯೇ.

(ಸೂಚನೆ : ಕೇಂದ್ರ ಸಾಹಿತ್ಯ ಅಕಾದೆಮಿ, ದಕ್ಷಿಣ ಪ್ರಾದೇಶಿಕ ಕಛೇರಿ ಮತ್ತು ಕೋಲಾರ ಕನ್ನಡ ಸಾಹಿತ್ಯ ಪರಿಷತ್ತುಗಳ ಜಂಟಿ ಆಶ್ರಯದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಿದ ವಿಚಾರಗಳ ಲೇಖನ ರೂಪ.) □

ಲೋಕಾನುರಾಗಿ ವಿರಾಗಿ
ಲೇಖಕಿ ಸರಸ್ವತೀಬಾಯಿ ರಾಜವಾಡೆ

ನೆನಪು

ಹುಟ್ಟಾ ಸ್ವತಂತ್ರ ಮನಸ್ಸಿನ ರಾಜವಾಡೆ ಉದ್ದಕ್ಕೂ ಕಂಡದ್ದು ಕನಸು, ಕನಸು ಮತ್ತೂ ಕನಸು. ಎಂಥ ಕಾಲದಲ್ಲಿಯೂ ಅವರು ತನ್ನ ಕನಸಿನ ಲೋಕವನ್ನು ಮುಚ್ಚಿಕೊಳ್ಳಲಿಲ್ಲ. ಎಂತಲೇ ಅವರೆಲ್ಲೂ ಬಳಿದುಕೊಂಡು ಹೋಗದೆ ಸ್ಥಿರ ನಿಂತು ನಾಳೆಗೆ ಇಣುಕುವ ಕತ್ತಿನ ಬಲ ಉಳಿಸಿಕೊಂಡರು. The uncrowned queen of short stories ಎಂದು ಒಬ್ಬ ವಿಮರ್ಶಕರಿಂದ 'ದಿ ಹಿಂದೂ' ಪತ್ರಿಕೆಯಲ್ಲಿ ಮುಕ್ತ ಪ್ರಶಂಸೆ ಪಡೆದ ಈ ಲೇಖಕಿ, ಎರಡು, ಎರಡೂವರೆ ದಶಕಗಳ ಕಾಲ, ತನ್ನ ಲೇಖನ ವೃತ್ತಿಯಲ್ಲಿ ನಿರತರಾಗಿದ್ದರು. ಅವರ ಬಗೆಗಿನ ಒಂದು ಅಪೂರ್ವ ನೋಟ ಇಲ್ಲಿದೆ.

○ ವೈದೇಹಿ

ಅವರ ಮಾತೆಂದರೆ ಪ್ರಫುಲ್ಲ ಮನಸ್ಸಿನಿಂದ ಚಿಮ್ಮಿ ಚಿಮ್ಮಿ ಬರುವ ಮಾತು-ಕತೆಗಳು. ಕಹಿ ನೆನಪುಗಳನ್ನು ಪ್ರಫುಲ್ಲವಾಗಿ ಹೇಳುತ್ತಾ ಹೋಗುವ ಅವರ ಪರಿಯೆಂದರೆ ಸುಮಾರಾಗಿ ಸುತ್ತೆಲ್ಲೂ ಅಂತಹದು ಕಾಣ ಸಿಗಲಿಕ್ಕಿಲ್ಲ. ಕೊನೆಯತನಕವೂ ತನ್ನ ಈ ಗುಣವನ್ನು ಕಾದಿಟ್ಟು ಕೊಂಡೇ ಇದ್ದರು - ನಮ್ಮ ಹಿರಿಯ ಲೇಖಕಿ ಶ್ರೀಮತಿ ಸರಸ್ವತೀಬಾಯಿ ರಾಜವಾಡೆ. ಹುಟ್ಟಿದ್ದು ಉಡುಪಿಯ ಸಮೀಪದ ಬಳಂಜಾಲ ಎಂಬಲ್ಲಿ ೧೯೧೩ರ ನಾಲ್ಕನೇ ನವರಾತ್ರಿಯಂದು (ಅಕ್ಟೋಬರ್ ೩ರಂದು).

ತನ್ನ ಕಷ್ಟದ ದಿನಗಳ ನೆನಪು ಅವರಿಗೆ ಕೊನೆ ಗಾಲದವರೆಗೂ ಸ್ಪಷ್ಟ ವಿತ್ತು. 'ದರಿದ್ರ' ಎಂದು ಹೇಳಿಸಿಕೊಳ್ಳುತ್ತೇವಲ್ಲ ಅಂತಹ ದಿನಗಳವು. ತಂದೆಯನ್ನು ಕಳಕೊಂಡ ಮಗು, ತಾಯಿಯಿಂದ ಪಡೆದ ಪ್ರೀತಿಯಲ್ಲೂ ಮುಕ್ಕಾಲು ಪಾಲು ಪೆಟ್ಟೇ. ದುಃಖಿ ತಾಯಿ ಸದಾ ಕಾಲ ದುಃಖ ವನ್ನು ರೋಷವಾಗಿಯೇ ಪರಿವರ್ತಿಸಿ ಕೊಂಡು ಪುಟ್ಟ ಮಗಳ ಮೇಲೆ ಆ ರೂಪದಲ್ಲಿಯೇ ಪ್ರೀತಿ ಹರಿಸಿದವರು. ಅಜ್ಜಿಯ ಪ್ರೀತಿಯೇ ಎಳವೆಯ ರಾಜವಾಡೆಗೆ, ವೃದ್ಧಾಪ್ಯದಲ್ಲಿಯೂ ಕಣ್ಣೆವೆಯನ್ನು ನೆನೆಯಿಸುತ್ತಿತ್ತು. ಒಂದು ದಿನವಂತೂ ಜ್ವರದ ಸ್ಥಿತಿ ಕಾಫಿ ಕುಡಿಯಲೂ ಗತಿಯಿಲ್ಲ. ಬಾಯಿ ಒಣಗಿ ಬಂದ ಮೇಲೆ ಬಾಲಕಿ ರಾಜವಾಡೆ ಎರಡೂ ಕೈ ಮುಗಿದು 'ಕಾಪು ಮಾರಿಯಮ್ಮಾ, ನನಗೆ ಕಲೆಕ್ಟರ್ ಗಂಡನನ್ನು ಕೊಡು, ತುಂಬಾ ಸಂಪತ್ತು ಕೊಡು, ನಿನಗೆ ಹತ್ತು ಪವನಿನ ಸರ ಮಾಡಿಸಿ ಹಾಕುತ್ತೇನೆ' ಎಂದು ಬೇಡಿಕೊಂಡರಂತೆ. ತನ್ನ ಮನಸ್ಸಿನಲ್ಲಾಗ ಮಗುವಿನ ಕಲ್ಪನೆಯೇ ಇರಲಿಲ್ಲ. ಆ ಮಾರಿಯಮ್ಮನೋ ಕೇಳಿದಷ್ಟು ಕೊಟ್ಟಳು. (ಮುಂದೆ ರಾಜವಾಡೆ ಅವಳಿಗೆ ಹತ್ತು ಪವನಿನ ಸರವನ್ನೂ ಮಾಡಿಸಿ ಹಾಕಿದರು) ಆದರೆ ಮಗುವನ್ನು ಮಾತ್ರ ಕೊಡಲಿಲ್ಲ ಅಂತೆಲ್ಲ ಹೇಳುವಾಗ ಮಗುವಿಲ್ಲದ ಕೊರಗೇನಿಲ್ಲ. ಬದಲು ಮಗುವಿನಂತಹ ನಗು. ಈಕೆ ಎಲ್ಲ ಹೆಂಗಸರಂತೆ ಅಲ್ಲವೇ ಅಲ್ಲ.

ಅವರ ಕತೆಯನ್ನು ಅವರ ಹಾವಭಾವದೊಡನೇ ಕೇಳಬೇಕು. ಹೇಳುವ ರೀತಿಯೆಂದರೆ ಯಾವ ಕಹಿ, ದುಃಖ, ಉದ್ವೇಗಗಳಿಲ್ಲದೆ, ಅವನ್ನೆಲ್ಲ ದಾಟಿ ಬಂದೆ ಎಂಬ ಸಂಭ್ರಮದಿಂದ. ಸಂಭ್ರಮ ಆಕೆಯ ಸ್ಥಾಯೀ ಗುಣ. ಮುಖದಲ್ಲೊಂದು ನಗೆಯ ದೀಪ ಹಚ್ಚಿಕೊಳ್ಳದೆ ಮಾತಾಡಲಿಕ್ಕೇ ತಿಳಿಯದವರು. ಐವತ್ತೊಂದು ವರ್ಷದ ಶ್ರೀಮಂತ ಕಲೆಕ್ಟರ್ ಸಾಹೇಬ ಹದಿನಾಲ್ಕು ವರ್ಷದ ಹುಡುಗಿಯಾದ ತನ್ನನ್ನು ಮದುವೆಯಾದ ವಿಷಯ, ಆತನೊಂದಿಗೆ ಸಿಂಗಾಪುರಕ್ಕೆ ಹೋಗಿ ಅಲ್ಲಿ ಆತನ ದೇವೀ ಪೂಜೆಗೆ ಅಣಿಮಾಡುತ್ತ ದಿನ ಕಳೆಯುತ್ತಿದ್ದ ತಾನು, ನಾನಾ ದೇಶದ ಕೂಲಿಗಳು ಕೆಲಸ ಮಾಡುವಂತಹ ಆ ಜಾಗದಲ್ಲಿ ತನ್ನನ್ನು ಯಾರಾದರೂ ಹಾರಿಸಿಕೊಂಡು ಹೋದಾರು ಎಂಬ ಭಯದಿಂದ ಪತಿ ಮನೆಯಿಂದ ಹೊರಗೆ ಬರದಂತೆ ಕಟ್ಟಾಜ್ಞೆ ಮಾಡಿದ್ದು, ಬಂಗಲೆಗೆ ಬೀಗ ಹಾಕಿಕೊಂಡೇ ಆತ ಆಫೀಸಿಗೆ ಹೋಗಿ ಬರುತ್ತಿದ್ದದ್ದು, ಏಕಾಂತ ತಡೆಯ ಲಾರದೆ ಪತಿ ತರಿಸುತ್ತಿದ್ದ 'ಕೇಸರಿ' ಎಂಬ ಕನ್ನಡ ಪತ್ರಿಕೆಯನ್ನು ಓದುತ್ತಾ ತಾನು ಲೇಖನಿ ಕೈಗೆತ್ತಿಕೊಂಡದ್ದು, ಮನೆಗೆಲಸ ಮಾಡುತ್ತಿದ್ದ ಮುತ್ತಯ್ಯ ಎಂಬ ಹುಡುಗನಿಂದ ತಮಿಳು ಕಲಿತು, ತಮಿಳಿನಲ್ಲೇ ಕತೆ ಬರೆದು ಬಹುಮಾನ ಗಿಟ್ಟಿಸಿದ್ದು, ನಿವೃತ್ತಿಯ ನಂತರ ಬೆಂಗಳೂರಿಗೆ ಬಂದು ನೆಲೆಸಿದ ಪತಿ ತನ್ನನ್ನು ಕಾನ್ವೆಂಟಿಗೆ ಸೇರಿಸಿ ಎಸ್.ಎಸ್.ಎಲ್.ಸಿ ವರೆಗೆ ಓದಿಸಿದ್ದು ಎಲ್ಲಾ ಆಕೆ ಹೇಳು ವುದು ಎಲ್ಲೋ ಕಳೆದುಹೋದ ಒಬ್ಬ ಹುಡುಗಿಯ ಕತೆಯನ್ನು ತಾನು ತನ್ನದಾಗಿಸಿಕೊಂಡು ಹೇಳುತ್ತಿದ್ದೇನೋ ಎಂಬಂತೆ ಎಲ್ಲೂ ಪೂರ್ತಿ ಹೊರಗೂ ನಿಲ್ಲದೆ, ಒಳಗೂ ನಿಲ್ಲದೆ!

ಬೆಂಗಳೂರಿನಲ್ಲಿದ್ದಾಗಲೂ ಮನೆಯಿಂದ ಹೊರಗೆ ಹೋಗುವಂತಿರಲಿಲ್ಲ, ಹಾಗಾಗಿ ಅರಸಿನ ಕುಂಕುಮ ಕೊಡಲು ಅಕ್ಕ ಪಕ್ಕದ ಮನೆಯವರು ತಾವೇ ಮನೆಗೆ ಬರುತ್ತಿದ್ದರಂತೆ. ಬಂದವರು ಹೊರಟು ಹೋದ ಮೇಲೆ 'ಅವರೆಲ್ಲ ಏನೆಂದರು ? ಗಂಡ ಮುದುಕ ಅಂತ ತಮಾಷೆ ಮಾಡಿದರಾ?...' ಮುಂತಾಗಿ ಪತಿ ಕೇಳುತ್ತಿದ್ದುದನ್ನು ಮರೆಯದೆ ಹೇಳಿ ನಗುತ್ತಿದ್ದರು ರಾಜವಾಡೆ. ಭಯಂಕರ ಸಿಟ್ಟು ಅಷ್ಟೇ ದೊಡ್ಡ ಹೃದಯ, ಉಪಾರಿ, ದೈವಭಕ್ತ ಜನ ತನಗೆಲ್ಲಿ ಮೋಸ ಮಾಡುತ್ತಾರೋ ಎಂದೇ ಅವರು ತನ್ನನ್ನು ಓದಿಸಿದ್ದು. ಎಂದೆಲ್ಲ ಪತಿಯ ಬಗ್ಗೆ ನೆನವರಿಕೆ ನಡೆಸಿಕೊಂಡೇ ಆತ ತನಗೆ ತಂದೆಯಂತೆ ಕಾಣುತ್ತಿದ್ದರು ಎಂಬುದನ್ನೂ ಹೇಳದೆ ಬಿಡರು.

ರಾಜವಾಡೆ ಹಿಂದಿ ಮತ್ತು ಸಂಸ್ಕೃತವನ್ನು ಪತಿಯಿಂದ ಕಲಿತರು. ಇವಲ್ಲದೆ ಇಂಗ್ಲಿಷ್, ತಮಿಳು, ಮರಾಠಿ, ತುಳು ಭಾಷೆಗಳನ್ನೂ ಅವರು ಬಲ್ಲವರಾಗಿದ್ದರು. ಅವರ ಮಾತಿನ ಪ್ರವಾಹದಲ್ಲಿ ಈ ಎಲ್ಲ ಭಾಷೆಗಳಲ್ಲಿನ ನಾಣ್ಣುಡಿಗಳು, ಜಾಣ್ನುಡಿಗಳು, ಅನುಭವದ ನುಡಿಗಳು ಎಲ್ಲವೂ ಬೆರೆತಿರುತ್ತಿದ್ದವು.

ಹುಟ್ಟಾ ಸ್ವತಂತ್ರ ಮನಸ್ಸಿನ ಈ ಲೇಖಕಿ ಉದ್ದಕ್ಕೂ ಕಂಡದ್ದು ಕನಸು, ಕನಸು ಮತ್ತೂ ಕನಸು. ಎಂಥ ಕಾಲದಲ್ಲಿಯೂ ಅವರು ತನ್ನ ಕನಸಿನ ಲೋಕವನ್ನು ಮುಚ್ಚಿಕೊಳ್ಳಲಿಲ್ಲ. ಎಂತಲೇ ಅವರೆಲ್ಲೂ ಬಳಿದುಕೊಂಡು ಹೋಗದೆ ಸ್ಥಿರ ನಿಂತು ನಾಳೆಗೆ ಇಣುಕುವ ಕತ್ತಿನ ಬಲ ಉಳಿಸಿಕೊಂಡರು.

ಉದ್ದ ನಿಲುವು, ಕೆಂಪು ಬಿಳಿ ಬಣ್ಣ, ನೆತ್ತಿಗೆ ಎತ್ತಿ ಕಟ್ಟಿದ ತುರುಬು ಮುಖದ ಆಕಾರದ ತಿರುವುಗಳಿಗೆ ಮಾತಿಗೆ ತಕ್ಕ ಗತ್ತು ಒದಗಿಸುವ ಸ್ನಾಯು ಗತಿ, ಮನೆಯೊಳಗೆ ಅವರ ಪ್ರಾಯದ ಕಾಲದ ಫೋಟೋಗಳಿವೆ, ಅವುಗಳಲ್ಲಂತೂ ಆಕೆ ಆತ್ಮವಿಶ್ವಾಸದ ಪಡಿಯಚ್ಚು. The uncrowned queen of short stories ಎಂದು ಒಬ್ಬ

ವಿಮರ್ಶಕರಿಂದ 'ದಿ ಹಿಂದೂ' ಪತ್ರಿಕೆಯಲ್ಲಿ ಮುಕ್ತ ಪ್ರಶಂಸೆ ಪಡೆದ ಈ ಲೇಖಕಿ, ಎರಡು, ಎರಡೂವರೆ ದಶಕಗಳ ಕಾಲ, ತನ್ನ ಲೇಖನ ವೃತ್ತಿಯಲ್ಲಿ ನಿರತರಾಗಿಬಿಟ್ಟರು. 'ವೀಣಾ ಪಾಣಿ', 'ವಿಶಾಖ' ಹಾಗೂ 'ಗಿರಿಬಾಲೆ' ಎಂಬ ಕಾವ್ಯನಾಮಗಳಲ್ಲಿ ಬರೆದರು. ತಾನು ಸರಸ್ವತಿ ಆದುದರಿಂದ 'ವೀಣಾ ಪಾಣಿ', 'ವಿಶಾಖಾ' ತನ್ನ ಜನ್ಮ ನಕ್ಷತ್ರ, ಮತ್ತು 'ಗಿರಿಬಾಲೆ' ಕಾವ್ಯನಾಮಕ್ಕೆ ಕಾರಣ - ತಾನೊಂದು ಕವಿತೆಯನ್ನು ಸೋದೆಯಲ್ಲಿ ಶ್ರೀ ವಾದಿರಾಜರ ಮೂರ್ತಿಯೆದುರು ರಚಿಸಿದೆ, ಅದರಲ್ಲಿ ಗಿರಿಬಾಲೆ ವರದನೇ ಅಂತ ಬಂತು ಸ್ವಾಮಿಗಳು ಈ ಹೆಸರಿನಲ್ಲೇ ಬರೆ ಎಂದು ಹರಸಿದರು ಎಂಬುದಾಗಿ ಹೇಳುತ್ತಿದ್ದರು.

ಸುಮಾರು ನಾಲ್ಕು ಕಥಾಸಂಕಲನಗಳನ್ನು ಅವರು ಪ್ರಕಟಿಸಿದ್ದಾರೆ. 'ಕಥಾವಳಿ' ಪತ್ರಿಕೆಯಲ್ಲಿ ಸುಮರು ಏಳು ವರ್ಷಗಳ ಕಾಲ ಈಕೆ ಅಂಕಣಕಾರ್ತಿಯಾಗಿದ್ದರು. 'ಪ್ರಕಾಶ' ಎಂಬೊಂದು ನಾಟಕವನ್ನು ಅವರು ಹಿಂದಿಯಿಂದ ಅನುವಾದಿಸಿದರು. ಮಾತ್ರವಲ್ಲ ಈಕೆ ಒಂದು ನಾಟಕ ನಿರ್ದೇಶಿಸಿಯೂ ಇದ್ದರು. ಅಭಿನಯ, ಹಾಡುಗಾರಿಕೆ, ಹರಿಕಥೆ ಇತ್ಯಾದಿಗಳಲೆಲ್ಲ ಆಕೆ ಬಾಲ್ಯದಲ್ಲೇ ಪಳಗಿದವರು. ಅವರ ಬಾಲ್ಯದ ಪುಟಗಳಲ್ಲಿ ವಾದ್ಯವೃಂದದೊಂದಿಗೆ ಇಂಡಿಯಾ ಸುತ್ತಿದ, 'ಬೇಬಿ ಸರೋಜ' ಎಂಬ ಹೆಸರಿನಲ್ಲಿ ಸಿನಿಮಾದಲ್ಲಿ ನಟಿಸಿದ, 'ಅಂಬಾ ಪ್ರಸಾದಿತ' ನಾಟಕ ಮಂಡಳಿಯಲ್ಲಿ ಬಾಲನಟಿಯಾಗಿ ನಟಿಸುತ್ತಾ ಊರೂರು ಸುತ್ತಿದ್ದ ಹರಿಕಥೆ ಮಾಡಿದ (ತಂದೆ ಹರಿಕಥೆ ದಾಸರಾಗಿದ್ದರು) ಅನುಭವಗಳೆಲ್ಲ ಅಡಗಿವೆ. ಇವೆಲ್ಲ ಕೇವಲ ಹತ್ತು-ಹನ್ನೆರಡು ವರ್ಷಗಳ ಒಳಗೆ. ಈಕೆ ದಿಟ್ಟೆ ಎನ್ನಲು ಅಂದಿನ 'ನಿಸರ್ಗ' ಎಂಬ 'ಎಲ್ಲರೂ ಓದಬಾರದ' ಪತ್ರಿಕೆಯಲ್ಲಿ ಒಂದು ಕಾಲಂ ಅನ್ನು 'ಗಿರಿಬಾಲೆ' ಎಂಬ ನಾಮಾಂಕಿತದಲ್ಲಿಯೇ ಆ ಮಡಿವಂತ ಕಾಲದಲ್ಲಿ ಬರೆಯುತ್ತಿದ್ದುದೇ ಒಂದು ಸಾಕ್ಷಿ. ಹಲವು ಮಂದಿ ಅಭಿಮಾನಿಗಳು ಇದರಿಂದ ನೊಂದರಂತೆ. ದಿವಂಗತ ಗೋವಿಂದ ಪೈಯವರೂ ನೊಂದು 'ಇದೇನು ತಾಯಿ' ಎಂದವರು ಕೊನೆಗೆ ಅದನ್ನು ಓದಿ ನೋಡಿ ಅದರಲ್ಲಿ ಪೂರ್ತಿ ಆರೋಗ್ಯದ ಕುರಿತೇ ತಾನು ಬರೆದದ್ದು ಗಮನಿಸಿ ಸಮಾಧಾನಗೊಂಡರಂತೆ. ನೆನಸಿ ನಗುತ್ತಿದ್ದರು ರಾಜವಾಡೆ. ಓದದೇನೇ ಜನ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದಕ್ಕೆ ಇದೊಂದು ಉದಾಹರಣೆ ಎನ್ನುತ್ತಿದ್ದರು.

ಅವರು ಹೊರಡಿಸುವ ಪತ್ರಿಕೆ 'ಸುಪ್ರಭಾತ'ವನ್ನು ಅವಲೋಕಿಸಿದರೆ ಈ ಲೇಖಕಿ ಸ್ತ್ರೀ ಎಚ್ಚರದ ಬಗ್ಗೆ ಎಷ್ಟು ಕಾಳಜಿ ಹೊಂದಿದ್ದರು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಇಡೀ ಸಂಚಿಕೆಯಲ್ಲಿ ಒಬ್ಬ ದಕ್ಷ ಸಂಪಾದಕೀಯ ಗುಣ ಗೋಚರಿಸುತ್ತದೆ. ಅವರ ಲವಲವಿಕೆ, ಹಾಸ್ಯ ಪ್ರವೃತ್ತಿ ನೇರ ಮಾತು, ಚಿಂತನೆಗಳೆಲ್ಲ ಸುಪ್ರಭಾತದ ಸಂಚಿಕೆಗಳಲ್ಲಿ ಪಡಿಮೂಡಿವೆ. ಆ ಪತ್ರಿಕೆ ಕೆಲವು ಪ್ರಸಿದ್ಧ ಲೇಖಕಿಯರನ್ನು ಬೆಳಕಿಗೆ ತಂದಿತು. ದಿವಂಗತ ಎಂ.ಕೆ. ಜಯಲಕ್ಷ್ಮಿ, ಶ್ರೀಮತಿ ಆನಂದಿ ಸದಾಶಿವರಾವ್ ಮುಂತಾದವರು ಅದರಲ್ಲಿ ಬರೆಯುತ್ತಿದ್ದರು. ಇನ್ನೂ ಅನೇಕ ಲೇಖಕಿಯರ ಅಂದಿನ ದಿನದಲ್ಲಿ ಆಶ್ಚರ್ಯ ಹುಟ್ಟಿಸುವಂತಹ ಅಭಿವ್ಯಕ್ತಿಯುಳ್ಳ ಬರಹಗಳನ್ನು 'ಸುಪ್ರಭಾತ' ಪ್ರಕಟಿಸಿದ್ದನ್ನು ಕಾಣುತ್ತೇವೆ.

ಈ ಲೇಖಕಿಯರೆಲ್ಲ ಯಾಕೆ ಮುಂದೆ ಬರಲಿಲ್ಲ? ಎಲ್ಲ ಎಲ್ಲಿಗೆ ಹೋದರು ಅಂತೆನಿಸುವಂತಾಗುತ್ತದೆ. ಶ್ರೀ ಗೋವಿಂದಪೈಯವರು (ರಾಜವಾಡೆ ಅವರನ್ನು ಗುರುದೇವ ಎಂದೇ ಕಲ್ಪಿಸಿಕೊಂಡಿದ್ದರು) 'ರಚನಾತ್ಮಕ ಶಕ್ತಿ ಉಳ್ಳವರು ಪತ್ರಿಕೆ ನಡೆಸಬಾರದು, ನಿಲ್ಲಿಸು' ಎಂದದ್ದರಿಂದ ಅವರ ಮಾತಿಗೆ ಗೌರವ ಕೊಟ್ಟು, ಅದಾಗಲೇ ಚಂದಾ ವಸೂಲಿ ಆಗಿದ್ದರಿಂದಾಗಿ ಒಂದು ವರ್ಷವನ್ನು ಪೂರ್ತಿಗೊಳಿಸಿ ಹನ್ನೆರಡು ಸಂಚಿಕೆ ಮುಗಿಯುತ್ತಲೇ 'ಸುಪ್ರಭಾತ'ವನ್ನು ನಿಲ್ಲಿಸಿದರು ರಾಜವಾಡೆ. ಕಲ್ಪನೆ, ಕನಸು, ವಿಶೇಷ ಗ್ರಹಿಕೆ, ನೆನಪಿನ ಶಕ್ತಿ ಇವೆಲ್ಲವೂ ರಾಜವಾಡೆಯವರಲ್ಲಿತ್ತು. ಘಟನಾವಳಿಗಳನ್ನು ಕಣ್ಣೆದುರು ಕಟ್ಟಿಕೊಳ್ಳುವ, ಕಟ್ಟಿಕೊಡುವ ಶಕ್ತಿ ಅವರಲ್ಲಿತ್ತು. ಸಮಾಜದ ಕಟುಸತ್ಯಗಳನ್ನು ಕಂಡ, ಸ್ವತಃ ಉಂಡ ಈ ಅಪರೂಪದ ಅನುಭವಿಯ ಬರಹಗಳಲ್ಲಿ, ಕತೆಗಳಲ್ಲಿ ಆಧ್ಯಾತ್ಮದ ಛಾಯೆ ಇದ್ದೇ ಇರುತ್ತಿತ್ತು.

ಆಧ್ಯಾತ್ಮದ ತಳಹದಿಯುಳ್ಳ ಮನಸ್ಸಾಗಿಯೂ ಕೂಡಾ ಆಕೆ ಮಠದ ಸ್ವಾಮಿಗಳ ಕುರಿತು ವಸ್ತುನಿಷ್ಠವಾಗಿ, ನಿರ್ಭಯವಾಗಿ ಬರೆಯಬಲ್ಲವರಾಗಿದ್ದರು. ಮಹಿಳೆಯ ಶಕ್ತಿ ಸಾಮರ್ಥ್ಯದ ಬಗ್ಗೆ ಅಪಾರ ಭರವಸೆಯುಳ್ಳ ಅವರು ಅಂಜಿಕೆ ಹಿಂಜರಿಕೆಗಳನ್ನು ಕಂಡೇ ಅರಿಯದವರು. ಎಂತಲೇ ಅವರ ನಡೆ-ನುಡಿ, ಅವರು ಬದುಕಿಗೆ ತೆರೆದುಕೊಳ್ಳುತ್ತಿದ್ದ ರೀತಿ, ಅಂದಿನ ಸಮಾಜದ ಗ್ರಹಿಕೆಗೆ ಎಟುಕುತ್ತಿರಲಿಲ್ಲ. ಹಿಂದಿನಿಂದ ಅವರ ಕುರಿತು ಅನೇಕ ಅಸಂಬದ್ಧದ, ಅಪಾರ್ಥದ, ಪೆದ್ದು ಪೆದ್ದಾದ, ವಕ್ರ ಸಂಕುಚಿತತೆಯ ಟೀಕೆ-ಟಿಪ್ಪಣಿ, ಅಭಿಪ್ರಾಯ ಗಳನ್ನು ಜನ ತಮ್ಮ ತಮ್ಮೊಳಗೇ ಆಡಿಕೊಳ್ಳುತ್ತಿದ್ದರೂ ಅವರ ಎದುರು ಬಂದು ಒಂದು ಶಬ್ದ ಟೀಕಿಸುವ ಧೈರ್ಯ ಯಾರೊಬ್ಬರಿಗೂ ಇರಲಿಲ್ಲವಂತೆ. ಬದಲು 'ಅಂದ್ ಅಕ್ಕಾ

ಗಿರಿಬಾಲೆಯವರ ಪ್ರಕಟಿತ ಕೃತಿಗಳು

ಕಥಾ ಸಂಕಲನಗಳು

೧. ಆಹುತಿ ಇತ್ಯಾದಿ ಕಥೆಗಳು - ೧೯೩೮
೨. ಕದಂಬ - ೧೯೪೯
೩. ಪ್ರೇಮ ವಿವಾಹ - ೧೯೫೪
೪. ಆಹತ ಹೃದಯ
೫. ವಿಮಲೇಶ್ - ಕಾದಂಬರಿ
೬. ಪ್ರಕಾಶ - ನಾಟಕ (ಹಿಂದಿಯಿಂದ ಅನುವಾದ)
೭. ಶ್ರೀ ವಾದಿರಾಜ ಗುರುವರ ಕೃಪಾ ತರಂಗ - ೧೯೬೯
೮. ಶ್ರೀ ಶಾರದಾಂಬಾ ದೇವಸ್ಥಾನದ ಪೂರ್ವೇತಿಹಾಸ
೯. ಮಹಿಮೆ ಮತ್ತು ಪವಾಡಗಳು
೧೦. ಶ್ರೀ ಶಾರದಮ್ಮನವರ ಸ್ತುತಿಗಳು
೧೧. ಸ್ತವನಾಂಜಲಿ

(ಹೌದು ಅಕ್ಕಾ), ಅತ್ತ್ ಅಕ್ಕಾ (ಅಲ್ಲ ಅಕ್ಕಾ)' ಎಂದು ವಿನೀತರಾಗಿ ಮಾತಾಡುತ್ತಿದ್ದರಂತೆ.

ಇಷ್ಟೆಲ್ಲ ಇದ್ದೂ ಶ್ರೀಮತಿ ರಾಜವಾಡೆ ಸಾಹಿತ್ಯಲೋಕ ದಲ್ಲಿ ತನ್ನನ್ನು ಪೂರ್ತಿ ತೆರೆದುಕೊಳ್ಳಲಾರದೇ ಹೋದರು. ತನ್ನದೇ ಕೆಲ ಭ್ರಮೆಗಳಿಂದ ಲೇಖಕಿ 'ಗಿರಿಬಾಲೆ'ಯನ್ನು ಎಷ್ಟೋ ಸಲ ನಾಟಕೀಯ ಶೈಲಿಗಿಳಿಸಿದರು. ಮತ್ತು ಕೊನೆ ಕೊನೆಗೆ ಆಕೆಯನ್ನು ಮರೆಮಾಡಿ ಕೀರ್ತನಕಾರ್ತಿಯನ್ನು ಆವಾಹನೆ ಮಾಡಿಕೊಂಡರು. ಇವೆಲ್ಲ ಆಕೆಯ ಬದುಕಿಗೆ ಮೇಲಿಂದ ಮೇಲೆ ಒದಗಿ ಬಂದ ಅನೇಕ ಘಟನಾವಳಿ ಗಳಿಂದಾಗಿ ಎಂದು ತಿಳಿದುಬಂದರೂ ಆ 'ಸಂಪತ್ತು ಕೊಡು' ಎಂದು ಒಂದು ಕಾಲದಲ್ಲಿ ಚೀರಿ ಬೇಡಿದ ಬಾಲೆ, ಆ ಸಂಪತ್ತನ್ನೆಲ್ಲಾ ಮಾರಿದಳು.

'ಶ್ರೀ ಕೃಷ್ಣ ಮಠದ ಸೇವೆಗೆ ಹಣ ಕೊಡುವ ಬದಲು ಸಮುದ್ರಕ್ಕೆ ಬಿಸಾಕಿಯೇನು' ಎಂದು ಗರ್ಜಿಸಿದವಳು ಎಲ್ಲಕ್ಕಿಂತ ಪೀಠದ ಹಿರಿಮೆ ದೊಡ್ಡದು ಅದಕ್ಕೆ ಕಳಂಕವಿಲ್ಲ ಎಂದುಕೊಂಡು ಸರ್ವಸಂಪತ್ತನ್ನೂ ಸತತ ಮೂರು ಪರ್ಯಾಯದಲ್ಲಿ ಉಡುಪಿಯ ಶ್ರೀ ಕೃಷ್ಣನಿಗೆ ಸಪ್ತೋತ್ಸವ ನಡೆಸಲಿಕ್ಕಾಗಿ ವಿನಿಯೋಗಿಸಿದಳು. ಚಿನ್ನಾಭರಣಗಳನ್ನೆಲ್ಲ ಮಾರಿ ತನ್ನ ಗಂಡನ ವಂಶಕ್ಕೆ ಬಂದ ಸಾವಿರದಿನ್ನೂರು ವರ್ಷಗಳಷ್ಟು ಪುರಾತನವಾದ ಶ್ರೀ ಶಾರದಾಂಬಾ ದೇವಿಯ ವಿಗ್ರಹವನ್ನು ಉಡುಪಿಯ ಚಿಟ್ಪಾಡಿ ಎಂಬಲ್ಲಿ ಪ್ರತಿಷ್ಠಾಪಿಸಿ, ದೇಗುಲ ನಿರ್ಮಿಸಿ ಶಾರದೆಯ ಕೈಂಕರ್ಯಕ್ಕೆ ಈ ರೀತಿಯಲ್ಲಿ ತನ್ನನ್ನು ಮೀಸಲಿಟ್ಟರು. ಆಕೆಯ ಕಥೆ, ಕವನ, ಬರಹಗಳಲ್ಲಿ ಉದ್ದಕ್ಕೂ ಕಾಣುತ್ತಿದ್ದ ಆಧ್ಯಾತ್ಮಿಕ ಬಾಗು ಕೊನೆಗೂ ಪೂರ್ತಿಯಾಗಿ ಆಧ್ಯಾತ್ಮಿಕದ ಕಡೆಗೇ ವಾಲಿಕೊಂಡಿತು.

ನಾನು ಕಂಡದ್ದು ಹೀಗೆ ಪೂರ್ತಿ ಪರಿವರ್ತನೆಗೊಂಡ ರಾಜವಾಡೆಯವರನ್ನು. ಅಸ್ಖಲಿತ ವಾಕ್ಪ್ರವಾಹ, ಸುಸ್ಪಷ್ಟ ನೆನಪುಗಳು, ಪುಟಿಯುವ ಜೀವಂತಿಕೆ ಒಂದು ಪ್ರಶ್ನೆ ಹಾಕಿದರೆ ಸಾಕು ಆ ಕಾಲಕ್ಕೆ ಓಡುತ್ತಿದ್ದರು. ಆ ಪ್ರಾಯದಲ್ಲಿಯೇ ನಿಲ್ಲುತ್ತಿದ್ದರು. ಅಷ್ಟೇ ಅಲ್ಲ ಆ ಕಾಲದ ಜನರನ್ನೆಲ್ಲಾ ಕಣ್ಣೆದುರು ತಂದು ನಿಲ್ಲಿಸುತ್ತಿದ್ದರು. ಹಳೆಯ ಬರವಣಿಗೆಗಳ ಬಗ್ಗೆ ಕೇಳಿದರೆ (ಅವುಗಳಲ್ಲಿ ಹೆಚ್ಚಿನವು ಅವರಲ್ಲೇ ಲಭ್ಯವಿರಲಿಲ್ಲ) ಎಲ್ಲವನ್ನೂ ಪಿ.ಹೆಚ್.ಡಿ. ಅಧ್ಯಯನಕ್ಕಾಗಿ ವಿದ್ಯಾರ್ಥಿ ಯೊಬ್ಬಳು ಒಯ್ದಿದ್ದಾಳೆ ಎಂದು ತಿಳಿಸಿದ್ದರು) ನಕ್ಕು ಬಿಡುತ್ತಿದ್ದರು. 'ಅದೊಂದು ಹುಚ್ಚು ಏನೇನೆಲ್ಲಾ ಕತೆ ಬರೆದೆ, ಆಗ ಹೋಗದ್ದು' ಎಂತ ಹೇಳುತ್ತಲೇ ಕೆಲ ಕತೆಗಳ ನೆನಪು ಮರುಕಳಿಸಿಕೊಂಡು ಸಾರಾಂಶವನ್ನೇ ಹೇಳುತ್ತಾ ಹೇಳುತ್ತಾ 'ಅರರೇ ಎಷ್ಟು ಚೆನ್ನಾಗಿದೆ! ನನಗೆ ಆಗ ಇದು ಹೇಗೆ ಹೊಳೆ ಯಿತು' ಎಂದು ಅಭಿನಯ ಪೂರ್ವಕವಾಗಿ ನುಡಿದು ತನ್ನನ್ನೇ ಪರಕೀಯವಾಗಿ ನಿಂತು ನೋಡಿ ಆಚ್ಚರಿಯಾಗುತ್ತಿದ್ದರು. ಕೊನೆಯ ತನಕವೂ ಅವರಲ್ಲಿನ ಮುಗ್ಧತನ, ನಿಂತೆದ್ದು ಕೈ ತಟ್ಟಿ ಖುಷಿಪಡುವ ಚಿಮ್ಮುವ ಉತ್ಸಾಹ ಮರೆಯಾಗಿರಲೇ ಇಲ್ಲ.

ಕೇಳುವವರಿದ್ದರೆ ಎಷ್ಟೋ ಮಾತಾಡುತ್ತ ಹೋಗು ತ್ತಿದ್ದರು ರಾಜವಾಡೆ. ದಣಿವಿಲ್ಲ ಮಾತಿನಲ್ಲಿ ನೀರಸತೆಯಿಲ್ಲ ಕೇಳುವ ಮತ್ತೂ ಕೇಳುವ ಎನಿಸುವ ವಾಕ್ಶಕ್ತಿ. ಪ್ರತಿಸಲವೂ ನಾವೇ ಹೊತ್ತಾಯಿತೆಂದು ಏಳಬೇಕು ಹೊರತು ಅವರ ಮಾತು ಮುಗಿಯಿತು ಅಂತಿರಲಿಲ್ಲ. ಅನೇಕ ಸಲ ನಾನು ಹೇಳಿಕೊಳ್ಳುತ್ತಿದ್ದೆ. 'ಒಮ್ಮೆ ತುಂಬಾ ಪುರುಸೊತ್ತು ಮಾಡಿ ಕೊಂಡು ಕುಳಿತುಬಿಡಬೇಕು, ಎಷ್ಟು ಹೊತ್ತಾದರೂ ಏಳದೇ' ಅಂತ. ಆದರೆ ಪ್ರತೀ ಸಲವೂ ಮನೆ ಕರೆಯುತ್ತಿತ್ತು, ಊರಲ್ಲೇ ಮನೆಯಿದ್ದರೆ ಹಾಗೇ ತಾನೆ? ಅವರಿಗೂ ನಡುನಡುವೆ

ನೂರಾರು ಹರಬುಗಳು. ದೇವಸ್ಥಾನದ ಚಟುವಟಿಕೆಗಳಲ್ಲೇ ಸಂಪೂರ್ಣ ತೊಡಗಿಸಿಕೊಂಡಿದ್ದರು. ಕ್ಷಣ ಬಿಡುವಿರುತ್ತಿರಲಿಲ್ಲ. ಹೂ ವಿಂಗಡಿಸಬೇಕು, ಕಟ್ಟಬೇಕು, ಈಕೆ ಲೋಕಾನುರಾಗಿ ವಿರಾಗಿ, ನಡುವೆ ಬಂದವರನ್ನು ಮಾತಾಡಿಸಬೇಕು. ದೇವಸ್ಥಾನಕ್ಕೆ ಜನ ಬಂತು ಹೋಯ್ತು ಅಂತಾಗಬಾರದು. ಅವರೊಂದಿಗೆಲ್ಲಾ ಆತ್ಮೀಯವಾಗಿ ಮಾತಾಡಿ, ಕಷ್ಟ-ಸುಖ ವಿಚಾರಿಸಬೇಕು. 'ಕಷ್ಟ ಏನಿಲ್ಲ ಸುಮ್ಮನೆ ಬಂದೆ' ಎನ್ನುವವರಿಗೆ 'ಹ್ಹಾಂ ಒಳ್ಳೆಯದಾಗಲಿ' ಎನ್ನಬೇಕು. ಪೂಜೆಗೆ ಸನ್ನೆ ಮಾಡಬೇಕು. ಪೂಜೆಯಾಗುವಾಗ ಶಂಖ ಊದುವ ಪಟ್ಟ ಅವರದೇ. ಕೆನ್ನೆಯಲ್ಲಿ ಗಾಳಿ ಬುರುಡೆ ಉಬ್ಬಿಸಿಕೊಳ್ಳುತ್ತಾ ಕುಗ್ಗಿಸಿಕೊಳ್ಳುತ್ತಾ ಶಂಖ ಊದುವ ಅವರ ಭಂಗಿಯೆಂದರೆ ಗಂಟೆ ಹೊಡೆಯಬೇಕು.

ಪೂಜೆಯಿಲ್ಲದ ಹೊತ್ತಲ್ಲಿ ಮೂರು ಬಾರಿ ಗಂಟೆ ಹೊಡೆದದ್ದು ಕೇಳಿಸಿತೆಂದರೆ, ಅವರು ಸಾಕಿಕೊಂಡ ಕುಟುಂಬದ ಯಜಮಾನ ಭಟ್ಟರು 'ಕೋಡ್' ಅರ್ಥವಾಗಿ ಓಡೋಡಿ ಬಂದು ಏನು? ಎಂಬಂತೆ ನಿಲ್ಲುತ್ತಾರೆ. 'ಇಂದಾ ಮಣಿ (ಇಕಾ ಮಣಿ)' ಎಂದು ರಾಜವಾಡೆ ತಾನು ಕರೆದ ಉದ್ದೇಶ ತಿಳಿಸುತ್ತಾರೆ. ಸಂಜೆ ಬತ್ತಿ ಹೊಸೆಯುತ್ತಾ ನಡುವೆ ನಿಲ್ಲಿಸಿ, ಮಾತಿನ ಪೆಟ್ಟಿಗೆ ತೆರೆದು, ಎದ್ದು ನಿಂತು, ನಡೆದು ಕುಳಿತು ಕೈಬೀಸಿ, ಹಾರಿಸಿ ಮಾತಾಡುತ್ತಾ ಪುನಃ ಬತ್ತಿ ಹೊಸೆಯುತ್ತಾ ನಿಗಿನಿಗಿಯಾಗಿ ಇದ್ದ ರಾಜವಾಡೆಯವರಿಗೂ ಶ್ರೀ ಕೃಷ್ಣಮಠದ ಜಗಲಿಯಲ್ಲಿ ಬತ್ತಿ ಹೊಸೆಯುತ್ತಾ ಮಠದಲ್ಲಿ ಊಟ ಮಾಡುತ್ತಾ ಆಯುಷ್ಯ ಕಳೆಯುವ ವಿಧವೆ ಮುದುಕಿಯರಿಗೂ ಒಳ ಚೇತನದಲ್ಲಿ ಎಂತಹ ಅಂತರ!

ಅನುಭವಗಳಿಗೆ ತೆರೆದುಕೊಂಡು ಪಕ್ವಾದ ಮನಸ್ಸು ಮತ್ತು ಅನುಭವಗಳಿಗೆ ಕದವಿಕ್ಕಿ ಯಾಂತ್ರಿಕವಾಗಬೇಕಾಗುವ ಮನಸ್ಸುಗಳು. ಹೆಂಗಸು ಅಂಜುಕುಳಿಯಾಗಿದ್ದರೆ ತನ್ನೊಳಗಿನ ಶಕ್ತಿಯನ್ನೇ ಮರೆತು ದೀನತೆಗೆ ತನ್ನನ್ನು ಒಡ್ಡಿಕೊಂಡಿದ್ದರೆ, ಸಹಾನುಭೂತಿಗೆ ಹಾತೊರೆದು, ಬುದ್ಧಿವಾದ ಹೇಳಿಯೂ ಎಚ್ಚರವಾಗದವರಂತಿದ್ದರೆ ರಾಜವಾಡೆಯವರಿಗಂತೂ ಸಹಿಸುತ್ತಲೇ ಇರಲಿಲ್ಲ. ತಡೆಯದೇ ಅಂತಹ ಹೆಂಗಸರನ್ನು 'ಅದು' ಎಂದೇ ಸಂಬೋಧಿಸುತ್ತಿದ್ದರು. ಅಂತೆಯೇ ಅತೀ ಅಧಿಕಪ್ರಸಂಗಿ ಗಂಡಸು ಕೂಡ ಅವರ ಮಟ್ಟಿಗೆ 'ಅದುವೇ'. ಅಧಿಕಾಧಿಕ ಮಾತಾಡುವುದು, ತಾವೇ ಬುದ್ಧಿವಂತರೆಂಬಂತೆ ರೈಸಲು ಬರುವುದು ಮೂಗು ತೂರಿಸುವುದು, ಮೋಸ-ವಂಚನೆ-ದಗಲುಬಾಜಿತನದಲ್ಲಿ ವರ್ತಿಸುವಂತಹ ಗಂಡಸರನ್ನು ಕಂಡರೋ, ತನ್ನ ಮಾತಿನ ಶಕ್ತಿಯಿಂದಲೇ ಅವರನ್ನು ಬೆಕ್ಕಿನ ಮರಿಯನ್ನು ಎತ್ತುತ್ತಾರಲ್ಲಾ ಹಾಗೇ ಕತ್ತಿನ ಹಿಂಭಾಗಕ್ಕೆ ಕೈ ಹಾಕಿ ಎತ್ತಿ ಸೀದಾ ಕಸದ ಬುಟ್ಟಿಗೆ ಎಸೆದು ಬಿಡುವಂತಹ ವ್ಯಕ್ತಿ ರಾಜವಾಡೆ.

ಅವರ ದಿನ ಸುರುವಾಗುತ್ತಿದ್ದದ್ದೇ ದೇವಸ್ಥಾನದ ಒಳಗೆ ಬಂದು ತಾನೇ ರಚಿಸಿದ್ದ ಶಾರದಾ ಸುಪ್ರಭಾತವನ್ನು ಹೇಳುವ ಮೂಲಕ. ಶುಕ್ರವಾರದ ದಿನವಂತೂ ಅವರಿಗೆ ಬಹುರಾತ್ರಿಯವರೆಗೆ ಕೆಲಸ. ಅಂದು ದರ್ಶನ. ದರ್ಶನದ ಕಟ್ಟಳೆ ದಕ್ಷಿಣ ಕನ್ನಡದಲ್ಲಿ ಬಹಳ ಸಾಮಾನ್ಯವಾದರೂ, ಹೀಗೆ ಒಬ್ಬ ಹೆಂಗಸು ಪಾತ್ರಿ ಮತ್ತು ಭಕ್ತರ ನಡುವೆ ಮಧ್ಯವರ್ತಿಯಾಗಿ ನಿಂತು ನಡೆಸುವ ಉದಾಹರಣೆ ಇಡೀ ಇಂಡಿಯಾದಲ್ಲೇ ಇನ್ನೊಂದು ಇರಲಿಕ್ಕಿಲ್ಲ. ನಡೆಸುವುದಾದರೂ ಹೇಗೆ! ಲೇಖಕಿ, ಗೆಳತಿ, ಹಾಸ್ಯಗಾತಿ, ವಿಮರ್ಶಕಿ, ದೇವರಿಗೇ ಗದರಿ ಆಶೀರ್ವಾದ ವಸೂಲು ಮಾಡುವ ಜೋರಿನ ಭಕ್ತೆ, ಅಕ್ಕ ತಾಯಿ ಎಲ್ಲವೂ ಆಗುತ್ತಿದ್ದರು.

ಲೆಕ್ಕವೆಂದರೆ ಪೈಸೆ ಪೈಸೆ ಲೆಕ್ಕ. ಯಾಕೆಂದರೆ ಆ ದುಡ್ಡು 'ಸನ್ನಿಧಾನದ್ದು'. ಒಂದಿಷ್ಟೂ ಆಚೀಚಾಗಕೂಡದು. ಮೂರಿಂಚಗಲದ ಖಾಲಿ ಪೇಪರಿನಲ್ಲಿ, ಜೇರಿಗೆ ಅಕ್ಷರದಲ್ಲಿ ನಡುಬಗ್ಗಿ ಕುಳಿತು ಸೇವಾಕಾರ್ಯಕ್ಕಾಗಿ ಬಂದ ಹಣದ ಲೆಕ್ಕ ಬರಕೊಂಡು ಚಿಲ್ಲರೆ ಕೊಡುವ ಭರಾಟೆ ನೋಡಬೇಕು. ದಿಢೀರನೆ ಮೂರ್ಛಾವಸ್ಥೆಗೆ ಹೊರಳಿಕೊಂಡ ಹಿಂದಿನ ರಾತ್ರಿಯವರೆಗೂ ಅಂದಂದಿನ ಲೆಕ್ಕ ಬರೆದರು ರಾಜವಾಡೆ. ಅವರ ತಾಯಿ ಶಾರದಾಂಬೆ ಯಾರನ್ನೂ ಕೊಡು ಎಂದು ಬೇಡುವುದಿಲ್ಲ. 'ಈ ದೇವಸ್ಥಾನದಲ್ಲಿ ಕಿರೀಟ ಇಡುವವಳೂ ನಾನೇ, ಕಸ ಗುಡಿಸುವವಳೂ ನಾನೇ. ಇಲ್ಲಿ ಯಾರೂ ಯಜಮಾನರಲ್ಲ, ಯಾರೂ ಕೆಲಸದವರಲ್ಲ. ನನ್ನ ವಿಚಾರ ಎಲ್ಲಿಯೂ ಪೇಪರಿಗೆ ಪ್ರಚಾರ ದೃಷ್ಟಿಯಿಂದ ಹಾಕಕೂಡದು' ಎನ್ನುವವಳು.

ಕೆಲ ವರ್ಷಗಳ ಕೆಳಗೆ ೧೯೮೮ರಲ್ಲಿ 'ಅಖಿಲ ಕರ್ನಾಟಕ ಲೇಖಕಿಯರ ಸಂಘ' ಅವರನ್ನು ಸನ್ಮಾನಿಸ ಬಯಸುತ್ತದೆಂದು ತಿಳಿಸಿ ಅವರ ಒಪ್ಪಿಗೆಯನ್ನು ಪಡೆಯಲು ದೇವಸ್ಥಾನಕ್ಕೆ ಹೋಗಿದ್ದೆ. ಲೌಕಿಕವೇ ಬೇಡವೆಂದು ದೇಗುಲ ಸೇರಿದವರು ಒಪ್ಪಲು ತಯಾರೇ ಇರಲಿಲ್ಲ. ಮಿಣಿ ಮಿಣಿ ಬೆಳಕಲ್ಲಿ ಜಗಲಿಯ ಕಂಬಕ್ಕೊರಗಿ ಅವರದೇ ಮಾಮೂಲು ಜಾಗದಲ್ಲಿ ಕುಳಿತು ವಾದಿಸಿ ವಾದಿಸಿ ಕೊನೆಗೂ ಒಪ್ಪಿಕೊಂಡರು. ಆದರೆ ಬೆಂಗಳೂರಿಗೆ ಪ್ರಯಾಣ ಹೊರಟದ್ದೇ ಮರಳುವವರೆಗೂ ತನ್ನ ಹಳೆಯ ದಿನಗಳ ನೆನಕೆಯಲ್ಲಿ ಅಪೂರ್ವ ಸಂಭ್ರಮದಲ್ಲಿ ಮುಳುಗಿ ಹೋಗಿದ್ದರು. ವಾಪಸ್ಸು ಬರುವಾಗ ಮಂಗಳೂರಿನಲ್ಲಿಳಿದು ತನ್ನ ಹಳೆಯ (ಮುದುಕಿಯಾಗಿ ಜರ್ಝರಿತಳಾದ ಈಕೆ ರಾಜವಾಡೆಯವರ ಸಮಕಾಲೀನಳೇ!? ಎಂದು ಅಚ್ಚರಿ ಹುಟ್ಟಿಸಿದ) ಗೆಳತಿ ಜೆನ್ನಿಬಾಯಿಯನ್ನು ಭೇಟಿ ಮಾಡಿ ಸಂತೋಷದಿಂದ ಉಡುಪಿಗೆ ಮರಳಿದರು. ಬೆಂಗಳೂರಿನ ಆ ಪ್ರವಾಸದ ಹರ್ಷ ಅವರಲ್ಲಿ ಬಹುಕಾಲವಿತ್ತು. ಅವತ್ತಿನ ಸಮಾರಂಭದ ಅಚ್ಚುಕಟ್ಟುತನ, ಹೆಂಗಸರೇ ನಿರ್ವಹಿಸಿದ ಸಮರ್ಥ ರೀತಿ, ಎಲ್ಲವನ್ನೂ ಆಗಾಗ ಮೆಲುಕು ಹಾಕುತ್ತ ತನ್ನ ಕಾಲದಲ್ಲಿ ಇದು ಕೇವಲ ಕನಸಾಗಿತ್ತು. ಹೆಂಗಸರು ಮುಂದೆ ಬರಬೇಕು, ಎಂದು ತಾನು ಮತ್ತು ತನ್ನ ಕಾಲದ ಲೇಖಕಿಯರು ಪತ್ರಿಕೆಗಳಲ್ಲಿ ಮತ್ತೆ ಮತ್ತೆ ಬರೆದು ಬೊಬ್ಬೆ ಹೊಡೆಯುತ್ತಿದ್ದೆವು.

ಅವರ ದಿನ ಸುರುವಾಗುತ್ತಿದ್ದದ್ದೇ ದೇವಸ್ಥಾನದ ಒಳಗೆ ಬಂದು ತಾನೇ ರಚಿಸಿದ್ದ ಶಾರದಾ ಸುಪ್ರಭಾತವನ್ನು ಹೇಳುವ ಮೂಲಕ. ಶುಕ್ರವಾರದ ದಿನವಂತೂ ಅವರಿಗೆ ಬಹುರಾತ್ರಿಯವರೆಗೆ ಕೆಲಸ. ಅಂದು ದರ್ಶನ. ದರ್ಶನದ ಕಟ್ಟಳೆ ದಕ್ಷಿಣ ಕನ್ನಡದಲ್ಲಿ ಬಹಳ ಸಾಮಾನ್ಯವಾದರೂ, ಹೀಗೆ ಒಬ್ಬ ಹೆಂಗಸು ಪಾತ್ರಿ ಮತ್ತು ಭಕ್ತರ ನಡುವೆ ಮಧ್ಯವರ್ತಿಯಾಗಿ ನಿಂತು ನಡೆಸುವ ಉದಾಹರಣೆ ಇಡೀ ಇಂಡಿಯಾದಲ್ಲೇ ಇನ್ನೊಂದು ಇರಲಿಕ್ಕಿಲ್ಲ.

ಆದರೆ ಆ ಕಾಲ ದಾಟಿ ಹೊರ ಪ್ರಪಂಚ ಇಷ್ಟೆಲ್ಲ ಮುಂದುವರಿದಿದೆ ಎಂದು ನನಗೆ ತಿಳಿದೇ ಇರಲಿಲ್ಲ ನೋಡಿ. ಎಂದು ತನ್ನ ಸಮಾಧಾನವನ್ನು ಹೇಳಿಕೊಳ್ಳುತ್ತಿದ್ದರು.

ಪ್ರತಿಸಲವೂ ಅವರನ್ನು ಬಿಟ್ಟೇಳುವಾಗ ಒಂದು ಅವ್ಯಕ್ತ ನೋಡು ನನ್ನನ್ನು ಕಲಕುತ್ತಿತ್ತು. ಮದುವೆಯ ನಂತರದ ಬದುಕಿನಲ್ಲಿ ಎಲ್ಲರ ಪ್ರೀತಿ ಪಡೆದೂ ಪರಕೀಯತೆಯನ್ನು ಅನುಭವಿಸಿದ, ಮತ್ತದನ್ನೂ ಮೀರಿ ನಿಂತು ಗೆಲುವು ಸಾಧಿಸಿದ ಸಾಧಕಿಯಾಗಿಯೂ, ಎಲ್ಲೋ ಸ್ವಗತದಡಿಯಲ್ಲಿ ಮನುಷ್ಯ ಸಹಜವಾಗಿ ನರಳುತ್ತಿರಬಹುದೇ ಎಂಬುದು ಆಕೆಯನ್ನು ಬಿಟ್ಟು ಬಂದ ಮೇಲೆಯೂ ನನ್ನನ್ನು ಬಳಲಿಸುತ್ತಿತ್ತು. ಆದರೆ ಇದು ನನ್ನ ಊಹೆಯ ಪರಿಮಿತಿಯೇ ಇರಬಹುದು. ಆಕೆ ಪದೇ ಪದೇ ಹೇಳುತ್ತಿದ್ದ ಮಾತು 'ಈ ತಾಯಿ ಶಾರದಾಂಬೆ ನನ್ನ ಪ್ರೀತಿಯ ಹಸಿವನ್ನ ಇಂಗಿಸಿಬಿಟ್ಟಳು. ಈಗ ನನ್ನಷ್ಟು ಸುಖಿ ಬೇರೆ ಯಾರಿಲ್ಲ.' ಹೀಗನ್ನುವಾಗ ಆಕೆ ಪ್ರತ್ಯಕ್ಷ ಆ ಮಾತಿನ ಪ್ರತಿರೂಪವೇ ಆಗಿ ಕಾಣುತ್ತಿದ್ದರೂ ನನಗೆ ಹಾಗನಿಸಬೇಕಾದರೆ!

ಆಕೆ ಸ್ಥಾಪಿಸಿಕೊಂಡ ಘನಮೌನದ ಗುರುತು ಅಲ್ಲಲ್ಲಿ ಹತ್ತಿದಂತಾಗುತ್ತಿತ್ತು.... ಒಮ್ಮೆ ಅವರ ಒಳಮೌನವನ್ನು ಅಲುಗಾಡಿಸಿಬಿಡಬೇಕು ಎಂದು ಎಷ್ಟು ತೀವ್ರವಾಗಿ ಅನಿಸುತ್ತಿತ್ತು. ಗಟ್ಟಿ ಕೇಳಿದರೆ ಅವರ ನಿಜವಾದ ಲೇಖಕಿ ಮನೋಕೇಂದ್ರದಲ್ಲಿಯೇ ಇದ್ದಳು. ನನ್ನ ಪ್ರಯತ್ನಕ್ಕೆ ಹಟಕ್ಕೆ ಎಲ್ಲೋ ಒಂಚೂರು ಹೇಳಿದರೆ ಮುಂದೆ ಕದಲದ ಮೌನಕ್ಕೆ ತೆರಳಿಸುತ್ತ ಮತ್ತೆ ಅದೇ ಎಂದಿನ ಭೇದಿಸಲಾರದ ಮಾತಿನ ಪರದೆ ಇಳಿಬಿಟ್ಟು ಬಿಟ್ಟಿದ್ದರು. ಆ ಪರದೆಯನ್ನೂ ಭೇದಿಸುವಂತಹ ಪ್ರಶ್ನೆಯನ್ನು ಎತ್ತುವುದು ಹೇಗೆಂಬ ಅಳುಕಿನಿಂದಲೇ ಬಹಳ ಸೂಕ್ಷ್ಮವಾಗಿ ತಿಳಿದೂ ತಿಳಿಯದಂತಹ ರೂಪದಲ್ಲಿ ಕೇಳಿದರೂ ಥಟ್ಟನೆ ಸೂಕ್ಷ್ಮ ಹಿಡಿದು ಆ ಜಾಡನ್ನೇ ಜಾಣ್ಮೆಯಿಂದ ಬಿಟ್ಟು ಮತ್ತೆ ಅನೇಕ ಬಗೆಯ ಮಹಿಮೆ, ಪವಾಡ ಮತ್ತಿನ್ನೇನನ್ನೋ ಗುಲ್ಲು ಗಲಾಟೆಗಳ ಶಬ್ದಗಳನ್ನು ಆಧರಿಸಿ ನಿಂತು ನಗೆ ಮೀಟುತ್ತಿದ್ದರು.

ಅವರೊಳಗಿನ ಲೇಖಕಿಯ ನಿಜ ಪರಿಚಯವನ್ನು ಮೂಡಿಸಬಲ್ಲಂತಹ ಸತ್ವವುಳ್ಳ ಅನುಭವಗಳನ್ನೆಲ್ಲ ಗ್ರಹಿಸಲು ಸಮಾಜ ಇನ್ನೂ ಆ ಪಕ್ವಕ್ಕೆ ಬಂದೇ ತಲುಪಿಲ್ಲವೆಂದು ತನ್ನ ಜೀವಿತದ ಕೊನೆಗಾಲಕ್ಕೂ ಕೂಡ ಅವರಿಗೆ ಅನಿಸಿರಬೇಕು, ಎಷ್ಟೋ ಬಾರಿ ಹೇಳಲು ಹೊರಟೂ 'ಬೇಡ ಇವರೆ, ಸಮಾಜದ ಬಗ್ಗೆ ಭರವಸೆ ಬೇಡ, ಅದಕ್ಕೆ ಇದು ಯಾವುದೂ ಬೇಡ. ಮುಂದೆ ತೊಂದರೆಯೇ' ಎನ್ನುತ್ತಿದ್ದರು. ಒಂದು ದೇವಸ್ಥಾನದ ವಹಿವಾಟು ನಡೆಸುತ್ತಿರುವ ಈ ಪ್ರಾಂಜಲ ಜೀವದ ಈ ಸಂದಿಗ್ಧತೆ ಅರ್ಥವಾಗುವಂತಹುದೇ ಆದರೂ...

ಕೊನೆಗೂ ಮೌನದ ಪುಟ ಪುಟಗಳನ್ನು ಆತ್ಮದೊಳಗೆ ಭದ್ರಪಡಿಸಿಕೊಂಡೇ ೧೯೯೪ರ ಏಪ್ರಿಲ್ ೨೩ರ ಸಂಜೆ ಎರಡು ದಿನಗಳ ಕಾಲದ ಅಪ್ರಜ್ಞಾವಸ್ಥೆಯ ತುದಿಯಲ್ಲಿ ಶ್ರೀಮತಿ ಸರಸ್ವತೀಬಾಯಿ ರಾಜವಾಡೆಯವರು ಇಹಲೋಕ ತ್ಯಜಿಸಿದರು.

ಈಗ ಆ ದೇವಸ್ಥಾನಕ್ಕೆ ಹೋದರೆ 'ಹ್ಹೊ! ಬಂದಿರಾ, ಬನ್ನಿ ಬನ್ನಿ' ಎನ್ನುವ ಹರ್ಷಿ ರಾಜವಾಡೆ ಎಲ್ಲಿ ಎಂದು ಅರಸುವಂತಾಗುತ್ತದೆ. ಅವರು ಕುಳಿತುಕೊಳ್ಳುವ ಮಾಮೂಲು ಜಾಗವನ್ನು ಸವರಿ ಎಲ್ಲಿದ್ದೀರಿ ಅಂತ ಕೇಳುವಂತಾಗುತ್ತದೆ. ಸಾವಿನ ನೆನಪನ್ನು ಸಹ ಹುಟ್ಟಿಸದಂತಹ ವ್ಯಕ್ತಿತ್ವದ ರಾಜವಾಡೆಯವರೂ ಫೋಟೊದೊಳಗೆ ಸೇರಿಕೊಂಡುಬಿಟ್ಟರೆ! □



ಹೊಸ ಪುಸ್ತಕ

ಮೌಖಿಕ ಇತಿಹಾಸ

ಲೇ. ಡಾ॥ ವಸು

ಬೆಲೆ: ರೂ. ೬೦/-

ಇದು 'ಮೌಖಿಕ ಇತಿಹಾಸ' ಪರಿಕಲ್ಪನೆಯನ್ನು ಪರಿಚಯಿಸುವ ಕೃತಿ. ಮೌಖಿಕ ಇತಿಹಾಸ ಎಂದರೇನು? ಅದನ್ನು ಒಂದು ಆಧಾರವಾಗಿ ಸಂಶೋಧನೆಗೆ ಹೇಗೆ ಬಳಸಿಕೊಳ್ಳಬಹುದೆಂಬುದನ್ನು ತಿಳಿಸುವ ಪ್ರಯತ್ನ ಇಲ್ಲಿದೆ.

ಇತಿಹಾಸ ಸಂಶೋಧಕರಿಗೆ ಅಲಿಖಿತ ಸಮಾಜದ ಮಾಹಿತಿಯನ್ನು ಹೇಗೆ ಸ್ವೀಕರಿಸಬೇಕೆಂಬುದನ್ನು ತಿಳಿಯಬಹುದಾಗಿದೆ.

ಪ್ರಕಾಶಕರು : ಅಂಕಿತ ಪುಸ್ತಕ, ನಂ. ೫೩, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು - ೫೬೦ ೦೦೪



ಮಗು ಮಲಗಿದೆ ಎದೆಯ ಮೇಲೆ

ಲೇ. ಎಂ.ಡಿ. ಒಕ್ಕುಂದ

ಬೆಲೆ: ರೂ. ೩೫/-

ಬಹುಮುಖೀ 'ಹಿಂಸೆ'ಯ ತಳಮಳಗಳನ್ನು ಕಾವ್ಯಮುಖೇನ ವ್ಯಕ್ತಪಡಿಸುವ ಕವನ ಸಂಕಲನವಿದು.

'ಯುದ್ಧ', 'ಗುಜರಾತ್' ಹಾಗೂ ಇನ್ನಿತರ ಸಮಕಾಲೀನ ಹಿಂಸೆಗಳನ್ನು ಕಂಡ ಕವಿ ತಲ್ಲಣಿಸಿ ಅದರ ಘೋರತೆಯನ್ನು ಮನಮುಟ್ಟಿ ತಟ್ಟಿ ಎಚ್ಚರಿಸುವಂತೆ ಕವಿತೆಗಳನ್ನು ರಚಿಸಿದ್ದಾರೆ.

'ಅವರು ಬೆಂಕಿ ಹಚ್ಚುತ್ತಿದ್ದಾರೆ, ಬನ್ನಿ ನಾವು ದೀಪ ಹಚ್ಚೋಣ' ಇದು ಕವಿತೆಯೊಂದರ ಸಾಲು.

ಪ್ರಕಾಶಕರು : ಲೋಹಿಯಾ ಪ್ರಕಾಶನ, 'ಕ್ಷಿತಿಜ, ಕಪ್ಪಗಲ್ಲು ರಸ್ತೆ, ಗಾಂಧಿ ನಗರ, ಬಳ್ಳಾರಿ - ೫೮೩ ೧೦೩



ಅಂಬೇಡ್ಕರ್ ಮತ್ತು ಮುಸ್ಲಿಮರು ಸುಳ್ಳು ಮತ್ತು ಸತ್ಯಾಂಶಗಳು

ಲೇ. ಡಾ॥ ಆನಂದ್ ತೇಲ್‌ತುಂಬ್ಡೆ

ಅನು : ಪ್ರೊ॥ ಬಿ. ಗಂಗಾಧರಮೂರ್ತಿ

ಬೆಲೆ: ರೂ. ೪೦/-

ಅಸ್ತಿತ್ವದಲ್ಲಿರುವ ಜಾತ್ಯತೀತ ಪ್ರಭುತ್ವದ ಗಣರಾಜ್ಯ ವ್ಯವಸ್ಥೆಯನ್ನು ನಾಶಮಾಡಿ ಆ ಜಾಗದಲ್ಲಿ ಹಿಂದೂ ಸಾಮ್ರಾಜ್ಯದ ಸ್ಥಾಪನೆಯನ್ನು ಗುರಿಯಾಗಿಟ್ಟುಕೊಂಡಿರುವ ಸಂಘ ಪರಿವಾರ ಅಂಬೇಡ್ಕರ್ ಅವರನ್ನು ಕೇಸರೀಕರಣಗೊಳಿಸುವ ತಂತ್ರ ಹೂಡುತ್ತಿದೆ. ಈ ತಂತ್ರವನ್ನು, ಸುಳ್ಳು ಸೃಷ್ಟಿಯನ್ನು ಬಯಲಿಗೆಳೆಯುವ ಕೃತಿ ಇದು.

ಪ್ರಕಾಶಕರು : ಸಮತಾ ಪ್ರಕಾಶನ, ಬೆಂಗಳೂರು - ೯೬

ಜಾಗತೀಕರಣ ಮತ್ತು ಸಂಸ್ಕೃತಿ

ಸಂ. ಡಾ॥ ದಸ್ತಗೀರಸಾಬ್ ದಿನ್ನಿ

ಬೆಲೆ: ರೂ. ೧೨೦/-

ಜಾಗತೀಕರಣದ ಪರಿಣಾಮಗಳ ಕುರಿತು ನಾಡಿನ ಹಲವು ಚಿಂತಕರ ಚಿಂತನೆಗಳನ್ನು ಒಳಗೊಂಡ ಕೃತಿ ಇದು. ಜಾಗತೀಕರಣ ಜಾರುಬಂಡೆ, ಜಾಗತೀಕರಣ ಗೊಳ್ಳಿ ಬೆಳವಣಿಗೆ ಸಾಧಿಸಿ, ಮಾರ್ಕ್ಸ್‌ವಾದ ಮತ್ತು ಜಾಗತೀಕರಣ, ಜಾಗತೀಕರಣ ಉದ್ಯೋಗ ಹಾಗೂ ಶ್ರಮ ಜೀವಿಗಳು, ಜಾಗತೀಕರಣ ಮತ್ತು ಸಮೂಹ ಮಾಧ್ಯಮಗಳು ಹಾಗೂ ಜಾಗತಿಕ ಗ್ರಾಮಕ್ಕೆ ಗೌಡ ಯಾರು? ಇಂತಹ ಇನ್ನೂ ಅನೇಕ ವೈಚಾರಿಕ ಲೇಖನಗಳು ಈ ಕೃತಿಯಲ್ಲಿವೆ.

ಪ್ರಕಾಶಕರು : ಕನಸು ಪ್ರಕಾಶನ, ೪-೪-೧೦೧/೩೨, ಮರಿಗೆಮ್ಮಗುಡಿ ಹತ್ತಿರ, ಜಹೀರಾಬಾದ್, ರಾಯಚೂರು.



ಕನ್ನಡ ಕಾದಂಬರಿಗಳಲ್ಲಿ ದಲಿತ ಜಗತ್ತು

ಲೇ. ಡಾ॥ ಭೂಮಿಗೌಡ

ಬೆಲೆ: ರೂ. ೩೫೦/-

ದಲಿತ ಸಂಬಂಧೀ ಕಾದಂಬರಿಗಳು ತೆರೆದಿಟ್ಟ ದಲಿತ ಜಗತ್ತಿನ ಸೂಕ್ಷ್ಮಗಳನ್ನು ವಿಶ್ಲೇಷಿಸುವ ಸಂಶೋಧನಾ ಪ್ರಬಂಧ ಇದು.

ದಲಿತರಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳು, ಹೋರಾಟಗಳು, ಅವರ ಕನಸು, ನೋವುಗಳು ಹಾಗೂ ಇನ್ನಿತರ ವ್ಯಾಪಕ ನೆಲೆಯಲ್ಲಿ ಲೇಖಕರು ಸಮರ್ಪಕವಾಗಿ ಪರಿಭಾವಿಸಿದ್ದಾರೆ.

ಪ್ರಕಾಶಕರು : ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಲಕ್ಷ್ಮಿ ಟಾಕೀಸ್ ಹಿಂಭಾಗ, ಮೈಸೂರು- ೦೨



ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ (ಒಂದು ಶತಮಾನ)

ಲೇ. ಪ್ರೊ॥ ಲಕ್ಷ್ಮಣ್ ತೆಲಗಾವಿ

ಬೆಲೆ: ರೂ. ೫೦/-

ಇತಿಹಾಸದ ವಸ್ತು ಕಾಲಕಾಲಕ್ಕೆ ಪ್ರಜ್ಞಾವಂತಿಕೆಯ ನೆಲೆಯಲ್ಲಿ ಬಳಕೆಗೊಂಡು ಜನಜೀವನದ ಮೇಲೆ, ಇತರ ಕ್ಷೇತ್ರಗಳ ಮೇಲೆ ಪ್ರಭಾವ ಬೀರುವಂಥ ಸಂದರ್ಭಗಳನ್ನು ಹೇಗೆ ಸೃಷ್ಟಿಸಿಕೊಂಡಿತೆಂಬುದನ್ನು ಹೇಳುವ ಪ್ರಯತ್ನವನ್ನು ಇಲ್ಲಿ ಲೇಖಕರು ಮಾಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ರೋಚಕ ಇತಿಹಾಸ ಮತ್ತು ಸಂಸ್ಕೃತಿಗಳು ಹೇಗೆ ಸಮಾಜದ ಎಲ್ಲ ಹಂತಗಳಲ್ಲೂ ಪ್ರವೇಶಿಸಿವೆ ಎಂಬುದನ್ನು ಸವಿವರವಾಗಿ ನಿರೂಪಿಸಿದ್ದಾರೆ.

ಪ್ರಕಾಶಕರು : ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ - ೫೭೭ ೫೪೫

ಪ್ರಾಸ್ತಾವ

ನಿರ್ಮಲ-ಶಾಂತ ಗಿರಿ ಶಿಖರ ಬಾಬಾಬುಡನ್‌ಗಿರಿಗೆ ಕೋಮುವಾದಿಗಳು ಬೆಂಕಿ ಹಚ್ಚಿದ್ದಾರೆ. ಮುಗ್ಧ ಜನರನ್ನು ಕೆರಳಿಸಿ, ಅದರ ಲಾಭ ಪಡೆದು ಅಧಿಕಾರ ಹಿಡಿಯುವ ಸಂಘ ಪರಿವಾರದ ಹುನ್ನಾರ ಕುಸಿದು ಬಿದ್ದಿದೆ. ಹಿಂದೂ-ಮುಸ್ಲಿಂ ಮೂಲಭೂತತನವನ್ನು ತಿರಸ್ಕರಿಸಿ ಜನತೆ ಧರ್ಮ ಕಟ್ಟಿದ ಬಾಬಾಬುಡನ್ ಮತ್ತು ದತ್ತಾತ್ರೇಯರಂಥ ಅನುಭಾವಿಗಳ ನೆಲೆಯಾದ ಈ ಪ್ರದೇಶದ ಕುರಿತಂತೆ ನಿಜದ ನೆಲೆಗಟ್ಟಿನ ವಿಶ್ಲೇಷಣೆ ಅಗತ್ಯವಾಗಿದೆ. ಇಂತಹ ವಿಶ್ಲೇಷಣೆಯನ್ನು ಲೇಖಕರು ಇಲ್ಲಿ ನಡೆಸಿದ್ದಾರೆ. ಅದರ ಎರಡನೇ ಕಂತು ಇದು.

○ಪ್ರೊ॥ರಹಮತ್ ತರೀಕೆರೆ

ಬಾಬಾಬುಡನಗಿರಿಗೆ ವರ್ಷವಿಡೀ ಜನ ಹೋಗುತ್ತಲೆ ಇರುತ್ತಾರೆ. ಇವರಲ್ಲಿ ಹರಕೆಹೊತ್ತವರು ಹೆಚ್ಚು. ಕುಟುಂಬದಲ್ಲಿ ಯಾರಿಗಾದರೂ ಕಾಯಿಲೆ ಕಸಾಲೆ ಆದರೆ ಗುಣವಾಗಲಿ ಎಂದು, ಮಕ್ಕಳಾಗದೆ ಇದ್ದರೆ ಮಕ್ಕಳಾಗಲಿ ಎಂದು, ಮಕ್ಕಳಿಗೆ ಮದುವೆಯಾಗದೆ ಇದ್ದರೆ ಮದುವೆಯಾಗಲಿ ಎಂದು, ಹರಕೆ ತೀರಿಸುತ್ತಾರೆ. ಮಕ್ಕಳ ಹುಟ್ಟುಗೂದಲು ತೆಗೆಸುವುದಕ್ಕೆ ಹೆಚ್ಚಾಗಿ ಬರುತ್ತಾರೆ. ಹೊಸದಾಗಿ ವಾಹನ ಕೊಂಡವರು, ಹೊಸದಾಗಿ ಮದುವೆಯಾದವರು ಬರುತ್ತಾರೆ. ಇವರೆಲ್ಲ ಹರಕೆ ತೀರಿಸುತ್ತಾರೆ. ಗುಹೆಯ ಮುಂದೆ ಇರುವ ಚೌಕಿಯಲ್ಲಿ ತೆಂಗಿನಕಾಯಿ ಒಡೆಯುತ್ತಾರೆ. ಗುಹೆಯ ಒಳಗೆ ಇರುವ ದರ್ಗಾಕ್ಕೆ ಕಲ್ಲುಸಕ್ಕರೆ ಓದಿಸುತ್ತಾರೆ. ಊದುಬತ್ತಿ ಹಚ್ಚುತ್ತಾರೆ. ಮುಜಾವರನು ಫಾತೆಹಾ ಓದುತ್ತಾನೆ. ಬೆಳಿಗ್ಗೆ ಸಂಜೆ ನಗಾರಿ ಬಾರಿಸುವುದು, ಧೂಪವನ್ನು ಹಾಕುವುದು, ಗುಹೆಯಲ್ಲಿರುವ ಸಮಾಧಿಗಳಿಗೆ ಗಂಧ ಹಚ್ಚುವುದು ಮಾಡುತ್ತಾನೆ. ಗುಹೆಯಲ್ಲಿರುವ ಚಿಲುಮೆಯಿಂದ ಜಲವನ್ನು ತೀರ್ಥವಾಗಿ ಕೊಡುತ್ತಾನೆ. ಹೊರಗೆ ಜನ ಕೋಳಿ ಇಲ್ಲವೆ ಕುರಿ ಕೊಯ್ದು ಅಡುಗೆ ಮಾಡುತ್ತಾರೆ. ಉಣ್ಣುತ್ತಾರೆ. ದರ್ಗಾದ ಮುಖ್ಯಸ್ಥರಾದ ಸಜ್ಜಾದೆ ನಶೀನರಿಗೆ ಹೋಗಿ ನಮಸ್ಕಾರ ಮಾಡುತ್ತಾರೆ.

ಬುಡ್ನಾಗಿರಿ ಸ್ವಾಮಿಗೇನು ಪೂಜೆನಾದರೆ ಲೋಬಾನದೊಗೆಯೇ ಬಲುಪೂಜೆ
ಲೋಬಾನದೊಗೆಯೇ ಬಲುಪೂಜೆನಾದರೆ ಸಕ್ಕರೆ ಸೇರುಗಳೆ ಬಲುಪೂಜೆ

ದರ್ಗಾಗಳಲ್ಲಿ ಲೋಬಾನದ ಹೊಗೆ ಹಾಕುವುದು ಸಕ್ಕರೆ ಸೇರುಗಳನ್ನು ಓದಿಸುವುದು ಸಾಮಾನ್ಯ. ಎಲ್ಲ ದೇವರಿಗಿಂತ ಬುಡ್ನಾಗಿರಿಸ್ವಾಮಿಯ ಪೂಜೆ ವಿಶಿಷ್ಟವಾದುದು ಎಂದು ಇದು ಹೇಳುತ್ತಿದೆ. ಇದು ಮುಸ್ಲಿಮರನ್ನು ಕುರಿತು ಹಾಡಿದ ಹಾಡಿನಲ್ಲಿ ಬರುತ್ತದೆ ಎಂಬುದು ಗಮನಾರ್ಹ.

ಉರುಸು ಆಚರಣೆಗಳು

ಬಾಬಾಬುಡನಗಿರಿಯಲ್ಲಿ ಉರುಸು ಪ್ರಸಿದ್ಧವಾದುದು. ಇದಕ್ಕೆ ಶತಮಾನಗಳ ಚರಿತ್ರೆಯಿದೆ. ಬ್ರಿಟಿಶರ ದಾಖಲೆಗಳ ಪ್ರಕಾರ ಇದಕ್ಕಾಗಿ ಮಧ್ಯ ಏಶಿಯಾದಿಂದ ಕೂಡ ಭಕ್ತರು ಬರುತ್ತಾರೆ. ಕರ್ನಾಟಕದ ತುಂಬ ಇದಕ್ಕೆ ಭಕ್ತರಿದ್ದಾರೆ. ಹೆಚ್ಚು ಭಕ್ತರು ಆಂಧ್ರಪ್ರದೇಶದವರು. ದಾದಾಪೀರ್ ಎಂಬ ಹೆಸರಿನ ಲಕ್ಷಾಂತರ ಜನರು ಇದ್ದಾರೆ. ಇವರೆಲ್ಲ ಗಿರಿಗೆ ನಡೆದುಕೊಳ್ಳುವ ಕುಟುಂಬದವರು. ಇವರೆಲ್ಲ ಗಿರಿಗೆ ಬರುತ್ತಾರೆ. ಗಿರಿಗೆ ಕೆಳಗಿರುವ ಅತ್ತಿಗುಂಡಿ ಎಂಬ ಹಳ್ಳಿಯಿಂದ ಗಂಧವನ್ನು ಫಕೀರರು ಮೆರವಣಿಗೆ ಮಾಡಿಕೊಂಡು ತರುತ್ತಾರೆ. ಇದರ ಮುಂದೆ

ಜನಪದ ಆಚರಣೆಗಳಲ್ಲಿ ಗಿರಿ

ಇವರಿಗೆ ದಾದಾಹಯಾತ್ ಮೀರಖಲಂದರ್ ಎಂದರೆ ತಮ್ಮ ವರ್ತಮಾನ ಬಾಳಿನ ಸುಖದು:ಖ ಹಂಚಿಕೊಳ್ಳುವ ಸಂಗಾತಿ. ವಿಶೇಷ ಬಾಬಾಬುಡನಗಿರಿಯ ಈ ಆಚರಣೆಗಳು ಮಲೆನಾಡಿನ ಅನೇಕ ಜಾನಪದದಲ್ಲಿ ಸೇರಿಹೋಗಿವೆ. ಮಲೆನಾಡಿನಲ್ಲಿ ದೀಪಾವಳಿ ಹಬ್ಬದಲ್ಲಿ ಹುಡುಗರ ಗುಂಪೊಂದು ಪದ ಹಾಡುತ್ತ, ಮನೆಮನೆಗೆ ಹೋಗಿ ದೀಪ ಹಚ್ಚುವ ಆಚರಣೆಯಿದೆ. ಈ ಪದಗಳನ್ನು ಅಂಟಿಕೆ ಪಂಟಿಕೆ ಪದಗಳು ಎನ್ನುತ್ತಾರೆ. ಈ ಪದಗಳಲ್ಲಿ ಬಾಬಾಬುಡನಗಿರಿ ಆಚರಣೆಗಳ ಉಲ್ಲೇಖ ಬರುತ್ತದೆ.

ಎಲ್ಲಾ ದೇವರಿಗೆ ಏನು ಪೂಜೆನಾದರೆ ಹಣ್ಣುಕಾಯಿಗಳೇ ಬಲುಪೂಜೆ

ಸಜ್ಜಾದೆಗುರುವನ್ನು ಛತ್ರಚಾಮರಗಳೊಂದಿಗೆ ಕರೆದುಕೊಂಡು ಗುಹೆಯ ಪ್ರವೇಶ ಮಾಡಲಾಗುತ್ತದೆ. ಗಂಧವನ್ನು ದರ್ಗಾದಲ್ಲಿರುವ ಎಲ್ಲ ಸಮಾಧಿಗಳಿಗೆ ಹಚ್ಚುತ್ತಾರೆ. ಗಂಧ ಹಚ್ಚಿದ ಹಸಿರು ಬಟ್ಟೆಗೆ ಸಮಾಧಿಗಳಿಗೆ ಹೊದಿಸುತ್ತಾರೆ. ಪ್ರಾರ್ಥನೆ ಮಾಡುತ್ತಾರೆ. ಬಹಳ ಮುಖ್ಯವೆಂದರೆ ಗುರುವಾದ ಸಜ್ಜಾದೆ ನಶೀನರು ತಿಳಿಕಾವಿಯನ್ನು ಧಾರಣೆ ಮಾಡುವುದು. ಉರುಸಿನ ಎರಡು ಮುಖ್ಯ ಆಚರಣೆಗಳೆಂದರೆ ಫಕೀರರ ಮಹಾಸಭೆ ಹಾಗೂ ಸೂಫಿದೀಕ್ಷೆಯನ್ನು ಕೊಡುವುದು.

ಇಲ್ಲಿ ಬರುವ ಖಲಂದರ್ ಎಂಬುದರ ಬಗ್ಗೆ ಕೊಂಚ ವಿವರಣೆ ಕೊಡಬೇಕು. ಸೂಫಿಗಳಲ್ಲಿ ಖಾದ್ರಿಯಾ, ಚಿಸ್ತಿಯಾ ಮುಂತಾದ

ಬಾಬಾ ದತ್ತರ ಗಿರಿಕಾರಣ

ಪಂಥಗಳಿವೆ. ಅವುಗಳಲ್ಲಿ ಖಲಂದರ್ ಎಂಬುದು ಒಂದು. ಗುಲಬರ್ಗದ ಬಂದೇನವಾಜರು ಚಿಸ್ತಿ ಪಂಥದವರು. ಖಲಂದರ ಪಂಥದ ವಿಶಿಷ್ಟತೆಯೆಂದರೆ, ಅವರು ಉನ್ಮತ್ತರು. ಯಾವುದೇ ಸಾಂಪ್ರದಾಯಕ ಧರ್ಮದ ನಿಯಮಗಳನ್ನು ಲೆಕ್ಕಿಸದವರು. ಅವರನ್ನು ಬೇಶರಾ, ಅಂದರೆ ಶರಿಯತ್ ನಿಯಮ ಪಾಲಿಸದವರು ಎಂದು ಟೀಕಿಸಲಾಗುತ್ತಿತ್ತು. ಈಗಲೂ ಬಾಬಾಬುಡನಗಿರಿ ಉರುಸಿನಲ್ಲಿ ನೂರಾರು ಫಕೀರರು ಬರುತ್ತಾರೆ. ಅವರು ಕಬ್ಬಿಣದ ಆಭರಣಗಳನ್ನು ಧರಿಸಿಕೊಂಡು, ಕೊಂಬು ಊದುತ್ತ, ತಮ್ಮನ್ನು ಚಾವಟಿಯಿಂದ ಹೊಡೆದುಕೊಳ್ಳುವುದು, ಆಯುಧಗಳಿಂದ ಚುಚ್ಚಿಕೊಳ್ಳುವುದು ಮಾಡುತ್ತಾರೆ. ಈ ದೇಹದಂಡನೆಯು ತನ್ನೊಳಗೆ ಇರುವ ಇಂದ್ರಿಯಗಳನ್ನು ದಂಡಿಸುವ ವಿಧಾನ ಎಂದು ಹೇಳುತ್ತಾರೆ. ಭಾರತದ ತುಂಬ ಇರುವ ಎಲ್ಲ ಖಲಂದರ ಸೂಫಿಗಳ ಲಕ್ಷಣ.

ಭಾರತ ಉಪಖಂಡದಲ್ಲಿ ಲಾಹೋರ, ಪೆನುಕೊಂಡೆ ಹಾಗೂ ಬಾಬಾಬುಡನಗಿರಿಗಳು ಖಲಂದರ್ ಸೂಫಿಗಳ ಜಾಗಗಳಾಗಿವೆ. ದಾದಾಹಯಾತರ ಹೆಸರಲ್ಲಿ ಭಿಕ್ಷಾಟನೆ ಮಾಡುವುದು, ಭಕ್ತರಿಗೆ ಗಿರಿಯ ಪ್ರಸಾದ ತಲುಪಿಸುವುದು, ಉರುಸಿನ ದಿನವನ್ನು ಹೇಳುವುದು, ಸೂಫಿಹಾಡುಗಳನ್ನು ಹಾಡುವುದು ಮಾಡುತ್ತ ಇವರು ದೇಶಾಂತರ ತಿರುಗುತ್ತಾರೆ. ಸರಿಯಾಗಿ ಉರುಸಿನ ಹೊತ್ತಿಗೆ ಇವರು ಬಾಬಾಬುಡನಗಿರಿಯಲ್ಲಿ ಸಭೆ ಸೇರುತ್ತಾರೆ. ಈ ಸಭೆಗೆ ದಲೀಚಾ ಎನ್ನುತ್ತಾರೆ. ಫಕೀರರ ಮಹಾಸಭೆಯ ಅಧ್ಯಕ್ಷತೆಯನ್ನು ಇವರಿಗೆ ದೀಕ್ಷಾಗುರುವಾಗಿರುವ ಬಾಬಾಬುಡನಗಿರಿಯ ಸಜ್ಜಾದೆ ನಶೀನರು ವಹಿಸುತ್ತಾರೆ. ಅವರು ಇವರನ್ನು ಬೇರೆಬೇರೆ ಪ್ರಾಂತ್ಯಗಳಿಗೆ ನೇಮಿಸುತ್ತಾರೆ. ಅವರು ತಂತಮ್ಮ ಪ್ರಾಂತ್ಯಗಳ ವರದಿಕೊಡುತ್ತಾರೆ. ತಪ್ಪಿತಸ್ಥರಾದ ಫಕೀರರ ವಿಚಾರಣೆ ನಡೆಯುತ್ತದೆ. ಅವರಿಗೆ ಕಾಣಿಕೆಗಳನ್ನು ಕೊಡಲಾಗುತ್ತದೆ. ಉರುಸಿನ ನಂತರ ಮತ್ತೆ ಅವರು ಚದುರಿಹೋಗುತ್ತಾರೆ.

ಎರಡನೆಯದಾಗಿ ಸೂಫಿದೀಕ್ಷೆಕೊಡುವುದು. ಇದಕ್ಕೆ ಖಿಲಾಫತ್ ಕೊಡುವುದು ಎನ್ನುತ್ತಾರೆ. ಸಜ್ಜಾದೆ ನಶೀನರು ಸೂಫಿದೀಕ್ಷೆಯನ್ನು ಪಡೆಯ ಬಯಸುವ ವ್ಯಕ್ತಿಯನ್ನು ಎದುರು ಕೂರಿಸಿಕೊಂಡು, ಅವರ ಕಿವಿಯಲ್ಲಿ ಮಂತ್ರೋಪದೇಶ ಮಾಡಿ, ಕತ್ತರಿಯಲ್ಲಿ ಅವರ ತಲೆಗೂದಲನ್ನು ಕತ್ತರಿಸುತ್ತಾರೆ. ಹಾರಹಾಕಿ ಪೇಟ ಕಟ್ಟುತ್ತಾರೆ. ದೀಕ್ಷೆಸ್ವೀಕಾರ ಮಾಡಿದವರು ಅವರ ಕಾಲಿಗೆ ನಮಸ್ಕಾರ ಮಾಡುತ್ತಾರೆ.

ಮೂರನೆಯದು ಮಹಫಿಲೆ ಸಮಾ. ಅಂದರೆ ಸೂಫಿ ಅನುಭಾವದ ಸಂಗೀತಗೋಷ್ಠಿ. ಭಾರತದ ನಾನಾ ಭಾಗದಿಂದ ಬಂದಿರುವ ಫಕೀರರು ಗುರುವಿನ ಮುಂದೆ ಸೂಫಿಗಾಯನ ಮಾಡುತ್ತಾರೆ. ಈ ಸಂಗೀತಸಭೆ ರಾತ್ರಿ ತಡವಾಗಿ ಆರಂಭವಾಗಿ ಬೆಳಗಿನ ಜಾವ ಮುಗಿಯುತ್ತದೆ. ಇದರಲ್ಲಿ ಭಾರತದ ಬೇರೆಬೇರೆ ಸೂಫಿಸಂತರು ರಚಿಸಿದ ಪ್ರಸಿದ್ಧ ರಚನೆಗಳನ್ನು ಹಾಡಲಾಗುತ್ತದೆ. ಸಂಗೀತ ಸಮಯದಲ್ಲಿ ಸಭೆಯಲ್ಲಿದ್ದ ಎಷ್ಟೋ ಜನ ಭಾವಾವೇಷದಲ್ಲಿ ಮೈಮರೆಯುತ್ತಾರೆ. ಅವರನ್ನು ಗುರುವು ಮೈದಡವಿ ಶಾಂತಗೊಳಿಸುತ್ತಾರೆ. ಸೂಫಿಗಳಲ್ಲಿ ಸಂಗೀತವು ಆನುಭಾವಿಕ ಸಾಧನೆಯಲ್ಲಿ ಒಂದು ಸಾಧನವಾಗಿದೆ. ಈ ಆಚರಣೆಯು ಬಾಬಾಬುಡನಗಿರಿಯಲ್ಲಿ ನಡೆಯುತ್ತದೆ. ಇಲ್ಲಿನ ಶಾಸನಗಳು, ಇಲ್ಲಿಗೆ ಜಗತ್ತಿನ ಅನೇಕ ದೇಶಗಳಿಂದ ಬರುವ ಭಕ್ತರು, ಫಕೀರರ ಮಹಾಸಭೆ, ಇಲ್ಲಿ ನಡೆಯುವ ತತ್ವಚಿಂತನೆಯ ಸಭೆ, ಸಂಗೀತಗೋಷ್ಠಿ, ಇವೆಲ್ಲವೂ ಪಾರಂಪರಿಕವಾಗಿ ಬಾಬಾಬುಡನಗಿರಿಯು ಪ್ರಮುಖ ಸೂಫಿಕೇಂದ್ರವಾಗಿರುವುದನ್ನು ಸೂಚಿಸುತ್ತದೆ. ಬಿಡಿಸಬೇಕಾದ ಸಮಸ್ಯೆ ಇದಕ್ಕೆ ದತ್ತಾತ್ರೇಯ ಪೀಠ ಎಂಬ ಹೆಸರು ಬರಲು ಕಾರಣ ಯಾವುದು. ಈ ಪ್ರಶ್ನೆಗೆ ಉತ್ತರವನ್ನು ಪಡೆಯಲು ದರ್ಗಾದ ಆಸುಪಾಸಿನಲ್ಲಿ ಇರುವ ಎರಡು ಆದಿಗದ್ದುಗೆ ದತ್ತಾತ್ರೇಯ ಪೀಠಗಳ ಪರಿಚಯ ಮಾಡಿಕೊಳ್ಳಬೇಕು.

ಅ. ಆದಿಗದ್ದುಗೆ ಗುರುದತ್ತಾತ್ರೇಯ ಫಲಹಾರಮಠ

ಬಾಬಾಬುಡನಗಿರಿ ಬೆಟ್ಟದ ಕೆಳಗೆ, ಪೂರ್ವಕ್ಕೆ ಮುತ್ತಿನಪುರ ಎಂಬಲ್ಲಿ ಆದಿಗದ್ದುಗೆ ಗುರುದತ್ತಾತ್ರೇಯ ಫಲಾಹಾರಮಠವಿದೆ. ಫಳಾಹಾರಸ್ವಾಮಿ ಹೆಸರಿನ ಗುರುವಿದ್ದ ಕಾರಣ ಈ ಹೆಸರು. ಫಳಾಹಾರಸ್ವಾಮಿಯ ಫಲಾಹಾರ ಸ್ವಾಮಿ ಶಿಷ್ಯರಾದ ಚೆನ್ನವೀರದೇವರು ಇದ್ದ ಕಾರಣ ಚೆನ್ನವೀರದೇವರ ಮಠ ಎಂತಲೂ ಹೆಸರಿದೆ. ಫಾಳಿಪೂಜೆ ಮಠವೆಂತಲೂ ಹೆಸರಿದೆ. ಇಲ್ಲಿ ಪ್ರಾಚೀನವಾದ ವಿರೂಪಾಕ್ಷನ ಗುಡಿಯಿದೆ. ಇಲ್ಲಿ ಮೂರು ತಲೆಗಳು ಮೂರ್ತಿಗಳು ಇವೆ. ಇವು ಬಹುಶಃ ದತ್ತಾತ್ರೇಯನವು ಇರಬಹುದು. ಇಡೀ ದೇವಸ್ಥಾನವು ಪಾಳುಬಿದ್ದಿದೆ. ಗಿಡಗಂಟೆಗಳಿಂದ ತುಂಬಿ ನಿರ್ಜನವಾಗಿದೆ. ಅಕ್ಕಪಕ್ಕದ ಕಾಫಿಪ್ಲಾಂಟರುಗಳು ಅದನ್ನು ಒತ್ತುವರಿ ಮಾಡಿಕೊಳ್ಳುತ್ತಲೂ ಇದ್ದಾರೆ. ಇದು ಭೈರವರಾಧನೆಯ ಜಾಗವಾಗಿತ್ತು ಎನ್ನುವುದಕ್ಕೆ ಹಲವಾರು ಆಧಾರಗಳು ಅಲ್ಲಿ ಸಿಗುತ್ತವೆ.

ಈ ಭೈರವದೇವರ ಜತೆ ಶಕ್ತಿದೇವತೆಯೂ ಇದ್ದಾಳೆ. ಆಕೆಗೆ ಕೋಳಿಬಲಿ ಪದ್ಧತಿಯಿದೆ. ಇಲ್ಲಿರುವ ಒಂದು ಮನುಷ್ಯರ ತಲೆ ಕೈಕಾಲು ಕತ್ತರಿಸಿದ ಫಲಕವನ್ನು ಕಂಡರೆ ಇಲ್ಲಿ ನರಬಲಿಯಿತ್ತು ಎಂದು ಗೊತ್ತಾಗುತ್ತದೆ. ಭೈರವಾರಾಧನೆ ಇರುವ ಕಡೆ ಇದು ಸಾಮಾನ್ಯ.. ದಾದಾಹಯಾತರು ಬಲಿಗಾಗಿ ಕಟ್ಟಿಹಾಕಿದ್ದ ಮನುಷ್ಯನನ್ನು ಬಿಡಿಸಿದರು ಎಂಬ ಕಥೆಯು ಇಲ್ಲಿನ ನರಬಲಿಗೂ ಸಂಬಂಧ ಇರಬಹುದು. ಹಿಂದೆ ಇದು ಕಾಪಾಲಿಕ ಶೈವರ ಜಾಗವಿರಬಹುದು. ಮಧ್ಯಕಾಲದಲ್ಲಿ ಶ್ರೀಶೈಲವು ಪ್ರಸಿದ್ಧ ಕಾಪಾಲಿಕ ಶೈವರ ಕೇಂದ್ರವಾಗಿತ್ತು. ಇದು ಶ್ರೀಶೈಲದ ಸೂರ್ಯಸಿಂಹಾಸನಕ್ಕೆ ಸೇರಿದ ಮಠ. (ಅಂದರೆ ಈಗಿನ ನಿಡುಮಾಮಿಡಿಯ ವೀರಭದ್ರ ಚೆನ್ನಮಲ್ಲಸ್ವಾಮಿ ಅವರ ಮೂಲಮಠಕ್ಕೆ ಸೇರಿದ ಮಠ.). ಇದರ ಸ್ವಾಮಿಗೆ ಈ ಶಾಸನಗಳಲ್ಲಿ 'ಫಾಳಿಪೂಜೆ ಫಲಹಾರಮಠ ಸಮಯಾಚಾರ ಮೂರ್ತಿಗಳಾದ ಆದಿಗದ್ದುಗೆ ಶ್ರೀಗುರು ದತ್ತಾತ್ರೇಯ ಶ್ರೀ ಫಳಾರ ಮಠದ ಸ್ವಾಮಿ'ಎಂದು ಕರೆಯಲಾಗಿದೆ. ಶೈವರೂ ಶ್ರೀಶೈಲಕ್ಕೆ ಸಂಬಂಧವುಳ್ಳವರೂ ಆದ ಈ ಸ್ವಾಮಿಗೆ ಯಾಕೆ ದತ್ತಾತ್ರೇಯ ಎಂಬ ಬಿರುದು ಇತ್ತು ಎಂದು ಖಚಿತವಾಗುವುದಿಲ್ಲ.

ಇಲ್ಲಿನ ಶಾಸನಗಳು, ಇಲ್ಲಿಗೆ ಜಗತ್ತಿನ ಅನೇಕ ದೇಶಗಳಿಂದ ಬರುವ ಭಕ್ತರು, ಫಕೀರರ ಮಹಾಸಭೆ, ಇಲ್ಲಿ ನಡೆಯುವ ತತ್ವಚಿಂತನೆಯ ಸಭೆ, ಸಂಗೀತಗೋಷ್ಠಿ, ಇವೆಲ್ಲವೂ ಪಾರಂಪರಿಕವಾಗಿ ಬಾಬಾಬುಡನಗಿರಿಯು ಪ್ರಮುಖ ಸೂಫಿಕೇಂದ್ರವಾಗಿರುವುದನ್ನು ಸೂಚಿಸುತ್ತದೆ. ಬಿಡಿಸಬೇಕಾದ ಸಮಸ್ಯೆ ಇದಕ್ಕೆ ದತ್ತಾತ್ರೇಯ ಪೀಠ ಎಂಬ ಹೆಸರು ಬರಲು ಕಾರಣ ಯಾವುದು. ಈ ಪ್ರಶ್ನೆಗೆ ಉತ್ತರವನ್ನು ಪಡೆಯಲು ದರ್ಗಾದ ಆಸುಪಾಸಿನಲ್ಲಿ ಇರುವ ಎರಡು ಆದಿಗದ್ದುಗೆ ದತ್ತಾತ್ರೇಯ ಪೀಠಗಳ ಪರಿಚಯ ಮಾಡಿಕೊಳ್ಳಬೇಕು.

ದತ್ತಾತ್ರೇಯನು ನಾರಾಯಣಸಂಭೂತನಾದ ದೈವ ಎನ್ನಲಾಗುತ್ತದೆ. ಆದರೆ ಈ ಭಾಗದ ದತ್ತಪಂಥವು ಶೈವಪಂಥೀಯವಾಗಿತ್ತು. ಇದಕ್ಕೆ ಇನ್ನೊಂದು ಸಾಕ್ಷಿ ತರೀಕೆರೆ ಸಮೀಪದ ಸೋಮಪುರದ ಶಿವಲಿಂಗಕ್ಕೆ ದತ್ತಾತ್ರೇಯನೆಂಬ ಹೆಸರಿರುವುದು.

ಫಲಾಹಾರ ಮಠದಲ್ಲಿ ೧೭ನೇ ಶತಮಾನದ ೪ ಶಾಸನಗಳು ಸಿಕ್ಕಿವೆ. ಮಠದ ೧೭೦೭ರ ಶಾಸನವು, ಆದಿಗದ್ದುಗೆ ಶ್ರೀಗುರು ದತ್ತಾತ್ರೇಯ ಶ್ರೀಫಳಾರಮಠದ ಸ್ವಾಮಿಗೆ, ೫೭ ಹಳ್ಳಿಯ ಜನರು ದಾನಕೊಟ್ಟ ದಾಖಲೆ. ೧೬೯೪, ೧೭೦೩ ಹಾಗೂ ೧೭೧೭ರ ಶಾಸನಗಳು ಫಳಾರಮಠದ ಸ್ವಾಮಿಗೆ, ಶ್ರೀಶೈಲದ ಸೂರ್ಯಸಿಂಹಾಸನ ಮಠದ ವೀರಭಿಕ್ಷಾವರ್ತಿ ಉದನಸ್ವಾಮಿ ಕೊಟ್ಟಿರುವ ದಾನಪತ್ರಗಳಾಗಿವೆ. ಇವುಗಳಲ್ಲಿ ಫಲಹಾರ ಮಠಕ್ಕೆ ಬೇರೆಬೇರೆ ಜಾತಿ ಸಮುದಾಯಗಳು ಕೊಡಬೇಕಾದ ಕಾಣಿಕೆ, ಅವು ಬಳಕೆಯಾಗಬೇಕಾದ ಬಾಬತ್ತಿನ ಉಲ್ಲೇಖಗಳಿವೆ. ೧೬೯೪ರ ಶಾಸನವು ಸುಡುಗಾಡ ಸಿದ್ದರು ಗೋಲುಕೊಂಡಯರು ಕೊಡಬೇಕಾದ ಕಾಣಿಕೆಗಳನ್ನು ಕುರಿತು ಹೇಳುತ್ತದೆ; ೧೭೧೭ರ ಶಾಸನವು ಗುರು ದತ್ತಾತ್ರೇಯ ಫಳಾರಮಠದ ಸ್ವಾಮಿಗೆ, ಶ್ರೀಶೈಲಸೂರ್ಯಸಿಂಹಾಸನದ ವೀರಭಿಕ್ಷಾವರ್ತಿ ಉದನಸ್ವಾಮಿಯವರು"ಕಂನ್ನುಲ್ಲಾ ಬಬಾನದೊರ್ಗೆಗಳ" (ಅಂದರೆ ಆಗ ಆಳುತ್ತಿದ್ದ ಕರ್ನೂಲಿನ ನವಾಬರ) ಸಮಕ್ಷಮದಲ್ಲಿ ಕೊಟ್ಟ ದಾನಪತ್ರ.

ಇದರ ಪ್ರಕಾರ ಕೃಷ್ಣಾನದಿಯ ಪಶ್ಚಿಮ ದಕ್ಷಿಣ ಉತ್ತರದ ಸೀಮೆಯ ಭಕ್ತರು, ಶ್ರೀಶೈಲದ ಬದಲಿಗೆ ಫಾಳಿಪೂಜೆ ಫಲಹಾರ ಮಠಕ್ಕೆ ತಮ್ಮ ಕಾಣಿಕೆ ಕೊಡಬೇಕು. ಅವರೆಂದರೆ, ಆರಾಧ್ಯರು, ಶೆಟ್ಟಿವರ್ತಕರ್ರು, ಗೌಡಗಳು, ರೆಡ್ಡಿ ವಕ್ಕಲುತನದವರು, ಕುಂಚಿಟಿಗರು, ಕಡಮೆಜನರು, ಸುಡುಗಾಡ ಸಿದ್ದರು, ಜಡೆಜೋಗಿಗಳು, ಜಂಗಲ್ಲೆರ್ರು, ಪಾಕನಾಟ್ಟಿಗಳು, ಗೊಲ್ಲರು, ಹೆಳವರು, ಉಪ್ಪಿನಾತ್ತಂಗಳರ್ರು, ಮಾರ್‍ರಿಯವರು, ಹಾಲ್ಲುವಕ್ಕಿಯವರು, ಪಂಡರ್ರು, ಗಣಾಯಿತ್ತಾದವರ್ರು, ಕಾಡಸಿದ್ದರು, ಗಾರ್ದಪ್ಪ ಗೊಲ್ಲರು.

ಅ.ಆದಿಗದ್ದುಗೆ ಗುರುದತ್ತಾತ್ರೇಯ ಬಿಸಗ್ನಿಮಠ

ಬಾಬಾಬುಡನಗಿರಿಯ ಉತ್ತರಕ್ಕೆ ಮೂರು ಕಿಮಿ ದೂರದಲ್ಲಿ ಕೆಮ್ಮಣ್ಣುಗುಂಡಿ ರಸ್ತೆಯಲ್ಲಿ ಇನಾಂ ಬಿಸಗ್ನಿ ಮಠ ಎಂಬ ಗ್ರಾಮದಲ್ಲಿ ಗುರುದತ್ತಾತ್ರೇಯ ಆದಿಗದ್ದುಗೆ ಬಿಸಗ್ನಿಮಠ ಎಂಬ ಮಠವಿದೆ. ಬಿಸಗ್ನಿಮಠದಲ್ಲೂ ಗುರುದತ್ತಾತ್ರೇಯ ಆದಿಗದ್ದುಗೆಯಿದೆ. ದತ್ತಾತ್ರೇಯಸ್ವಾಮಿ ಇಲ್ಲಿ ತಪಸ್ಸು ಮಾಡಿದರು ಎನ್ನಲಾಗುವ ಗುಹೆಯಿದೆ. ಈ ಪೀಠದಲ್ಲಿದ್ದ ಪ್ರಭುಲಿಂಗ ಶಿವಾಚಾರ್ಯ ಸ್ವಾಮಿಗಳು ಕುದಿಯುವ ಎಣ್ಣೆಯಲ್ಲಿ ನಿಂತು ತಪಸ್ಸು ಮಾಡಿದ್ದರಿಂದ ಬಿಸಗ್ನಿಮಠ ಎಂಬ ಹೆಸರು ಬಂತಂತೆ.

ವಾಸ್ತವವಾಗಿ ಸೂಫಿ ಹಾಗೂ ನಾಥಮಠಗಳಲ್ಲಿ 'ಧುನಿ' ಎಂದು ಕರೆಯಲಾಗುವ ಸದಾ ಜ್ವಲಿಸುವ ಅಗ್ನಿಕುಂಡವಿರುತ್ತದೆ. ಸಾಯಿಬಾಬಾ ಕೂಡ ಧುನಿಯನ್ನು ಸದಾ ಉರಿಸುತ್ತಿದ್ದರು. ಬಾಬಾಬುಡನಗಿರಿಯಲ್ಲಿಯೂ ಧುನಿಯಿದೆ. ಬಾಬಾಬುಡನಗಿರಿಯಂತಹ ಚಳಿಪ್ರದೇಶದಲ್ಲಿ ಬೆಂಕಿಕೊಂಡ ನಿತ್ಯದ ಅಗತ್ಯ ಕೂಡ. ಇವೆಲ್ಲದರಿಂದಲೂ ಬಿಸಗ್ನಿಮಠ ಎಂಬ ಹೆಸರು ಬಂದಿರಬಹುದು. ಬಿಸಗ್ನಿಮಠದ ಆವರಣದಲ್ಲಿ ದಕ್ಷಬ್ರಹ್ಮನ ಶಿರತೆಗೆದ ವೀರಭದ್ರನ ಮೂರ್ತಿಯೂ, ಬ್ರಹ್ಮನ ಕತ್ತರಿಸಿದ ರುಂಡ ಹಿಡಿದಿರುವ ಭೈರವನ ಮೂರ್ತಿಯೂ ಇದೆ. ಇವು ವೈದಿಕ ವಿರೋಧಿ ದೈವಗಳು ಎಂಬುದು ಗಮನಾರ್ಹ. ಇಲ್ಲಿ ಕೂಡ ಮಠದ ಪ್ರವೇಶದ್ವಾರದಲ್ಲೆ ಇರುವ ಚೌಡಮ್ಮನಿಗೆ ಕೋಳಿಬಲಿ ಇದೆ. ಬಾಬಾಬುಡನಗಿರಿಯಲ್ಲಿ ಹಿಂದೂ ಧರ್ಮಕ್ಕೆ ವಿರುದ್ಧವಾಗಿರುವ ಮಾಂಸಾಹಾರವನ್ನು, ಬಲಿಯನ್ನು ಮಾಡುತ್ತ ಅಪವಿತ್ರಗೊಳಿಸಲಾಗಿದೆ ಎಂದು ಸಂಘ ಪರಿವಾರವು ಹೇಳುತ್ತದೆ... ಆದರೆ ಎರಡೂ ಆದಿಗದ್ದುಗೆ ದತ್ತಾತ್ರೇಯಪೀಠಗಳಲ್ಲಿ ಬಲಿಯೂ ಇದೆ. ಮಾಂಸಾಹಾರವೂ ಇದೆ.

ಇಲ್ಲಿ ಗಮನಿಸಬೇಕಾದ ಸಂಗತಿಗಳೆಂದರೆ ಫಲಾಹಾರ ಮಠ ಹಾಗೂ ಬಿಸಗ್ನಿಮಠ ಎರಡೂ ಈಗ ಶೈವಮಠಗಳು. ಇದಕ್ಕೆ ಸಾಕ್ಷಿ ಇಲ್ಲಿನ ಸ್ವಾಮಿಗಳ ಹೆಸರು ಹಾಗೂ ಇಲ್ಲಿರುವ ಶಿವನ ಗುಡಿಗಳು. ಆದರೆ ಇವು ಶೈವಮಠಗಳಾದರೂ ಇವಕ್ಕೆ ಹೆಚ್ಚಾಗಿ ಶೂದ್ರ ಕೆಳಜಾತಿಯ ಜನರು ಮುಖ್ಯವಾಗಿ ಮರಾಠರು ಶಿಷ್ಯರಾಗಿದ್ದಾರೆ; ಈ ಎರಡೂ ಮಠಗಳಲ್ಲಿ ವೈದಿಕವಿರೋಧಿ ಮೂರ್ತಿಗಳಾದ ಭೈರವನೂ ವೀರಭದ್ರನೂ ಇದ್ದಾರೆ. ಬಲಿಪದ್ಧತಿ ಇದೆ, ಪ್ರಶ್ನೆ ಎಂದರೆ, ಈ ಶೈವಮಠಗಳಿಗೆ ಗುರುದತ್ತಾತ್ರೇಯನ ಹೆಸರು ಹೇಗೆ ಅಂಟಿಕೊಂಡಿತು, ಇವಕ್ಕಿರುವ 'ಆದಿಗದ್ದುಗೆ ದತ್ತಾತ್ರೇಯ' ಎಂಬ ಹೆಸರನ್ನು ಕಂಡರೆ, ಇವು ದತ್ತಾತ್ರೇಯನ ಮೂಲ ಪೀಠಗಳು. ಶ್ರೀಶೈಲ ಮೂಲದ ಕಾಪಾಲಿಕ ಪಂಥದ ಈ ಶೈವಮಠಗಳಿಗೆ ದತ್ತಪಂಥದ ಸಹವಾಸವಾದಂತೆ ಕಾಣುತ್ತದೆ. ಮಹಾರಾಷ್ಟ್ರದಲ್ಲಿ ದತ್ತೋಪಾಸನೆಯು ವೈಷ್ಣವ ಸಂಸ್ಕೃತಿಯ ಭಾಗವಾಗಿದ್ದರೆ, ಕರ್ನಾಟಕದಲ್ಲಿ ಶೈವ ಸಂಸ್ಕೃತಿಯ ಭಾಗವಾಗಿದೆ. ಇದಕ್ಕೆ ತರೀಕೆರೆ ಸಮೀಪದ ಸೋಂಪುರದ ದತ್ತಾತ್ರೇಯ ಶಿವಲಿಂಗವು ಸಾಕ್ಷಿ. ಆದರೂ ಇಲ್ಲಿನ ದತ್ತಾತ್ರೇಯನ ಹೆಸರು, ಜಂಗಮ ಪೂಜಾರರು, ಹಾಗೂ ಪ್ರವೇಶದಲ್ಲಿಯೇ ಶಕ್ತಿದೇವತೆ ಹಾಗೂ ಬಲಿಪದ್ಧತಿ ಇವು ಹೇಗೆ ಪರಸ್ಪರ ಸಂಬಂಧ ಪಡೆದಿವೆ ಎನ್ನುವುದನ್ನು ಸಂಶೋಧನೆ ಮಾಡಬೇಕಿದೆ.

ಬಾಬಾಬುಡನಗಿರಿ ನಾಥಪಂಥದ ಜಾಗವೆ

ಸೂರ್ಯನಾಥ ಕಾಮತರು ಫಲಾಹಾರಮಠದ ಶಾಸನಗಳನ್ನು ಆಧಾರವಾಗಿ ಇಟ್ಟುಕೊಂಡು ಫಲಾಹಾರ ಮಠ, ಬಿಸಗ್ನಿಮಠ, ಬಾಬಾಬುಡನಗಿರಿ ದರ್ಗಾಗಳನ್ನು 'ನಾಥಕೇಂದ್ರಗಳು' ಎಂದು ವಾದಿಸುತ್ತ ಮಲೆನಾಡಿನ ಮೂರು ನಾಥಕೇಂದ್ರಗಳು ಎಂಬ ಲೇಖನ ಬರೆದಿದ್ದಾರೆ. ಕಾಮತರು ಸಂಘಪರಿವಾರಕ್ಕೆ ಪ್ರಿಯವಾದ ಇತಿಹಾಸಕಾರರು ಎಂಬುದು ಎಲ್ಲರಿಗೂ ಗೊತ್ತು. ಅವರೂ ಅದನ್ನು ಗುಟ್ಟಾಗಿ ಇಟ್ಟಿಲ್ಲ. ಆದರೆ ಕಾಮತರಲ್ಲಿ ಶಂಬಾಜೋಶಿ, ರಾಚಿಂಢೇರೆಯವರಂತೆ ನಮ್ಮ ಸಂಸ್ಕೃತಿಯ ವಿಶಿಷ್ಟತೆಯನ್ನಾಗಲಿ ಸೂಕ್ಷ್ಮತೆಯನ್ನಾಗಲಿ ಪೂರ್ವಾಗ್ರಹಗಳಿಲ್ಲದೆ ವಿಶ್ಲೇಷಿಸುವ



ಫಲಾಹಾರ ಮಠದ ಭೈರವ,

ಚಿಂತನೆಯಿಲ್ಲ. ತಮ್ಮ ರಾಜಕೀಯ ನಂಬಿಕೆಗೆ ಅನುಸಾರವಾಗಿ ದಾಖಲೆಗಳನ್ನು ವ್ಯಾಖ್ಯಾನಿಸುತ್ತಾರೆ. ಇದು ಸಮಸ್ಯೆ.

ಫಲಾಹಾರ ಮಠದ ಶಾಸನಗಳಲ್ಲಿ ಚಂದ್ರದ್ರೋಣ ಪರ್ವತಕ್ಕೆ ಭೈರವ, ಕಾಳಿ, ದುರ್ಗಿ, ನವನಾಥರು ಕಾವಲಿದ್ದಾರೆ ಎಂಬ ಮಾತಿದೆ. ನಿಜ. ಆದರೆ ಇಲ್ಲಿ ನಾಥಗುರುಗಳಾದ ಗೋರಖನಾಥ ಮಚ್ಚೇಂದ್ರನಾಥರ ಯಾವ ಪ್ರಸ್ತಾಪವೂ ಇಲ್ಲ. ಇವು ನಾಥ ಸಂಪ್ರದಾಯದ ಮಠಗಳಾಗಿರಲಿಲ್ಲ. ಬದಲಿಗೆ ದತ್ತಾತ್ರೇಯ ಮೂಲಗದ್ದುಗೆಗಳಾಗಿದ್ದವು. ಇಲ್ಲಿನ ದತ್ತಾತ್ರೇಯನು ನಾರಾಯಣ ಸಂಭೂತ ದತ್ತಾತ್ರೇಯನಲ್ಲ. ಶೈವೀಕರಣಗೊಂಡ ದತ್ತ ಪಂಥ. ಇಲ್ಲಿನ ಶೈವಪಂಥವು ಇಷ್ಟಲಿಂಗಾರಾಧಕರಾಗಿದ್ದ ಬಸವಣ್ಣನ ವೀರಶೈವವಲ್ಲ. ಬದಲಿಗೆ ಬಲಿಪದ್ಧತಿಯನ್ನು ಅನುಸರಿಸುತ್ತಿದ್ದ ಶ್ರೀಶೈಲ ಸಂಬಂಧವಿದ್ದ ಕಾಪಾಲಿಕ ಹಿನ್ನೆಲೆಯ ಭೈರವಾರಾಧನೆಯಿದ್ದ ಶೈವಪಂಥವಾಗಿತ್ತು. ಈ ಎರಡು ಮಠಗಳಿಗೆ ಹೋಗಿಬರುವ ದಾರಿಯಲ್ಲಿ ನಟ್ಟನಡುವೆ ಗಾಳಿಕೆರೆಯ ಭೈರವನಿದ್ದಾನೆ. ಈಗಲೂ ಗಾಳಿಕೆರೆಯ ಭೈರವನಿಗೆ ಕೋಳಿಬಲಿಯೆ ಮುಖ್ಯವಾದ ಆಚರಣೆ. ತಾಂತ್ರಿಕ ಆಚರಣೆ ಇರುವ ಪಂಥಗಳು ಯಾವಾಗಲೂ ದುರ್ಗಮವಾದ ಜಾಗಗಳಲ್ಲಿರುತ್ತವೆ. ಈ ಮಠಗಳು ಈಗಲೂ ದುರ್ಗಮವಾದ ಜಾಗಗಳಲ್ಲಿವೆ.

ಭಾರತದಲ್ಲಿ ಅನೇಕ ಕಡೆ ದತ್ತಕ್ಷೇತ್ರಗಳಿವೆ. ಪ್ರತಿ ದತ್ತಕ್ಷೇತ್ರವೂ ನಿರ್ದಿಷ್ಟ ಯತಿಯ ಹೆಸರಿಂದ ಪ್ರಸಿದ್ಧವಾಗಿದೆ. ಆದರೆ ಬಾಬಾಬುಡನಗಿರಿಗೆ ನಿರ್ದಿಷ್ಟ ದತ್ತಪಂಥದ ಯತಿಯ ಹೆಸರು ಲಗತ್ತಾಗಿಲ್ಲ. ಆದರೆ ದಾದಾಹಯಾತ್ ಹಾಗೂ ಬಾಬಾಬುಡನ್ ಎಂಬ ಇಬ್ಬರು ಸೂಫಿಗಳ ಹೆಸರು ಲಗತ್ತಾಗಿದೆ. ಇಲ್ಲಿ ಸಿಕ್ಕಿರುವ ಮೂರು ಶಾಸನಗಳು ಕೂಡ ಸೂಫಿಪಂಥಕ್ಕೆ ಸಂಬಂಧಿಸಿವೆ.

ಫಲಾಹಾರಾ ಮಠದ ಶಾಸನಗಳಿಂದ ಮೂರು ಸಂಗತಿಗಳು ಸ್ಪಷ್ಟವಾಗುತ್ತವೆ: ಒಂದು, ಈ ಪರ್ವತಶ್ರೇಣಿಯಲ್ಲಿ ದತ್ತಾತ್ರೇಯನ ಹೆಸರಲ್ಲಿ ಅನೇಕ ಪೀಠ ಗದ್ದುಗೆಗಳಿವೆ. ಫಲಾಹಾರಸ್ವಾಮಿ ಚೆನ್ನವೀರದೇವರು ಬಿಸಗ್ನಿಸಿದ್ಧ ಮುಂತಾದ ಯೋಗಿಗಳಿದ್ದರು. ಎರಡನೆಯದಾಗಿ, ಇಲ್ಲಿ ಭೈರವ, ಚೌಡಿ, ಕಾಳಿ ಮುಂತಾದ ಅವೈದಿಕ ದೈವಗಳಿವೆ. ಇಲ್ಲಿ ಬಲಿಪದ್ಧತಿ ಮಾಂಸಾಹಾರವು ಪರಂಪರೆಯಿಂದ ನಡೆದುಬಂದಿದೆ. ಈಗಲೂ ಅದು ಜೀವಂತವಿದೆ. ಮೂರನೆಯದಾಗಿ, ಇದಕ್ಕೆ ಭಕ್ತರು ದುಡಿಯುವ ನಾನಾ ಕೆಳಜಾತಿಯ ಜನರು. ಇವು ಯಾವ ಅರ್ಥದಲ್ಲೂ ವೈದಿಕ ಸಂಸ್ಕೃತಿಗೆ ಸಂಬಂಧಪಟ್ಟಿರಲಿಲ್ಲ. ಉಳಿಯುವ ಸಮಸ್ಯೆ ಎಂದರೆ, ಈ ಎರಡು ಮಠಗಳಿಗೆ ಆದಿಗದ್ದುಗೆ ದತ್ತಾತ್ರೇಯ ಪೀಠಗಳು ಎಂಬ ಹೆಸರು ಯಾಕೆ ಬಂದಿತು. ಅಲ್ಲಿ ಇದ್ದ ದತ್ತಯತಿಗಳು ಯಾರು? ಇದು ಖಚಿತವಾಗಿ ತಿಳಿಯುವುದಿಲ್ಲ. ಇದನ್ನು ಬಿಡಿಸುವ ಗೋಜಿಗೆ ಸಂಘಪರಿವಾರವು ಹೋಗಿಲ್ಲ. ದತ್ತಾತ್ರೇಯನ ಭಕ್ತಿ ತೋರುವ ಅವರು ಈ ಪೀಠಗಳಿಗೆ ಹೋದಂತಿಲ್ಲ.

ಭಾರತದಲ್ಲಿ ಅನೇಕ ಕಡೆ ದತ್ತಕ್ಷೇತ್ರಗಳಿವೆ. ಪ್ರತಿ ದತ್ತಕ್ಷೇತ್ರವೂ ನಿರ್ದಿಷ್ಟ ಯತಿಯ ಹೆಸರಿಂದ ಪ್ರಸಿದ್ಧವಾಗಿದೆ. ಉದಾ. ಗಾಣಗಾಪುರನರಸಿಂಹದತ್ತ. ಅಕ್ಕಲಕೋಟೆ ಸ್ವಾಮಿಸಮರ್ಥ. ಕುರುಮಗಡ್ಡೆ ಶ್ರೀಪಾದವಲ್ಲಭ. ಆದರೆ ಬಾಬಾಬುಡನಗಿರಿಗೆ ನಿರ್ದಿಷ್ಟ ದತ್ತಪಂಥದ ಯತಿಯ ಹೆಸರು ಲಗತ್ತಾಗಿಲ್ಲ. ಆದರೆ ದಾದಾಹಯಾತ್ ಹಾಗೂ ಬಾಬಾಬುಡನ್ ಎಂಬ ಇಬ್ಬರು ಸೂಫಿಗಳ ಹೆಸರು ಲಗತ್ತಾಗಿದೆ. ಇಲ್ಲಿ ಸಿಕ್ಕಿರುವ ಮೂರು ಶಾಸನಗಳು ಕೂಡ ಸೂಫಿಪಂಥಕ್ಕೆ ಸಂಬಂಧಿಸಿವೆ. ಈ ಸೂಫಿಪರಂಪರೆಗೆ ೩ ಶತಮಾನಗಳ ಇತಿಹಾಸವಿದ್ದು, ಈತನಕ ೧೬ ಗುರುಗಳು ಆಗಿಹೋಗಿದ್ದಾರೆ. ಶಾಸನಗಳು ಹೇಳುವಂತೆ ನಿಜವಾದ ದತ್ತಾತ್ರೇಯನ ಗದ್ದುಗೆ ಅಥವಾ ಪೀಠಗಳು ಎಂದರೆ ಫಲಾಹಾರ ಮಠ ಹಾಗೂ ಬಿಸಗ್ನಿಮಠಗಳು. ಇಲ್ಲಿರುವ ಆದಿ ಎಂಬ ಶಬ್ದ ಕೂಡ ಇದನ್ನು ಸೂಚಿಸುತ್ತಿದೆ. ದಾದಾಹಯಾತರು ಇಲ್ಲಿ ನೆಲೆನಿಂತ ಮೇಲೆ, ಇವರನ್ನು ದತ್ತಾತ್ರೇಯ ಎಂದು ಜನರು ಆದರಿಸುತ್ತಿರಬಹುದು. ದಾದಾಹಯಾತ ಮತ್ತು ದತ್ತಾತ್ರೇಯ ಎಂಬ ಶಬ್ದಗಳಲ್ಲಿನ ಸಾಮ್ಯವನ್ನು ಗಮನಿಸಬೇಕು.

ಬಾಬಾಬುಡನಗಿರಿಯ ಗುಹೆಯಲ್ಲಿದ್ದ ಸೂಫೀಸಂತರಿಗೂ ಈ ಪೀಠಗಳಲ್ಲಿದ್ದ ಯತಿಗಳಿಗೂ ಸ್ನೇಹಸಂಬಂಧ ಇದ್ದಿತು. ಮೊಗಲರಿಂದ ಹಿಡಿದು ಮೈಸೂರು ಒಡೆಯರ ತನಕ ಎಲ್ಲ ರಾಜರಿಂದ ಆದರಕ್ಕೊಳಗಾಗಿ, ಇನಾಮು ದತ್ತಿಗಳನ್ನು ಪಡೆದು ಗಿರಿಯಲ್ಲಿದ್ದ ದರ್ಗಾ ಅಥವಾ ಪೀಠವು ಹೆಚ್ಚು ಜನಪ್ರಿಯವೂ ಅಧಿಕಾರಸ್ಥವೂ ಆಗಿದ್ದಿರಬಹುದು. ಇಲ್ಲಿನ ಸೂಫಿಸಂತರನ್ನು ಹಾಗೂ ನಂತರ ಬಂದ ಸೈಯದ್ ವಂಶದ ಗುರುಗಳನ್ನು ಫಲಾಹಾರ ಮಠ ಬಿಸಗ್ನಿಮಠದ ಗುರುಗಳು ತಮ್ಮ ಗುರುಗಳು ಎಂದೆ ಆದರಿಸುತ್ತಿದ್ದರು. ಇದಕ್ಕೆ ಸಾಕ್ಷಿಯೆಂದರೆ, ಫಲಾಹಾರಮಠದ ಗುರುಗಳಿಗೆ ಪಟ್ಟಾಭಿಷೇಕವನ್ನು ಬಾಬಾಬುಡನಗಿರಿಯ ಗುರುಗಳೇ

ಮಾಡುತ್ತಿದ್ದರು. ಸರಕಾರಿ ದಾಖಲೆಗಳೂ ಇದನ್ನು ದೃಢಪಡಿಸುತ್ತವೆ.

ಫಲಾಹಾರ ಮಠದ ಆದಿಗದ್ದುಗೆ ದತ್ತಾತ್ರೇಯ ಮಠದಸ್ವಾಮಿಗೆ ಗುರುಸಮಾನರಾಗಿರುವ ಸಜ್ಜಾದರಿಗೆ ಶ್ರೀಗುರು ದತ್ತಾತ್ರೇಯ ಬಾಬಾಬುಡನ್‌ಸ್ವಾಮಿ ಎಂದು ಕರೆದಿರಬಹುದು. ಅಥವಾ ಸೂಫಿಗುರುವೂ ದತ್ತಪಂಥದ ಯತಿಯೂ ಒಂದೆ ಗುಹೆಯಲ್ಲಿದ್ದಿರಬಹುದು. ಎರಡು ದತ್ತಾತ್ರೇಯ ಆದಿಗದ್ದುಗೆಗಳ ನಡುವೆ ಬಾಬಾಬುಡನಗಿರಿ ಇದೆ. ಈ ಹಿನ್ನೆಲೆಯಲ್ಲಿ ನೋಡಿದಾಗ, ಈ ಎರಡು ದತ್ತಾತ್ರೇಯ ಆದಿಗದ್ದುಗೆಗಳಲ್ಲಿದ್ದ ಯೋಗಿಗಳು ಬಾಬಾ ಬುಡನಗಿರಿಯಲ್ಲಿರುವ ಗುಹೆಗೆ ಬಂದು ಹೋಗುವುದು ಮಾಡುತ್ತಿರಬೇಕು. ಜನ ದಾದಾಹಯಾತರನ್ನು ದತ್ತಾತ್ರೇಯ ಸ್ವಾಮಿ ಎಂದು ಕರೆದಿರಬೇಕು. (ದಾದಾಹಯಾತ್ ದತ್ತಾತ್ರೇಯ ಶಬ್ದಗಳಲ್ಲಿ ಬಹಳ ಸಾಮೀಪ್ಯವಿದೆ.) ಅಥವಾ ಎರಡೂ ಪಂಥದ ಸಂತರು ಒಟ್ಟಿಗೇ ಇದ್ದಿರಬಹುದು. ಒಟ್ಟಿನಲ್ಲಿ ಅವರು ಯೋಗಿಗಳಾಗಿದ್ದರು. ಜಾತಿಮತಗಳನ್ನು ಮೀರಿದವರಾಗಿದ್ದರು. ಯೋಗಸಾಧನೆಗೆ ಅನುಕೂಲವಾಗಿದ್ದ ಈ ನಿರ್ಜನವಾದ ಕಾಡಿನೊಳಗಿನ ನೈಸರ್ಗಿಕ ಗುಹೆಗಳ ಏಕಾಂತದಲ್ಲಿ ಇದ್ದರು.

ಸಂಚಾರಿಗಳಾದ ಕಾರಣ ತಮ್ಮ ಶಿಷ್ಯರನ್ನು ನೇಮಿಸಿ ಮತ್ತೆಲ್ಲಿಗೊ ಹೋದವರು. ಹೀಗಾಗಿ ಈ ಗುಹೆ, ಯೋಗ, ಧ್ಯಾನ, ಸಿದ್ಧೌಷಧ, ಖಲಂದರ ಪಂಥ, ದತ್ತಪಂಥ ಇವೆಲ್ಲ ಒಂದೆ ಲೋಕ ಪರಿಭಾಷೆಗಳಾಗಿವೆ. ಹೀಗಾಗಿ ಗುಹೆಯು ಏಕಕಾಲಕ್ಕೆ ದರ್ಗಾ ಹಾಗೂ ಹಾಗೂ ದತ್ತಾತ್ರೇಯಪೀಠ ಎಂದು ಹೆಸರಾಯಿತು. ಇಲ್ಲಿದ್ದ ಸಂತನನ್ನು ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ಎಂದು ಕರೆಯ ತೊಡಗಿದರು. ಸರಕಾರಿ ದಾಖಲೆಗಳಲ್ಲಿ ಬಾಬಾಬುಡನ ಗಿರಿಯ ಸಜ್ಜಾದೆ ಗುರುವಿಗೆ ಶ್ರೀಗುರು ದತ್ತಾತ್ರೇಯ ಬಾಬಾಬುಡನ್‌ಸ್ವಾಮಿ ಎಂಬುದು ಒಂದು ಬಿರುದು ಎಂದು ನಮೂದಿಸಲಾಗಿದೆ. (ಮೈಸೂರು ಗೆಜಿಟಿಯರು, ಸಂ.೫, ಸಂ.ಹಯವದನರಾವ್, ೧೯೩೦ ಪು.೧೧೩೭) -

ಸೂಫಿ ಹಾಗೂ ದತ್ತಪರಂಪರೆಗಳ ಮಿಲನ

ಸೂಫಿಸಂತರಿಗೆ ದತ್ತನೆಂದು ಕರೆಯುವದು ಹೇಗೆ ಸಾಧ್ಯ, ನಾಥ ಹಾಗೂ ದತ್ತಪಂಥಗಳ ಮಿಲನವಾಗಿದ್ದು ಯಾವಾಗ ಮತ್ತು ಹೇಗೆ? ಈ ಪ್ರಶ್ನೆ ಬರುತ್ತದೆ, ಆದರೆ ಸೂಫಿಗಳು ದತ್ತಾತ್ರೇಯನಾಗುವುದು ಅಥವಾ ದತ್ತಾವತಾರಿ ಯತಿಗಳು ಸೂಫಿಗಳಾಗುವುದು ಈ ರೂಪಾಂತರವು ದತ್ತಪಂಥದಲ್ಲಿ ಹೊಸತಲ್ಲ.

ಮೊದಲಿಗೆ ದತ್ತಾತ್ರೇಯನ ಪೌರಾಣಿಕ ಹಿನ್ನೆಲೆಯನ್ನು ನೋಡೋಣ. ದತ್ತ ಎಂದರೆ ಕೊಡಲ್ಪಟ್ಟ ಎಂದರ್ಥ. ದತ್ತನು ಮಕ್ಕಳಿಲ್ಲದ ಅನಸೂಯೆಗೆ ತ್ರಿಮೂರ್ತಿಗಳಿಂದ ಫಲವಾಗಿ ಕೊಡಲ್ಪಟ್ಟವನು. ಅವನ ಹುಟ್ಟಿಗೆ ಸಂಬಂಧಿಸಿ 'ಶ್ರೀಗುರುಚರಿತ್ರೆ'ಯಲ್ಲಿ ಬರುವ ಪುರಾಣದ ಕತೆ ಸ್ವಾರಸ್ಯಕರವಾಗಿದೆ.

ಅತ್ರಿಋಷಿಯ ಮಡದಿ ಅನಸೂಯೆಯ ಪಾತಿವ್ರತ್ಯ ಮಹಿಮೆ ಕಂಡು ಲಕ್ಷ್ಮಿ, ಸರಸ್ವತಿ ಪಾರ್ವತಿಯರಿಗೆ ಅಸೂಯೆ ಶುರುವಾಯಿತು. ಏನಾದರೂ ಮಾಡಿ ಅವಳ ಶಕ್ತಿಯನ್ನು ಕುಗ್ಗಿಸಲು ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರ ಮೊರೆಹೋಗುತ್ತಾರೆ. ಆಶ್ರಮದಲ್ಲಿ ಅತ್ರಿಯಿಲ್ಲದ ಹೊತ್ತು ನೋಡಿಕೊಂಡು, ಭಿಕ್ಷಕ್ಕೆ ಬಂದವರಂತೆ ಬರುತ್ತಾರೆ. ಬಂದು ಅನಸೂಯೆಯು ನಗ್ನರೂಪದಲ್ಲಿ ಬಂದು ತಮಗೆ ಆತಿಥ್ಯ

ಈ ಸಂತರು ನಮ್ಮ ಸಮಾಜದ ನಾನಾ ಜಾತಿ ಧರ್ಮಗಳಿಗೆ ಸೇರಿದವರು. ಕನ್ನಡಿಗರಾಗಿದ್ದ ಮಾಣಿಕಪ್ರಭು ಹುಟ್ಟಿನಿಂದ ಕುರುಬರಾಗಿದ್ದವರು. ಸಾಯಿಬಾಬಾ ಹಾಗೂ ನೂರಿಮಹಾರಾಜರು ಹುಟ್ಟಿನಿಂದ ಮುಸ್ಲಿಮರಾಗಿದ್ದರು. ಶ್ರೀಪಾದವಲ್ಲಭ, ನರಸಿಂಹ ಸರಸ್ವತಿ, ಟೇಂಬೆ ಮಹಾರಾಜರು ಬ್ರಾಹ್ಮಣರಾಗಿದ್ದರು. ಜನ ಇವರ ಪೂರ್ವಾಶ್ರಮದ ಜಾತಿಮತ ಹುಡುಕದೆ ನಡೆದುಕೊಂಡರು. ಹುಟ್ಟಿನಿಂದ ಮುಸ್ಲಿಮರಾಗಿದ್ದ ಶಿರಡಿಯ ಸಾಯಿಬಾಬಾಗೆ ಮಹಾರಾಷ್ಟ್ರದ ತುಂಬ ಮುಸ್ಲಿಮೇತರ ಅನುಯಾಯಿಗಳಿದ್ದರು. ಈಗಲೂ ಅದೊಂದು ಸರ್ವಧರ್ಮದ ಜನರ ತಾಣ. ದತ್ತಪಂಥವು ನಮ್ಮ ಸಮಾಜದಲ್ಲಿ ಜನಪ್ರಿಯವಾಗಲು ಒಂದು ಕಾರಣ ಅದು ಜಾತಿಭೇದವನ್ನು ನಿರಾಕರಿಸುವ ಜಾತ್ಯತೀತ ಪಂಥವಾಗಿದ್ದುದು. ತನ್ನ ಕಾಲದ ಸನಾತನವಾದಿಗಳಿಗೆ (ಈಗಿನ ಹಿಂದುತ್ವವಾದಿಗಳ ಪೂರ್ವಜರಿಗೆ) ವಿರುದ್ಧವಾಗಿದ್ದುದು.

ಮಾಡಬೇಕೆಂಬ ವಿಚಿತ್ರ ಬೇಡಿಕೆ ಮಂಡಿಸುತ್ತಾರೆ. ಅನಸೂಯೆ ಚಿಂತಿಸಿ, ಅವರನ್ನು ಮೂರು ಎಳೆಗೂಸುಗಳನ್ನಾಗಿ ಮಾಡಿ, ಎದೆಹಾಲನ್ನೂ ಊಡತೊಡಗುತ್ತಾಳೆ. ತ್ರಿಮೂರ್ತಿಗಳು ಸೋತು, ಹೋಗುವಾಗ ಪ್ರಸನ್ನರಾಗಿ ವರಕೊಡುತ್ತಾರೆ. ಈ ವರಗಳ ಫಲವಾಗಿ ದತ್ತಾತ್ರೇಯ ರೂಪುಗೊಳ್ಳುತ್ತಾನೆ. ಅವನಿಗೆ ಮೂರುಮುಖಗಳು. ಅವನ ಹಿಂದೆಯಿರುವ ಹಸು ಭೂಮಿ. ಅವನ ಸುತ್ತ ಇರುವ ನಾಲ್ಕು ನಾಯಿಗಳು ನಾಲ್ಕುವೇದಗಳು. ಅವನು ಯತಿಯಾಗಿದ್ದರಿಂದ ಭಸ್ಮಧಾರಿ. ಅವನ ಕೈಯಲ್ಲಿರುವ ಚಕ್ರವು ಅವನು ತ್ರಿಕಾಲಗಳನ್ನು ನಿಯಂತ್ರಿಸುವವನು. ಇದು ಪುರಾಣ ಪ್ರಸಿದ್ಧವಾಗಿರುವ ಕಥೆ.

ಬಾಬಾಬುಡನಗಿರಿಯ ಪರಿಸರದಲ್ಲಿ ಇರುವ ಆದಿಗದ್ದುಗೆ ದತ್ತಾತ್ರೇಯ ಮಠಗಳು ಪೀಠಗಳು ಇಂತಹ ಪುರಾಣದ ದತ್ತಾತ್ರೇಯನಿಗೆ ಸಂಬಂಧಿಸಿದವಲ್ಲ. ಹಾಗಿದ್ದರೆ ಅಲ್ಲಿ ದತ್ತನ ದೇವಸ್ಥಾನ ಇರುತ್ತಿತ್ತು. ಅವನ ಮೂರ್ತಿಯ ಆರಾಧನೆ ಇರುತ್ತಿತ್ತು. ಇಲ್ಲಿ ಇದ್ದುದು ದತ್ತಪಂಥಕ್ಕೆ ಸಂಬಂಧಿಸಿದುದು. ದತ್ತಪಂಥವು ಪುರಾಣದ ದತ್ತನು ಬೇರೆಬೇರೆ ಅವತಾರಗಳಲ್ಲಿ ಭೂಮಿಗೆ ಬರುತ್ತಾನೆ. ಈ ಅವತಾರಗಳು ದತ್ತಯತಿಗಳ ರೂಪದಲ್ಲಿರುತ್ತವೆ ಎಂದು ಭಾವಿಸುತ್ತದೆ. ಇದನ್ನು ಅರಿಯಲು ದತ್ತಪಂಥವು ಅವಧೂತ ಪಂಥವಾಗಿ ಹುಟ್ಟಿಬಂದ ಇತಿಹಾಸಕ್ಕೆ ಸಂಬಂಧಿಸಿದುದು. ೧೬ನೇ ಶತಮಾನದಲ್ಲಿ ಮುಖ್ಯವಾಗಿ ಮಹಾರಾಷ್ಟ್ರ ಕರ್ನಾಟಕಗಳಲ್ಲಿ ದತ್ತಪಂಥವು ಕಾಣಿಸಿಕೊಂಡಿತು. ದತ್ತಾವತಾರಿಗಳು ಎಂದು ಜನ ನಂಬಿದ ಅನೇಕ ಸಂತರು ಕಾಣಿಸಿಕೊಂಡರು. ಇವರು ನಮ್ಮ ಸಮಾಜದ ನಾನಾ ಜಾತಿ ಧರ್ಮಗಳಿಂದ ಬಂದವರು. ಮೂಲತಃ ಯೋಗಿಗಳಾದ ಇವರು ಸನ್ಯಾಸಿಗಳು. ಸಂಸಾರಿಗಳಿಗೆ ಇರುವ ಜಾತಿಮತಗಳ ಆಚರಣೆಗಳಿಗೆ ಹೊರತಾಗಿದ್ದ ಇವರನ್ನು ಅವಧೂತರು ಆರೂಢರು ಎನ್ನಬಹುದು. ಯೋಗ ಧ್ಯಾನ ದೀಕ್ಷೆ, ತತ್ವಬೋಧನೆ ಇವರ ಚಟುವಟಿಕೆಗಳಾಗಿದ್ದವು. ಕಳೆದ ೫ ಶತಮಾನಗಳಲ್ಲಿ ಬಂದ ಕೆಲವು ಪ್ರಮುಖ ದತ್ತಾವತಾರಿಗಳು ಹೀಗಿದ್ದಾರೆ.

ಶ್ರೀಪಾದವಲ್ಲಭಸ್ವಾಮಿ (೧೩೦೦) ಆಂಧ್ರದ ಪೀಠಾಪುರದಲ್ಲಿ ಹುಟ್ಟಿದ ಇವರ ಸಮಾಧಿ ರಾಯಚೂರು ತಾಲೂಕಿನ ಕೃಷ್ಣಾನದಿ ನಡುವಣ ಕುರುಮಗಡ್ಡೆಯಲ್ಲಿದೆ. ನರಸಿಂಹ ಸರಸ್ವತಿ (೧೩೭೮೧೪೫೮) ಬೀದರಿನ ಕಾರಂಜಾದಲ್ಲಿ ಹುಟ್ಟಿದ ಇವರು ಕೊಲ್ಲಾಪುರ ಜಿಲ್ಲೆ ನರಸೋಬಾವಾಡಿಯಲ್ಲಿ ಇದ್ದರು. ನಂತರ ಗುಲಬರ್ಗಾ ಜಿಲ್ಲೆಯ ಗಾಣಗಾಪುರದಲ್ಲಿ ಕೆಲಕಾಲ ನೆಲೆಸಿದ್ದರು. ಶ್ರೀಶೈಲದ ಕದಳಿವನದಲ್ಲಿ ದೇಹತ್ಯಾಗ ಮಾಡಿದರು. ಜನಾರ್ಧನಸ್ವಾಮಿ (೧೫೦೪೧೫೭೫) ಮರಾಠವಾಡದ ಚಾಲಿಸ್ ಗಾಂವದಲ್ಲಿ ಹುಟ್ಟಿದವರು. ವಾರಕರಿ ಪಂಥದ ಪ್ರಸಿದ್ಧ ಮರಾಠಿ ಸಂತ ಏಕನಾಥನಿಗೆ ದೀಕ್ಷಾಗುರು. ಇವರ ಸಮಾಧಿ ಮಹಾರಾಷ್ಟ್ರದ ದೌಲತಾಬಾದಿನಲ್ಲಿದೆ; ಏಕನಾಥ (೧೫೩೩೧೫೯೯) ಜನಾರ್ಧನಸ್ವಾಮಿಯವರ ಶಿಷ್ಯ; ಸಂತ ಮಾಣಿಕಪ್ರಭು (೧೮೦೭೧೮೬೭) ಇವರ ಸಮಾಧಿ ಬೀದರ್ ಜಿಲ್ಲೆ ಹುಮನಾಬಾದಿನ ಮಾಣಿಕನಗರದಲ್ಲಿದೆ; ಸ್ವಾಮಿಸಮರ್ಥ (೧೮೭೮) ಸಮಾಧಿ ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟೆಯಲ್ಲಿದೆ; ನೂರಿಮಹಾರಾಜ (೧೮೩೮೧೯೨೩) ಅಹಮದಾಬಾದಿನಲ್ಲಿ ಹುಟ್ಟಿದ ನೂರಿಯವರ ಸಮಾಧಿ ಮುಂಬೈ ಸಮೀಪದ ಥಾಣೆಯಲ್ಲಿದೆ. ಶ್ರೀಪಂಥ ಮಹಾರಾಜ (೧೮೫೪೧೯೧೪) ಯವರ ಸಮಾಧಿ ಬೆಳಗಾವಿ ತಾಲೂಕು ಬಾಳೆಕುದ್ರಿಯಲ್ಲಿದೆ ; ಟೇಂಬೆಮಹಾರಾಜ ಎಂದು ಖ್ಯಾತರಾಗಿದ್ದ ವಾಸುದೇವಾನಂದ ಸರಸ್ವತಿ (೧೮೬೫) ಮಹಾರಾಷ್ಟ್ರದ ಸಾವಂತವಾಡಿಯ ಮೂಲದ ಇವರು ರಾಜಮಹೇಂದ್ರಿಯಲ್ಲಿ ಕೆಲಕಾಲ ಇದ್ದರು. ಸಮಾಧಿ ನರ್ಮದಾನದಿ ತೀರದ ಗರುಡೇಶ್ವರದಲ್ಲಿದೆ; ಸಾಯಿಬಾಬಾ (೧೮೬೫೧೯೧೮) ಸಮಾಧಿಯು ನಾಸಿಕ ಸಮೀಪದ ಶಿರಡಿಯಲ್ಲಿದೆ.

ಮೇಲಿನ ಪಟ್ಟಿ ಗಮನಿಸಿದರೆ ತಿಳಿಯುವ ವಿಚಾರವಿದುಃ.

೧. ಈ ಸಂತರು ನಮ್ಮ ಸಮಾಜದ ನಾನಾ ಜಾತಿ ಧರ್ಮಗಳಿಗೆ ಸೇರಿದವರು. ಕನ್ನಡಿಗರಾಗಿದ್ದ ಮಾಣಿಕಪ್ರಭು (೧೯೩೪) ಹುಟ್ಟಿನಿಂದ ಕುರುಬರಾಗಿದ್ದವರು. ಸಾಯಿಬಾಬಾ ಹಾಗೂ ನೂರಿಮಹಾರಾಜರು ಹುಟ್ಟಿನಿಂದ ಮುಸ್ಲಿಮರಾಗಿದ್ದರು. ಶ್ರೀಪಾದವಲ್ಲಭ, ನರಸಿಂಹ ಸರಸ್ವತಿ, ಟೇಂಬೆ ಮಹಾರಾಜರು ಬ್ರಾಹ್ಮಣರಾಗಿದ್ದರು. ಜನ ಇವರ ಪೂರ್ವಾಶ್ರಮದ ಜಾತಿಮತ ಹುಡುಕದೆ ನಡೆದುಕೊಂಡರು. ಹುಟ್ಟಿನಿಂದ ಮುಸ್ಲಿಮರಾಗಿದ್ದ ಶಿರಡಿಯ ಸಾಯಿಬಾಬಾಗೆ ಮಹಾರಾಷ್ಟ್ರದ ತುಂಬ ಮುಸ್ಲಿಮೇತರ ಅನುಯಾಯಿಗಳಿದ್ದರು. ಈಗಲೂ ಅದೊಂದು ಸರ್ವಧರ್ಮದ ಜನರ ತಾಣ. ದತ್ತಪಂಥವು ನಮ್ಮ ಸಮಾಜದಲ್ಲಿ ಜನಪ್ರಿಯವಾಗಲು ಒಂದು ಕಾರಣ ಅದು ಜಾತಿಭೇದವನ್ನು ನಿರಾಕರಿಸುವ ಜಾತ್ಯತೀತ ಪಂಥವಾಗಿದ್ದುದು. ತನ್ನ ಕಾಲದ ಸನಾತನವಾದಿಗಳಿಗೆ (ಈಗಿನ ಹಿಂದುತ್ವವಾದಿಗಳ ಪೂರ್ವಜರಿಗೆ) ವಿರುದ್ಧವಾಗಿದ್ದುದು.

ಭಾರತದಲ್ಲಿ ಅನೇಕ ಕಡೆ ದತ್ತಪಂಥಿಯರ ಸಮಾಧಿ ಗದ್ದುಗೆ ಪೀಠಗಳಿವೆ. ಅವುಗಳಲ್ಲಿ ಮಹಾರಾಷ್ಟ್ರದ ಶಿರಡಿ, ನರಸೋಬಾವಾಡಿ, ದೌಲತಾಬಾದು, ಅಕ್ಕಲಕೋಟೆ, ಆಂಧ್ರದ ರಾಜಮಹೇಂದ್ರಿ, ಶ್ರೀಶೈಲಂ, ಮಧ್ಯಪ್ರದೇಶದ ಉಜ್ಜೈನಿ, ಗ್ವಾಲಿಯರ್, ರಾಜಸ್ಥಾನದ ಅಬುಪರ್ವತ, ಗಿರಿನಾರ ಇವು ಮುಖ್ಯವಾದವು. ಕರ್ನಾಟಕದಲ್ಲಿ ದತ್ತಪಂಥದ ಮಠ ಪೀಠಗಳಿರುವ ಜಾಗಗಳೆಂದರೆ ಬೀದರ ಜಿಲ್ಲೆಯ ಬಸವಕಲ್ಯಾಣ, ಮಾಣಿಕನಗರ; ಗುಲಬರ್ಗಾ ಜಿಲ್ಲೆಯ ಗಾಣಗಾಪುರ; ರಾಯಚೂರು ಜಿಲ್ಲೆಯ ಕುರುಮಗಡ್ಡೆ; ದತ್ತಪಂಥಿಗಳು ಹುಟ್ಟಿದ್ದು ಒಂದೆಡೆ. ಬದುಕಿ ಜನಪ್ರಿಯರಾಗಿದ್ದು ಇನ್ನೊಂದೆಡೆ. ದೇಹಬಿಟ್ಟು ಸಮಾಧಿಯಾಗಿದ್ದು ಮತ್ತೊಂದೆಡೆ. ಇವರ ಸಮಾಧಿಯಾದ ಜಾಗಗಳು ಮಾತ್ರವಲ್ಲ, ತಾತ್ಕಾಲಿಕವಾಗಿ ನೆಲೆನಿಂತ ಜಾಗಗಳೂ ಆರಾಧನೆಯ ಸ್ಥಳಗಳಾಗಿವೆ.

ಪ್ರಸಿದ್ಧ ದತ್ತಕ್ಷೇತ್ರಗಳಾಗಿರುವ ನರಸೋಬಾವಾಡಿ ಹಾಗೂ ಗಾಣಗಾಪುರಗಳು ನರಸಿಂಹ ಸರಸ್ವತಿ ಕೆಲಕಾಲ ನೆಲೆಸಿದ್ದ ಜಾಗಗಳು. ಅಲ್ಲಿ ಅವರ ಪಾದುಕೆಗಳಿವೆ. ಅವರು ದೇಹತ್ಯಾಗ ಮಾಡಿದ ಶ್ರೀಶೈಲದ ಕದಳಿವನದಲ್ಲಿ ಅವರ ಸಮಾಧಿ ಎನ್ನುವಂತಹ ಯಾವ ಸ್ಮಾರಕವೂ ಇಲ್ಲ. ಗುರುವಿನ ಸಮಾಧಿ ಪಾದುಕೆ ಪೀಠಗಳಿಗೆ ನಡೆದುಕೊಳ್ಳುವುದು ಅವಧೂತ, ಸೂಫಿ, ನಾಥ ಹೀಗೆ ಎಲ್ಲ ಗುರುಪಂಥಗಳ ಲಕ್ಷಣ. ಸಂಚಾರಿಗಳಾಗಿದ್ದ ಈ ದತ್ತಾವತಾರಿ ಸಂತರು ಆಸುಪಾಸಿನಲ್ಲಿ ದತ್ತಾತ್ರೇಯ ಆದಿಗದ್ದುಗೆಗಳಾದ ಫಲಾಹಾರಮಠ ಹಾಗೂ ಬಿಸಗ್ನಿಮಠಗಳಿಗೆ ಬಂದು ಹೋಗಿ ಮಾಡುತ್ತಿರಬಹುದು. ಬಾಬಾಬುಡನಗಿರಿಯ ಗುಹೆಗಳಿಗೆ ಬಂದು ಹೋಗುತ್ತಿರಬಹುದು. ಇಲ್ಲಿದ್ದ ಸೂಫಿಗಳ ಜತೆಯಲ್ಲಿ ಕೆಲಕಾಲ ನೆಲೆಸಿರಬೇಕು. ಅವನ ಗೆಳೆತನದ ಸಂಕೇತವಾಗಿ ಇಲ್ಲಿನ ಪಾದುಕೆಗಳು ಇರಬಹುದು. ಆದರೆ ನಿರ್ದಿಷ್ಟ ಹೆಸರಿನ ದತ್ತಯತಿ ಇಲ್ಲಿದ್ದ ಬಗ್ಗೆ ಈಗಲೂ ತಿಳಿದಿಲ್ಲ. ಎಂತಲೆ ಇಲ್ಲಿ ಗಾಣಗಾಪುರು ನರಸೋಬವಾಡಿಯಂತೆ ದತ್ತಯತಿಯ ಹೆಸರಲ್ಲಿ ಯಾವುದೇ ಕಾರ್ಯಕ್ರಮಗಳು ನಡೆಯುತ್ತಿದ್ದ ಬಗ್ಗೆ ದಾಖಲೆಗಳಿಲ್ಲ.

ಸೂಫಿ ದತ್ತ ನಾಥ ಪಂಥಗಳ ಕುರಿತು

ಬಾಬಾಬುಡನಗಿರಿಯಲ್ಲಿರುವ ಸೂಫಿಪರಂಪರೆಯು ದತ್ತಪಂಥ ಹಾಗೂ ನಾಥಪಂಥಗಳ ಸಹವಾಸದಲ್ಲಿ ತನ್ನ ವಿಶಿಷ್ಟ ಸ್ವರೂಪವನ್ನು ಪಡೆಯಿತು ಎಂದು ಭಾವಿಸಲಾಗಿದೆ. ಆದರೆ ಸಂಘಪರಿವಾರವು ತಿಳಿಯುವಂತೆ ಈ ಪಂಥಗಳಾದರೂ ಹಿಂದೂ ಮುಸ್ಲಿಂ ಎಂಬ ಧರ್ಮಗಳಲ್ಲ. ಅವು ಗುರುಪಂಥಗಳಾಗಿದ್ದವು ಮತ್ತು ಅವು ಪರಸ್ಪರ ಕೊಡುಕೊಳೆ ಮಾಡುತ್ತಿದವು. ಇದರ ಬಗ್ಗೆ ಇಬ್ಬರು ವಿದ್ವಾಂಸರು ಚಿಂತನೆ ಮಾಡಿದ್ದಾರೆ. ಕನ್ನಡದ ಸಂಶೋಧಕರಾದ ಶಂಬಾ ಜೋಶಿಯವರು ಒಬ್ಬರು. ಮರಾಠಿಯ ರಾ.ಚಿಂ. ಢೇರೆ ಇನ್ನೊಬ್ಬರು. ಇವರ ಬರೆಹವನ್ನು ಸಂಘಪರಿವಾರದವರು ಓದಬೇಕು. ಢೇರೆಯವರ ಚಿಂತನೆಗಳು ಅವರ ಪ್ರಸಿದ್ಧ ನಾಥ ಸಂಪ್ರದಾಯ ಚಾ ಇತಿಹಾಸ್, ದತ್ತಸಂಪ್ರದಾಯ ಚಾ ಇತಿಹಾಸ್ ಕೃತಿಗಳಲ್ಲಿ ಪ್ರಕಟವಾಗಿವೆ. ಶಂಬಾ ಅವರ ಶೋಧಗಳು 'ಎಡೆಗಳು ಹೇಳುವ ಕಂನಾಡ ಕಥೆ' (೧೯೪೭) 'ಮರ್‍ಹಾಠಿ ಸಂಸ್ಕೃತಿ' (೧೯೫೭) 'ಹಾಲುಮತ ದರ್ಶನ' (೧೯೬೦) ಎಂಬ ಗ್ರಂಥಗಳಲ್ಲಿ ಪ್ರಕಟವಾಗಿವೆ. ಶಂಬಾ ತಮ್ಮ ಕೃತಿಗಳಲ್ಲಿ ಎರಡು ಮುಖ್ಯ ಸಂಗತಿಗಳನ್ನು ಪ್ರತಿಪಾದಿಸುತ್ತಾರೆ. ಮೊದಲನೆಯದಾಗಿ ದತ್ತಪಂಥವು ಬೌದ್ಧ ಹಾಗೂ ನಾಥಸಂಪ್ರದಾಯ ಮೂಲದಿಂದ ಹುಟ್ಟಿದ ಅವೈದಿಕ ಯತಿ ಸಂಪ್ರದಾಯ. ಎರಡನೆಯದಾಗಿ ಈ ನಾಥ ಹಾಗೂ ದತ್ತಪಂಥಗಳಲ್ಲಿ ಸೂಫಿಗಳ ಹಾಗೂ ಮುಸ್ಲಿಮರ ಪ್ರವೇಶವಾಯಿತು. ಮೂರನೆಯದಾಗಿ ಬಾಬಾಬುಡನ ಗಿರಿಯ ವಿಶಿಷ್ಟತೆಯೇನು. ಅವರ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು:

೧. ಅನಸೂಯಾ ಪುತ್ರ ಅತ್ರೇಯದತ್ತನಿಂದ ವೈದಿಕ ಮಾರ್ಗದಲ್ಲಿ ಅಂತರ್ಗತವಾದ ಗುರುಮಾರ್ಗ ಪ್ರಾರಂಭವಾಗಿರಬೇಕು. ಈ ದತ್ತನ ತಾಯಿಯ ಹೆಸರು ಅನಸೂಯಾ ಎಂದಿರುವದು ಅರ್ಥಪೂರ್ಣವಾಗಿದೆ. ಜೈನ ಮತ್ತು ಬೌದ್ಧ ಪರಂಪರೆಯ ಸತ್ವವನ್ನು ಅರಗಿಸಿಕೊಂಡು ವೈದಿಕಪಂಥವನ್ನು ಎತ್ತಿಹಿಡಿಯುವ ಗುರುದತ್ತನು ಅಸೂಯಾರಹಿತ ತಾಯಿಯ ಹೊಟ್ಟೆಯಲ್ಲಿ ಹುಟ್ಟಿಬಂದ. ಅನಸೂಯೆಯ ಈ ಪುತ್ರ ಗುರುಕೃಪಾ 'ದತ್ತ'ನಾಗಿದ್ದಾನೆ ಎಂದು ಗುರುಚರಿತ್ರೆಯಲ್ಲಿಯ ಅವನ ಜನ್ಮಕಥೆಯಿಂದ ತಿಳಿದು ಬರುತ್ತದೆ. ಅತ್ರೇಯದತ್ತ ಮಾರ್ಗವು ನಾಥಪಂಥದಂತೆಯೇ ಸರ್ವಸಂಗ್ರಾಹಕ ವೃತ್ತಿಯದಾಗಿದೆ. ಮುಸಲ್ಮಾನರಲ್ಲಿ ದತ್ತಭಕ್ತರಿದ್ದಾರೆ. ಬಾಬಾಬುಡನಗಿರಿಗೆ ಹಿಂದೂ ಮುಸಲ್ಮಾನರಿಬ್ಬರೂ ಯಾತ್ರೆಗೆ ಹೋಗುತ್ತಾರೆ. (ಮರ್‍ಹಾಠಿ ಸಂಸ್ಕೃತಿ ಪು.೨೦೪)

೨. ಎಲ್ಲ ಜಾತಿ ಮತಗಳನ್ನು ತಮ್ಮ ಒಡಲಲ್ಲಿ ಸೇರಿಸಿಕೊಂಡು ಅಖಂಡ ಭಾರತದಲ್ಲಿ ಒಂದು ಹೊಸಪಂಥವನ್ನು ನಿರ್ಮಾಣ ಮಾಡುವ ಪ್ರಯತ್ನವನ್ನು ನಾಥಪಂಥದವರು ಮಾಡಿದರು. ಇದರ ಬುನಾದಿಯನ್ನು ತಮಗರಿವಿಲ್ಲದೆಯೇ ಮತ್ಸ್ಯೇಂದ್ರ ಗೋರಖರು ೧೦೧೧ನೆಯ ಶತಮಾನಗಳಲ್ಲಿ ಹಾಕಿದ್ದರೆಂಬುದನ್ನು ಮರೆಯುವಂತಿಲ್ಲ. ಗೋರಖನ ಶಿಷ್ಯಪರಂಪರೆಯಲ್ಲಿ ಹೊರಗಿನಿಂದ ಬಂದಿದ್ದ ಅಹಿಂದೂಗಳ ಭರತಿಯೂ ಸಾಕಷ್ಟಾಗಿತ್ತು. ಮುಸಲ್ಮಾನ ದತ್ತಭಕ್ತರು ಇಂದಿಗೂ ದೊರೆಯುತ್ತಾರೆ. ಶ್ರೀಕೃಷ್ಣನ ಪ್ರೇಮದಿಂದ ಹುಚ್ಚರಾಗಿ ಹಗಲುರಾತ್ರಿ ಹಾಡುತ್ತ ತಿರುಗುವ ಮುಸಲ್ಮಾನರೂ ಕಡಿಮೆಯಿಲ್ಲ. ರಾಮನಾಮದ ಮಹಿಮೆಯನ್ನು ಜಗತ್ತಿಗೆ ಸಾರುವ ಕಬೀರ ಮುಸಲ್ಮಾನನಾಗಿದ್ದ. ವಾರಕರೀ ಸಂಪ್ರದಾಯದಲ್ಲಿ ಮುಸಲ್ಮಾನ ಸಂತರಿಲ್ಲವೆಂದು ಹೇಳಲು ಬರುವಂತಿಲ್ಲ. ದೇವೀದಾಸಕೃತ 'ಸಂತಮಾಲಿಕಾ ಸ್ತೋತ್ರ'ದಲ್ಲಿ ಮುಸಲ್ಮಾನ ಸಂತರ ಹೆಸರುಗಳಿವೆ.

ಸಂಚಾರಿಗಳಾಗಿದ್ದ ಈ ದತ್ತಾವತಾರಿ ಸಂತರು ಆಸುಪಾಸಿನಲ್ಲಿ ದತ್ತಾತ್ರೇಯ ಆದಿಗದ್ದುಗೆಗಳಾದ ಫಲಾಹಾರಮಠ ಹಾಗೂ ಬಿಸಗ್ನಿಮಠಗಳಿಗೆ ಬಂದು ಹೋಗಿ ಮಾಡುತ್ತಿರಬಹುದು. ಬಾಬಾಬುಡನಗಿರಿಯ ಗುಹೆಗಳಿಗೆ ಬಂದು ಹೋಗುತ್ತಿರಬಹುದು. ಇಲ್ಲಿದ್ದ ಸೂಫಿಗಳ ಜತೆಯಲ್ಲಿ ಕೆಲಕಾಲ ನೆಲೆಸಿರಬೇಕು. ಅವನ ಗೆಳೆತನದ ಸಂಕೇತವಾಗಿ ಇಲ್ಲಿನ ಪಾದುಕೆಗಳು ಇರಬಹುದು. ಆದರೆ ನಿರ್ದಿಷ್ಟ ಹೆಸರಿನ ದತ್ತಯತಿ ಇಲ್ಲಿದ್ದ ಬಗ್ಗೆ ಈಗಲೂ ತಿಳಿದಿಲ್ಲ.

ಮಹಾಯೋಗಿ ಸಂತನಾಗಿದ್ದ ಮುಂತೋಜಿ ಬಹಮನೀ ರಾಜವಂಶೀಯ ಮುಸಲ್ಮಾನನಾಗಿದ್ದ. ಗಹಿನೀನಾಥನ ಸಮಾಧಿಗೆ ಹಿಂದೂ ಮುಸಲ್ಮಾನರಿಬ್ಬರೂ ನಡೆದುಕೊಳ್ಳುತ್ತಾರೆ....ರಾಜಕೀಯ ರಣರಂಗದಲ್ಲಿಯ ರಾಗದ್ವೇಷಗಳ ದೃಷ್ಟಿಯಿಂದ ನೋಡುವವರಿಗೆ ಇದರ ಅರ್ಥ ತಿಳಿಯುವುದಿಲ್ಲ. ಗುರುಮಾರ್ಗದಲ್ಲಿ ಹಿಂದೂ ಮುಸಲ್ಮಾನರ ಸಂಗಮ ಅವರಿಗೆ ವಿಚಿತ್ರವಾಗಿ ಕಾಣುತ್ತದೆ. ಇದೆಲ್ಲ ಮುಸಲ್ಮಾನೀಯವಾಗುವ ಮನೋವೃತ್ತಿ ಎಂದು ಅವರು ಸಾಮಾನ್ಯವಾಗಿ ಆರೋಪಿಸುತ್ತಾರೆ. ಆದರೆ ಇಂಥ ದೃಷ್ಟಿಕೋನದಿಂದ ನಮ್ಮ ಸಂಸ್ಕೃತಿಯಲ್ಲಿಯ ಸಮಸ್ಯೆಗಳು ಅರ್ಥವಾಗುವುದಿಲ್ಲ" (ಮರ್‍ಹಾಠಿ ಸಂಸ್ಕೃತಿ, ಪು.೨೧೩-೨೧೪)

ಇಲ್ಲಿ ದತ್ತಪಂಥವು 'ಸರ್ವಸಂಗ್ರಾಹಕ ವೃತ್ತಿಯದು' ಎಂಬ ಮಾತು ಗಮನಾರ್ಹ. ದತ್ತಪಂಥವು ಅದು ತನ್ನ ಜತೆಯಿದ್ದ ನಾಥ ಸೂಫಿ ವಾರಕರಿ ಮಹಾನುಭಾವ ಮುಂತಾದ ಎಲ್ಲ ಯೌಗಿಕ ಪಂಥಗಳಿಂದ ತತ್ವದರ್ಶನವನ್ನು, ಗುರುಗಳನ್ನು ಶಿಷ್ಯರನ್ನು ಭಕ್ತರನ್ನು ಸ್ವೀಕರಿಸಿತು. ಬಾಬಾಬುಡನಗಿರಿಯಲ್ಲಿ ಇರುವುದು ಇಂತಹ ಶತಮಾನಗಳ ಸ್ವೀಕಾರದ ಸಂಕೇತಗಳು. ಎಂತಲೇ ಇಲ್ಲಿಗೆ ಬರುವ ಭಕ್ತರು ಇದು ಯಾವ ಧರ್ಮಕ್ಕೆ ಸೇರಿದ್ದು ಎಂಬ ಪ್ರಶ್ನೆಯನ್ನೇ ಎತ್ತಲಿಲ್ಲ. ಮಿಲನದ ಸಂಸ್ಕೃತಿಗಳ ಗುಣವೇ ಹೀಗೆ. ಈಗಲೂ ಶಿರಡಿಯ ಸಾಯಿಬಾಬಾರ ಧರ್ಮ ಯಾವುದಿತ್ತು ಎಂಬ ಸಮಸ್ಯೆ ಕೆಲವರಿಗೆ ಬಗೆಹರಿದಿಲ್ಲ. ವ್ಯಂಗ್ಯವೆಂದರೆ ಜಾತಿಮತ ಪಂಥಗಳನ್ನು ಮೀರಿಹೋದ ಸಂತರನ್ನು ನಾವೀಗ ಮತ್ತೆ ಜಾತಿಮತಗಳ ಚೌಕಟ್ಟಿನಲ್ಲಿ ಬಂಧಿಸುತ್ತಿದ್ದೇವೆ. ಇವರು ಯಾವಾಗ ಹುಟ್ಟಿದರು ಯಾವ ಧರ್ಮಕ್ಕೆ ಸೇರಿದ್ದರು ಎಂದು ಕೋರ್ಟಿನಲ್ಲಿ ಕೇಸು ಗೆಲ್ಲುವವರು ಸಾಕ್ಷಿ ಆಧಾರ ಹುಡುಕುತ್ತಿದ್ದೇವೆ. ನಮ್ಮ ಸಂಸ್ಕೃತಿಯ ಸತ್ಯಗಳಿಗೆ ನಾವೇ ಬಾಹಿರರಂತೆ ವಿವಾದ ಮಾಡಿಕೊಂಡಿದ್ದೇವೆ. ಈ ಸ್ಥಿತಿಗೆ ರಾಜಕಾರಣವು ನಮ್ಮನ್ನು ಇಳಿಸಿಬಿಟ್ಟಿದೆ.

ಸಂಪ್ರದಾಯವಾದಿ ದತ್ತಪಂಥ ಶಾಖೆ

ಶಂಬಾ ಪ್ರಕಾರ ದತ್ತಮಾರ್ಗದಲ್ಲಿ ಎರಡು ಶಾಖೆಗಳಿವೆ. ಒಂದು: ಗಾಣಗಾಪುರದ ನರಸಿಂಹ ಸರಸ್ವತಿಯಿಂದ ಶುರುವಾಗುವ ಕರ್ನಾಟಕದ ದತ್ತಮಾರ್ಗ. ಎರಡು: ಜನಾರ್ಧನಸ್ವಾಮಿಯಿಂದ ಶುರುವಾಗುವ ಮರಾಠಿ ದತ್ತಮಾರ್ಗ. ಇವುಗಳಲ್ಲಿ ಕುರುಮಗಡ್ಡೆ ಶ್ರೀಪಾದವಲ್ಲಭ ಹಾಗೂ ಗಾಣಗಾಪುರ ನರಸಿಂಹಸರಸ್ವತಿಯರ ದತ್ತ ಮಾರ್ಗವು ಕೊಂಚ ಸಂಪ್ರದಾಯವಾದಿ. ಬ್ರಾಹ್ಮಣಿಕೆ ಮತ್ತು ಮಡಿವಂತಿಕೆ ಪಾಲಿಸುವಂತಹದು. ಈಗಲೂ ಇಲ್ಲಿ ಬ್ರಾಹ್ಮಣಿಕೆಯ ಮೇಲುಗೈಯನ್ನು ಕಾಣಬಹುದು. ನರಸಿಂಹ ದತ್ತ ಮಾರ್ಗವು, ವೈದಿಕ ಪರಂಪರೆಯ ರಕ್ಷಣೆಗಾಗಿ ಗುರುಮಾರ್ಗದಲ್ಲೆ ಹುಟ್ಟಿದ ಒಂದು ಉಪಾಯವಾಗಿತ್ತು ಎಂದು ಶಂಬಾ ವಿಶ್ಲೇಷಿಸುತ್ತಾರೆ.

ನರಸಿಂಹ ಸರಸ್ವತಿಯವರ ಮೇಲೆ ಹುಟ್ಟಿರುವ ಮರಾಠಿ 'ಗುರುಚರಿತ್ರೆ'ಗಳನ್ನು ಓದಿದರಂತೂ, ಅವು ಬ್ರಾಹ್ಮಣ ಶ್ರೇಷ್ಠತೆಯನ್ನು ವೈಭವೀಕರಿಸುತ್ತವೆ. ಶೂದ್ರರ ದಲಿತರ ಮುಸಲ್ಮಾನರ ಕೆಳತನ ಸ್ಥಾಪಿಸುತ್ತವೆ. ಇದು ದತ್ತಪಂಥವನ್ನು ಬ್ರಾಹ್ಮಣೀಕರಿಸುವ ಮತೀಯ ಚರಿತ್ರಕಾರರ ಸಂಕುಚಿತ ಬುದ್ಧಿಯ ಪರಿಣಾಮ. ಗೋಬ್ರಾಹ್ಮಣರ ರಕ್ಷಣೆಯನ್ನು ಪ್ರತಿಪಾದಿಸಿದ ಶಿವಾಜಿಯ ಗುರು ಸಮರ್ಥ

ರಾಮದಾಸರೂ ಸನಾತನವಾದಿ ಮನಸ್ಸಿನ ದತ್ತೋಪಾಸಕರಾಗಿದ್ದರು. ಅದರಲ್ಲೂ ಟೇಂಬೆ ಮಹಾರಾಜ ಎಂದು ಹೆಸರಾಗಿದ್ದ ವಾಸುದೇವಾನಂದ ಸರಸ್ವತಿಯವರು ಬಹಳ ಮಡಿವಂತರಾಗಿದ್ದರು."ಶೂದ್ರ ನೆರಳಿನಿಂದಲೂ ಅವರಿಗೆ ಮೈಲಿಗೆಯಾಗುತ್ತಿತ್ತು. ಅವರ ಮಡಿವಂತಿಕೆ ಶುದ್ಧ ಸನಾತನಿಗಳಿಗೂ ಆಶ್ಚರ್ಯ ಹುಟ್ಟಿಸುತ್ತಿತ್ತು" ಎಂದು ಶಂಬಾ ವಿವರಿಸುತ್ತಾರೆ.

ಆದರೂ ಸಾಯಿಬಾಬಾರ ಸಮಕಾಲೀನರಾದ ಟೇಂಬೆಸ್ವಾಮಿಯವರು ಸಾಯಿಬಾಬಾ ಅವರನ್ನು'ನನ್ನ ಸೋದರ' ಎಂದು ಕರೆಯುತ್ತಿದ್ದರು. ಯಾರಿಗೂ ನಮಸ್ಕಾರ ಮಾಡದ ಟೇಂಬೆಸ್ವಾಮಿ ಸಾಯಿಬಾಬಾರ ಹೆಸರು ಕೇಳಿದೊಡನೆ, ಅಲ್ಲಿಯೇ ನಮಸ್ಕಾರ ಮಾಡುತ್ತಿದ್ದರು ಎಂದು ಸಾಯಿಬಾಬಾರ ಸಂಗಾತಿಯಾಗಿದ್ದ ಹೇಮಾಡ ಪಂತರು ದಾಖಲಿಸುತ್ತಾರೆ. (ಶ್ರೀಸಾಯಿ ಸಚ್ಚರಿತೆ ಪು. ೨೫೧) ಶಂಬಾ ಹೇಳುತ್ತಾರೆ. 'ಇಂಥ ಮಡಿವಂತಿಕೆಯ ದತ್ತಪಂಥದ ಇತಿಹಾಸದಲ್ಲಿ ಕೂಡ ಮುಸಲ್ಮಾನ ಶಿಷ್ಯರು ದೊರೆಯುತ್ತಾರೆ. ನೃಸಿಂಹ ಸರಸ್ವತಿಯು ವಾದಕ್ಕೆಂದು ಬಂದ ಬ್ರಾಹ್ಮಣನನ್ನು ಹೊಲೆಯನಿಂದ ಸೋಲಿಸಿದನು. ಮುಸಲ್ಮಾನ ಬಾದಶಹನರೋಗವನ್ನು ಗುಣಪಡಿಸಿ ಅವನನ್ನು ಶಿಷ್ಯನನ್ನಾಗಿ ಮಾಡಿಕೊಂಡನು" (ಮರ್ಹಾಠಿ ಸಂಸ್ಕೃತಿ, ಪು.೨೨೩) ಇದಕ್ಕೆಲ್ಲ ಕಾರಣ ದತ್ತಪಂಥದಲ್ಲಿ ಜಾತ್ಯತೀತವಾದ ಒಂದು ಎಳೆ ಇದ್ದಿದ್ದೆ ಇರಬೇಕು. ದತ್ತಪಂಥಿಗಳಲ್ಲಿ ಖ್ಯಾತರಾದ ನರಸಿಂಹ ಸರಸ್ವತಿಯವರ ಕಾಲವು ಕರ್ನಾಟಕದಲ್ಲಿ ಸೂಫಿಗಳು ಕ್ರಿಯಾಶೀಲವಾಗಿದ್ದ ಕಾಲ; ಬಂದೇನವಾಜರು ಗುಲಬರ್ಗೆಯನ್ನು ಸೂಫಿ ಜ್ಞಾನಾರ್ಜನೆಯ ಆಕರ್ಷಕ ಕೇಂದ್ರವಾಗಿಸಿದ್ದ ಕಾಲ ; ಅಹಮದ್ ಶಾ ಬಹಮನಿ (೧೧೪೨೩೬) ಶಾಆಲಮಪ್ರಭು ಅನಿಸಿಕೊಂಡು ಯೋಗಪಂಥದ ದೀಕ್ಷೆಯನ್ನು ತೆಗೆದು ಕೊಂಡಿದ್ದ ಆಳಿದ ಕಾಲ. ಇಂತಹ ಪರಿಸರದಲ್ಲಿ ಬದುಕಿದ ನರಸಿಂಹಸರಸ್ವತಿ ಬಂದೇನವಾಜರಷ್ಟೆ ರಾಜಕೀಯ ಬೆಂಬಲ ಪಡೆದ ಯೋಗಿಯಾಗಿದ್ದರು. ಗಾಣಗಾಪುರದಲ್ಲಿದ್ದಾಗ ಬಹಮನಿ ಸುಲ್ತಾನನ ರೋಗ ಗುಣಪಡಿಸಿ, ಅವನನ್ನು ಶಿಷ್ಯನಾಗಿಸಿಕೊಳ್ಳುವುದು ಹಾಗೂ ದಲಿತನ ಬಾಯಿಂದ ವೇದಹೇಳಿಸಿ ಗರ್ವಿಷ್ಠ ಬ್ರಾಹ್ಮಣನನ್ನು ಸೋಲಿಸುವ ಪವಾಡಗಳು ಮಾರ್ಮಿಕ ಸತ್ಯವನ್ನು ಸೂಚಿಸುತ್ತಿವೆ.

ಬಿಜಾಪುರದಲ್ಲಿ ಆದಿಲಶಾಹಿಗಳ ಅರಮನೆಗೆ ಹೊಂದಿಕೊಂಡು ಕೋಟೆಯ ಒಳಗಡೆ (ಬಿಜಾಪುರದ ಬಸ್ಸುನಿಲ್ದಾಣದ ಎದುರು) ನರಸಿಂಹದತ್ತ ಮಂದಿರವಿದೆ. ಗಾಣಗಾಪುರದ ನರಸಿಂಹಸರಸ್ವತಿಗೆ ಬಿಜಾಪುರದ ಆದಿಲಶಾಹಿದೊರೆಗಳು ಅಪಾರ ಗೌರವ ತೋರಿಸಿದರು. ಗಾಣಗಾಪುರದ ದತ್ತಪೀಠಕ್ಕೆ ಆದಿಲಶಾಹಿಗಳು ಇನಾಮು ನೀಡಿದ ಬಗ್ಗೆ ಎಲ್ಲ ಚರಿತ್ರಕಾರರು ದಾಖಲಿಸುತ್ತಾರೆ. ಸುಲ್ತಾನನು ನರಸಿಂಹದತ್ತರಿಗೆ ಭಕ್ತನಾದನು ಹಾಗೂ ಜಾರವಾಡ ಗೌರವಾಡ ಎಂಬ ಎರಡು ಹಳ್ಳಿಗಳನ್ನು ಇನಾಮಾಗಿ ಕೊಟ್ಟನು ಎಂದು ನರಸಿಂಹದತ್ತ ಮಂದಿರದ ಆಡಳಿತಮಂಡಳಿ ಬೋರ್ಡಿನಲ್ಲಿ ಬರೆದು ಪ್ರದರ್ಶಿಸಿದೆ.

ನಾಥದತ್ತಪಂಥಕ್ಕೆ ಸೇರಿದ ಬಿಜಾಪುರ ಜಿಲ್ಲೆ ಸಿಂಧಗಿಯ ಜಕ್ಕಪ್ಪಯ್ಯನ ಮಠಕ್ಕೆ ಸುಲ್ತಾನರು ಸನದುಗಳನ್ನು ಕೊಟ್ಟರು. ಈ ಸನದುಗಳ ಭಾಷಾಶೈಲಿ ಗಮನಾರ್ಹ. ೧೬೧೬ರ ಒಂದು ಸನದು "ಬ್ರಾಹ್ಮಣ ಫಕೀರರಾದ ಜಕ್ಕಪ್ಪಯ್ಯನವರಿಗೆ, ಆದರಪೂರ್ವಕವಾಗಿ

ಆದಿಲಶಾಹಿ ದೊರೆಗಳ ಮೇಲೆ ನರಸಿಂಹ ಸರಸ್ವತಿಯವರ ಪ್ರಭಾವ ಹೇಗಿತ್ತೆಂದರೆ, ಯೂಸುಫ್ ಆದಿಲಶಾಹಿಯು ಅರಮನೆ ಆವರಣದಲ್ಲೇ ನರಸಿಂಹದತ್ತ ಮಂದಿರ ಕಟ್ಟಿಸಿದ. ಸಂಘುಪರಿವಾರವು ಹೇಳುವಂತೆ ಹಿಂದಿನ ಆಡಳಿತಗಾರರು ಕೇವಲ ದ್ವೇಷಮಾಡಿಕೊಂಡು ಇರಲಿಲ್ಲ. ಸರ್ವಧರ್ಮದ ಜನರು ನಡೆದುಕೊಳ್ಳುವ ಜಾಗಗಳನ್ನು ಗೌರವಿಸುತ್ತಿದ್ದರು. ಇದೆಲ್ಲ ಸಂಘುಪರಿವಾರಕ್ಕೆ ಗೊತ್ತಿದೆ. ಆದರೆ ಅದು ಇಂತಹ ವಿವರಗಳನ್ನು ತನ್ನ ದ್ವೇಷದ ರಾಜಕಾರಣಕ್ಕೆ ಅಡ್ಡಿಯಾಗುತ್ತವೆ ಎಂದು ಮುಚ್ಚಿಡುತ್ತದೆ.

ನಮಿಸುತ್ತ.." ಎಂದು ಶುರುವಾಗುತ್ತದೆ. "ತಮ್ಮಂತಹ ಮಹಿಮಾವಂತರು ನಮ್ಮ ರಾಜ್ಯದಲ್ಲಿರುವುದೇ ಸೌಭಾಗ್ಯ. ತಾವು ಸರಕಾರವನ್ನು ಆಶೀರ್ವದಿಸಬೇಕು" ಎಂದು ಮುಗಿಯುತ್ತದೆ. (ನೋಡಿ: ಸಿಂದಗಿಯ ಬಿಂದಗಿ, ಕೃಷ್ಣಕೊಲ್ಹಾರ ಕುಲಕರ್ಣಿ); ಇದು ಶೃಂಗೇರಿಮಠ ಹಾಗೂ ಶಾರದಾಂಬೆ ಗುಡಿಯ ಮೇಲೆ ಪೇಶ್ವೆಗಳು ದಾಳಿಮಾಡಿದಾಗ, ನೆರವನ್ನು ಕೊಟ್ಟು, ಶೃಂಗೇರಿ ಗುರುಗಳಿಗೆ ಟಿಪ್ಪು ಬರೆದ ಪತ್ರದ ಶೈಲಿಯನ್ನು ನೆನಪಿಸುತ್ತದೆ.

ಆದಿಲಶಾಹಿ ದೊರೆಗಳ ಮೇಲೆ ನರಸಿಂಹ ಸರಸ್ವತಿಯವರ ಪ್ರಭಾವ ಹೇಗಿತ್ತೆಂದರೆ, ಯೂಸುಫ್ ಆದಿಲಶಾಹಿಯು ಅರಮನೆ ಆವರಣದಲ್ಲೇ ನರಸಿಂಹದತ್ತ ಮಂದಿರ ಕಟ್ಟಿಸಿದ. ಆದಿಲಶಾಹಿಗಳಲ್ಲಿ ತನ್ನ ಧಾರ್ಮಿಕ ಸಹನಶೀಲತೆಗೆ ಹೆಸರಾದ ದೊರೆ, ಎರಡನೇ ಇಬ್ರಾಹೀಮನು ದತ್ತೋಪಾಸಕನಾಗಿದ್ದು ಪ್ರತಿದಿನವೂ ದತ್ತಮಂದಿರಕ್ಕೆ ಭೇಟಿಕೊಡುತ್ತಿದ್ದ. ಸಂಘುಪರಿವಾರವು ಹೇಳುವಂತೆ ಹಿಂದಿನ ಆಡಳಿತಗಾರರು ಕೇವಲ ದ್ವೇಷಮಾಡಿಕೊಂಡು ಇರಲಿಲ್ಲ. ಸರ್ವಧರ್ಮದ ಜನರು ನಡೆದುಕೊಳ್ಳುವ ಜಾಗಗಳನ್ನು ಗೌರವಿಸುತ್ತಿದ್ದರು. ಇದೆಲ್ಲ ಸಂಘುಪರಿವಾರಕ್ಕೆ ಗೊತ್ತಿದೆ. ಯಾವಧರ್ಮದ ರಾಜರು ಆಳಿದರೂ ಅವರ ಆಡಳಿತಗಾರರು ದಿವಾನರು ಉಚ್ಚಜಾತಿಯ ಹಿಂದುಗಳಿದ್ದರೂ ಎಂತಲೂ ಅದಕ್ಕೆ ಗೊತ್ತಿದೆ. ಆದರೆ ಅದು ಇಂತಹ ವಿವರಗಳನ್ನು ತನ್ನ ದ್ವೇಷದ ರಾಜಕಾರಣಕ್ಕೆ ಅಡ್ಡಿಯಾಗುತ್ತವೆ ಎಂದು ಮುಚ್ಚಿಡುತ್ತದೆ.

ಬಾಬಾಬುಡನಗಿರಿಯ ಈ ದರ್ಗಾಪೀಠಕ್ಕೆ ಬಿಜಾಪುರದ ಆದಿಲಶಾಹಿಗಳು, ಹೈದರಾಲಿ, ಟಿಪ್ಪುಸುಲ್ತಾನ, ಮೈಸೂರು ಒಡೆಯರು, ಕೆಳದಿ ಚೆನ್ನಮ್ಮ, ಎಲ್ಲರೂ ಆದರದಿಂದ ನಡೆದುಕೊಂಡಿದ್ದಾರೆ. ೧೯ನೇ ಶತಮಾನದಿಂದ ನಿರಂತರ ಪ್ರಕಟವಾಗುತ್ತ ಬಂದಿರುವ ಬ್ರಿಟಿಶರ ದಾಖಲೆಗಳಲ್ಲಿ ಇದು ವಿವಾದವಲ್ಲ. ೧೯೬೦ರ ಹಿಂದೆ ಕನ್ನಡದಲ್ಲಿ ಬಾಬಾಬುಡನಗಿರಿ ಬಗ್ಗೆ ಪ್ರಕಟವಾದ ಯಾವುದೇ ದಾಖಲೆಗಳಲ್ಲೂ ಇದೊಂದು ವಿವಾದವಲ್ಲ. ಚಿಕ್ಕಮಗಳೂರಿನ ಲೇಖಕರಾಗಿದ್ದ ಕಾಶಿವಿಶ್ವನಾಥಶೆಟ್ಟಿ ಯವರು ಬರೆದಿರುವ ಬಾಬಾಬುಡನಗಿರಿ ಪುಸ್ತಕದಲ್ಲೂ ಇದು ವಿವಾದವಲ್ಲ. ಇದು ಸಮಸ್ಯೆ ಎಂದಾಗಿದ್ದು ೧೯೮೯ ರಿಂದ. ವಿಶ್ವ ಹಿಂದು ಪರಿಷತ್ತಿನ ಮೂವರು ದತ್ತಾತ್ರೇಯ ಪೀಠದ ಹೆಸರಲ್ಲಿ ಟ್ರಸ್ಟ್ ಮಾಡಿಕೊಂಡು ತಕರಾರು ಅರ್ಜಿಗಳನ್ನು ಜಿಲ್ಲಾಡಳಿತಕ್ಕೆ ಬರೆಯಲಾರಂಭಿಸಿದ ದಿನದಿಂದ.

ಜಾತ್ಯತೀತವಾದಿ ದತ್ತಪಂಥ ಶಾಖೆ

ಶಂಬಾ ಹೇಳುವ ದತ್ತಪಂಥದ ಎರಡನೆ ಮಾರ್ಗವೆಂದರೆ, ದೌಲತಾಬಾದಿನ ಜನಾರ್ಧನಸ್ವಾಮಿ ಪರಂಪರೆಯದು. ಇದು ಕೆಳಜಾತಿಯ ಜನರನ್ನು ಹಾಗೂ ಮುಸ್ಲಿಮರನ್ನು ಒಳಗೊಂಡು ಮತ್ತಷ್ಟು ಜಾತ್ಯತೀತ ವಾಯಿತು. ಈ ಶಾಖೆಯಲ್ಲಿ ಬ್ರಾಹ್ಮಣ ಶ್ರೇಷ್ಠತೆಯನ್ನು ನಿರಾಕರಿಸಿ, ಜಾತಿ ಪದ್ಧತಿಯನ್ನು ಟೀಕಿಸಿ ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸುವ ಚಿಂತನೆಗಳು ಹೆಚ್ಚಿವೆ. ಇದು ತೀವ್ರವಾಗಿ ಸೂಫಿಕರಣಗೊಂಡಿತು. ದತ್ತಾವತಾರಿ ಜನಾರ್ಧನಸ್ವಾಮಿಯ ಗುರುವಿನ ಹೆಸರು ಚಂದಾಸಾಹೇಬ್ ಖಾದ್ರಿ. ಆವರು ಚಂದ್ ಬೋಧಾಳೆ ಎಂದು ಹೆಸರಾಗಿದ್ದರು. ಇವರು ಶಾಹದತ್ತ ಆಲಂಪ್ರಭುವಿನ ಅವತಾರವೆಂದು ಹೆಸರಾಗಿದ್ದರು.

ಬಾಬಾಬುಡನಗಿರಿಯ ಪರಿಸರಕ್ಕೆ ಮಹಾರಾಷ್ಟ್ರದಿಂದ ಬಂದಿರುವ ದತ್ತಸಂಪ್ರದಾಯವು ಈ ಸೂಫೀಕರಣ ಮಾರ್ಗಕ್ಕೆ ಸೇರಿದ್ದಿರಬೇಕು. ಜನಾರ್ಧನಸ್ವಾಮಿ ಜಾತಿಭೇದವನ್ನು ನಿರಾಕರಿಸಿದವರು. ಅವರ ಶಿಷ್ಯರಾದ ಏಕನಾಥರು ಜಾತಿಪದ್ಧತಿಯನ್ನು ತೀವ್ರವಾಗಿ ಟೀಕಿಸಿದವರು. ವಿಶೇಷವೆಂದರೆ, ಜನಾರ್ಧನಸ್ವಾಮಿಯವರಿಗೆ ದತ್ತಾತ್ರೇಯನು ದರ್ಶನ ಕೊಡುವುದೇ ಸೂಫಿಸಂತನ ರೂಪದಲ್ಲಿ. ಈ ಕಥೆ ಮಹಾರಾಷ್ಟ್ರದ ಗುರು ಪರಂಪರೆಯ ಸಂತಚಾರಿತ್ರಗಳಲ್ಲಿ ಅತ್ಯಂತ ಪ್ರಸಿದ್ಧವಾಗಿದೆ. ಗ್ವಾಲಿಯರಿನ ನಾರಾಯಣ ಮಹಾರಾಜರಿಗೂ, ದತ್ತಾತ್ರೇಯನು ಫಕೀರನ ವೇಷದಲ್ಲಿ ದರ್ಶನಕೊಟ್ಟನು ಎಂದು ಕತೆಯಿದೆ.

ಮರಾಠಿಯಲ್ಲಿ ದಿಲ್ಲಿಯ ಪ್ರಸಿದ್ಧ ಸೂಫಿಸಂತನಾದ ನಾಸಿರುದ್ದೀನ್ ಚಿರಾಗನ ಹೆಸರಲ್ಲಿ ಒಂದು ಗುರುಪಂಥವಿದೆ. ಅದರ ಶಿಷ್ಯರಲ್ಲಿ ವಡಬಾಳದ ದತ್ತಚೈತನ್ಯ ಎಂಬವನು ಬರುತ್ತಾನೆ. ಈಗಲೂ ಉತ್ತರಕರ್ನಾಟಕದ ಅನೇಕರ ಮನೆಗಳಲ್ಲಿ ಜನಪ್ರಿಯ ಸಂತರೆಲ್ಲ ಕುಳಿತಿರುವ ಚಿತ್ರಪಟಗಳಿವೆ. ಅದರಲ್ಲಿ ಮೇಲೆ ದತ್ತಾತ್ರೇಯನಿದ್ದು, ಕೆಳಗೆ ಅವನ ಅವತಾರಿಗಳಾದ ಶಿರಡಿಸಾಯಿಬಾಬಾ, ಸ್ವಾಮಿಸಮರ್ಥ, ಟೇಂಬೆ ಮಹಾರಾಜ, ನರಸಿಂಹಸರಸ್ವತಿ, ಜನಾರ್ಧನಸ್ವಾಮಿ, ಏಕನಾಥ, ಮುಂತಾದವರೆಲ್ಲ ಕುಳಿತಿದ್ದಾರೆ. ನಾಮದೇವನು ಕೃಷ್ಣನನ್ನು ಓ ಖಲಂದರನೇ ಎಂದು ಕರೆಯುವ ಅಭಂಗಗಳನ್ನು ರಚಿಸಿದ್ದಾನೆ.

ದತ್ತಾತ್ರೇಯನು ಸೂಫಿಸಂತನ ರೂಪದಲ್ಲಿ ಬಂದು ದರ್ಶನ ನೀಡುವ ಈ ಕತೆಗಳಾಗಲೀ, ಚಿತ್ರಪಟ, ಹಾಡುಗಳಾಗಲೀ ಸುಮ್ಮಸುಮ್ಮನೆ ಹುಟ್ಟಲಿಲ್ಲ. ಇವು ಒಂದು ಸಾಂಕೇತಿಕ ಸತ್ಯವನ್ನು ಸಾರುತ್ತಿವೆ. ಆ ಸತ್ಯವೆಂದರೆ ದತ್ತನಾಥ ಹಾಗೂ ಸೂಫಿಪಂಥಗಳ ಗಾಢ ಮಿಲನದ ಸಂಬಂಧ. ಶಂಬಾ ಈ ಮಿಲನದ ಪ್ರಸ್ತಾಪ ಮಾಡುತ್ತಾ- "ಹಿಂದೂ ದೇವರು ಮುಸಲ್ಮಾನ ಅವಲಿಯಾನ ರೂಪವನ್ನು ತಳೆದು ದರ್ಶನ ನೀಡುವ ಸಂಗತಿ, ಇಂದು ಮುಸಲ್ಮಾನರ ಬಗ್ಗೆ ಇರುವ ತಿರಸ್ಕಾರದ ದೃಷ್ಟಿಕೋನದಿಂದಾಗಿ ಕೆಲವು ಪಂಡಿತರಿಗೆ ಆಶ್ಚರ್ಯಜನಕವಾಗಿ ಕಂಡು, ಅವರು ಉದ್ವೇಗದಿಂದ ಏನೇನನ್ನೋ ಬರೆದುಬಿಡುತ್ತಾರೆ" ಎನ್ನುತ್ತಾರೆ. (ಮರ್ಹಾಠಿ ಸಂಸ್ಕೃತಿ ಪು.೧೯೮) ಇಲ್ಲಿ 'ತಿರಸ್ಕಾರ' ಎಂದರೆ ಕೋಮುವಾದಿ ದೃಷ್ಟಿಕೋನವೇ ಆಗಿದೆ.

(ಮುಂದುವರಿಯುವುದು)

ವಿವೇಕಾನಂದರ ವಿಚಾರಗಳು

ಕೆಟ್ಟ ಅಭ್ಯಾಸಕ್ಕೆ ಚಿಕಿತ್ಸೆ, ಅದಕ್ಕೆ ವಿರೋಧವಾದ ಒಳ್ಳೆಯ ಅಭ್ಯಾಸವನ್ನು ರೂಢಿಸುವುದು. ನಿರಂತರವಾಗಿ ಒಳ್ಳೆಯದನ್ನು ಮಾಡುತ್ತಾ ಹೋಗಿ; ಒಳ್ಳೆಯದನ್ನು ಆಲೋಚಿಸುತ್ತಾ ಇರಿ. ನಮಗೆ ನಮ್ಮ ಸ್ವಭಾವವನ್ನು ದಮನ ಮಾಡುವುದಕ್ಕೆ ಇದೊಂದೇ ದಾರಿ. ಯಾರನ್ನೂ ಎಂದೂ ಕೆಟ್ಟವರೆಂದು ಹೇಳಬೇಡಿ. ಏಕೆಂದರೆ ಅವನು ಕೆಲವು ಅಭ್ಯಾಸಗಳ ಬಲದಿಂದ ಒಂದು ಶೀಲಕ್ಕೆ ನಿಂತಿರುವನು. ಈ ಶೀಲವನ್ನು ನಾವು ಬೇರೆ ಉತ್ತಮ ಅಭ್ಯಾಸ ಬಲದಿಂದ ತಿದ್ದಬಹುದು.

ಸಂಗ್ರಹ:
ಜ.ಹೊ. ನಾರಾಯಣಸ್ವಾಮಿ

ಎಲ್ಲೂ ಇಲ್ಲದ್ದು ನಿನ್ನಲ್ಲೇ ಇದೆ

ನೀವು ನಿಜವಾಗಿ ಸುಧಾರಕರಾಗಬೇಕಾದರೆ ಮೂರು ವಿಷಯಗಳು ಅವಶ್ಯಕ. ಪ್ರಥಮವಾಗಿ ಸಹಾನುಭೂತಿ. ನೀವು ನಿಮ್ಮ ಸಹೋದರರಿಗೋಸ್ಕರ ನಿಜವಾಗಿಯೂ ಅನುತಾಪ ಪಡುವಿರೇನು ? ಜಗತ್ತಿನಲ್ಲಿ ಇಷ್ಟೊಂದು ದುಃಖವಿದೆ, ಮೂಢನಂಬಿಕೆ ಇದೆ ಎಂದು ನಿಮಗೆ ಅನ್ನಿಸುವುದೇನು? ನಿಜವಾಗಿಯೂ ಮನುಷ್ಯರೆಲ್ಲಾ ನಿಮ್ಮ ಸಹೋದರರೆಂದು ತಿಳಿಯುವಿರಾ? ಈ ಭಾವನೆ ನಿಮ್ಮ ಮನಸ್ಸನ್ನೆಲ್ಲಾ ವ್ಯಾಪಿಸುವುದೇ? ಇದು ನಿಮ್ಮ ರಕ್ತದಲ್ಲಿ ಸಂಚರಿಸುತ್ತದೆಯೆ? ಇದು ನಿಮ್ಮ ನಾಡಿಗಳಲ್ಲಿ ಸ್ಪಂದಿಸುತ್ತದೆಯೆ? ಇದು ನಿಮ್ಮ ದೇಹದ ಅಂಗೋಪಾಂಗಗಳಲ್ಲಿ ನರದ ಪ್ರತಿಯೊಂದು ಶಾಖೆಯಲ್ಲಿ ಸಂಚರಿಸುತ್ತಿದೆಯೆ? ನೀವು ಸಹಾನುಭೂತಿಯಿಂದ ತುಂಬಿ ತುಳುಕಾಡುತ್ತಿರುವಿರಾ?

ಹೌದು ಎಂದಾದರೆ ಅದು ಮೊದಲಿನ ಮೆಟ್ಟಲು ಮಾತ್ರ. ಅನಂತರ ಇದಕ್ಕೆ ಏನಾದರೂ ಪರಿಹಾರ ಸಿಕ್ಕಿದೆಯೆ ? ಎಂಬುದನ್ನು ಆಲೋಚಿಸಬೇಕು. ಪುರಾತನ ಭಾವನೆಗಳೆಲ್ಲ ಮೂಢನಂಬಿಕೆಯಾಗಿರಬಹುದು. ಆದರೆ ಈ ಮೂಢನಂಬಿಕೆಯ ರಾಶಿಯ ಒಳಗೆ ಮತ್ತು ಸುತ್ತಲೂ ಸತ್ಯದ ಸ್ವರ್ಣ ಘಟ್ಟ ಇರುವುದು. ಮಲಿನತೆಯನ್ನು ಕಳೆದು ಚಿನ್ನವನ್ನು ಮಾತ್ರ ಉಳಿಸಿಕೊಳ್ಳುವುದಕ್ಕೆ ಯಾವುದಾದರೂ ಮಾರ್ಗವನ್ನು ಕಂಡುಹಿಡಿದಿರುವಿರಾ? ನೀವು ಇದನ್ನು ಮಾಡಿದ್ದರೆ ಇದು ಎರಡನೆಯ ಮೆಟ್ಟಲು ಮಾತ್ರ. ಮತ್ತೊಂದು ಅವಶ್ಯಕವಿದೆ. ನಿಮ್ಮ ಉದ್ದೇಶವೇನು? ಹಣ, ಕೀರ್ತಿ, ಅಧಿಕಾರದ ಲಾಲಸೆ - ಇವು ನಿಮ್ಮನ್ನು ಪ್ರೇರೇಪಿಸಿಲ್ಲವೆಂದು ನಿಮಗೆ ಸತ್ಯವಾಗಿಯೂ ಗೊತ್ತೇ? ಇಡೀ ಜಗತ್ತೇ ನಿಮ್ಮ ನಾಶಕ್ಕೆ ಸಿದ್ಧವಾಗಿದ್ದರೂ, ನಿಮ್ಮ ಆದರ್ಶಗಳನ್ನು ಬಿಡದೆ ಸಾಧಿಸುವುದಕ್ಕೆ ಸಿದ್ಧರಾಗಿರುವಿರಾ? ಏನು ಬೇಕೆಂಬುದು ನಿಮಗೆ ಚೆನ್ನಾಗಿ ಗೊತ್ತೆ? ನಿಮ್ಮ ಪ್ರಾಣಕ್ಕೆ ಅಪಾಯ ಬಂದರೂ, ನಿಮ್ಮ ಕರ್ತವ್ಯವನ್ನಲ್ಲದೆ ಬೇರೆ ಯಾವುದನ್ನೂ ಮಾಡುವುದಿಲ್ಲವೇ? ಪ್ರಾಣವಿರುವವರೆಗೆ, ಹೃದಯದಲ್ಲಿ ಚಲನೆ ಇರುವವರೆಗೆ ಹಿಡಿದ ಕೆಲಸವನ್ನು ಬಿಡದೆ ಹೋರಾಡಬಲ್ಲಿರಾ ? ಆಗ ನೀವು ನಿಜವಾಗಿ ಸುಧಾರಕರು, ಮಾನವ ಕೋಟಿಗೆ ಮಂಗಳ ಪ್ರದಾಯಕರು.

ಕೆಟ್ಟ ಅಭ್ಯಾಸಕ್ಕೆ ಚಿಕಿತ್ಸೆ, ಅದಕ್ಕೆ ವಿರೋಧವಾದ ಒಳ್ಳೆಯ ಅಭ್ಯಾಸವನ್ನು ರೂಢಿಸುವುದು. ಕೆಟ್ಟ ಪರಿಣಾಮಗಳನ್ನು ಬಿಟ್ಟು, ಎಲ್ಲಾ ಕೆಟ್ಟ ಅಭ್ಯಾಸಗಳನ್ನು ಒಳ್ಳೆಯ ಅಭ್ಯಾಸದ ಬಲದಿಂದ ನಿಗ್ರಹಿಸಬೇಕು. ನಿರಂತರವಾಗಿ ಒಳ್ಳೆಯದನ್ನು ಮಾಡುತ್ತಾ ಹೋಗಿ; ಒಳ್ಳೆಯದನ್ನು ಆಲೋಚಿಸುತ್ತಾ ಇರಿ. ನಮಗೆ ನಮ್ಮ ಸ್ವಭಾವವನ್ನು ದಮನ ಮಾಡುವುದಕ್ಕೆ ಇದೊಂದೇ ದಾರಿ. ಯಾರನ್ನೂ ಎಂದೂ ಕೆಟ್ಟವರೆಂದು ಹೇಳಬೇಡಿ. ಏಕೆಂದರೆ ಅವನು ಕೆಲವು ಅಭ್ಯಾಸಗಳ ಬಲದಿಂದ ಒಂದು ಶೀಲಕ್ಕೆ ನಿಂತಿರುವನು. ಈ ಶೀಲವನ್ನು ನಾವು ಬೇರೆ ಉತ್ತಮ ಅಭ್ಯಾಸ ಬಲದಿಂದ ತಿದ್ದಬಹುದು. ಶೀಲವೆಂದರೆ ಪುನರಾವರ್ತಿಸಿದ ಅಭ್ಯಾಸ. ಪದೇ ಪದೇ ಮಾಡುವ ಅಭ್ಯಾಸದಿಂದ ಮಾತ್ರ ನಮ್ಮ ಶೀಲವನ್ನು ತಿದ್ದಬಹುದು.

ಪ್ರತಿಯೊಂದು ವ್ಯಕ್ತಿಯನ್ನು ಮತ್ತು ಪ್ರತಿಯೊಂದು ಜನಾಂಗವನ್ನು ಏಳಿಗೆಗೆ ತರುವುದಕ್ಕೆ ಮೂರು ವಿಷಯಗಳು ಅತ್ಯಾವಶ್ಯಕ. ಅವೇ

೧. ಸತ್ಯದ ಶಕ್ತಿಯಲ್ಲಿ ದೃಢವಾದ ನಂಬಿಕೆ

೨. ಅಸೂಯೆ ಅನುಮಾನಗಳು ಇಲ್ಲದೆ ಇರುವುದು.

೩. ಯಾರು ಒಳ್ಳೆಯರಾಗುವುದಕ್ಕೆ ಮತ್ತು ಒಳ್ಳೆಯದನ್ನು ಮಾಡುವುದಕ್ಕೆ ಪ್ರಯತ್ನ ಪಡುವರೋ ಅವರಿಗೆಲ್ಲಾ ಸಹಾಯ ಮಾಡುವುದು.

ಕೊಳು - ಕೊಡುಗೆ

ಭರತಖಂಡದಲ್ಲಿ ಸಾಮಾಜಿಕ ಶೃಂಖಲೆಯನ್ನು ತೆಗೆಯಬೇಕು. ಯೂರೋಪಿನಲ್ಲಿ ಧಾರ್ಮಿಕ ಪ್ರಗತಿಗೆ ಇರುವ ಆತಂಕವನ್ನು ನಿವಾರಿಸಬೇಕು. ಆಗ ಮನುಷ್ಯ ಅದ್ಭುತವಾಗಿ ಬೆಳೆಯುವನು, ವಿಕಾಸ ಹೊಂದುವನು.

ಭಾರತೀಯರು ಯೂರೋಪಿಯನ್ನರಿಂದ ಬಾಹ್ಯ ಪ್ರಕೃತಿಯನ್ನು ಹೇಗೆ ನಿಗ್ರಹಿಸಬೇಕು ಎಂಬುದನ್ನು ಕಲಿತುಕೊಳ್ಳಬೇಕು. ಯೂರೋಪಿಯನ್ನರು ಭಾರತೀಯರಿಂದ ಆಂತರಿಕ ಪ್ರಕೃತಿಯನ್ನು ಹೇಗೆ ನಿಗ್ರಹಿಸಬೇಕು ಎಂಬುದನ್ನು ಕಲಿತುಕೊಳ್ಳಬೇಕು. ಆಗ ಹಿಂದುವೂ ಇರುವುದಿಲ್ಲ, ಯೂರೋಪಿಯನ್ನರೂ ಇರುವುದಿಲ್ಲ; ಬಾಹ್ಯ ಮತ್ತು ಆಂತರಿಕ ಪ್ರಕೃತಿಯನ್ನು ಗೆದ್ದ ಆದರ್ಶ ಜನಾಂಗ ಒಂದು ಇರುವುದು.

ಪಾಶ್ಚಾತ್ಯರು ಎಲ್ಲವನ್ನೂ ಉಪಯೋಗದ ದೃಷ್ಟಿಯಿಂದ ನೋಡುವರು. ಅವರ ಧ್ಯೇಯ ಅದು. ನಾವು ಎಲ್ಲೆಲ್ಲೂ ಕಲೆಯನ್ನು ಹುಡುಕುವೆವು. ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ನಮ್ಮ ಸುಂದರ ಹೂಜಿಗಳು ತ್ಯಜಿಸಲ್ಪಟ್ಟು ಆ ಸ್ಥಳವನ್ನು ಗಾಜಿನ ಲೋಟಗಳು ಆಕ್ರಮಿಸಿದೆ... ನಮಗೆ ಈಗ ಬೇಕಾಗಿರುವುದು ಕಲೆ ಮತ್ತು ಉಪಯುಕ್ತತೆ. ಇವುಗಳ ಸಂಯೋಗ. ಜಪಾನು ಅದನ್ನು ಬಹುಬೇಗ ಮಾಡಿದೆ. ಅದಕ್ಕೇ ಅದು ಅಷ್ಟು ಪ್ರಚಂಡ ವೇಗದಲ್ಲಿ ಮುಂದುವರೆಯಿತು. ಈಗ ಜಪಾನೀಯರು ತಮ್ಮ ಸರದಿಯಲ್ಲಿ ಪಾಶ್ಚಾತ್ಯರಿಗೆ ಕಲಿಸುತ್ತಾರೆ.

ಪ್ರತಿಯೊಂದು ದೇಶದಲ್ಲಿಯೂ ಇನ್ನೂರು ಜನ ಸ್ತ್ರೀಪುರುಷರು ನಿಜವಾಗಿ ಮಾನವ ಕಲ್ಯಾಣವನ್ನು ಕುರಿತು ಚಿಂತಿಸಿದರೆ ಸ್ವರ್ಣಯುಗ ಐದೇ ದಿನಗಳಲ್ಲಿ ಉದಯಿಸುತ್ತಿತ್ತು.

ಮನುಷ್ಯನೂ ಕೂಡ ತನಗೆ ಈಗ ಇರುವಷ್ಟರಲ್ಲೇ ತೃಪ್ತನಾಗಿ ಅತೀತವಾದ ಯಾವುದನ್ನೂ ತಿಳಿದುಕೊಳ್ಳಲು ಯತ್ನಿಸದೇ ಇದ್ದರೆ ಮಾನವಕೋಟಿ ಮತ್ತೊಮ್ಮೆ ಮೃಗದ ಗುಂಪಿಗೆ ಹೋಗಬೇಕಾಗುವುದು.

ನಾನು ಭಾರತದಲ್ಲಿದ್ದಾಗ ಗವಿ ನನಗೆ ಒಳ್ಳೆಯ ದರ್ಶನವನ್ನು ಕೊಡುವುದೆಂದು ಭಾವಿಸಿದ್ದೆ. ಇದು ಸಾಧ್ಯವಿಲ್ಲವೆಂದು ಗೊತ್ತಾಯಿತು. ಕಾಡಿನಲ್ಲಿ ದೊರಕಬಹುದೆಂದು ಯೋಚಿಸಿದೆ. ಅನಂತರ ಕಾಶಿಯಲ್ಲಿ ಸಾಧ್ಯವೆಂದು ಭಾವಿಸಿದೆ. ಇದೂ ಸಾಧ್ಯವಿಲ್ಲವೆಂದು ಗೊತ್ತಾಯಿತು. ಎಲ್ಲ ಕಡೆಯಲ್ಲಿಯೂ ಒಂದೇ ಕಷ್ಟ. ಏಕೆಂದರೆ ನಾವೇ ನಮ್ಮ ಪ್ರಪಂಚವನ್ನು ಸೃಷ್ಟಿಸಿಕೊಳ್ಳುವೆವು. ನಾನು ಕೆಟ್ಟವನಾದರೆ ಇಡೀ ಪ್ರಪಂಚವೇ ಕೆಟ್ಟದ್ದು. ಇದನ್ನೇ ಪ್ರಪಂಚ ಹೇಳುವುದು. ಎಲ್ಲ ಪ್ರಪಂಚಕ್ಕೂ ಇದೇ ಅನ್ವಯಿಸುವುದು... ಪರಿಶುದ್ಧನಾಗುವವರೆಗೆ ಅರಣ್ಯ, ಕಾಶಿ ಅಥವಾ ಸ್ವರ್ಗ ಇವುಗಳಿಗೆ ಹೋಗಿ ಪ್ರಯೋಜನವಿಲ್ಲ.

ಪ್ರಪಂಚದಲ್ಲಿರುವ ದೇವರಿಗೆಲ್ಲಾ ಗೋಳಿಡಿ. ನಾನೂ ಅನೇಕ ವರ್ಷ ಗೋಳಿಟ್ಟೆ. ನನಗೆ ಸಹಾಯ ಕೊನೆಗೆ ದೊರಕಿತು. ಆದರೆ ಆ ಸಹಾಯ ಬಂದುದು ನನ್ನಿಂದಲೇ. ಭ್ರಾಂತಿಯಿಂದ ನಾನು ಏನನ್ನು ಮಾಡಿದ್ದೆನೋ ಅದನ್ನು ಬಿಡಬೇಕಾಯಿತು. ಅದೊಂದೇ ದಾರಿ. ನನ್ನ ಸುತ್ತಲೂ ಬೀಸಿಕೊಂಡಿರುವ ಬಲೆಯನ್ನು ನಾನೇ ಕತ್ತರಿಸಬೇಕಾಯಿತು. ಇದನ್ನು ಮಾಡುವುದಕ್ಕೆ ಶಕ್ತಿ ನಮ್ಮಲ್ಲಿಯೇ ಇರುವುದು. ಸನ್ಮಾರ್ಗದಲ್ಲಿಯೋ ಅಥವಾ ದುರ್ಮಾರ್ಗದಲ್ಲಿಯೋ ಹೋದ ನನ್ನ ಯಾವ ಹಾರೈಕೆಯೂ ವ್ಯರ್ಥವಾಗಿಲ್ಲವೆಂಬುದು ನಿಸ್ಸಂಶಯವಾಗಿದೆ. ನಾನು ಜೀವನದಲ್ಲಿ ಎಷ್ಟೋ ತಪ್ಪುಗಳನ್ನು ಮಾಡಿರುವೆನು. ಆದರೆ ಇದನ್ನು ಜ್ಞಾಪಕದಲ್ಲಿಡಿ. ಹಿಂದಿನ ಯಾವ ಒಂದು ತಪ್ಪೂ ಇಲ್ಲದೆ ನಾನು ಇಂದಿನಂತೆ ಆಗುತ್ತಿರಲಿಲ್ಲ. ಆದ ಕಾರಣ ಹಾಗೆ ತಪ್ಪುಗಳನ್ನು

ಮಾಡಿದುದು ನನಗೆ ಸಮಾಧಾನಕರವಾಗಿದೆ. ನೀವು ಮನೆಗೆ ಹೋಗಿ ಬೇಕೆಂದು ತಪ್ಪುಗಳನ್ನು ಮಾಡಿ ಎಂದು ನಿಮಗೆ ಹೇಳುವುದಿಲ್ಲ. ಈ ರೀತಿಯಲ್ಲಿ ನನ್ನನ್ನು ತಪ್ಪು ತಿಳಿದುಕೊಳ್ಳಬೇಡಿ. ಹಿಂದೆ ಮಾಡಿದ ತಪ್ಪಿಗಾಗಿ ಸಪ್ಪೆ ಮುಖ ಹಾಕಿಕೊಳ್ಳಬೇಡಿ. ಕೊನೆಗೆ ಎಲ್ಲವೂ ಸರಿಯಾಗುವುದೆಂದು ತಿಳಿಯಿರಿ. ಹಾಗಲ್ಲದೆ ಬೇರೆ ಆಗಲಾರದು. ಏಕೆಂದರೆ ಒಳ್ಳೆಯದೇ ನಮ್ಮ ಸ್ವಭಾವ. ಸ್ವಭಾವವನ್ನು ಎಂದಿಗೂ ನಾವು ನಾಶ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಮೂಲ ಸ್ವಭಾವ ಯಾವಾಗಲೂ ಒಂದೇ ಸಮನಾಗಿರುವುದು.

ನನಗೆ ತುಂಬಾ ಅಂಜಿಕೆ ಯಾವುದೆಂದರೆ ದೇವರ ಕೋಣೆ. ದೇವರ ಮನೆಯೇನೋ ಕೆಟ್ಟದ್ದಲ್ಲ. ಆದರೆ ಕೆಲವರು ಇದನ್ನೇ ಸರ್ವಸ್ವವೆಂದು ಎಣಿಸಿ ಹಳೆಯ ಮಾದರಿಯ ಹುಚ್ಚು ಕೆಲಸವನ್ನು ಪುನಃ ರೂಢಿಗೆ ತರುವುದಕ್ಕೆ ಯತ್ನಿಸುವರು. ಇದೇ ನನ್ನ ಅಂಜಿಕೆಗೆ ಕಾರಣ.

ಹಿಂದೆ ಇದ್ದ ಧರ್ಮಗಳನ್ನೆಲ್ಲಾ ನಾನು ಸ್ವೀಕರಿಸುತ್ತೇನೆ... ನಾನು ಮಹಮ್ಮದೀಯರ ಮಸೀದಿಗೆ ಹೋಗುತ್ತೇನೆ. ಕ್ರೈಸ್ತರ ಚರ್ಚಿನಲ್ಲಿ ಶಿಲುಬೆಯ ಎದುರಿಗೆ ಬಾಗುತ್ತೇನೆ. ಬೌದ್ಧರ ವಿಹಾರದಲ್ಲಿ ಬುದ್ಧನಲ್ಲಿ ಮತ್ತು ಅವನ ಧರ್ಮದಲ್ಲಿ ಶರಣಾಗತನಾಗುತ್ತೇನೆ. ಹಿಂದೂಗಳೊಂದಿಗೆ ಕಾಡಿಗೆ ಹೋಗಿ ಎಲ್ಲರಲ್ಲಿ ಬೆಳಗುತ್ತಿರುವ ಆ ಪರಂಜ್ಯೋತಿಯ ದರ್ಶನಕ್ಕಾಗಿ ಧ್ಯಾನ ಮಾಡುವವರೊಂದಿಗೆ ನಾನೂ ಧ್ಯಾನ ಮಗ್ನನಾಗುತ್ತೇನೆ.

ನಾನು ಇವನ್ನೆಲ್ಲಾ ಮಾಡುವುದು ಮಾತ್ರವಲ್ಲ ಭವಿಷ್ಯದಲ್ಲಿ ಏನೇನು ಬರುವುದೋ ಅದನ್ನೆಲ್ಲ ಸ್ವೀಕರಿಸುವುದಕ್ಕೆ ನನ್ನ ಹೃದಯವನ್ನು ತೆರೆದಿರುವೆನು. ಭಗವಂತನ ಗ್ರಂಥ ಅಂತ್ಯವಾಯಿತೇನು ? ಅಥವಾ ನಿರಂತರ ದರ್ಶನ ಇನ್ನೂ ಆಗುತ್ತಿದೆಯೋ ? ಪ್ರಪಂಚದ ಆಧ್ಯಾತ್ಮಿಕ ದರ್ಶನಗಳು ಒಂದು ಅಮೋಘ ಶಾಸ್ತ್ರ, ಬೈಬಲ್ಲು, ವೇದ, ಖುರಾನ್ ಮತ್ತು ಇತರ ಧರ್ಮಶಾಸ್ತ್ರಗಳೆಲ್ಲ ಕೆಲವು ಪುಟಗಳು ಮಾತ್ರ. ವ್ಯಕ್ತವಾಗಲು ಇನ್ನೂ ಅನಂತ ಪುಟಗಳಿವೆ. ಅವನ್ನೆಲ್ಲಾ ಸ್ವೀಕರಿಸಲು ನಾನು ಸಿದ್ಧನಾಗಿರುವೆನು. ಅನಂತ ಭವಿಷ್ಯಕ್ಕೆ ಬಾಗಿಲನ್ನು ತೆರೆದಿಡುವೆನು. ಹಿಂದೆ ಆಗಿರುವುದನ್ನೆಲ್ಲಾ ಸ್ವೀಕರಿಸುವೆನು, ಈಗಿರುವುದನ್ನು ಅನುಭವಿಸುವೆನು. ಭವಿಷ್ಯದಲ್ಲಿ ಬರುವುದನ್ನೆಲ್ಲಾ ಸ್ವೀಕರಿಸುವುದಕ್ಕೆ ಹೃದಯದ ಪ್ರತಿಯೊಂದು ದ್ವಾರವನ್ನೂ ತೆರೆದಿಡುವೆನು. ಹಿಂದಿನ ಮಹಾತ್ಮರಿಗೆಲ್ಲಾ ವಂದನೆ, ಈಗಿರುವ ಮಹಾತ್ಮರಿಗೆಲ್ಲಾ ವಂದನೆ, ಮುಂದೆ ಬರಲಿರುವ ಮಹಾತ್ಮರಿಗೆಲ್ಲಾ ವಂದನೆ.

ಸತ್ಯಾನ್ವೇಷಣೆಯಲ್ಲಿ ಶಾಸ್ತ್ರ ನಂಬಿಕೆಗಳು ಅಡ್ಡವಾಗಿ ಬಂದರೆ ಅವುಗಳನ್ನು ತ್ಯಜಿಸಿ, ಯಾವ ಪೂರ್ವ ನಿಶ್ಚಿತ ಅಭಿಪ್ರಾಯವೂ ಇಲ್ಲದೇ ವಿಚಾರ ಮಾಡುವುದನ್ನು ಅಭ್ಯಾಸ ಮಾಡಿ. ಪ್ರೀತಿಗಾಗಿ ಎಲ್ಲರನ್ನೂ ಪ್ರೀತಿಸುವುದನ್ನು ಕಲಿಯಿರಿ. ನಿರ್ಭಯದಿಂದ ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ. ಪರಿಶುದ್ಧವಾದ ಜೀವನವನ್ನು ನಡೆಸಿ. ಸತ್ಯದ ಜ್ಯೋತಿ ನಿಮಗೆ ದಾರಿಯನ್ನು ತೋರುವುದು.

ನಿಮ್ಮ ಮುಕ್ತಿಯನ್ನು ನೀವೇ ಸಂಪಾದನೆ ಮಾಡಿಕೊಳ್ಳಿ. ನಾನು ನಿಮಗೆ ಸಹಾಯ ಮಾಡಲಾರೆ. ಮತ್ತಾರೂ ನಿಮಗೆ ಸಹಾಯ ಮಾಡಲಾರರು. ನಿಮಗೆ ನೀವೇ ಸಹಾಯ ಮಾಡಿಕೊಳ್ಳಬೇಕು. (ಮುಗಿಯಿತು)

□



ಆ ಗಿಡ ಅಪ್ಪ.

ಅಪ್ಪ ನೆಟ್ಟ ಹಲಸಿನ ಗಿಡ
ಕಟ್ಟಿ ಈಚಲಗರಿ ಮುಳ್ಳು
ದೂರದ ಕುಂಟೆಯಿಂದ
ನೀರನ್ನು ಹೊತ್ತು ಹೊತ್ತು
ಗರಿಕೆಯೂ ಬೆಳೆಯದ
ದಾರಿಹೋಕರ ರಸ್ತೆಯಂತೆ ಖಾಲಿಯಾಗಿದೆ
ನೆತ್ತಿ

ಅದೆಷ್ಟೋ ವರ್ಷಗಳಿಂದ ಆ ಗಿಡ ರೂಢದೇ
ಕೊಯ್ಯೋ... ಅಂತ ಸೊರಗಿಯೇ ಇದೆ
ತಲೆಕೆಡಿಸಿಕೊಂಡ ಅಪ್ಪ ಇನ್ನಷ್ಟು
ಗೊಬ್ಬರ ನೀರು ಹಾಕಿ ಪಾತಿ ಮಾಡಿದ
ಆದರೂ ಚೇತರಿಸಿಕೊಳ್ಳದ ಗಿಡ

ಈಗ ಅಪ್ಪನೂ ಸೊರಗಿದ್ದಾನೆ; ಆದರೆ
ಆ ಆಲದ ಮರ ಮರೆಸಲಿಕ್ಕುತ್ತಿದೆ
ಮುಗಿಲನ್ನು ಆಕ್ರಮಿಸಿ ಬೆಳೆದು
ಅದರ ಜೋಲ್ಗೆಗಳು
ಹಲಸಿನ ಗಿಡದ ತಾಯಿ ಬೇರನ್ನು

ಸುತ್ತಿ ಬಿಗಿದು ತಬ್ಬಿಕಟ್ಟಿಸಿ ಉಸಿರು
ನೀರು ಗೊಬ್ಬರವನ್ನು ಹೀರಿಕೊಳ್ಳುತ್ತಿರುವುದು
ಗೋಚರಿಸಲಿಲ್ಲ; ಅಪ್ಪನಿಗೆ, ಪಿಳಿ ಪಿಳಿ ಕಣ್ಣ ಮಗನಿಗೆ

ಆ ಗಿಡ ಅಕಾಲ ವೃದ್ಧಾಪ್ಯದತ್ತ ಯಾತ್ರೆ ಹೊರಟಿದೆ
ಇನ್ನೂ ವಿಸ್ತಾರಗೊಂಡ ಆಲ
ನೆರೆ ಊರ ಗೌಡನನ್ನು ವಿಹರಿಸಲು ಆಹ್ವಾನಿಸಿದೆ
ಹೆತ್ತಿದ್ದಾಳೆ, ಹಣ್ಣು ಬಯಸಿದ ಗರ್ಭಿಣಿ ಹೆಂಡತಿ

ಹಠ ಅಪ್ಪನದು ಮತ್ತೂ : ಯಾವ ನೆಲದಲ್ಲಿ
ಯಾವ ಹಣ್ಣಿನ ಗಿಡ ನೆಡಲಿ
ರಸಮಳೆ ತರಿಸಲಿ ಹೇಗೆ ಮನೆಗೆ ?
ಅದೇ ಧ್ಯಾನದಲ್ಲಿ ಶಥಪಥ ತಿರುಗುತ್ತಿದ್ದಾನೆ
ಅಪ್ಪ ದಾರಿಹೋಕರ ರಸ್ತೆಯಲ್ಲಿ.

○ ರಂಗನಾಥ ಕುಂಟನಕುಂಟೆ

'SAMVADA' Kannada Monthly. MARCH. 2005 RNI-KAR KAN/2002/9246 CPMG/KA/BGW-706/2003-

ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಸಮರ್ಥ ವಿಶ್ಲೇಷಣೆಗಾಗಿ

ವಿಚಾರಶೂನ್ಯವಾಗುತ್ತಿರುವ ಸಮಾಜದ ಜಾಗೃತಿಗಾಗಿ

ಎಲ್ಲ ಜನವರ್ಗಗಳ ಅಭಿವ್ಯಕ್ತಿ ವೇದಿಕೆಯಾಗಿ

ಇಂದೇ ಚಂದಾದಾರರಾಗಿ

ಸಂವಾದ

ಶೋಷಣೆ ಮುಕ್ತ ಸಮಾಜಕ್ಕಾಗಿ

'ಸಂವಾದ' ಮಾಸಪತ್ರಿಕೆ , ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧